# <u>ಯುಜಿಸಿ XII ಯೋಜನೆ</u>
# <u>ಕಿರು ಸಂಶೋಧನೆಯ ಅಂತಿಮ ವರದಿ</u>

**<u>ಮಂಡನೆ</u>**

**ನಿರ್ದೇಶಕರು**

**ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ**

**ಎಸ್.ಡಬ್ಲ್ಯೂ.ಆರ್.ಒ, ಬೆಂಗಳೂರು–560009**

**<u>ಮಂಡಿಸುವವರು</u>**


**ಶ್ರೀಮತಿ ಜ್ಞಾನೇಶ್ವರಿ ಯಂ.**

**ಕನ್ನಡ ಉಪನ್ಯಾಸಕರು**

**ಬೆಸೆಂಟ್ ಮಹಿಳಾ ಕಾಲೇಜು,**

**ಮಂಗಳೂರು–575 003**


**<u>ಯೋಜಿತ ವಿಷಯ:</u>   <u>“ಕೋಟೆ ಶ್ರೀ ಬಬ್ಬುಸ್ವಾಮಿ ಆರಾಧನೆ : ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನ”</u>**

# ದೈವರಾಜ ಕೋಟೆ ಶ್ರೀ ಬಬ್ಬುಸ್ವಾಮಿ ಆರಾಧನೆ

## ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನ



# ಪರಿವಿಡಿ


| | | |
|---|---|---|
| | ಅರಿಕೆ | 2–3 |
| ಅಧ್ಯಾಯ 1 | ತುಳುನಾಡಿನ ವೈಶಿಷ್ಟ್ಯಗಳು | 4–5 |
| ಅಧ್ಯಾಯ 2 | ಮುಂಡಾಳ ಜನಾಂಗದ ಸಾಮಾಜಿಕ ಆಚರಣೆಗಳು | 6–33 |
| ಅಧ್ಯಾಯ 3 | ಮುಂಡಾಳ ಜನಾಂಗದ ಧಾರ್ಮಿಕ ಆಚರಣೆಗಳು | 34–56 |
| ಅಧ್ಯಾಯ 4 | ಭೂತಾರಾಧನೆ ಮತ್ತು ಅದರ ವೈವಿಧ್ಯತಾ ಆಚರಣೆಗಳು | 57–62 |
| ಅಧ್ಯಾಯ 5 | ಭೂತಾರಾಧನೆಯಲ್ಲಿ ವ್ಯಕ್ತಿ ವೈಶಿಷ್ಟ್ಯತೆ ಹಾಗೂ ವಸ್ತು ಪರಿಕಲ್ಪನೆ. | 63–72 |
| ಅಧ್ಯಾಯ 6 | ದೈವರಾಜ ಶ್ರೀ ಬಬ್ಬುಸ್ವಾಮಿಯ ಐತಿಹ್ಯ ಮತ್ತು ಇತರ ವಿಚಾರಗಳು | 73–111 |
| ಅಧ್ಯಾಯ 7 | ಮುಂಡಾಳ ಜನಾಂಗದಲ್ಲಿ ದೈವರಾಜ ಕೋಟೆ ಶ್ರೀ ಬಬ್ಬುಸ್ವಾಮಿಯ ಆರಾಧನೆ–ಒಂದು ವಿಶ್ಲೇಷಣೆ | 112–120 |
| ಅಧ್ಯಾಯ 8 | ಉಪಸಂಹಾರ | 121–124 |
| ಅಧ್ಯಾಯ 9 | • ಪ್ರಶ್ನಾವಳಿಗಳು (121–122)<br>• ಮಾಹಿತಿ ಋಣ (123)<br>• ಪರಾಮರ್ಶನ ಕೃತಿಗಳು (124–128) | 125–135 |

# ಅರಿಕೆ

ಮೂರು ಕಡೆ ನೀರು, ಒಂದು ಕಡೆ ನೆಲದಿಂದ ಕೂಡಿದ ಅತ್ಯಾದ್ಭುತ ಸ್ವರೂಪ ಹೊಂದಿರುವ ಭಾರತ ಅತ್ಯಮೂಲ್ಯ ಸಂಪತ್ತನ್ನು ಪಡೆದಿರುವ ಸುಂದರ ರಾಷ್ಟ್ರ. ಅದರೊಳಗೊಂದು 'ಕರಿನಾಡು' ಎಂದೇ ಪ್ರಸಿದ್ಧಿ ಪಡೆದ 'ಕರ್ನಾಟಕ'. ಕರ್ನಾಟಕ ರಾಜ್ಯ ಉಳಿದೆಲ್ಲ ರಾಜ್ಯಗಳಿಗಿಂತ ಎಲ್ಲದರಲ್ಲೂ ಭಿನ್ನವಾದ ವಿಶಿಷ್ಟ ರಾಜ್ಯ. ಇಲ್ಲಿನ ಪಶ್ಚಿಮ ಘಟ್ಟ ಒಂದೆಡೆಯಾದರೆ, ತನ್ನದೇ ಶೈಲಿಯಲ್ಲಿ, ಭೋರ್ಗರೆಯುತ್ತಾ, ನೀರವತೆಯನ್ನು ಕದಡುವ ಸವಿಸ್ತಾರವಾದ ಸಮುದ್ರ ಇನ್ನೊಂದೆಡೆ. ಇದರ ಮಧ್ಯೆ ತಮ್ಮದೇ ಆದ ಛಾಪನ್ನೊತ್ತಿ ಬದುಕುವ ತುಳುವರು ಅವರು ಬಾಳಿ ಬೆಳಗಿದ ನಾಡೇ ಈ ತುಳುನಾಡು.

ಕರ್ನಾಟಕ ಅನೇಕ ಕಲೆಗಳ ಬೀಡು. ಈ ರಾಜ್ಯದಲ್ಲಿರುವ ಜನರ ಆಡು ಭಾಷೆ ತುಳುವಾಗಿದ್ದು, ನಾಗಾರಾಧನೆ, ಭೂತಾರಾಧನೆ, ಯಕ್ಷಾರಾಧನೆ ಮೊದಲಾದ ಹಲವಾರು ಆರಾಧನೆಗಳು ಈ ಜನರ ಜೀವಾಳವಾಗಿದೆ. ಈ ವಿಶಿಷ್ಟ ಆಚರಣೆಗಳು ತುಳುವರ ಬದುಕಿನ ಅಂಗಗಳಾಗಿವೆ. ತುಳುವರ ಇಂತಹ ಆರಾಧನೆಗಳಿಗೆ, ಆಚರಣೆಗಳಿಗೆ ಮೂಲ ಹುಡುಕುವುದು ಕಷ್ಟ ಸಾಧ್ಯ. ಭೂತಾಳ ಪಾಂಡ್ಯನ ಪಾಡ್ದನದಲ್ಲಿ ಕುಂಡೋದರನೆಂಬ ದೈವ ನರಬಲಿ ಕೇಳಿದುದರ ವಿಚಾರಗಳೂ ಪ್ರಚಲಿತದಲ್ಲಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾನಾ ಧರ್ಮದ, ಜಾತಿಯ ವರ್ಗದ ಜನ ವಾಸಿಸುತ್ತಿದ್ದು, ಅವರ ಜೀವನಕ್ರಮವು ಆರಾಧನಾ ಪರಂಪರೆಯನ್ನು ಅವಲಂಬಿಸುತ್ತದೆ. ಅವರ ಸಾಮಾಜಿಕ ಆಚರಣೆಗಳು ಮತ್ತು ಆರಾಧನೆಗಳು ಒಂದು ಕಲೆಯೂ ಹೌದು, ನಂಬಿಕೆಯೂ ಹೌದು, ಮನರಂಜನೆ ವಸ್ತುವೂ ಹೌದು. ಮನುಷ್ಯ ಬದುಕಿಗೆ ಆಹಾರ, ವಸತಿ, ಎಷ್ಟು ಅಗತ್ಯವೋ ಆರಾಧನಾ ನಂಬಿಕೆಗಳೂ, ಆಚರಣೆಗಳೂ ಅಷ್ಟೇ ಮುಖ್ಯವಾದುದು. ಆರಾಧನೆ ತುಳುವರ ಉಸಿರು. ಹಾಗಾಗಿ ಹುಟ್ಟು ಸಾವಿನ ಮಧ್ಯೆ ಇವರ ಆರಾಧನಾ ಸಾಧನೆ ಅವಿರತವಾಗಿ ಸಾಗುತ್ತದೆ. ಜನಪದರಿಗೂ ಪ್ರಕೃತಿಗೂ ಅವಿನಾಭಾವ ಸಂಬಂಧವಿದೆ. ಕ್ರೂರ ಪ್ರಾಣಿಗಳ ಭಯ ಜನರಿಗಿರುವುದರಿಂದ, ವ್ಯಕ್ತಿ ಕೇಂದ್ರಿತ ಆರಾಧನೆಗಳ ಜೊತೆಗೆ ಪ್ರಾಣಿ ವರ್ಗಕ್ಕೆ ಸೇರಿದ ದೈವಗಳಾದ ಪಂಜುರ್ಲಿ, ಮೈಸಂದಾಯ, ಪಿಲಿತಾಟ ಮೊದಲಾದ ಆರಾಧನೆಗಳೂ ಹುಟ್ಟಿಕೊಂಡಿದೆ. ತುಳುವರ ಈ ಆರಾಧನೆಗಳು, ಆಚರಣೆಗಳು ಕೇವಲ ಆರಾಧನೆಗಳಲ್ಲ ಅದು ಅವರ ನಿತ್ಯ ಕರ್ಮೋಕ್ತಿ. ಈ ಕರ್ಮದಲ್ಲೇ ಆತ ತನ್ನ ಈ ಪಾರಮಾರ್ಥಿಕ ಚಿಂತನೆಗಳೊಂದಿಗೆ ಇಡೀ ಸಮಾಜದ ಸ್ವಾಥ್ಯವನ್ನು ಕಾಪಾಡುವ ಹೊಣೆ ಹೊತ್ತವನಾಗಿ ಗೋಚರಿಸುತ್ತಾನೆ.

ತುಳುನಾಡಿನಲ್ಲಿ ಹಲವಾರು ಜಾತಿ ಪಂಗಡಗಳಿವೆ. ಮಧ್ಯಕಾಲೀನ ಯುಗದಲ್ಲಿ ಕಟ್ಟುಕಟ್ಟಳೆಗಳು, ಜಾತಿಪದ್ಧತಿ, ಅಸ್ಪ್ರಶ್ಯತೆಗಳು ದೇಶದ ಇನ್ನಿತರ ಭಾಗಗಳಲ್ಲಿ ಇದ್ದಷ್ಟು ತುಳುನಾಡಿನಲ್ಲಿರಲಿಲ್ಲ. ಇದಕ್ಕೆ ಅನೇಕ ಸಾಕ್ಷಿಗಳು ಲಭ್ಯವಾಗುವುದು.

ಇಂತಹ ಒಂದು ವರ್ಗದಲ್ಲಿ ಜನಿಸಿ ಬಾಲ್ಯದಿಂದಲೇ ಕೋಲ, ಸಂಕ್ರಮಣ ನೋಡಿ, ಅನುಭವಿಸಿದ ಹಿನ್ನೆಲೆಯಲ್ಲಿ ನನ್ನ ಚೊಚ್ಚಲ ಕೃತಿಯನ್ನು ಲೋಕಾರ್ಪಣೆಗೈಯುತ್ತಿದ್ದೇನೆ. ನಾನು ಕಂಡ, ಕೇಳಿದ, ಸಂಗ್ರಹಿಸಿದ ಮಾಹಿತಿಗಳಲ್ಲಿ ಗೊಂದಲ-ಅಡಚಣೆಗಳಿದ್ದರೆ, ಸರ್ವಸಹೃದಯರಲ್ಲಿ ಕ್ಷಮೆ ಯಾಚಿಸುತ್ತಾ, ಈ ಕೃತಿ ಹಲವಾರು ನೆಲೆಗಳಲ್ಲಿ ಉಪಯೋಗಕ್ಕೆ ಬರಲಿ ಹಾಗೂ ಈ ಕುರಿತು ಇನ್ನಷ್ಟು ಕೆಲಸಗಳು ಆಗಲೆಂದು ಬಯಸುತ್ತೇನೆ.

**ಸ್ಥಳ : ಮಂಗಳೂರು**
**ದಿನಾಂಕ: 18/05/2018**

**ಶ್ರೀಮತಿ ಜ್ಞಾನೇಶ್ವರಿ ಯಂ.**
**ಕನ್ನಡ ಉಪನ್ಯಾಸಕರು,**
**ಬೆಸೆಂಟ್ ಮಹಿಳಾ ಕಾಲೇಜು,**
**ಮಂಗಳೂರು.**

# ಅಧ್ಯಾಯ 1

## ತುಳುನಾಡಿನ ವೈಶಿಷ್ಟ್ಯಗಳು

# ಅಧ್ಯಾಯ–1

## ತುಳುನಾಡಿನ ವೈಶಿಷ್ಟ್ಯಗಳು

ಪರಶುರಾಮನ ಸೃಷ್ಟಿ ಈ ತುಳುನಾಡು ಎಂಬುದು ಜಗಜ್ಜಾಹಿರವಾದ ಮಾತು. ವ್ಯಾಸ ಭಾರತದಲ್ಲಿ ಬರುವ 'ಸತಿಯಾ' : 'ಸತೀನರಾ', ಅಶೋಕನ ಕಾಲದ ಬಂಡೆ ಶಾಸನದಲ್ಲಿ ಬರುವ ಸತಿಯ ಪುತ್ರ, ಪ್ರಪಂಚಹೃದಯ, ಹಾಗೆಯೇ ಸಂಸ್ಕೃತ ಗ್ರಂಥಗಳು ಉಲ್ಲೇಖಿಸುವ 'ಆಲುವ' ಇತ್ಯಾದಿ ಸ್ಥಳವಾಚಕ ಶಬ್ದಗಳು 'ತುಳುನಾಡಿಗೆ' ಇರುವ ಭಿನ್ನ ಭಿನ್ನ ಹೆಸರುಗಳಾಗಿವೆ ಎಂಬುದು ವಿದ್ವಾಂಸರುಗಳ ಅಭಿಪ್ರಾಯ. 2ನೇ ಶತಮಾನದ ಗ್ರೀಕ್ ಪ್ರಹಸನ 'ಆಕ್ಸಿರಿಂಕಸ್ ಪಪೈರಿ' ಯಲ್ಲಿ ಪ್ರಯೋಗವಾದ ಗ್ರೀಕೇತರ ಪದಗಳು 'ತುಳು ಪದ'ಗಳೇ ಆಗಿವೆ ಎಂಬ ಅಭಿಪ್ರಾಯವನ್ನು ಗೋವಿಂದ ಪೈಗಳು ಹಾಗೂ ಅನೇಕ ಸಂಶೋಧಕರು ಒಪ್ಪಿಕೊಳ್ಳುತ್ತಾರೆ. ತುಳುನಾಡು ವ್ಯಾಪಾರ ಕೇಂದ್ರವಾಗಿದ್ದು, ವಿದೇಶ (ಈಜಿಪ್ಟ್, ಅರೇಬಿಯಾ, ಗ್ರೀಸ್) ಗಳಿಂದ ಕೊಡುಕೊಳ್ಳುಗೆಗಳು ನಡೆಯುತ್ತಿತ್ತು. ಬಾರಕೂರು, ಪಣಂಬೂರು, ಮಂಗಳೂರು, ಮಂಜೇಶ್ವರ, ಕುಂಬ್ಳೆ ಆಗಿನ ಬಂದರುಗಳಾಗಿತ್ತು.

ತುಳುನಾಡು ಅನೇಕ ಕಲೆಗಳ ತವರೂರು.ಇಂತಹ ಜನಪದ ಕಲೆಗಳ ನಾಡನ್ನು ಅಧ್ಯಯನ ದೃಷ್ಟಿಯಿಂದ ದ.ಕ. ಕರಾವಳಿ ಮತ್ತು ಉತ್ತರ ಕರಾವಳಿ ಎಂದು ಎರಡು ಭಾಗ ಮಾಡಿಕೊಳ್ಳಬಹುದು. ಎರಡು ಜಿಲ್ಲೆಗೂ ಸಾಮಾನ್ಯವಾದ ಕಲೆ ಯಕ್ಷಗಾನವೆಂಬುದು ಸಮೀಕ್ಷೆಯಿಂದ ತಿಳಿದು ಬರುತ್ತದೆ. ದ.ಕ. ಜಿಲ್ಲೆಯ ಜನಪದ ಕಲೆಗಳನ್ನು ಶ್ರೀಮಂತಗೊಳಿಸಲು ಕೊರಗರು, ಕೊರವರು, ಮೊಗವೀರರು, ಬಂಟರು, ಹರಿಜನ–ಗಿರಿಜನರು, ಬ್ರಾಹ್ಮಣರು ಈ ಎಲ್ಲ ಜಾತಿಯವರು ಕಾರಣರಾಗಿದ್ದಾರೆ. ದಕ್ಷಿಣ ಕನ್ನಡ ತುಳು ಸಂಸ್ಕೃತಿಗಳನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ.

ತುಳು ಎಂಬ ಶಬ್ದ ಭಾಷಾ ವಾಚಕವೂ ಅಲ್ಲ. ದೇಶ ವಾಚಕವೂ ಅಲ್ಲ. 'ತುರು' ಎಂಬುದರ ಪರ್ಯಾಯ ಪದವೇ 'ತುಳು'. ತುರು ಎಂದರೆ (ತುರುವರು) ಗೋಪರು. ಅವರಿರುವ ನಾಡೇ ಗೋಪರಾಷ್ಟ್ರ, ಗೋರಾಷ್ಟ್ರ, ತುರುನಾಡು, ತುಳುನಾಡು, ಗೋಪರಿರುವ ನಾಡು ಎಂಬುದಾಗಿ ಸ್ಥಳನಾಮವನ್ನು ಹೊಂದಿದೆ. ವ್ಯವಸಾಯ ಇಲ್ಲಿಯ ಮುಖ್ಯ ಕಸಬಾಗಿರುವುದು ಹೆಚ್ಚು ಸಮಂಜಸವೆನಿಸುವುದು.

'ತುಳು' ಪದಕ್ಕೆ ಸಾಧು, ಕೋಮಲ, ನಮ್ರ, ವಿನಯ ಮೊದಲಾದ ಉತ್ತಮಾರ್ಥ ಇರುವಂತೆ 'ತುಳುವೆ' ಎಂಬ ಹಲಸಿನ ಹಣ್ಣಿನ ಕಾರಣದಿಂದ 'ತುಳು' ಪದ ಹುಟ್ಟಿತೆಂಬ ವ್ಯಂಗ್ಯಾರ್ಥವೂ ಇದೆ. 'ತುಳುವ' ಪದ ಪ್ರಯೋಗ ಮೊತ್ತ ಮೊದಲನೆಯದಾಗಿ ಕ್ರಿ.ಶ. 1012 ರಲ್ಲಿ ದೊರೆತ ಬಲ್ಮುರಿ ಶಾಸನದಲ್ಲಿ ದೊರೆಯುತ್ತದೆ.

# ಅಧ್ಯಾಯ 2

## ಮುಂಡಾಳ ಜನಾಂಗದ ಸಾಮಾಜಿಕ ಆಚರಣೆಗಳು

- ಮೈನರೆಯುವುದು
- ನಿಶ್ಚಿತಾರ್ಥ
- ಚಪ್ಪರದೂಟ ಹಾಗೂ ಮದುವೆ
- ಹೆಣ್ಣು ಒಪ್ಪಿಸುವುದು
- ತೊಡಮನೆ ಹಾಗೂ ಚಪ್ಪರ ಇಳಿಸುವುದು
- ಆಟಿ ಕುಲ್ಲುನಿ
- ಬಯಕೆ
- ತೊಟ್ಟಿಲು ಹಾಕುವುದು
- ಕಿವಿತೂತು (ಕೊಜಂಬು)
- ಕೈ ಹಿಡಿಯುವುದು
- ಮರಣ (ಅಪರ ಕ್ರಿಯೆ) ಹಾಗೂ ಒಳಗೆ ಕರೆಯುವುದು

# ಅಧ್ಯಾಯ 2
# ಮುಂಡಾಳ ಜನಾಂಗದ ಸಾಮಾಜಿಕ ಆಚರಣೆಗಳು

ಮಾನವನ ಹುಟ್ಟು ಮತ್ತು ಸಾವುಗಳ ಮಧ್ಯೆ ಮೂರ್ತವಾದ ಅದೆಷ್ಟೋ ಕ್ರಿಯೆಗಳಿವೆ. ಇವು ಶುಭ ಮತ್ತು ಅಶುಭ ಎಂಬ ಕಲ್ಪನೆಯಲ್ಲಿ ಆಚರಣೆ ಒಳಗಾಗುತ್ತವೆ. ಇದನ್ನೇ 'ಜೀವನಾವರ್ತ ಸಂಬಂಧಿ ಕ್ರಿಯೆ'ಗಳೆನ್ನುವರು. ಇವೆಲ್ಲವೂ ಸಾಂಪ್ರದಾಯಿಕ ಆಚರಣೆಗಳೂ ಆಗಿವೆ. ಇವುಗಳು ಮನುಷ್ಯನ ಜೀವಿತಾವಧಿಯಲ್ಲಿ ಮಾಡಿಕೊಂಡ ನಂಬಿಕೆಯ ಒಪ್ಪಂದಗಳಾಗಿವೆ. ಇವುಗಳ ಆಧಾರದಲ್ಲೇ ಜೀವನವೂ ನಡೆಯುತ್ತದೆ.

ಈ ಆಚರಣೆಗಳು ದ್ರಾವಿಡರಲ್ಲಿ ವೈಶಿಷ್ಟ್ಯಪೂರ್ಣವಾಗಿದೆ. ಶುಭ ಆಚರಣೆಗಳಾದ ಹೆಣ್ಣು ಮಕ್ಕಳು ಋತುಮತಿಯಾಗುವುದು, ನಿಶ್ಚಿತಾರ್ಥ, ಮದುವೆ, ಸೀಮಂತ, ಮಕ್ಕಳ ಜನನ ಇತ್ಯಾದಿಗಳನ್ನು ಇತರ ಜನಾಂಗಗಳು ಸೇರಿದಂತೆ ಮುಂಡಾಳ ಜನಾಂಗವೂ ಇದನ್ನು ಶುಭ ಆಚರಣೆಗಳೆಂದೇ ಸ್ವೀಕರಿಸಿದೆ. ಜಾತೀಯ ನೆಲೆಯಿಂದ ದಮನಕ್ಕೊಳಪಟ್ಟ ಈ ಮುಂಡಾಳ ಜನಾಂಗ ಹಾಗೂ ಇತರ ದಲಿತ ಜನಾಂಗವು ಶುಭ ಆಚರಣೆಗಳಾದ ಇವುಗಳನ್ನು ತಮ್ಮ ಜೀವಿತದ ಎಷ್ಟೇ ಕಷ್ಟಕರ ಸಂದರ್ಭದಲ್ಲೂ ಆಚರಿಸಲು ಕಂಕಣಬದ್ಧರಾಗಿರುತ್ತಾರೆ. ಏಕೆಂದರೆ ಇವು ಕೇವಲ ಆಚರಣೆಗಳಲ್ಲ ಸಂಬಂಧಗಳನ್ನು ಬೆಸೆಯುವ, ಸಂಬಂಧಗಳನ್ನು ಗಟ್ಟಿಗೊಳಿಸುವ ಬಂಧಗಳಾಗಿವೆ. ಈ ಶುಭ ಆಚರಣೆಗಳ ಹಿಂದೆ ಸಂತೋಷಪಡುವ ಹಾಗೂ ಪರಸ್ಪರ ಒಟ್ಟು ಸೇರುವ ಪ್ರಕ್ರಿಯೆಯೂ ಕೆಲಸ ಮಾಡಿದೆ.

## ಮೈನರೆಯುವುದು (ಮದ್ಮಲ್ ಆಪಿನಿ)

ಈ ಜಗತ್ತಿನಲ್ಲಿ ಹೆಣ್ಣು, ಗಂಡು ಎನ್ನುವ ಭೇದ ವ್ಯಕ್ತಿಯ ದೈಹಿಕ ರಚನೆಯಿಂದ ಭಿನ್ನಗೊಳ್ಳುತ್ತದೆ. ಸೃಷ್ಟಿಕರ್ತ ಹೆಣ್ಣಿಗೆ ನಾಜೂಕಾದ ಕೋಮಲವಾದ ದೇಹ, ಮನಸ್ಸನ್ನು ಕೊಟ್ಟಿದ್ದಾನೆ. ಗಂಡಿಗೆ ಗಡಸುತನವನ್ನು ನೀಡಿದ್ದಾನೆ. ದೇಹ ಗಡಸಾಗಿರುವ ಮಾತ್ರಕ್ಕೆ ಅವರ ಮನಸ್ಸೂ ಗಡಸೇನಲ್ಲ. ಹೆಣ್ಣಿನ ರೂಪದಲ್ಲಿ ಗಂಡುಬೀರಿಗಳಿರುತ್ತಾರೆ. ಗಂಡಿನ ರೂಪದಲ್ಲಿ ಹೆಣ್ಮನಸಿನ ಪುರುಷರಿರುತ್ತಾರೆ. ಆದರೂ ಹೆಣ್ಣಿಗೆ, ಗಂಡಿಗಿಂತ ವಿಭಿನ್ನವಾದ ಅಂಗರಚನೆ ಹಾಗೂ ಕರ್ತವ್ಯಗಳನ್ನು ಆ ಭಗವಂತ ನೀಡಿದ್ದಾನೆ. ಅವುಗಳಲ್ಲಿ ಒಂದು ಮೈನೆರೆಯುವುದು. ಬಾಲ್ಯಾವಸ್ಥೆಯನ್ನು ಕಳೆದು ಪ್ರೌಢಾವಸ್ಥೆಗೆ ಕಾಲಿಡುವ ಹಂತವಿದು. ಈ ಕ್ರಿಯೆಗಳಿಂದಾಗಿ ಪ್ರತೀ ಹೆಣ್ಣು ಮಗಳಿಗೂ ದೈಹಿಕ ಬದಲಾವಣೆಗಳಾಗುತ್ತದೆ. ಇದು ಸಹಜ ಕ್ರಿಯೆ ಹಾಗೂ ಪ್ರಕೃತಿ ನಿಯಮ ಕೂಡಾ. ಹೀಗಾದಾಗ ಹಿಂದಿನ ಕಾಲದಲ್ಲಿ ಅಂತಹ ಹೆಣ್ಮಗಳನ್ನು ಇತರರಿಂದ ಕೆಲವು ದಿನಗಳವರೆಗೆ ಬೇರೆ ಇಟ್ಟು, ಪರಂಪರೆಯ ಕೆಲವು ಸಾಂಪ್ರದಾಯಿಕ ಕಟ್ಟುಪಾಡುಗಳಿಗೆ ಅವಳನ್ನು ಒಳಪಡಿಸುತ್ತಿದ್ದರು. ಹಿಂದೆ ಸಾಂಪ್ರದಾಯಿಕ ಆಹಾರದ ಸೇವನೆಯ ಕಾರಣದಿಂದಾಗಿ ಹನ್ನೆರಡನೆಯ ವರುಷಕ್ಕೆ ಹೆಣ್ಣು ಋತುಮತಿಯಾಗುತ್ತಾಳೆ. ಪರಿಸ್ಥಿತಿ ಇದೀಗ ಬದಲಾಗಿದೆ. ತಿನ್ನುವ ಆಹಾರದ ಪೋಷಕಾಂಶದ

ಕೊರತೆಯೂ ಸೇರಿದಂತೆ, ವಯಸ್ಸಿಗಿಂತ ಜಾಸ್ತಿ ದೇಹ ತೂಕ ಎತ್ತರ ಪಡೆಯುವ ಈಗಿನ ಹೆಣ್ಮಕ್ಕಳು ಆಟ ಆಡಿಕೊಂಡು ಖುಷಿಯಾಗಿರಬೇಕಾದ ಸಮಯದಲ್ಲಿ ಅಂದರೆ ನಾಲ್ಕನೆಯ ತರಗತಿ ಅಂದರೆ 8–9 ವರ್ಷದಲ್ಲೇ ಋತುಮತಿಯಾಗುತ್ತಾರೆ. ಇದು ಇಂದಿನ ಪರಿಸ್ಥಿತಿಯಾದರೆ, ಹಿಂದಿನ ಕಾಲದಲ್ಲಿ ಮೈನೆರೆಯುವ ಸಮಯ ಏರುಪೇರಾಗಿ ಹದಿನೈದು ವರ್ಷವಾದರೂ ಋತುಮತಿಯಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಹೆತ್ತವರು, ಹಿರಿಯರು ಬೇಗ ಮೈನೆರೆಯಲೆಂದು ದೈವ–ದೇವರಿಗೆ ಹರಕೆ ಹೊರುವವರೂ ಇದ್ದಾರೆ.

ಋತುಮತಿಯಾದ ಹೆಣ್ಣು 10 ದಿನಗಳ ವರೆಗೆ ಮನೆಯ ಹೊಸಲು ದಾಟುವ ಹಾಗಿಲ್ಲ. ಆಕೆಗಾಗಿಯೇ ಮನೆಯ ಹೊರಗೆ ಒಂದು ಪ್ರತ್ಯೇಕ ಕೋಣೆಯಿದ್ದು, ಆ ಕೋಣೆಯಲ್ಲಿಯೇ ಆಕೆ ಏಳು ದಿನದ ನೀರಾಗುವವರೆಗೆ ಇರಬೇಕು. ಅವಳಿಗಾಗಿ ತಟ್ಟೆ, ಬಟ್ಟಲು, ಲೋಟ, ಚಿಕ್ಕ ಪಾತ್ರೆ, ಚಾಪೆ – ಕಂಬಳಿ ಪ್ರತ್ಯೇಕವಾಗಿ ಆ ಕೋಣೆಯೊಳಗೆ ಇಡುತ್ತಿದ್ದರು. ಅವಳಿಗಾಗಿ ಮೀಸಲಾದ ಈ ಸಾಮಾಗ್ರಿಗಳನ್ನು ಯಾರೂ ಮುಟ್ಟುವ ಹಾಗಿರಲಿಲ್ಲ. ಆಕೆಯನ್ನು ಕೂಡಾ ಮುಟ್ಟಬಾರದು. ಇದು ಎಲ್ಲಾ ಜನಾಂಗದ ನಂಬಿಕೆಯಾಗಿದ್ದು, ಇದರ ಹಿಂದೆ ಒಂದು ಮನಸ್ಸು ಕೆಲಸ ಮಾಡಿದೆ. ಮೈನೆರೆಯುವುದು ಎಂದರೆ 'ಅಶುದ್ಧತೆ','ಸೂತಕ'ಎಂದರ್ಥ. ಆದರೆ ಜನಪದರು ಕೇವಲ ಅಶುದ್ಧತೆಯ ಕಲ್ಪನೆಯಲ್ಲಿ ಇದನ್ನು ಗುರುತಿಸದೇ ಅದರ ಹಿಂದೆ ಒಂದು ಮಹಾ ಚಿಂತನೆಯನ್ನೇ ಇಟ್ಟುಕೊಂಡಿದ್ದಾರೆ. ತುಳುನಾಡು ಕೃಷಿ ಪ್ರಧಾನವಾದ ನಾಡು, ಕೃಷಿ ಕೆಲಸಗಳು ವರ್ಷ ಪೂರ್ತಿ ನಡೆಯುತ್ತದೆ. ಗಂಡು ಹೊರಗಿನ (ಗದ್ದೆಯ) ಕೆಲಸಗಳನ್ನು ನೋಡಿಕೊಂಡರೆ, ಹೆಣ್ಣು ಹೊರಗಿನ ಗದ್ದೆಯ ಕೆಲಸದ ಜೊತೆಗೆ ಮನೆಯ ಒಳಗಿನ ಕೆಲಸಗಳ ಬಗ್ಗೆಯೂ ದುಡಿಯಬೇಕಾಗುತ್ತದೆ. ಇಲ್ಲಿ ದುಡಿತದ ಪ್ರಮಾಣ ಗಂಡಿಗಿಂತ ಹೆಣ್ಣಿನದು ಹೆಚ್ಚು. ಹೆಣ್ಣು ಸಂಸಾರದ ಬೆನ್ನೆಲುಬು. ಆದುದರಿಂದ ಎಡೆಬಿಡದ ಈ ದುಡಿಮೆಯಿಂದ ಆಕೆಗೆ ಒಂದಷ್ಟು ದಿನ ವಿಶ್ರಾಂತಿ ದೊರಕಲೆಂಬ ಕಾರಣಕ್ಕಾಗಿ ಜನಪದರು ಈ ಆಚರಣೆಗಳನ್ನು ಆಚರಿಸುತ್ತಿರಲೂಬಹುದು.

ಮೈನೆರೆದ ದಿನದಿಂದ 10 ದಿವಸಗಳು ಆ ಹೆಣ್ಣಿನ ದೇಹದಲ್ಲಿ ವ್ಯಯವಾದ ರಕ್ತದಂಶ ಮತ್ತೆ ಉತ್ಪನ್ನವಾಗಲು ಪೂರಕವಾಗುವ ಆಹಾರಗಳನ್ನು ತಾಯಿಯು ಒದಗಿಸಿಕೊಡುತ್ತಾಳೆ. ಈ ಸಂದರ್ಭದ ಆಹಾರಗಳಲ್ಲಿ ಬೆಲ್ಲದಂಶ (ವಾಲೆಬೆಲ್ಲ)ವಿರುವ ಪದಾರ್ಥಗಳು, ಮೆಂತ್ಯೆಗಂಜಿ, ಹೆಸರು ಮುಂತಾದುವನ್ನು ಬೇಯಿಸಿ ಕೊಡುತ್ತಾರೆ, ಉಷ್ಣಾಂಶವಿರದ, ತಂಪಾದ ಆಹಾರಗಳ ಸೇವನೆ ಈ ಸಂದರ್ಭದಲ್ಲಿ ಅಗತ್ಯವಿದೆ ಎಂಬ ನಂಬಿಕೆ ಇಲ್ಲಿದೆ.

ಮುಟ್ಟಾದ ಏಳು ದಿನಕ್ಕೆ ಒಂದು ಆಚರಣೆ ಇದೆ ಇದನ್ನು 'ನೀರು ಮೀಯಿಸುವುದು'(ನೀರ್ ಮೀಪಾವುನಿ) ಎನ್ನುತ್ತಾರೆ. ರಾತ್ರಿ ಹೊತ್ತಿನಲ್ಲಿ ನಡೆಯುವ ಸಂಭ್ರಮದ ಆಚರಣೆ ಇದಾಗಿದೆ. ಇದಕ್ಕೆ ಆ ಗ್ರಾಮದ ಹೆಂಗಸರೆಲ್ಲರನ್ನು ಆಹ್ವಾನಿಸುತ್ತಾರೆ. ಮೊದಲು ತೆಂಗಿನ ಕಾಯಿಯನ್ನು ಮೂರು, ಐದು, ಏಳು, ಒಂಭತ್ತು ಹೀಗೆ ಯಾವುದಾದರು ಒಂದು ಬೆಸ ಸಂಖ್ಯೆಯಲ್ಲಿ ಜೋಡಿಸಿ ಮಧ್ಯದಲ್ಲಿ ಒಂದು ಮಣೆ ಇಡುತ್ತಾರೆ, ಅದರ ಸುತ್ತಲೂ ಕಲಶವನ್ನಿಡುತ್ತಾರೆ. ತುಳಸಿಕಟ್ಟೆಯ ಎದಿರು ಭಾಗದಲ್ಲಿ ಈ

ವ್ಯವಸ್ಥೆಯನ್ನು ಮಾಡುತ್ತಾರೆ. ಕಲಶವೆಂದರೆ ಕೊಡಪಾನದೊಳಗೆ ಬಾವಿಯಿಂದ ತಂದ ನೀರನ್ನು ಕುರಿ ನೀರು ಮಾಡಿ (ಕುರ್ದಿ ನೀರು – ಸುಣ್ಣ ಕುಂಕುಮ ಹಳದಿ ಬೆರೆಸಿದ ನೀರು) ತುಂಬಿಸಿ ಮೇಲ್ಗಡೆ ಜುಟ್ಟುಳ್ಳ ತೆಂಗಿನಕಾಯಿಯನ್ನು ಮಾವಿನ ಎಲೆ, ಹಿಂಗಾರ ಹೂವಿನ ಮಧ್ಯದಲ್ಲಿಡುತ್ತಾರೆ. ಮಾವಿನ ಎಲೆಗೂ ಬೆಸ (ಮುಗುಳಿ) ಲೆಕ್ಕಾಚಾರವಿದೆ. ಜನಪದರಲ್ಲಿ ದಲಿತ ಆಚರಣೆಗಳಲ್ಲಿ ಬೆಸ ಸಂಖ್ಯೆಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಇದು ಕಾರಣವು ಕಲಶ 7 ಅಥವಾ 9, 11, 13, ಹೀಗೆ ಇರಬೇಕು. ಬೈಹುಲ್ಲಿನಿಂದ ತಯಾರಿಸಿದ ಉರುಟಾದ 'ತೆರಿಯ' ತಯಾರಿಸಿ ಅದರ ಮೇಲೆ ಕಲಶವನ್ನು ಇಡುತ್ತಾರೆ. ಕಲಶದ ಮುಂಭಾಗದಲ್ಲಿ ಮೊರದ ಮೇಲೆ ಒಂದು ತುದಿ ಬಾಳೆಯನ್ನಿಟ್ಟು ಅದಕ್ಕೆ ಒಂದು ಸೇರು ಅಕ್ಕಿ, 5 ವೀಳ್ಯದೆಲೆ, 5 ಹಣ್ಣಡಿಕೆ, ದೀಪ ಇಡುವರು. ಬಳಿಕ ಗ್ರಾಮದ ಗುರಿಕಾರ್ತಿ ತೆಂಗಿನಕಾಯಿಗಳ ನಡುವೆ ಇರಿಸಿದ ಮಣೆಯಲ್ಲಿ ಋತುಮತಿಯಾದವಳನ್ನು ಕೂರಿಸುತ್ತಾರೆ. ಫಲದ ಅಪೇಕ್ಷೆ ಈ ನಂಬಿಕೆಯಲ್ಲಿರಬಹುದು. ನಂತರ ತಾಯಿಯೂ ಸೇರಿದಂತೆ ಗ್ರಾಮದ ಮುತ್ತೈದೆಯರು, ಕುಟುಂಬದ ಮುತ್ತೈದೆಯರು ಸೇರಿ ಆಕೆಗೆ ಹರಸಿನ ಹಚ್ಚುತ್ತಾರೆ. ಬಳಿಕ ಒಂದೊಂದು ಕಲಶವನ್ನು ಕೈಯಲ್ಲಿಡಿದು, ವೃತ್ತಾಕಾರವಾಗಿ ಆ ಹೆಣ್ಣಿನ ಸುತ್ತ ಹಾಡು ಹಾಡುತ್ತಾ ಒಂದು ಅಥವಾ ಮೂರು ಸುತ್ತು ಬಂದು ಹಿರಿಯ ಮುತ್ತೈದೆಯಿಂದ ಮೊದಲ ಕಲಶ ನೀರಿನ ಧಾರೆಯಾಗುತ್ತದೆ. ನಂತರ ಒಬ್ಬೊಬ್ಬರಂತೆ ಸಾಲಾಗಿ ಎಲ್ಲರೂ ಕಲಶ ನೀರನ್ನು ಎರೆಯುವರು. ತದನಂತರದಲ್ಲಿ ಋತುಮತಿಯಾದ ಹುಡುಗಿಯನ್ನು ಅಲ್ಲಿಂದ ಸ್ನಾನದ ಬಚ್ಚಲು ಮನೆಗೆ ಒಯ್ದು ಸ್ನಾನ ಮಾಡಿಸಿ ಶುಚಿಗೊಳಿಸಿ, ಆ ದಿನಕ್ಕೆ ಅವಳಿಗಾಗಿ ತಂದಂತಹ, ಜರಿಸೀರೆ, ಹೊಸ ಕುಪ್ಪಸವನ್ನು ತೊಡಿಸುತ್ತಾರೆ, ಶೃಂಗಾರಗೊಂಡ ಆಕೆಯನ್ನು ನಡು ಅಂಗಳಕ್ಕೆ ತಂದು ನಿಲ್ಲಿಸುತ್ತಾರೆ. ಗುರಿಕಾರ್ತಿ ಎಳನೀರನ್ನು ತೂತು ಮಾಡಿ ಅದರ ನೀರನ್ನು ಮಾವಿನ ಎಲೆಯಲ್ಲಿ ಅದ್ದಿ ಎಲ್ಲಾ ಕಡೆ ಸಿಂಪಡಿಸಿ ಸ್ಥಳ ಹಾಗೂ ಜನರನ್ನು ಶುದ್ಧಿ ಮಾಡುತ್ತಾಳೆ. ಇದರಿಂದ ಬಾಲಕಿ 7 ದಿನದ ಮೈಲಿಗೆ ಕಳೆದು ಎಲ್ಲರೊಂದಿಗೆ ಮತ್ತೆ ಬೆರೆಯಲು ಅವಕಾಶ ದೊರೆಯುವುದು. ಬಳಿಕ ಆ ಹೆಣ್ಣನ್ನು ಹಿರಿಯ ಮುತ್ತೈದೆಯರು ಒಳಕ್ಕೆ ಕರೆದೊಯ್ದು ಸಾಂಕೇತಿಕವಾಗಿ ಮಡಕೆ (ಕರ)ಯನ್ನು ಮುಟ್ಟಿಸಿ ಅಡುಗೆ ಕೆಲಸ ಪ್ರಾರಂಭಕ್ಕೆ ನಾಂದಿ ಹಾಡುತ್ತಾರೆ. ಇಲ್ಲಿಂದ ಆ ಹೆಣ್ಣಿಗೆ ಅಡುಗೆ ಮಾಡುವ ಅಧಿಕಾರವು ಪ್ರಾಪ್ತವಾಗುತ್ತದೆ. ಇದನ್ನು 'ಕರಪತ್ತಾವುನಿ' ಎನ್ನುವರು. ಬಂದ ಅತಿಥಿಗಳು. ಹೆಣ್ಣು ಹೋಗಿ ಹೆಂಗಸಾದ (ಪೊಣ್ಣು ಪೋದು ಪೊಂಜೋವಾಯಿನ) ಅವಳನ್ನು ತಮಗೆ ಅನುಕೂಲವಿರುವಷ್ಟು ಹಣ ಅಥವಾ ಉಡುಗೊರೆ ನೀಡಿ ಹಾರೈಸುತ್ತಾರೆ. ಮೈ ಬಗ್ಗಿಸಿ ಕಾಲು ಹಿಡಿದು ಆಶೀರ್ವಾದವನ್ನು ಅವರಿಂದ ಆಕೆ ಪಡೆದುಕೊಳ್ಳುತ್ತಾಳೆ. ಬಂದ ಅತಿಥಿಗಳಿಗೆ ಔತಣಕೂಟವಿದ್ದು, ಅದನ್ನು ಸ್ವೀಕರಿಸಿ ಗ್ರಾಮದ ಹಾಗೂ ಕುಟುಂಬದ ಸದಸ್ಯರು ತೆರಳುತ್ತಾರೆ.

ಈ ಹಿಂದೆ ಸ್ವತಂತ್ರ ಮನೆಗಳು ಹೆಚ್ಚು ಇದ್ದು, ಸಗಣಿ ಸಾರಿಸಿ ಸ್ವಚ್ಛ, ಒಪ್ಪ ಓರಣವಾಗಿಟ್ಟುಕೊಂಡಂತಹ ವಿಸ್ತಾರವಾದ ಅಂಗಳಗಳು (ಹೊರಾಂಗಣ) ಇದ್ದುದರಿಂದ ಈ ಎಲ್ಲಾ ಆಚರಣೆಗಳು ಮನೆಗಳಲ್ಲಿ ನಡೆಯುತ್ತಿದ್ದವು. ಆಗಿನ ಮುಗ್ಧ ಮೌಢ್ಯ ಪ್ರಪಂಚದೊಳಗೆ ಇಂತಹ ಆಚರಣೆಗಳಿಗೆ ಸರ್ವರಿಂದ ಮಾನ್ಯತೆ ಒದಗಿರುವುದು, ಆಗಿನ ಹೆಣ್ಮಕ್ಕಳೂ ಅವಿದ್ಯಾವಂತರೂ, ಮುಗ್ಧರೂ ಆಗಿರುವುದು, ಇದಕ್ಕಿಂತಲೂ ಪ್ರಮುಖವಾಗಿ ಅಂದಿನ ಪುರುಷ ವರ್ಗ ಇಂತಹ

ಪದ್ಧತಿಗಳನ್ನು ಗೌರವದಿಂದ ಕಂಡಿರುವುದು ಈ ಆಚರಣೆಗಳು ನಿರ್ವಿಘ್ನವಾಗಿ ಶ್ವೇಚ್ಛೆಯಿಂದ ಜರುಗಲು ಕಾರಣವಾಗಿರಬಹುದು.

ಆದರೆ ಇದೀಗ ಹಳ್ಳಿಗಳೂ ಪಟ್ಟಣದ ರೂಪುರೇಷೆಗಳನ್ನು ಪಡೆದುಕೊಂಡಿರುವುದು, ನಗರದ ಪ್ರಭಾವ, ಆಧುನಿಕತೆಯ ಗಾಳಿ ಬೀಸಿರುವುದು, ಹೆಣ್ಮಕ್ಕಳು ಮುಗ್ಧ–ಬಾಲಿಶತನದಿಂದ ಹೊರಗುಳಿದಿರುವುದು, ಸ್ವತಂತ್ರ ಮನೆಗಳು ಹಾಗೂ ವಿಸ್ತಾರ ಹೊರಾಂಗಣ ಅಂಗಳಗಳು ಇಲ್ಲದಿರುವ ಕೊರತೆ, ಹೆಣ್ಮಕ್ಕಳು ವಿದ್ಯಾವಂತರಾಗಿರುವುದು, ಹಿರಿಯ ತಲೆಮಾರುಗಳೂ ಅನುಕೂಲ ಸಂಪ್ರದಾಯಸ್ಥರಾಗಿರುವುದು, ಬದುಕು ಸಂಕೀರ್ಣತೆಯನ್ನು ಪಡೆದಿರುವುದು, ಪ್ರಮುಖವಾಗಿ ಈ ಪರಂಪರೆಗಳು, ಪದ್ಧತಿಗಳು ಮತ್ತೊಂದು ಮಗ್ಗಲಿಗೆ ವರ್ಗಾವಣೆ ಆಗದಿರುವುದು, ವಿಷಯ–ವಿಚಾರಗಳ ಜ್ಞಾನದ ಕೊರತೆ, ಮಹಡಿಗಳಲ್ಲಿ ವಾಸಿಸುತ್ತಿರುವುದು, ಇಂತಹ ಆಚರಣೆಗಳು ಹೆಣ್ಮಕ್ಕಳ ಮನಸ್ಸಿನ ಮೇಲೆ ಅಡ್ಡ ಪರಿಣಾಮ ಮೂಡಿಸುತ್ತಿರುವುದು, ಪುರುಷ ವರ್ಗದ ದೌರ್ಜನ್ಯಕ್ಕೆ ಎಡೆ ಮಾಡುವ ವಿಚಾರಗಳು ಸಂಭವಿಸಿರುವುದು, ನಗರ ಪ್ರದೇಶದ ಹೆಣ್ಮಕ್ಕಳಿಗೆ ಈ ನಿಟ್ಟಿನಲ್ಲಿ ಶಾಲಾ ಕಾಲೇಜುಗಳಲ್ಲಿ ದೃಶ್ಯ ಮಾಧ್ಯಮದಲ್ಲಿ ಮಾಹಿತಿ ಲಭ್ಯವಾಗಿರುವುದು ಇತ್ಯಾದಿ ಕಾರಣಗಳಿಂದ ಇಂದು ದಲಿತ/ದಲಿತೇತರ ವರ್ಗದ ಜನಾಂಗದಲ್ಲಿ ಈ ಆಚರಣೆಗಳು ಅಳಿವಿನಂಚಿಗೆ ತೆರಳಲು ಕಾರಣವಾಗಿರಲೂಬಹುದು.

ಈ ಆಚರಣೆಗಳಿಂದು ಸಂಕೀರ್ಣವಾಗಿದೆ. ಕೆಲವು ಗ್ರಾಮೀಣ ಸ್ಥಳಗಳಲ್ಲಿ ಇಂದೂ ಈ ಪದ್ಧತಿಗಳು, ಆಚರಣೆಗಳು ಇವೆ. ಈ ಆಚರಣೆಯನ್ನು ನಡೆಸುವ ಕ್ರಮಗಳಲ್ಲಿ ಸಹಜವಾಗಿ ಬದಲಾವಣೆಗಳು ಆಗಿವೆ. ಮೈನೆರೆಯುವ ಆಚರಣೆಯ ಈ ಸಂದರ್ಭದಲ್ಲಿ ಕೆಲವು ಕಡೆ ಅಲ್ಲಿಯ ಗ್ರಾಮದ ಮುತ್ತೈದೆ ಹೆಂಗಸರು ಆ ಊರಿನಲ್ಲಿರುವ ಬೇರೆ ಬೇರೆ ಬಾವಿಗಳಿಂದ ಒಂದೊಂದು ಬಿಂದಿಗೆ ನೀರು ತಂದು ಕಳಶವಿಟ್ಟು, ಮೈ ನೆರೆದ ಹುಡುಗಿಗೆ ಕಳಸ ನೀರೆರೆಯುವ ಪದ್ಧತಿಯೂ ಇದೆ.

### ಮುಂಡಾಳ ಜನಾಂಗದ ಹುಡುಗಿ ನೋಡುವ ಕ್ರಮ:

ಯಾವುದಾದರೊಂದು ಮದುವೆ, ಉತ್ಸವಗಳಲ್ಲಿ ಗಂಡಿನ ಕಡೆಯವರಿಗೆ ಹೆಣ್ಣೊಂದನ್ನು ನೋಡಿ ಇಷ್ಟವಾದರೆ, ಹಿರಿಯರ ಮುತುವರ್ಜಿಯಲ್ಲಿ ನಿಶ್ಚಿತಾರ್ಥ ಎನ್ನುವ ಕಾರ್ಯಕ್ಕೆ ಚಾಲನೆ ಸಿಗುತ್ತದೆ. ಪ್ರಾರಂಭದಲ್ಲಿ ಹೆಣ್ಣು ನೋಡುವ ಕಾರ್ಯ ದೇವಸ್ಥಾನದಲ್ಲಿ ನಡೆಯುತ್ತದೆ. ಗಂಡಿನ ತಂದೆ, ತಾಯಿ, ಹಿರಿಯರು, ಗಂಡು ದೇವಸ್ಥಾನದಲ್ಲಿ ಹೆಣ್ಣನ್ನು ನೋಡುವ ಶಾಸ್ತ್ರ. ಹೆಣ್ಣಿನ ಕಡೆಯಿಂದ ಆಕೆಯ ತಂದೆ, ತಾಯಿ, ಮಾವ, ಅತ್ತೆ ಬರುತ್ತಾರೆ. ಗಂಡಿಗೆ ಹೆಣ್ಣು ಒಪ್ಪಿಗೆಯಾದ್ರೆ ಮುಂದೆ ನಿಶ್ಚಿತಾರ್ಥ ನಡೆಯುವುದು.

ನಿಶ್ಚಿತಾರ್ಥಕ್ಕೂ ಮುನ್ನ ಗಂಡಿನ ಕಡೆಯವರು ಹೆಣ್ಣಿನ ಮನೆ ನೋಡುವ ಕ್ರಮವಿದೆ. ಆಗ ಮದುವೆ ಗಂಡಿನ ಕಡೆಯ ಹಿರಿಯರು, ಮಾವ, ತಂದೆ, ಅಣ್ಣ, ಬಾವಂದಿರು ಮುಂತಾದವರು ಹೆಣ್ಣಿನ

ಮನೆಗೆ ಬಂದು ಗೊತ್ತುಪಡಿಸಿರುವ ದಿನದಂತೆ ಬರುತ್ತಾರೆ. ಈ ವಿಚಾರವನ್ನು ಹೆಣ್ಣಿನ ಕಡೆಯವರಿಗೆ ಮೊದಲಾಗಿ ತಿಳಿಸಬೇಕು. ಆ ದಿನ ಹೆಣ್ಣಿಗೆ ಮದುಮಗಳಂತೆ ಶೃಂಗರಿಸುತ್ತಾರೆ. ಗಂಡಿನ ಕಡೆಯವರು ಹೆಣ್ಣಿನ ಮನೆಗೆ ಬರುವಾಗ ತಂಬಿಗೆಯಲ್ಲಿ ಕೈಕಾಲು ಮುಖ ತೊಳೆಯಲು ನೀರು ಕೊಡುತ್ತಾರೆ. ಹರಿವಾಣದಲ್ಲಿ ಎಲೆಯಡಿಕೆಯಿಟ್ಟು ಬಂದ ಅತಿಥಿಗಳನ್ನು ಬರಮಾಡಿಕೊಳ್ಳುತ್ತಾ, ಅವರ ಆಯಾಸ ಪರಿಹಾರಕ್ಕಾಗಿ ಶರಬತ್ತು, ಬೆಲ್ಲ ನೀರು ಹಾಗೂ ಹಣ್ಣು, ಸ್ವಲ್ಪ ಬೇಕರಿ ತಿನಿಸುಗಳನ್ನು ಕೊಡುತ್ತಾರೆ. ಇದಾದ ಬಳಿಕ ಹೆಣ್ಣಿನ ಕೈಯಲ್ಲಿ ಚಹಾ ಅಥವಾ ಕಾಫಿ ನೀಡಿ, ಗಂಡಿನ ಪರಿವಾರದ ಮಧ್ಯದಲ್ಲಿ ಕೂರಿಸುತ್ತಾರೆ. ಹಿಂದಿನ ಅವಿದ್ಯಾವಂತ ಹುಡುಗಿ ನಾಚಿ ನೀರಾಗಿ 'ಕತ್ತರಿಯೊಳಗಿನ ಅಡಿಕೆ'ಯಂತಾಗುತ್ತಾಳೆ. ತಂದಂತಹ ಕಾಫಿಯ ಲೋಟವನ್ನು ಗಂಡಿನ ಕೈಗಿತ್ತು ಸರ್‍ರನೆ ಅಡುಗೆ ಮನೆ ಸೇರುತ್ತಾಳೆ. ಗಂಡಿಗೆ, ಗಂಡಿನ ಕಡೆಯವರಿಗೆ ಹೆಣ್ಣು ಒಪ್ಪಿಗೆಯಾದ್ರೆ, ಗಂಡಿನ ಮನೆಗೆ ಒಂದು ಶುಭ ದಿನದಂದು ಬರಲು ಹೇಳಿಕೆ ನೀಡುತ್ತಾರೆ. ಹೊರಡುವ ಮುನ್ನ ಗಂಡಿನ ಕಡೆಯ ಹೆಂಗಸರು ಮನೆಯೊಳಗೆ ಹೋಗಿ ಹೆಣ್ಣನ್ನು ಮಾತನಾಡಿಸಿ ಬರುತ್ತಾರೆ. ಬಹುಶ: ಹೆಣ್ಣು ಮೂಗಿಯೋ ಅಲ್ಲವೋ ಎಂಬುದನ್ನು ಖಾತ್ರಿಪಡಿಸುವುದಕ್ಕೂ ಆಗಿರಬಹುದು. ಅಥವಾ ಹೆಣ್ಣು ಹೆತ್ತವರು ಎಷ್ಟು ಶ್ರೀಮಂತರು ಎಂಬುದನ್ನು ಪರೀಕ್ಷಿಸಲು, ಮನೆಯನ್ನು ಕೂಲಂಕುಷವಾಗಿ ಪರಿಶೀಲಿಸಲೂ ಆಗಿರಬಹುದು, ಈ ಕೆಲಸ. ಗಂಡು, ಹೆಣ್ಣು ಇಬ್ಬರ ಮನೆ ನೋಡುವ ಕೆಲಸ ಮುಗಿದರೆ, ನಿಶ್ಚಿತಾರ್ಥಕ್ಕೆ ದಿನವಿಡುತ್ತಾರೆ. ಪುರೋಹಿತರಿಂದ ಇದಕ್ಕಾಗಿ ಒಂದು ಶುಭ ದಿನವನ್ನು ನಿಗಧಿಪಡಿಸುತ್ತಾರೆ.

**ಮುಂಡಾಳ ಜನಾಂಗದಲ್ಲಿ ನಿಶ್ಚಿತಾರ್ಥ(ಪೂಲು ಬಚ್ಚಿರೆ ಪಗರುನಿ):**

ನಿಶ್ಚಿತಾರ್ಥದ ದಿನ ಗಂಡಿನ ಕಡೆಯ 20–30 ಮಂದಿ ಹೆಣ್ಣಿನ ಮನೆಗೆ ಬರುತ್ತಾರೆ. ಅಲ್ಲಿ ಮೊದಲು ಕೈಕಾಲು ತೊಳೆಯುವ, ಬಾಯಾರಿಕೆ ನೀಗಿಸುವ ಕೆಲಸಗಳು ಕಳೆದ ಬಳಿಕ, ಗಂಡಿನ ಕಡೆಯ ಹಿರಿಯಣ್ಣ ಅಥವಾ ಬಾವ ಮಾತಿಗಿಳಿಯುತ್ತಾರೆ. ಈ ಮಾತು ಮೊದಲು ಆರಂಭವಾಗುವುದು (ಆನಗ್ ಏತ್ ಬದಿ ಕೊರ್ಪರ್, ಪೊಣ್ಣಗ್ ಏತ್ ಬಂಗಾರ್ ಪಾಡ್ವರ್) ಗಂಡಿಗೆಷ್ಟು ವರದಕ್ಷಿಣೆ ನೀಡುವಿರಿ? ಹಾಗೂ ಹೆಣ್ಣಿಗೆ ಎಷ್ಟು ಬಂಗಾರ ಹಾಕುವಿರಿ? (ಇದು ವರದಕ್ಷಿಣೆ ತೆಗೆದುಕೊಳ್ಳುವ ಅಥವಾ ಕೊಡುವ ಪದ್ಧತಿ ಇದ್ರೆ ಮಾತ್ರ). ಇದನ್ನು ಹೊರತುಪಡಿಸಿದರೆ ಮುಂದೆ ಯಾವ ತಿಂಗಳು ಮದುವೆಗೆ ಯೋಗ್ಯ ಎಂಬುದನ್ನು ಗೊತ್ತುಪಡಿಸುವುದು. ದಾರೆ ಸೀರೆ, ಕರಿಮಣಿ ವ್ಯವಸ್ಥೆ, ಛತ್ರ ಗೊತ್ತುಪಡಿಸುವುದು, ಆಹಾರದ ವೆಚ್ಚಗಳು, ಜನಸಂಖ್ಯೆ ಇವೆಲ್ಲದರ ಬಗೆಗಿನ ಖರ್ಚು ವೆಚ್ಚ ವಿವರಗಳ ಮಾತುಕತೆ ನಡೆಯುವುದು. ಮದುವೆಗೆ ತಗಲುವ ಖರ್ಚು ವೆಚ್ಚಗಳ ವಿಂಗಡನಾ ಕ್ರಮದ ಬಗ್ಗೆ ಚರ್ಚೆ, ಮಾತುಕತೆ ಸುಸೂತ್ರವಾಗಿ ನಡೆದು ಒಪ್ಪಿಗೆಯಾದರೆ, ಬಳಿ(ಬರಿ)ಗಳು ಕೂಡಿ ಬಂದ್ರೆ ಒಪ್ಪಿಗೆಯ ದ್ಯೋತಕವಾಗಿ 'ತಂಬೂಲ ಬದಲಾಯಿಸಿ' ಕಾರ್ಯವನ್ನುಮುಂದುವರಿಸುತ್ತಾರೆ. ಇಲ್ಲಿ ಎರಡು ಕುಟುಂಬದ ಹಿರಿಯರು, ಅಣ್ಣಂದಿರು, ಬಾವಂದಿರು, ತಂದೆಯವರು, ಮಾವಂದಿರು ಎದುರು ಬದುರಾಗಿ ಚಾಪೆಯಲ್ಲಿ ಕೂರುವರು. ಮುಂಡಾಳ ಹಾಗೂ ಇತರ ಸಾಮಾಜಿಕ ಕುಟುಂಬದಲ್ಲೂ ತಲೆಗೆ ಮುಂಡಾಸು ಕಟ್ಟಿಕೊಳ್ಳದೆ ಭಾಷೆ ಪ್ರಮಾಣ ನೀಡುವುದಾಗಲೀ, ಸಮಾರಂಭ

ನಡೆಸುವುದಾಗಲೀ ನಿಷೇಧ. ಆದುದರಿಂದ ತಾಂಬೂಲ ಬದಲಾಯಿಸುವ ಮುನ್ನ ಗ್ರಾಮದ ಹಿರಿಯರು, ಕುಟುಂಬದ ಹಿರಿಯರು ಹಾಗೂ ಮಾವಂದಿರು ಕಡ್ಡಾಯವಾಗಿ ತಲೆಗೆ ಮುಂಡಾಸು ಕಟ್ಟಲೇಬೇಕು. ಮುಂಡಾಸಿನ ಹೊರತು ಈ ಕಾರ್ಯವನ್ನು ಮಾಡುವ ಹಾಗಿಲ್ಲ. ಎದುರು ಬದುರಾಗಿ ಕುಳಿತುಕೊಳ್ಳುವ ಈ ಕುಟುಂಬದ ಮಧ್ಯದಲ್ಲಿ ಮಣೆ ಇರುತ್ತದೆ. ಮಣೆ ಮೇಲೆ ಒಂದು ದೀಪವನ್ನು ಬೆಳಗಿಸಲಾಗುತ್ತದೆ. ಹರಿವಾಣದಲ್ಲಿ ಐದು ವೀಳ್ಯದೆಲೆ, ಒಂದು ಇಡೀ ಕವಚವುಳ್ಳ (ತಲೆವುಳ್ಳ) ಅಡಿಕೆ, ಸ್ವಲ್ಪ ಚಿಲ್ಲರೆ ಹಣ ಇಡಬೇಕು. ನಂತರ ಮಾವಂದಿರಿಬ್ಬರು (ಹುಡುಗನ ಮಾವ ಹಾಗೂ ಹುಡುಗಿಯ ಮಾವ) ಆ ತಾಂಬೂಲದ ಹರಿವಾಣವನ್ನು ಒಬ್ಬರಿಗೊಬ್ಬರು ಬದಲಾಯಿಸುತ್ತಾರೆ. ಬಳಿಕ ಅಕ್ಷತೆ ಕಾಳನ್ನು (ಕುಂಕುಮ ಮಿಶ್ರಣ ಅಕ್ಕಿ) ಅಲ್ಲಿ ನೆರೆದಿರುವ ಸರ್ವರಿಗೂ ವಿತರಿಸಲಾಗುವುದು. ಕುಟುಂಬದ ಹಿರಿಯರಲ್ಲಿ ಹಿರಿಯರು ಕುಲದೇವರನ್ನು, ಗ್ರಾಮದೇವರನ್ನು, ನಾಲ್ಕು ದಿಕ್ಕುಗಳಲ್ಲಿ ನೆಲೆಸಿರುವ ದೈವ ದೇವರುಗಳನ್ನು ನೆನೆಯುತ್ತಾ, ಅಂದಿನ ತಾಂಬೂಲವನ್ನು ಬದಲಾಯಿಸಿ, ಅವರನ್ನು ಸಾಕ್ಷಿ ಮಾಡಿಕೊಂಡು ನಿಶ್ಚಿತಾರ್ಥ ಮಾಡಿದ್ದನ್ನು ಅರಿಕೆ ಮಾಡಿಕೊಳ್ಳುತ್ತಾರೆ. ಮುಂದೆ ಮದುವೆಯಾಗುವವರೆಗೆ ಯಾವುದೇ ಬಾಧಕಗಳು, ಸೂತಕಗಳು ಬಾರದಂತೆ ಕಾಪಾಡಿಕೊಳಬೇಕೆಂದು ದೈವದೇವರಲ್ಲಿ ವಿನಂತಿಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಮದುವೆ ಗಂಡು, ಮದುವೆ ಹಣ್ಣಿಗೆ ತನಗೆ ಅನುಕೂಲವಿದ್ದಷ್ಟು ಹಣವನ್ನು ನೀಡಬೇಕು. ಹಿಂದೆ ಈ ಹಣದ ಮೊತ್ತ 50ರೂಪಾಯಿ ಇತ್ತು. ಈಗ ಇದರ ಮೊತ್ತ 200ರೂ. ಆಗಿದೆ. ತರುವಾಯ ಹುಡುಗಿಯ ಮನೆಗೆ ವಿದಾಯ ಹೇಳಿ ತಂತಮ್ಮ ಮನೆಗೆ ತೆರಳುತ್ತಾರೆ.

ಇವೆಲ್ಲವೂ ಹಿಂದಿನ ಸಂಪ್ರದಾಯಗಳಾದರೆ, ಕಾಲಕ್ಕೆ ತಕ್ಕಂತೆ ಬದಲಾಬೇಕಾದ ಅನಿವಾರ್ಯತೆ ಮುಂಡಾಳ ಜನಾಂಗಕ್ಕೂ ಇರುವುದರಿಂದ ರೀತಿ ನೀತಿಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳಾಗಿದೆ. ಇದೀಗ ತಾಂಬೂಲ ಶಾಸ್ತ್ರವು ಗಡಿಬಿಡಿಯಲ್ಲಿ ನಡೆದು ಹೋಗುತ್ತದೆ. ತಾಂಬೂಲ ಬದಲಾಯಿಸುವ ಮಾವನೂ 18–20 ವರ್ಷದವನಿರುವುದರಿಂದ ತಲೆಗೆ ಮುಂಡಾಸು ಕಟ್ಟುವ ಸಂಪ್ರದಾಯ ಈಗಿಲ್ಲ. ಎರಡನೆಯದಾಗಿ ವಿಷಯ ಏನೆಂದರೆ ಇಂದು ದಿನ ನಿಶ್ಚಯಿಸಿ ಹುಡುಗ–ಹುಡುಗಿ ಉಂಗುರ ಬದಲಾಯಿಸಿ ಮದುವೆ ನಿಶ್ಚಯ ಮಾಡಿಕೊಳ್ಳುವ ಕ್ರಮ ಹೆಚ್ಚಾಗಿ ಈಗ ಇಲ್ಲ. ಬದಲಾಗಿ ಮದುವೆಯ ದಿನವೇ ಮುಹೂರ್ತಕ್ಕೆ ಮೊದಲರ್ಧ ಗಂಟೆಯೊಳಗೆ ನಿಶ್ಚಿತಾರ್ಥದ ದ್ಯೋತಕವಾಗಿ ವಧು–ವರರು ಉಂಗುರ ಬದಲಾಯಿಸಿಕೊಳ್ಳುವರು. ನಿಶ್ಚಿತಾರ್ಥಕ್ಕೆ ಹುಡುಗ



ಕೊಡಬೇಕಾದ ಸೀರೆ, ಲಂಗ ಹೂವುಗಳನ್ನು ಮದುವೆ ಮುಹೂರ್ತದ ಮೊದಲು ಸಾಂಕೇತಿಕವಾಗಿ ನೀಡುತ್ತಾರೆ. ಅಲ್ಲಿಗೆ ನಿಶ್ಚಿತಾರ್ಥ ಮುಗಿದು ಹೋಗುತ್ತದೆ. ಮುಂಡಾಲರಲ್ಲಿ ನಿಶ್ಚಿತಾರ್ಥ ಗ್ರಾಮದ ಗುರಿಕಾರ, ನೆರೆಹೊರೆಯವರು ಸಂಬಂಧಿಕರ ಉಪಸ್ಥಿತಿಯಲ್ಲಿ ನಡೆದು ಹೋಗುತ್ತದೆ. ಆಹ್ವಾನ ನೀಡಿರುವ ಇವರೆಲ್ಲರಿಗೆ ಕೋಳಿ ಊಟ (ಮಾಂಸದೂಟ) ಭರ್ಜರಿ ಭೋಜನ ನೀಡಿ ಬಂದ ಅತಿಥಿಗಳನ್ನು ಸಂತೃಪ್ತಿಗೊಳಿಸುತ್ತಾರೆ.

**ಚಪ್ಪರದೂಟ :**

ಪ್ರಾಚೀನ ಕಾಲದಲ್ಲಿ ಮುಂಡಾಳ ಅಥವಾ ದಲಿತ ಜನಾಂಗದ, ದಲಿತೇತರರ ಮದುವೆಗಳು ಮನೆಗಳಲ್ಲೇ ನಡೆಯುದಿತ್ತು, ಇದಕ್ಕೆ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟಿರುವುದು, ಮದುವೆ ಸಮಾರಂಭಗಳನ್ನು ಮನೆಯಲ್ಲೇ ಮಾಡುವುದಕ್ಕೆ ಒಂದು ಬಲಿಷ್ಠ ಕಾರಣವಾಗಿರಲೂಬಹುದು.

ಆದರೆ ಇತ್ತೀಚಿನ ಕಾಲಮಾನದಲ್ಲಿ 'ಸಾಲ ಮಾಡಿಯಾದರೂ ತುಪ್ಪ ತಿನ್ನಬೇಕು' ಎನ್ನುವ ಚಪಲದ ಜನರೇ ಹೆಚ್ಚಿರುವುದರಿಂದ, ಸಮಯದ ಅಭಾವದಿಂದ, ಕೆಲವೊಮ್ಮೆ ಆರ್ಥಿಕ ಸ್ಥಿತಿ ಗಟ್ಟಿಯಾಗಿರುವುದರಿಂದ, ಚಿಕ್ಕಚಿಕ್ಕ ಮನೆಗಳಲ್ಲಿ ಸುಧಾರಿಕೆಗೆ ಕಷ್ಟವಾಗಿರುವುದರಿಂದ, ಜನ ವಿದ್ಯಾವಂತರಾಗಿರುವುದರಿಂದ, ದಲಿತರ ಮದುವೆಗಳಲ್ಲಿ ದಲಿತೇರರೂ ಭಾಗವಹಿಸುವುದರಿಂದ, ಜಾತ್ಯಾತೀಕ ಬಾಂಧವ್ಯ ಹೆಚ್ಚಾಗಿರುವುದರಿಂದ ಬಹುಶ: ಈ ಎಲ್ಲಾ ಭೌತಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಕಾರಣಗಳಿಂದಾಗಿ ಮದುವೆಗಳು ಛತ್ರಗಳಲ್ಲಿ ನಡೆಯುತ್ತದೆ. ಮುಂಡಾಳ ಜನಾಂಗದ ಜನ ಈ ಹಿಂದೆ ಮದುವೆಗಳನ್ನು ಮನೆಗಳಲ್ಲಿ ನಡೆಸುವಾಗ ಅಲ್ಲೊಂದು ಉದ್ದೇಶವಿತ್ತು. ಇದರ ಹಿಂದೆ ಅವರ ಮನ:ಶಾಸ್ತ್ರದ ಅಧ್ಯಯನವು ಇದೆ. ಕೂಡು ಕುಟುಂಬದ ಪರಿಕಲ್ಪನೆ ಅಲ್ಲಿತ್ತು. ಜನ ಒಟ್ಟು ಸೇರಿ ಕೆಲಸ ಕಾರ್ಯಗಳಲ್ಲಿ ತೊಡಗುವುದರಿಂದ ಈ ಹಿಂದೆ ಅವರಲ್ಲಿ ಮನೆ ಮಾಡಿರುವ ದ್ವೇಷ–ಅಸೂಯೆಗಳು ಮರೆಯಾಗಿ ಅಲ್ಲಿ ಸ್ನೇಹ–ಬಾಂಧವ್ಯಗಳು ನೆಲೆಯಾಗುತ್ತಿತ್ತು. ಆದರೆ ಈಗ ವಿಘಟಿತ ಕುಟುಂಬಗಳೇ ಹೆಚ್ಚಾಗಿ ಇರುವುದರಿಂದ ಕೂಡು ಕುಟುಂಬದ ಕಲ್ಪನೆ ಈಗಿನ ಯುವ ಪೀಳಿಗೆಗೆ ಅರಿವಾಗುವ ವಿಷಯವಲ್ಲ. ಯುವ ಪೀಳಿಗೆಗಳಲ್ಲಿ ಜವಾಬ್ದಾರಿ ಹೊತ್ತು ಅದನ್ನು ಸುಸೂತ್ರವಾಗಿ ನೆರವೇರಿಸುವುದಕ್ಕಿಂತಲೂ ಬೇಜವಾಬ್ದಾರಿವುಳ್ಳವರೇ ಹೆಚ್ಚು ಇದ್ದಾರೆ, ಕೂಡಿ ಮಾಡುವ ಕೆಲಸಗಳಿಗಿಲ್ಲಿ ಬೆಲೆಯಿಲ್ಲದಾಗಿದೆ. ಹಾಗಾಗಿ ಇತ್ತೀಚೆಗೆ ಎಲ್ಲಾ ಮದುವೆಗಳು ಛತ್ರದಲ್ಲಿ ನಡೆಯುತ್ತವೆ.

'ಮದುವೆ' ಕೇವಲ ಆಚರಣೆ ಮಾತ್ರವಲ್ಲ, ಒಂದು ಗಂಡು ಹೆಣ್ಣಿಗೆ ಲೈಂಗಿಕವಾದ ವಿಚಾರಗಳಿಗೆ ಸಂಬಂಧಿಸಿ ಸಾರ್ವಜನಿಕ ನೆಲೆಯಲ್ಲಿ ಅನುಮತಿ ನೀಡುವ ಕ್ರಿಯೆಯೂ ಆಗಿದೆ. ಸಾಮಾಜಿಕವಾದ ಜವಾಬ್ದಾರಿಯನ್ನು ಈ ವಧೂ–ವರರಿಗೆ ನೀಡುವ ಮಾಧ್ಯಮವೂ ಇದಾಗಿದೆ. ಇದು ಪ್ರಕೃತಿ ನಿಯಮವೂ ಹೌದು. ಪ್ರಾಕೃತಿಕವಾದ, ಜೈವಿಕವಾದ ಕ್ರಿಯೆ ಇದಾಗಿದ್ದು, ಹೊಸ ಬದುಕಿಗೆ ಗಂಡು–ಹೆಣ್ಣಿಗೆ ಹಿರಿಯರಿಂದ ಅನುಮತಿ ದೊರೆಯುವ ದಿನವಿದು.

## ಚಪ್ಪರದೂಟದ ಮಹತ್ವ:

ಮದುವೆಯ ಹಿಂದಿನ ದಿನ ಹೆಣ್ಣು, ಗಂಡಿನ ಮನೆಯಲ್ಲಿ ಚಪ್ಪರದ ಊಟ (ದೊಂಪದ ವನಸ್) ನಡೆಯಬೇಕು. ಇದೂ ಇಂದು ಆಧುನಿಕತೆಯೆಂಬ ಬಿರುಗಾಳಿಯ ಹೊಡೆತಕ್ಕೆ ಬಲಿಯಾಗಿದೆ. 'ಮದುವೆ' ಸರಿ ಸುಮಾರು ಆರು ದಿನಗಳು ನಡೆಯುವ ಆಚರಣೆ. ಮದುವೆಯ ಮೊದಲೆರಡು ದಿನದಿಂದಲೇ ಚಪ್ಪರ ಹಾಕುವ ಕಾರ್ಯ ನಡೆಯುತ್ತದೆ. ಮನೆಗೆ ವಿದ್ಯುದಲಂಕಾರ ಮಾಡುವ, ತೆಂಗಿನ ಮರಕ್ಕೆ ದೊಡ್ಡ ಮೈಕ್ ಕಟ್ಟುವ ಕೆಲಸಗಳು ಪ್ರಾರಂಭವಾಗುತ್ತದೆ. ಹಿರಿಯರಿಗಿಂತ ಕಿರಿಯರಿಗೆ ಸಂಭ್ರಮವೋ ಸಂಭ್ರಮ. ಈ ದಿನ ಬೃಹತ್ ಗಾತ್ರದ ಎರಡು ಈಂದು ಮರದ ಗೆಲ್ಲುಗಳನ್ನು ಕಡಿದು ತಂದು ಚಪ್ಪರದ ಬಾಗಿಲಿನ ಆ ಕಡೆಗೆ ಒಂದು ಗೆಲ್ಲನ್ನು, ಈ ಕಡೆ ಒಂದು ಗೆಲ್ಲನ್ನು ಕಟ್ಟುತ್ತಾರೆ. ವಿದ್ಯುದಲಂಕಾರದ ಜನ (ಎಲೆಕ್ಟ್ರೀಷಿಯನ್ಸ್) ಮದುವೆ ಮುಗಿಯುವವರೆಗೆ ಮನೆ ಮಕ್ಕಳಾಗಿ ಬೆರೆತು ಸಮಾರಂಭದ ಸಕಲ ಕೆಲಸ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಾರೆ. ಚಪ್ಪರ ಕಟ್ಟಿದ ಬಳಿಕ ಕುಟುಂಬದ ಹಿರಿಯರು, ದೈವಸ್ಥಾನದ ಪ್ರಮುಖ ಹಿರಿಯರು, ಗ್ರಾಮದ ಜನರು, ಊರ ಜನರು, ಕುಟುಂಬದ ಜನರು ಎಲ್ಲರೂ ಸೇರಿ ವಧುವಿನ ಮನೆಯಲ್ಲಿ, ಹಾಗೆಯೇ ವರನ ಮನೆಯಲ್ಲಿ ಕುಟುಂಬದ ದೈವವಾದ ಪಂಜುರ್ಲಿ, ಪರಿವಾರ ದೈವಗಳನ್ನು ಹಾಗೂ ಗ್ರಾಮದ ದೈವ ದೇವರನ್ನು ಉದ್ದೇಶಿಸಿ, 'ನಾವು ಮಾಡಲು ಹೊರಟ ಕಾರ್ಯ ನಿರ್ವಿಘ್ನವಾಗಿ ನಡೆಯುವಂತೆ ಕುಟುಂಬದ ಒತ್ತೆ ಪಂಜುರ್ಲಿ, ಪರಿವಾರ ದೈವಗಳು, ಗ್ರಾಮದ ದೈವ ಬಬ್ಬು, ದೇವತೆಗಳು ನಮ್ಮನ್ನು ಕಾಪಾಡಬೇಕು' ('ಎಂಕ್ಲ್ ಮಲ್ಪೆರೆ ಜತ್ತಿ ಕಜ್ಜೊಗು ತತ್ತರ ಬರಂದಿಲೆಕ್ಕೊ ಕಾಪುನ ಭಾರ ಒತ್ತೆ ಪಂಜುರ್ಲಿಗ್ ಬೊಕ್ಕ ಪರಿವಾರ ಗ್ರಾಮ ದೈವಗಳಿಗಿತ್ತಿನವು, ಎಂಕ್ಲೆನ್ ಕಾತ್‌ಕೊರ್ಲೆ) ಎಂದು ಹಿರಿಯರೆಲ್ಲರ ಸಮ್ಮುಖದಲ್ಲಿ ಪ್ರಾರ್ಥಿಸಿ ಒಂದು ಪಾವು ಅಕ್ಕಿ (ಕುಚಿಲ) ಒಂದೂಕಾಲು ನಾಣ್ಯ, ಒಂದು ಜುಟ್ಟಿರುವ ತೆಂಗಿನಕಾಯಿಯನ್ನು ಹಾಳೆಯಲ್ಲಿ ಸುತ್ತಿ, ಬಿಳಿ ವಸ್ತ್ರದಲ್ಲಿ ಕಟ್ಟಿ ಚಪ್ಪರದ ಒಳಗಡೆ ಕಟ್ಟುತ್ತಾರೆ.

ಮಂಗಳೂರಿನಂತಹ ಪರಿಸರದಲ್ಲಿ ವಾಸಿಸುವ ಮುಂಡಾಳ ಜನಾಂಗದ ಈ ಆಚರಣಾ ಕ್ರಮದಲ್ಲಿ ಕೆಲವೊಂದು ಬದಲಾವಣೆಗಳಿವೆ. ಇದನ್ನು ಪ್ರಾದೇಶಿಕ ವ್ಯತ್ಯಾಸದಲ್ಲಿ (ಉಡುಪಿಯಲ್ಲಿ ಸಾಮಾನ್ಯವಾಗಿ) ಗುರುತಿಸಬಹುದಾಗಿದೆ. ಹೆಣ್ಣಿಗೆ ಹಳದಿ ಹಾಕಿದ ತೆಂಗಿನ ಹಾಲು ಪೂಸಿದ ಬಳಿಕ ಇಲ್ಲಿ 'ಮೂರ್ತೆ ಸೇಸೆ' ಎಂಬ ಆಚರಣೆ ಪ್ರಚಲಿತದಲ್ಲಿದೆ. ಇದು ಮದುವೆ ಮುಂಚಿನ ದಿನ ರಾತ್ರಿ ನಡೆಯುವ ಕ್ರಿಯೆ. ಹೆಣ್ಣಿನ ಕಡೆಯ ಹೇಳಿಕೆಯಿಂದಾಗಿ ಊರ ಜನ, ಜಾತಿ ಬಾಂಧವರು, ಗ್ರಾಮದ ಜನ, ಕುಟುಂಬಸ್ಥರು ಈ ಆಚರಣೆಯಲ್ಲಿ ಪಾಲ್ಗೊಳ್ಳುತ್ತಾರೆ. ಮದುಮಗಳನ್ನು ಸ್ನಾನಾಧಿ ಮುಗಿಸಿ ಹೊಸ ಸೀರೆ ಕುಪ್ಪಸ ತೊಡಿಸಿ, ಹೂ ಮುಡಿಸಿ, ಮನೆಯ ಅಂಗಳದ ಪೂರ್ವ ದಿಕ್ಕಿಗೆ ಮುಖ ಮಾಡಿಸಿ ಒಂದು ಮಣೆಯಲ್ಲಿ ಕೂರಿಸುತ್ತಾರೆ. ಆಕೆಯ ಎದುರು ಮೊರದ ಮೇಲೆ ಬಾಳೆ ಎಲೆಯ ತುದಿ (ಕೊಡಿ) ಭಾಗದ ಎಲೆಯನ್ನು ಇಡುತ್ತಾರೆ, ಅದರ ಮೇಲೆ ಮಧ್ಯದಲ್ಲಿ ಒಂದು ಸೇರು ಬೆಳ್ತಿಗೆ ಅಕ್ಕಿಯನ್ನು ಸುರಿಯುತ್ತಾರೆ. ಅದರ ಮೇಲೆ ಜುಟ್ಟುಳ್ಳ (ಮುಗವಿರುವ) ತೆಂಗಿನಕಾಯಿಯನ್ನಿಡುತ್ತಾರೆ. ತೆಂಗಿನಜುಟ್ಟಿಗೆ ಒಂದು ತುಂಡು ಹೂವನ್ನು ಹಾಕುತ್ತಾರೆ. ಬಾಳೆ ಎಲೆಯ ಎಡಭಾಗದಲ್ಲಿ 5 ವೀಳ್ಯದೆಲೆ, ಒಂದು ಅಡಿಕೆ, 101 ರೂಪಾಯಿ, ಕಾಲುಂಗುರ, ಹೊಸ ಚಿನ್ನಾಭರಣ, ಮದರಂಗಿ

ಹಾಗೂ ತಾಂಬೂಲವನ್ನಿಡುತ್ತಾರೆ. ಬಲಭಾಗಕ್ಕೆ ಒಂದು ದೀಪವನ್ನು ಹೊತ್ತಿಸಿಡುತ್ತಾರೆ. ಎಲ್ಲರೂ ಸೇರಿದ ಇಲ್ಲಿ ಕುಟುಂಬದ ದೈವ ಶ್ರೀ ಬಬ್ಬುಸ್ವಾಮಿಯನ್ನು, ಪರಿವಾರದ ದೇವರನ್ನು, ಗ್ರಾಮದ ಇತರ ದೈವ ದೇವರುಗಳನ್ನು ನುಡಿ ಹೇಳಿ ಪ್ರಾರ್ಥಿಸಿಕೊಳ್ಳುತ್ತಾರೆ. ಪ್ರಾರ್ಥನಾ ಕ್ರಿಯೆ ಮುಗಿದ ತಕ್ಷಣ ಒಬ್ಬೊಬ್ಬರಾಗಿ ವಧುವಿಗೆ ಅಕ್ಷತೆಕಾಳು ತಲೆಗೆ ಹಾಕಿ ಹಾರೈಸುತ್ತಾರೆ. ನಂತರ ಗ್ರಾಮದ ಹಿರಿ ಮುತ್ತೈದೆ, ವಧುವಿನ ಕಾಲ ಬೆರಳಿಗೆ ಕಾಲುಂಗುರ ಹಾಕುತ್ತಾರೆ. ನಂತರ ಕೃತಕವಾಗಿ ತಯಾರಿಸಿದ ಅಗ್ಗಿಷ್ಟಿಕೆಯ ಮೇಲೆ ಹೊಸತಾಗಿ ತಂದ ಗಡಿಗೆಯನ್ನು ತೊಳೆದು ಅನ್ನಕ್ಕೆ ನೀರಿಡುತ್ತಾರೆ. ಮದುಮಗಳು ಮತ್ತು ಗ್ರಾಮದ ಹಿರಿಯ ಮುತ್ತೈದೆ ಮಡಕೆಯನ್ನು ಇಕ್ಕೆಲಗಳಲ್ಲಿ ಹಿಡಿದು ಮೂರು ಸಲ ನೆಲದ ಮೇಲೊಮ್ಮೆ, ಒಲೆಯ ಮೇಲೊಮ್ಮೆ ಸ್ಥಳಾಂತರಿಸುತ್ತಾರೆ.



ಮೂರು ಮುತ್ತೈದೆಯರು ಒಂದೊಂದು ಬೊಗಸೆ ಮೂರ್ತಕ್ಕಿಟ್ಟ ಅಕ್ಕಿಯನ್ನು ಒಂದು ಪಾತ್ರೆಗೆ ಸೇರಿಸಿ, ತೊಳೆದು ಬಿಸಿಯಾದ ನೀರಿಗೆ ಬೆರೆಸುತ್ತಾರೆ. ಇದು ಬೆಂದ ಬಳಿಕ ಒಳಗಡೆ ಬಾಳೆ ಎಲೆ ಇಟ್ಟು ಬಡಿಸಿ, ಬಳಿಕ ಗ್ರಾಮದ ಜನರಿಗೆ ಅದನ್ನು ತಿನ್ನಲು ಹಂಚುತ್ತಾರೆ. ಈ ಆಚರಣೆಗೆ 'ಮೂರ್ತ ಸೇಸೆ' ಎನ್ನುವರು. ನಂತರ ಮದರಂಗಿ ಇಡುವ ಕಾರ್ಯ ನಡೆಯುತ್ತದೆ. ಮುಂಡಾಳರ ಸಾಮಾಜಿಕ ಧಾರ್ಮಿಕ ಆಚರಣೆಗಳಲ್ಲಿ ವ್ಯತ್ಯಾಸವಿದೆ. ಉಡುಪಿ ಕಡೆಯಲ್ಲಿ ವಾಸಿಸುವ ಮುಂಡಾಳರಲ್ಲಿ ಮದುವೆಗೆ ಮುನ್ನ ರಾತ್ರಿ ಚಪ್ಪರದ ಮುಹೂರ್ತ ಇದೆ. ಆದ್ರೆ ಮೂರ್ತ ಸೇಸೆ ಇಲ್ಲ. ಇಲ್ಲಿ ವಧುವಿಗೆ ಕಾಲುಂಗುರವನ್ನು ಗ್ರಾಮದ ಮುತ್ತೈದೆ ಮದುವೆ ದಿನವೇ ಹಾಕುತ್ತಾರೆ. ಉಡುಪಿಯಿಂದೀಚೆಗೆ ಕಲಶ ಸ್ನಾನಕ್ಕೆ ವಧುವನ್ನು ಒನಕೆಯ ಮೇಲೆ ಕುಳ್ಳಿರಿಸುತ್ತಾರೆ. ನಂತರ ಮುತ್ತೈದೆಯರು ಕೈಯಲ್ಲಿ ಕಲಶ ಹಿಡಿದು ವಧುವಿನ ಸುತ್ತಲೂ ಸೇರಿ ಒಬ್ಬೊಬ್ಬರಾಗಿ ವಧುವಿನ ತಲೆಗೆ ಕಳಸ ನೀರೆರೆಯುತ್ತಾರೆ. ಇದು ಉತ್ತರ ಭಾಗದಲ್ಲಿ ಈಗಲೂ ಇದೆ. ಇದೇ "ಕಲಶ





ಸ್ನಾನ". ನಂತರ ಹೆಂಗಸರೆಲ್ಲ ಸೇರಿ ಅಡುಗೆ ತಯಾರಿ ನಡೆಸುತ್ತಾರೆ. ಚಪ್ಪರದೂಟದ ವಿಶೇಷ ಖಾದ್ಯ ಒಣ ಮೀನು ಹಾಗೂ ಕಡ್ಲೆ (ಕಡ್ಲೆ ಬಲ್ಯಾರ್ ಸುಕ್ಕ) ಗಸಿ, ಸಾಂಬಾರು, ಪಲ್ಯ, ಪಾಯಸ, ಉಪ್ಪಿನಕಾಯಿ ಇತ್ಯಾದಿ. ನೆರೆಹೊರೆಯವರ, ಕುಟುಂಬಸ್ಥರ, ಊರವರ ಸಹಭಾಗಿತ್ವದಲ್ಲಿ ಈ ಕೆಲಸವು ಸಾಂಗವಾಗಿ ನೆರವೇರುತ್ತದೆ.

ಬಳಿಕ ಮದರಂಗಿ ಗಿಡದಿಂದ ತಂದಂತಹ ಎಲೆಯನ್ನು ಸ್ವಲ್ಪ ಹುಳಿ, ಚಹಾದ ಕನ್ನ ಸೇರಿಸಿ ಅರೆದು ಗೊಜ್ಜು ಮಾಡಿ ಮದುಮಗಳು ಸೇರಿದಂತೆ ಮನೆ ಮಂದಿಯೆಲ್ಲಾ ತಮ್ಮ ತಮ್ಮ ಹಸ್ತಗಳಿಗೆ ಕಂಗೊಳಿಸುವ ವಿವಿಧ ಚಿತ್ರ ವಿನ್ಯಾಸದ ಮದರಂಗಿಯನ್ನು (ಆಗಿನ ಕಾಲದ ಬಿಂದು ಬಿಂದು ಮಾತ್ರ ಇಡುತ್ತಿದ್ದರು) ಇಡುತ್ತಾರೆ.







ಬಂದಂತಹ ಅತಿಥಿಗಳಿಗೆ ಅವರವರ ಅನುಕೂಲಕ್ಕೆ ತಕ್ಕಂತೆ ಮಾಂಸಾಹಾರದ ಭೋಜನ ಕೂಟವನ್ನು ಏರ್ಪಡಿಸುತ್ತಾರೆ. ಈ ಚಪ್ಪರ ಭೋಜನಕ್ಕೆ **'ಚಪ್ಪರದೂಟ'** (ದೊಂಪದೊಣಸ್) ಎಂದೂ, ಕುದಿ ಕಟ್ಟುವ ಕ್ರಿಯೆಗೆ **'ಚಪ್ಪರದ ಮುಹೂರ್ತ'** (ದೊಂಪದಮೂರ್ತ) ವೆಂದೂ ಕರೆಯುವರು. ಆಮೇಲೆ ಮಲಗಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು.ಮದರಂಗಿ ಮೊಗಲರ ಕಾಲದಲ್ಲಿ ಭಾರತಕ್ಕೆ ಬಂದ ಕಲೆಯಾಗಿದೆ.

## ಮದುವೆ (ಮದಿಮೆ):

ಮರುದಿನ ಬೆಳಿಗ್ಗೆ ಮದುಮಗಳನ್ನು ಸರ್ವಾಲಂಕಾರದಿಂದ ತಯಾರಿಗೊಳಿಸುತ್ತಾರೆ. ಹೆಣ್ಣಿನ ಹಿರಿಯರು, ಗ್ರಾಮದ ಗುರಿಕಾರರು ಸೇರಿ ದೇವರಿಗೆ ದೀಪ ಬೆಳಗಿಸಿ ಪ್ರಾರ್ಥಿಸುತ್ತಾರೆ. ನಂತರ ಹೊರಗಡೆ ಇರುವ ಸಿಂಗರಿಸಿದ ತುಳಸಿಕಟ್ಟೆಗೆ ದೀಪ ಬೆಳಗಿಸಿ ಕುಲದೈವಕ್ಕೆ, ಗ್ರಾಮ ದೈವವಾದ ಬಬ್ಬುಸ್ವಾಮಿಗೆ ಹಾಗೂ ಗ್ರಾಮ ದೇವರಿಗೆ ಪ್ರಾರ್ಥನೆಗೈಯುತ್ತಾರೆ. ಮೊದಲೇ ತೆಗೆದಿರಿಸಿದ ಐದು, ಇಡೀ ತೆಂಗಿನ ಕಾಯಿಯನ್ನು ನಾಲ್ಕು ಮೂಲೆಯಲ್ಲಿರುವ ದೈವಸ್ಥಾನ, ದೇವಸ್ಥಾನಗಳಿಗೆ ಹಾಗೂ ಒಂದು ಕಾಯಿಯನ್ನು ಗ್ರಾಮದೈವ ಬಬ್ಬುವಿನ ದೈವಸ್ಥಾನಕ್ಕೆ ಪ್ರಾರ್ಥಿಸಿ ತೆಗೆದಿಡುತ್ತಾರೆ. ಪೂರ್ಣ ಪ್ರಮಾಣದಲ್ಲಿ ತಯಾರಾದ ವಧು ದೈವದೇವರಿಗೆ, ಗುರು ಹಿರಿಯರಿಗೆ ಬಗ್ಗಿ ನಮಸ್ಕರಿಸಿ ಆಶೀರ್ವಾದವನ್ನು ಪಡೆಯುತ್ತಾಳೆ. ತುಳಸೀ ಕಟ್ಟೆಯ ಎದುರಲ್ಲಿ ವಧೂವಿಗೆ ಒಂದು ಕುರ್ಚಿ ಇಡುತ್ತಾರೆ. ಅದರಲ್ಲಿ ಆಕೆ ಕುಳಿತುಕೊಳ್ಳುತ್ತಾಳೆ. ವಧುವಿನ ದೊಡ್ಡಮ್ಮ ಮುತ್ತೈದೆ ಸಂಕೇತವಾದ

ಕಾಲುಂಗುರವನ್ನು ವಧುವಿನ ಪಾದಗಳಲ್ಲಿರುವ ಎರಡನೆಯ ಬೆರಳಿಗೆ ಹಾಕುತ್ತಾರೆ. ಹೀಗೆ ವಿಜೃಂಭಣೆಯಿಂದ ದಿಬ್ಬಣವು ಹೊರಡುತ್ತದೆ. ಈ ಹೊತ್ತಲ್ಲಿ ದಿಬ್ಬಣದಲ್ಲಿ ಹೊರಡುವ ಹೆಣ್ಣನ್ನು ನೋಡಲು ಊರ ಹೆಂಗಸರೆಲ್ಲ ಸೇರುತ್ತಾರೆ. ಹೊರಡಲು ಸೂಚನೆ ನೀಡಲು ಹೊರಗೆ ಪಟಾಕಿ ಗರ್ನಾಲ್ ಸಿಡಿಸುತ್ತಾರೆ. ಬ್ಯಾಂಡ್, ವಾಲಗದವರು ವಾದ್ಯಗಳೊಂದಿಗೆ ಮುಂದೆ ನಡೆಯುವರು ಅವರ ಹಿಂದೆ ದಿಬ್ಬಣ ಹೊರಡುವುದು. ದಿಬ್ಬಣದ ಮಧ್ಯ ಭಾಗವೇ ಆಕರ್ಷಕ. ಸಿರಿಸಿಂಗಾರಳಾದ ವಧುವಿಗೆ ಕೊಡೆ ಹಿಡಿದು ವೈಯ್ಯಾರ (ನಾಚಿಕೊಂಡು)ದಿಂದ ನಡೆಸುವ ಭಂಗಿಯೇ ಅತ್ಯಾದ್ಭುತ.

ಹಿಂದೆ ಮದುವೆ ಗಂಡಿನ ಮನೆಯಲ್ಲಿ ನಡೆಯುವುದಿತ್ತು. ಹೆಣ್ಣ ಕಡೆಯಿಂದ ಬಂದ ದಿಬ್ಬಣ ಚಪ್ಪರಕ್ಕಿಂತ ಸ್ವಲ್ಪ ದೂರ ಬಂದು ನಿಲ್ಲುತ್ತದೆ. ಹೆಣ್ಣಿನ ದಿಬ್ಬಣ ಬಂದ ವಿಚಾರವನ್ನು ಗಂಡಿನ ಕಡೆಯವರಿಗೆ ತಿಳಿಯುವಂತೆ ಮಾಡಲು ಒಬ್ಬ ವ್ಯಕ್ತಿಯನ್ನು ಊರ ಬಾಗಿಲಲ್ಲಿ ನಿಲ್ಲಿಸಿರುತ್ತಾರೆ. ಆತ ಹೋಗಿ ದಿಬ್ಬಣ ಬಂದ ವಿಚಾರ ತಿಳಿಸುತ್ತಾನೆ. ಗಂಡಿನ ಕಡೆಯಿಂದ ಹೆಂಗಸರು, ಗಂಡಸರು, ಊರವರು, ಗ್ರಾಮಸ್ಥರು, ಹಿರಿಯರು ಬರುತ್ತಾರೆ. ಹಾಕಿದ ಆಭರಣ, ಮಾಡಿದ ಶೃಂಗಾರ, ಉಟ್ಟ ವಸ್ತುಗಳು ಸರಿಯಾಗಿದೆಯೋ ಎಂಬುದನ್ನು ಪರೀಕ್ಷಿಸುವಂತೆ ಸ್ವಾಗತಿಸಲು ಹರಿವಾಣದಲ್ಲಿ ಕನ್ನಡಿ, ಅರಸಿನ–ಕುಂಕುಮ, ಹೂವು, ಅಕ್ಷತೆ ಕಾಳು (ಬೆಳ್ತಿಗೆ ಅಕ್ಕಿಗೆ ಕುಂಕುಮ ಬೆರೆಸಿರುತ್ತಾರೆ), ಪನ್ನೀರ್ ಹಿಡಿದು ಸಾಲಾಗಿ ನಿಲ್ಲುತ್ತಾರೆ. ಹೆಣ್ಣಿನ ಕಡೆಯವರೂ ಹೀಗೆಯೇ ತಯಾರಿ ನಡೆಸಿ ಬಂದಿರುವುದರಿಂದ ಎದುರು ಬದುರಾಗಿ ನಿಂತು ದಿಬ್ಬಣವನ್ನು ಸ್ವಾಗತಿಸಿ, ಮದುಮಗಳಿಗೆ ಗಂಡಿನ ಕಡೆಯ ಮುತ್ತೈದೆಯರು ಆರತಿ ಬೆಳಗಿ ಚಪ್ಪರದೊಳಗೆ ಕರೆದೊಯ್ಯುತ್ತಾರೆ. ಇತ್ತೀಚಿನ ದಿನಗಳಲ್ಲಿ ಮನೆಯಿಂದ ದಿಬ್ಬಣ ಕಾರು, ಬಸ್ಸುಗಳಲ್ಲಿ ಹೊರಡುವುದು. ಬ್ಯಾಂಡ್, ವಾದ್ಯಗಳ ಚಿತ್ರವೇ ಇಲ್ಲಿಲ್ಲ. ದಿಬ್ಬಣ ಸ್ವಾಗತಿಸುವ ಕ್ರಮ ಮಾತ್ರ ಹಾಗೆಯೇ ಉಳಿದಿದೆ. ಇದನ್ನು ತುಳುವಿನಲ್ಲಿ 'ಎದುಕೊನುನಿ' ಎನ್ನುತ್ತಾರೆ.




ದಿಬ್ಬಣದ ಬಂದವರಿಗೆ ಕೈಕಾಲು ತೊಳೆಯಲು ಬಿಂದಿಗೆಯಲ್ಲಿ ನೀರು ಕೊಡುತ್ತಾರೆ. ಬಾಯಾರಿಕೆಗೆ ಬೆಲ್ಲದ ಪಾನಕ ಕೊಡತ್ತಾರೆ. ಈಗ ವಿವಿಧ ಬಗೆಯ ಪಾನೀಯವನ್ನು ನೀಡುತ್ತಾರೆ. ಇದನ್ನು ಸಾರ್ವಜನಿಕವಾಗಿ ಮದುವೆ ಸಭಾಂಗಣ ಹೊಕ್ಕುವ ಮೊದಲೇ ಮುಂಭಾಗದಲ್ಲಿ ಇಟ್ಟಿರುತ್ತಾರೆ. ನಾವೇ ಹೋಗಿ ಲೋಟಕ್ಕೆ ಹಾಕಿಟ್ಟ ಪಾನೀಯವನ್ನು ಸೇವಿಸಬೇಕು. ಹಿಂದೆ ಎಲೆ ಅಡಿಕೆ ಕೊಟ್ಟು ಗೌರವಿಸುವ ಕ್ರಮ ಇತ್ತು. ಬೆಲ್ಲದ ಪಾನಕ ಹಾಗೂ ಎಲೆಯಡಿಕೆ ಇವೆರಡು ತುಳುನಾಡಿನ ಸಾಂಪ್ರದಾಯಿಕ ಗೌರವದ ವಸ್ತುಗಳಾಗಿವೆ.

ದಿಬ್ಬಣ ಬಂದ ಜನರಲ್ಲಿ ಹಾಗೂ ಅಲ್ಲಿ ನೆರೆದಿದ್ದ ಜನರಲ್ಲಿ ಮೂಗು ತನಕ ಕುಡಿದು ಬಂದವರಿರುವರು. ಹಿಂದೆ ಧಾರೆ ಎರೆಯುವ ಮೊದಲು ನ್ಯಾಯ ಕೇಳುವುದಿತ್ತು. ಇದಕ್ಕೆ ಊರಿನ ಗುರಿಕಾರರೇ ಪ್ರಮುಖರು. ಇವರಂತೂ "ಮಡೆಂಜಿ ಪೋಯಿನಲ್ಪ ಕಳಂಕ್ ತಪ್ಪಂದ್" ಎಂಬ ಗಾದೆಗೆ ಸಲ್ಲುವವರು. ಇವರು ಯಾವ ಸಮಾರಂಭಕ್ಕೆ ಹೋದರೂ ಗಲಾಟೆ, ನ್ಯಾಯ ತಪ್ಪದು. ಅಂತೂ ಇವೆರಡರ ನಡುವೆಯೇ 'ಧಾರೆ' ಎರೆಯಲು ಸಿದ್ಧತೆ ನಡೆಯುವುದು. ಹುಡುಗಿಯ ತಂದೆ ತಾಯಿಗೆ ಧಾರೆ ಎರೆದು ಕೊಡುವ ಹಕ್ಕು. ಈ ಅಧಿಕಾರ ಅವರಿಲ್ಲದ ಸಂದರ್ಭದಲ್ಲಿ ಮಾವನಿಗೆ ಸಲ್ಲುತ್ತದೆ.



'ಧಾರೆಗೆ ಕಳಿತುಕೊಳ್ಳಲು ವಧು–ವರರಿಗೆ ಅಪ್ಪಣೆ ನೀಡಬೇಕೆಂದು (ಊರುದಕ್ಲೆಡ, ಗ್ರಾಮದಕ್ಲೆಡ ಕಟ್ಟ್ ಕಟ್ಟಳೆ ಪ್ರಕಾರ ಮದ್ಮಾಲ್ ಮದಿಮಾಯೆನ್ ದಾರೆಗ್ ಕುಲ್ಲವೆ) ತಮ್ಮೆಲ್ಲರ ಬಳಿ ಕೇಳಿಕೊಳ್ಳುತ್ತೇನೆಂದು' ಘೋಷಿಸುತ್ತಾರೆ. ನಂತರ 'ಧಾರೆ' ಎರೆಯುವ ಕಾರ್ಯವೂ ನಡೆದು ಹೋಗುತ್ತದೆ. ಬಳಿಕ ಉಡುಗೊರೆ ರೂಪದಲ್ಲಿ ಯಾರ್ಯಾರದ್ದು ಎಷ್ಟೆಷ್ಟು ಹಣ ಬಂದಿದೆ? ಎನ್ನುವುದನ್ನು ಗುರಿಕಾರನೇ ಅಧಿಕೃತವಾಗಿ ಬಾಯಲ್ಲಿ ಘೋಷಿಸುತ್ತಾನೆ. ಆಗಿನ ಕಾಲಕ್ಕೆ ಮೈಕ್ ಇರಲಿಲ್ಲ "ಪುತ್ತೂರು ಪೊನ್ನುನ ಐನ್ ರೂಪಾಯಿ, ಕುಡ್ಪುದ ಕುಂಟೆ ರಾಮನ ಪತ್ತ್ ರೂಪಾಯಿ, ಸುಳ್ಯ ಸೇಲೆ ಸೀತುನ ಪತ್ತ್ ಪಣವು" ಹೀಗೆ ಕಂಠಾಘೋಷವಾಗಿ ಘೋಷಿಸುತ್ತಿದ್ದರು.

ಹೀಗೆ ಬಂದ ಉಡುಗೊರೆಯನ್ನು ತೆಗೆದಿಟ್ಟು, ಹಣವನ್ನು ಮದುವೆ ಖರ್ಚಿಗಾಗಿ ಬಳಸುತ್ತಾರೆ. ನಂತರ ಸೇರಿದ ಸಭೆಯಿಂದ ಅನುವು ಕೇಳುತ್ತಾರೆ. ಹೀಗೆ ಧಾರೆಯ ಮಣೆಯಿಂದ ವಧು–ವರರನ್ನು ಎಬ್ಬಿಸುತ್ತಾರೆ. 'ದಾರೆದ ಮಣೆರ್ದ್ ಮದ್ಮಾಯೆ–ಮದ್ಮಾಲೆನ್ ಲಕ್ಕಾವೆ ಪನ್ಪೆರಿಯಾ...' ಆಗ ಮತ್ತೊಬ್ಬ ಗುರಿಕಾರ 'ಹಾ.. ಪನ್ಪೆರಿಯ' ಎಂದು ಸಮಸ್ತರ ಪರವಾಗಿ ಒಪ್ಪಿಗೆ ಪಡೆಯುತ್ತಾರೆ. ಹೀಗೆ ವಧೂ–ವರರನ್ನು ಚಪ್ಪರದ ಕಳದಿಂದ ಕೆಳಗಿಳಿಸುತ್ತಾರೆ. ಬಂದ ಸಭೆಗೆ ವರನ ತಂದೆ ತಂಬಿಗೆಯಲ್ಲಿ ನೀರು ಹಿಡಿದು ಭೋಜನಕ್ಕೆ ತೆರಳಲು ಅನುಮತಿ ನೀಡುತ್ತಾನೆ. ನೆರೆದ ಸಭಿಕರು ಭೋಜನಕ್ಕೆ ತೆರಳುತ್ತಾರೆ.

ಇತ್ತ ವಧು, ವರನಿಗೆ ಊಟ ಬಡಿಸುವ ಕ್ರಮ, ಊಟ ಬಡಿಸಿದ ಬಳಿಕ ವರನು ವಧುವಿಗೆ ಹಣ, ಚಿನ್ನದ ಬಳೆ ಅಥವಾ ಚಿನ್ನದ ಆಭರಣ ಕೊಡುವ ಕ್ರಮವಿದೆ. ವರನ ಊಟವಾದ ನಂತರ ಊರ ಹೆಂಗಸರು ಅದೇ ಎಲೆಗೆ ವಧುವಿಗೆ ಊಟ ಬಡಿಸಿ ತಿನ್ನಿಸುತ್ತಾರೆ.

**ಹೆಣ್ಣು ಒಪ್ಪಿಸುವ ಕ್ರಮ (ಪೊಣ್ಣು ಒಚ್ಚಿದ್ ಕೊರ್ಪುನಿ):**

ಊಟದ ಬಳಿಕ ಹೆಣ್ಣಿನ ಕಡೆಯವರು ಹೆಣ್ಣನ್ನು ಗಂಡಿನ ಕಡೆಯವರಿಗೆ ಒಪ್ಪಿಸುವ ಕ್ರಮವಿದೆ. ಇದನ್ನು 'ಪೊಣ್ಣು ಒಚ್ಚಿದ್ ಕೊರ್ಪುನಿ' ಎನ್ನುವರು. ವಧುವಿನ ತಂದೆ–ತಾಯಿ, ಹೆಣ್ಣಿನ ಊರಿನ

ಗುರಿಕಾರ, ಮಾವ, ಅಣ್ಣಂದಿರು ಒಂದು ಬದಿಗಿದ್ದು ಮತ್ತೊಂದು ಬದಿಯಲ್ಲಿ ನಿಂತ ವರನ ಕಡೆಯವರನ್ನು ಗುರಿಕಾರ ಸಂಬೋಧಿಸಿ "ತಿರ್ತ್ ದೀಂಡ ಪಿಜಿನ್ ಕೊನೊವು, ಮಿತ್ತ್ ದೀಂಡ ಕಕ್ಕೆ ಕೊನೊವುಂದು, ಈ ಬಾಲೆನ್ ಎಂಕ್ಲು ತಾಂಕ್‌ದಿತ್ತ ಉಂದು ಬಾಲೆತ್ತ್ ಎನ್ನ ಇಲ್ಲ್ ಬೆಳಗಾವುನ ಬೊಲ್ಪು, ಎಂಕ್ಲೆನ ಕರ್ಲ್‌ದ ಮಾಲೆಂದ್ ಎನ್‌ದ್, ಈ ಆಣನ ಕಂಟೆಲ್‌ಗ್ ಪಾಡುವ. ನನ ಮಿತ್ತ್ ಈ ಬಾಲೆದ ಕಷ್ಟ–ಸುಖ, ಆರ–ಭಾರ ಪೂರ ನಿಕ್ಲೆಗಿತ್ತಿನವು.  ಪೇರ್ಡ್ ಪಾಡ್‌ಲೆ, ನೀರ್ಡ್ ಪಾಡ್‌ಲೆ ಅಲೆನ ಜವಾಬ್ದಾರಿ ನಿಕ್ಲೆಗೆ ಸೇರಿನವು" ಹೀಗೆ ಹೇಳಿ ಗಂಡಿನ ಹಿರಿಯರ ಕೈಗೆ ಹೆಣ್ಣನ್ನು ನೀಡುತ್ತಾರೆ.

ಗಂಡಿನ ಹಿರಿಯ ಗುರಿಕಾರ ವರನ ಕೈ ಹಿಡಿದು "ಎಂಕ್ಲೆನ ಆಣಗ್ ದಾಲಾ ತೆರಿಯಂದೆ, ಬಾಯಿಗ್ ಬಿರೆಲ್ ಪಾಡ್‌ಂಡ ಅಗ್ಯೆರೆ ತೆರಿಯುಜಿ, ಆಯಗ್ ನಿಕ್ಲು ಬುದ್ದಿ, ಕಜ್ಜ ಪನೊಂದು, ಕಷ್ಟ ಕಾಲೊಗು ಆಯಗ್ ನಿಕ್ಲು ಸಹಾಯ ಮಲ್ತೊಂದು, ಆಯನ್ ಸುದಾರಿಸೊಂದು, ಕಡೇ ಮುಟ್ಟ ಅಕ್ಲೆನ ಸಂಸಾರ ಪೇರ್‌ಡ್ ನೀರ್ ಒಂಜಾಯಿಲೆಕ್ಕ, ಆಪಿನಂಚ ಎಡ್ಡೆಡ್ ನಡಪಾದ್ ಕೊರ್ಲೆಂದ್" ವರನನ್ನು ವಧುವಿನ ಹಿರಿಯರ ಕೈಗಿಡುವರು.  ಮುಂದೆ ಅವರನ್ನು ದೈವ ದೇವರ ಕೋಣೆಗೊಯ್ದು 'ಸತ್ಯ'ಗಳಿಗೆ ('ಭೂತ' ಎಂಬ ಪದಕ್ಕೆ ಪ್ರೊ: ಅಮೃತ ಸೋಮೇಶ್ವರರು ಬಳಸಿದ ಪದ) ಕೈ ಜೋಡಿಸಿ, ಹಿರಿಯರ ಆಶೀರ್ವಾದ ಪಡೆಯುತ್ತಾರೆ.  ವಧುವಿನ ಕಡೆಯವರು, ವರನ ಕಡೆಯವರಿಗೆ ಬಳಿಕ ಮಾಮಿ ತಮ್ಮನ (ಮಾಮಿಸಿಕೆ) ಅಂದರೆ ಅತ್ತೆ ಕಡೆಯ ಔತಣಕ್ಕೆ ಈ ದಿನ ಬನ್ನಿ ಎಂದು ಹೇಳಿಕೆ ಕೊಡುತ್ತಾರೆ. ತರುವಾಯ ವಧುವಿನ ಕಡೆಯವರು ವಧು ಸಮೇತ ತಮ್ಮ ಮನೆಗೆ ತೆರಳುತ್ತಾರೆ.

**ತೊಡಮನೆ (ಮಾಮಿಸಿಕೆ):**

ಅತ್ತೆ ನೀಡುವ ಔತಣ (ಮಾಮಿಸಿಕೆ) ಸ್ವೀಕಾರಕ್ಕಾಗಿ ಮದುಮಗಳ ಮನೆಗೆ ಮದುಮಗ ಬಂದು, ವಧುವನ್ನು ತನ್ನ ಮನೆಗೆ ಕೊಂಡೊಯ್ಯುವ ಕ್ರಮವೇ 'ಮಾಮಿಸಿಕೆ'.  ಊರ ಗುರಿಕಾರ, ನೆರೆಹೊರೆ, ಕುಟುಂಬಸ್ಥರು ಇಲ್ಲಿ ಸೇರುತ್ತಾರೆ.  ಅತ್ತೆ (ಹೆಣ್ಣಿನ ತಾಯಿ) ಅಳಿಯನಿಗೆ ಉಡುಗೊರೆ ನೀಡಿ ಮಗಳನ್ನು ಅವನ ಜೊತೆ ಕಳುಹಿಸಿಕೊಡುವುದು ಪದ್ಧತಿ.  ಅವರವರ ಸತ್ಯಾನುಭಕ್ತಿಗೆ ಹೊಂದಿ ಈ ಉಡುಗೊರೆ ಇರುತ್ತದೆ.  ಸೇರಿದ ಸಭಿಕರು ಮಧ್ಯ ಪೂರ್ವ ದಿಕ್ಕಿಗೆ ಹಾಸಿದ ಹೊಸ ಚಾಪೆಯಲ್ಲಿ, ಪಶ್ಚಿಮ ದಿಕ್ಕಿಗೆ ಮುಖ ಮಾಡಿ, ಅಳಿಯ ಅತ್ತೆ ಎದುರುಬದುರಾಗಿ ನಿಂತು, ಅತ್ತೆ (ಹೆಣ್ಣಿನ ತಾಯಿ) ಹರಿವಾಣದಲ್ಲಿ ವೀಳ್ಯದೆಲೆ, ಉಡುಗೊರೆಯನ್ನು ಗೌರವಕ್ಕೆ ನೀಡುತ್ತಾರೆ, ಮದುಮಗ ಉಡುಗೊರೆಯನ್ನು ಅತ್ತೆಯಿಂದ ಸ್ವೀಕರಿಸಿ, ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾನೆ.  ಬಳಿಕ ಹೆಣ್ಣಿನ ಮಾವ ಅಥವಾ ತಂದೆ ತಂಬಿಗೆಯಲ್ಲಿ ನೀರು ತುಂಬಿಸಿ ಸಭೆಗೆ ತೋರಿಸಿ ಬಂದವರನ್ನು ಭೋಜನಕ್ಕೆ ಆಹ್ವಾನಿಸುತ್ತಾರೆ.  ಊಟದ ಬಳಿಕ ಹುಡುಗಿಯ ಜೊತೆಗೆ ಒಂದು ಸಣ್ಣ ಹುಡುಗಿಯನ್ನು (ಮದುಮಗಳಿಗೆ ಹೋಗುವ ಊರು ಹೊಸತಾಗಿರುವುದರಿಂದ ಜೊತೆಗಿರಲೆಂದು) ಕಳುಹಿಸಿ ಕೊಡುತ್ತಾರೆ.  ಇದಕ್ಕೆ 'ತೇರಂಟೆ' ಎನ್ನುವರು.

ನಂತರದ ದಿನಗಳಲ್ಲಿ ಬರುವ ಆಚರಣೆಗಳಲ್ಲಿ ಈ ಎರಡು ಕುಟುಂಬಗಳು ಪಾಲ್ಗೊಳ್ಳುವುದರಿಂದ ಈ ಕುಟುಂಬಗಳ ಮಧ್ಯೆ ಗಟ್ಟಿ ಬಾಂಧವ್ಯವೊಂದು ಬೆಸೆಯುತ್ತದೆ. ನಾಗರಪಂಚಮಿಗೆ ಹಾಗೂ ಆಷಾಢ ತಿಂಗಳಲ್ಲಿ 'ಆಟಿಕುಲ್ಯೆರೆ' ಮದುಮಗಳು ಖಡ್ಡಾಯವಾಗಿ ತವರು ಮನೆಗೆ ಬರಲೇಬೇಕೆಂಬ ಹೇಳಿಕೆ ವಧುವಿನ ಕಡೆಯವರದಾಗಿರುತ್ತದೆ. ಅಂತೆಯೇ ಈ ಎಲ್ಲಾ ಆಚರಣೆಗಳು ಎರಡು ಕುಟುಂಬ ಒಟ್ಟು ಸೇರಿ ನಡೆಸಿಕೊಡುತ್ತದೆ. ಇತ್ತೀಚಿಗಿನ ದಿನಗಳಲ್ಲಿ ಪದ್ಧತಿ ಎನ್ನುವ ಕಾರಣಕ್ಕೆ ಆಷಾಢ ತಿಂಗಳಲ್ಲಿ ಮದುಮಗಳು ಒಂದು ದಿನದ ಮಟ್ಟಿಗೆ ಮಾತ್ರ ತವರು ಮನೆಗೆ ಬರುತ್ತಾಳೆ. ಇದಕ್ಕೆ ಬಲವಾದ ಕಾರಣಗಳೂ ಇವೆ. ಹುಡುಗಿ ವಿದ್ಯಾವಂತೆ, ಉದ್ಯೋಗಸ್ಥೆ ಆಗಿರುವುದು ಇದಕ್ಕೆ ಕಾರಣವಾಗಿರುವ ಸಾಧ್ಯತೆಗಳು ಇದೆ.

## ಚಪ್ಪರ ಇಳಿಸುವುದು (ಪೊದಿಕೆ ಗಿರ್‌ಪುನಿ):

ಮದುವೆಗೆ ಮೇಲೇರಿಸಿದ ಚಪ್ಪರವನ್ನು ಇಳಿಸುವ ಕ್ರಮವಿದೆ. ಹುಡುಗನ ಕಡೆಯ ಔತಣ ಕೂಟಕ್ಕೆ ಹುಡುಗಿಯನ್ನು ಬಿಟ್ಟು ವಾಪಸ್ ಬಂದ ದಿವಸ ಅಥವಾ ಮರುದಿನ ಚಪ್ಪರ ಮುಹೂರ್ತಕ್ಕೆ ಕಟ್ಟಿರುವ ಹೊದಿಕೆ (ಪೊದಿಕೆ ಗಿರ್‌ಪುನಿ)ಯನ್ನು ಕುಟುಂಬದ ಹಿರಿಯರು ಕೆಳಗಿಳಿಸಿ, ಅದರಲ್ಲಿರುವ ಅಕ್ಕಿಯನ್ನು ಹುರಿದು, ಕೊಬ್ಬರಿಯನ್ನು ತುಂಡುಮಾಡಿ, ಕೆಂಡದಲ್ಲಿ ಕಾಯಿಸಿದ ಒಣ ಮೀನಿನೊಂದಿಗೆ ಅಲ್ಲಿ ನೆರೆದಿರುವ ಎಲ್ಲರಿಗೂ ಹಂಚುತ್ತಾರೆ.

## ಆಷಾಢದಲ್ಲಿ ತವರಿಗೆ ಬರುವುದು (ಆಟಿ ಕುಲ್ಲುನಿ):

ಹೊಸದಾಗಿ ಮದುವೆಯಾದ ಹೆಣ್ಣನ್ನು ಆಟಿ ತಿಂಗಳಲ್ಲಿ ತವರು ಮನೆಗೆ ಕರೆ ತರುವ ಆಚರಣೆಯು ಆಟಿ ತಿಂಗಳಲ್ಲಿ ವಿಶೇಷವಾದದ್ದು. ಇದು ತುಳುನಾಡಿನಲ್ಲಿ ನಡೆದು ಬಂದ ಪದ್ಧತಿ. ಹೆಣ್ಣು ಮಕ್ಕಳಿಗೆ ಮದುವೆಯಾದ ವರ್ಷದಲ್ಲಿ ಬರುವ ಮೊದಲ ಆಷಾಢ ತಿಂಗಳು ಸಂತೋಷ ಕೊಡುವ ತಿಂಗಳು. ಒಂದು ತಿಂಗಳು ಆಷಾಢ ಮಾಸ. ಆಗ ಮಾತ್ರ ಹೆಣ್ಮಕ್ಕಳಿಗೆ ತವರಿಗೆ ಬರುವ ಭಾಗ್ಯ ಒದಗುವುದು. ಈ ನಿಯಮ ಹೊಸದಾಗಿ ಮದುವೆಯಾದ ಹೆಣ್ಣಿಗೆ ಮಾತ್ರ ಅನ್ವಯವಾಗುವುದು, ಪ್ರತೀ ವರ್ಷ ಬರುವ ಆಷಾಢದಲ್ಲಿ ಆಕೆ ತವರು ಮನೆಯಲ್ಲಿ ಜಾಂಡಾ ಹೂಡುವ ಹಾಗಿಲ್ಲ.

ಮುಂಡಾಳರಲ್ಲಿ ಆಷಾಢ ಮಾಸದಲ್ಲಿ ಮದುವೆಯಾಗಿ ಗಂಡನ ಮನೆಯಲ್ಲಿರುವ ಮಗಳನ್ನು ಮನೆಗೆ ಕರೆ ತರುವ ಸಂಪ್ರದಾಯವಿದೆ. ಹೆಣ್ಣಿನ ತಂದೆ–ತಾಯಿ, ಮಾಮ–ಮಾಮಿ, ಗ್ರಾಮದ ಗುರಿಕಾರ, ಕುಟುಂಬದ ಗುರಿಕಾರರು ಒಂದು ದಿನ ನಿಗಧಿಸಿ, ಗಂಡಿನ ಮನೆಯವರಿಗೆ ನಾವು ಹೆಣ್ಮಗಳನ್ನು ಆಟಿ ಕೂರಿಸಲು ಕರೆದುಕೊಂಡು ಹೋಗಲು ಬರುತ್ತೇವೆ ಎಂಬ ಮಾತನ್ನು ಈ ಮೊದಲೇ ತಿಳಿಸುವರು. ತಿಳಿಸಿದ ಆ ದಿನದಂದು ಇವಿಷ್ಟು ಮಂದಿ ಗಂಡಿನ ಮನೆಗೆ ತೆರಳುತ್ತಾರೆ. ಬಂದವರಿಗೆ ಪಾನೀಯದ ವ್ಯವಸ್ಥೆಯಾಗುತ್ತದೆ. ಮಧ್ಯಾಹ್ನ ಮಾಂಸಾಹಾರ ಊಟದ ತರುವಾಯ

ಹೆಣ್ಣನ್ನು ತವರು ಮನೆಗೆ ಕಳುಹಿಸಿಕೊಡುವ ಕಾರ್ಯ ನಡೆಯುತ್ತದೆ. ಹೆಣ್ಣು ಸಂತೋಷದಿಂದಲೇ ತಯಾರಾಗಿರುತ್ತಾಳೆ. ಹಿರಿಯರು ತಮ್ಮ ದೈವ–ದೇವರನ್ನು ಪ್ರಾರ್ಥಿಸಿ, ಎಲ್ಲರೂ ಹೊರಡಲು ಅಪ್ಪಣೆ ಪಡೆದು ಅಲ್ಲಿಂದ ತೆರಳುವರು. ಆಗ ಅತ್ತೆ, ಸೊಸೆಗೆ ಬುದ್ಧಿವಾದದ ಮಾತುಗಳನ್ನು ಹೇಳುವ ಕ್ರಮವೂ ಇದೆ.

ಆಟಿ ಕೂರುವ ಆಚರಣೆಗೂ, ಹೆಣ್ಣು ಮೈನೆರೆಯುವ ಆಚರಣೆಗೂ ಒಂದು ಸಾಮ್ಯತೆ ಇದೆ. ಇಲ್ಲಿ ಕೃಷಿ ಪ್ರಧಾನ ವ್ಯವಸ್ಥೆಯ ಒಳಗಿರುವ ಹೆಣ್ಣು ಮಗಳು ಅತ್ತೆ ಮನೆಯ ಬೇಸಾಯದ ಸಲುವಾಗಿ ಸುಸ್ತಾಗಿರುತ್ತಾಳೆ. ಆಕೆಗೆ ಈ ಆಚರಣೆ ವಿಶ್ರಾಂತಿಯ ಸಮಯ. ಅಲ್ಲಿ ಮೈನೆರೆಯುವುದೂ ಹೆಣ್ಣಿಗೆ ವಿಶ್ರಾಂತಿಯ ಸಮಯ, ಇನ್ನೊಂದು ಸಂದರ್ಭ ಹೆರಿಗೆಯಾದ ಮೂರು ತಿಂಗಳು ವಿಶ್ರಾಂತಿಯ ಸಮಯ. ಹೆಣ್ಣಿಗೆ ಜೀವಿತದಲ್ಲಿ (ಇದೀಗ ಆರು ತಿಂಗಳಾಗಿದೆ) ವಿಶ್ರಾಂತಿ ಸಿಗುವುದು ಈ ಮೂರು ಸಂದರ್ಭಗಳಲ್ಲಿ ಮಾತ್ರ.

ಆಟಿ ಕೂರುವಲ್ಲಿ ಅನೇಕ ಚಿಂತನೆಗಳಿವೆ. ಆಷಾಢದಲ್ಲಿ ಅತ್ತೆ ಸೊಸೆ ಮುಖಾಮುಖಿ ಯಾಗಬಾರದು, ಮನೆಗೆ ಒಳ್ಳೆಯದಲ್ಲ ಎನ್ನುವ ವಿಚಾರ. ಈ ಚಿಂತನೆಯ ಪ್ರಕಾರ ಅದನ್ನು ಹೀಗೆ ವಿವರಿಸಲೂಬಹುದು. ಆಷಾಢ ಮಳೆಗಾಲ, ಕಿಕ್ಕಿರಿದು ಬರುವ ಮಳೆಗೆ ಕೆಲಸಕ್ಕೆ ಹೋಗಲು ಸಾಧ್ಯವಿಲ್ಲ. ಮಗ ಸದಾ ಮನೆಯಲ್ಲಿದ್ದು, ಸೊಸೆಯ ಜೊತೆ ಸರಸ ಸಲ್ಲಾಪದಲ್ಲಿ ತೊಡಗಿದರೆ, ಮಗನೆಂಬ ಮಮಕಾರ ತಾಯಿಯಲ್ಲಿ ಈರ್ಷ್ಯೆಯನ್ನು ಮೂಡಿಸಬಹುದು. ಹಾಗಾಗಿ ಸೊಸೆಯ ಬಗ್ಗೆ ಸಿಟ್ಟು ಏರಿ ಸದಾ ಜಗಳಕ್ಕೆ ಕಾರಣವಾಗಬಹುದು ಎಂಬ ಕಾರಣಕ್ಕೂ ಆಟಿ ಕೂರುವ ವ್ಯವಸ್ಥೆ ಸೃಷ್ಟಿಯಾಗಿರಬಹುದು. ಇನ್ನೊಂದು ಬಲವಾದ ಕಾರಣ, ಶುಭ ಕಾರ್ಯಕ್ಕಿದು ಪ್ರಸಕ್ತ ಕಾಲವಲ್ಲ. ಆಷಾಡ ತಿಂಗಳಲ್ಲಿ ಸಂತಾನೋತ್ಪತ್ತಿ ನಡೆಯಬಾರದು ಎಂಬ ಧೋರಣೆಯೂ ತುಳುವರಲ್ಲಿದೆ.

ಇತ್ತೀಚೆಗೆ ಈ ಸಂಪ್ರದಾಯಗಳೂ ಮೂಲೆ ಗುಂಪಾಗುತ್ತಿದೆ. ಹೆಣ್ಮಕ್ಕಳು ಅತ್ತೆಯರಿಲ್ಲದ ಮನೆ, ವಿಭಕ್ತ ಕುಟುಂಬವನ್ನು ಬಯಸುತ್ತಾರೆ. ಆಟಿ ಕೂರುವುದು ಕೇವಲ ಸಾಂಕೇತಿಕವಷ್ಟೇ. ಹೆಣ್ಮಕ್ಕಳು ಉದ್ಯೋಗದಲ್ಲಿರುವ ಕಾರಣ ಈ ಆಚರಣೆಗಳು ಕಷ್ಟಸಾಧ್ಯ ಎನ್ನುವುದು ಈಗಿನ ಹೆಣ್ಮಕ್ಕಳ ವಾದ.

**ಬಯಕೆ (ಸೀಮಂತದ) ಆಚರಣಾ ಕ್ರಮ:**

ಬಯಕೆ ಎಂಬ ಪದಕ್ಕೆ 'ಆಸೆ' ಎಂಬ ಅರ್ಥವೂ ಇದೆ. ಗರ್ಭಿಣಿ ಸ್ತ್ರೀಯ ಆಸೆಯನ್ನು ತೀರಿಸುವುದು, 'ಬಯಕೆ'ಯ ಉದ್ದೇಶವಾಗಿದೆ. ಈ ಆಚರಣೆ ಮುಂಡಾಳರಲ್ಲೂ ಇದೆ. ಗರ್ಭ ಧರಿಸಿ 7ನೇ ತಿಂಗಳಿಗೆ ಈ ಕಾರ್ಯಕ್ರಮವನ್ನು ಮಾಡುತ್ತಾರೆ. ಗಂಡಿನ ಕಡೆಯವರು ತಮ್ಮ ಅನುಕೂಲಕ್ಕೆ ತಕ್ಕಂತೆ ಇದನ್ನು ಮಾಡುತ್ತಾರೆ. ಮೂಲತ: ಬಯಕೆಯ ಸ್ತ್ರೀಗೆ ಹಸಿರು ಸೀರೆ ಉಡಿಸುತ್ತಿದ್ದರು. 'ಹಸಿರು' ಕೇವಲ ಒಂದು ಬಣ್ಣವಾಗಿರದೆ, ಸಮೃದ್ಧಿಯ, ಹೊಸತನದ, ಸಂಕೇತವೂ

ಆಗಿದೆ. ಪುರೋಹಿತರಿಂದ ಶುಭ ಗಳಿಗೆ ಕೇಳಿ 'ಸೀಮಂತ'ಕ್ಕೆ ದಿನ ಗೊತ್ತುಪಡಿಸುತ್ತಾರೆ. ಆ ದಿನದಂದು ತವರು ಮನೆಯವರು ಹೂವು, ಸೀರೆ, ಕುಪ್ಪಸ, ಅನುಕೂಲವಿದ್ದರೆ ಚಿನ್ನದ ಆಭರಣವನ್ನು ಹಾಗೂ ಒಂದು ಚಿಕ್ಕ ಗಾತ್ರದ ಹೆಣ್ಣು ಕೋಳಿ (ಲಾಕಿ) ತೆಗೆದುಕೊಂಡು ಗಂಡಿನ ಮನೆಗೆ ಹೋಗುತ್ತಾರೆ. ಗಂಡನ ಕಡೆಯಿಂದ ಕೊಟ್ಟ ಸೀರೆ ಕುಪ್ಪಸ, ಬಂಗಾರವನ್ನುತೊಡಿಸಿ, ಕೂದಲನ್ನು ಜಡೆ ಕಟ್ಟಿ, ಅದಕ್ಕೆ ಮಲ್ಲಿಗೆ ದಂಡೆ ಸುತ್ತಿ ಬಳ್ಳಿ ಬಿಟ್ಟು ಮದುಮಗಳಂತೆ ಗರ್ಭಿಣಿಯನ್ನು ಅಲಂಕಾರಗೊಳಿಸುತ್ತಾರೆ. ತವರು ಮನೆಯವರೂ ಸೇರಿದಂತೆ ಎರಡು ಕಡೆಯ ಕುಟುಂಬದ ಹಿರಿಯರು ಊರಿನ ಗ್ರಾಮದ ಗುರಿಕಾರರು, ಕುಟುಂಬಸ್ಥರು ಸೇರಿ ಅವರ ಕುಲದೈವವನ್ನು ದೀಪ ಬೆಳಗಿಸಿ ಪ್ರಾರ್ಥಿಸಿ ಗ್ರಾಮ ದೇವರುಗಳ ಅಪ್ಪಣೆ ಪಡೆದು ಮುಂದಿನ ಕಾರ್ಯಕ್ಕಿಳಿಯುತ್ತಾರೆ.

ತವರು ಮನೆಯಿಂದ ತಂದ ಲಾಕಿ (ಚಿಕ್ಕ ಹೆಣ್ಣು ಕೋಳಿ) ಯನ್ನು ಹಿರಿಯರೊಬ್ಬರು ಮೂರು ಸಾರಿ ಗರ್ಭಿಣಿಯ ತಲೆ ನಿವಾಳಿಸುತ್ತಾರೆ. ಆಕೆ ಆ ಕೋಳಿಯ ಬಾಯಿಗೆ ಅಕ್ಕಿ ಹಾಕಿದ ಬಳಿಕ ಅದನ್ನು ನೆಲದಲ್ಲಿ ಬಿಡುತ್ತಾರೆ. ಈ ಲಾಕಿಯನ್ನು ಬಿಡುವ ಸಂದರ್ಭಗಳಲ್ಲಿ ಜನಪದರ ನಂಬಿಕೆಯ ಜೊತೆಗೆ ಮನ:ಶಾಸ್ತ್ರವೂ ಕೆಲಸ ಮಾಡಿದೆ. ಹಿಂದಿನ ಕಾಲದಲ್ಲಿ ಪ್ರತಿ ಮನೆಯಲ್ಲೂ ಪ್ರಾಣಿ ಪಕ್ಷಿಗಳನ್ನು ಕಡ್ಡಾಯವಾಗಿ ಸಾಕಿ ಸಲಹುತ್ತಿದ್ದರು. ಯಾವುದೇ ಮಾರಿದೋಷ, ಮಂತ್ರ-ತಂತ್ರ ದೋಷ, ಗಾಳಿ(ಸೋಂಕು) ಇತ್ಯಾದಿಗಳು ಆ ಮನೆಯ ಮಂದಿಯನ್ನು ತಲುಪುವ ಮೊದಲು ಈ ಪ್ರಾಣಿ ಪಕ್ಷಿಗಳನ್ನು ತಲುಪಿ ಅವುಗಳನ್ನು ಬಲಿ ತೆಗೆದುಕೊಳ್ಳುತ್ತದೆ. ಒಂದು ವೇಳೆ ಪ್ರಾಣಿ ಪಕ್ಷಿಗಳಿಲ್ಲದ ಸಮಯದಲ್ಲಿ ನೇರವಾಗಿ ಆ ಮನೆಯ ಸದಸ್ಯರಿಗೆ ಆ ದೋಷ ತಟ್ಟುವುದೆಂಬ ನಂಬಿಕೆ. ಇಂತಹ ಅನೇಕ ನಂಬಿಕೆಗಳು ದಲಿತರಲ್ಲೂ, ದಲಿತೇರರಲ್ಲೂ ಇದೆ. ಮುಂಡಾಳ ಜನಾಂಗದಲ್ಲೂ ಈ ನಂಬಿಕೆ ಇದೆ. ಪರಿಸ್ಥಿತಿ ವೈಪರೀತ್ಯದಿಂದ ಬಹುಮಹಡಿ ಕಟ್ಟಡಗಳಲ್ಲಿ ವಾಸಿಸುವ ಜನ ಈ ಲಾಕಿ ಬಿಡುವ ಪದ್ಧತಿಯನ್ನು ನಿಲ್ಲಿಸಿದ್ದಾರೆ. ಲಾಕಿಯನ್ನು ತಲೆ ನಿವಾಳಿಸುವ ಸಂದರ್ಭಗಳು ಮೂರು. ಮದುಮಗಳ ದಿಬ್ಬಣ ಸಂದರ್ಭ, ಸೀಮಂತದ ಸಂದರ್ಭ ಇಲ್ಲಿನ ಚಿಂತನೆಯೇ ಬೇರೆ. ಈ ಸಂದರ್ಭದಲ್ಲಿ ಸ್ವತ: ಆ ಆಚರಣೆಗೆ ಒಳಪಡುವ ವ್ಯಕ್ತಿಗೆ ಯಾವುದೇ ಕಂಟಕ, ಬಾಧಕಗಳು ಬಾರದಿರಲಿ ಎಂಬ ಚಿಂತನೆ. ಇನ್ನೊಂದು ಬಾರಿ ಕೋಳಿ ಬಿಡುವ ಕ್ರಮವಿದೆ. ಹುಟ್ಟು ಸಾವು ದೈವ ನಿಮಿತ್ತವಾದರೂ, ಮನುಷ್ಯ ಸಂಕಷ್ಟ ಬಂದಾಗ ತನ್ನ ನೆಲೆಯಲ್ಲಿ ಅದಕ್ಕೆ ಪರಿಹಾರವನ್ನು ಹುಡುಕುತ್ತಾನೆ. ಭಾಷಾ ವಿಜ್ಞಾನದ ನೆಲೆಯಿಂದ ವಿಶ್ಲೇಶಿಸುವುದಾದರೆ, ಭಾಷಾ ವಿಜ್ಞಾನಿಗಳು ಸೋಮವಾರದ ನಂತರದ ದಿನ ಮಂಗಳವಾರ ಅಮಂಗಳಕರ ದಿನವಾದುದರಿಂದ ಹಾಗೂ ಆ ಪದದ ಕಾರಣದಿಂದ ಮನುಷ್ಯರು ಮಾನಸಿಕವಾಗಿ ಚಿಂತೆಗೊಳಗಾಗದಂತೆ ಮಾಡಲು ಅಮಂಗಳಕರವಾಗಿದ್ದರೂ ಆ ದಿನವನ್ನು 'ಮಂಗಳವಾರ' ಎಂಬುದಾಗಿ ಗುರ್ತಿಸಿಕೊಂಡರು. ಆದರೆ ಮನುಷ್ಯನ ಮನಸ್ಸಿನೊಳಗೆ ಮಂಗಳವಾರ, ಶುಕ್ರವಾರ, ಅಮವಾಸ್ಯೆ, ಸಿಂಗೊಡೆ ಈ ದಿನಗಳ ಬಗ್ಗೆ ಈಗಾಗಲೇ ಮಾಸಲು ಸಾಧ್ಯವಾಗದಂತಹ (ವಿದ್ಯಾವಂತರನ್ನು ಒಳಗೊಂಡು) ನಂಬಿಕೆಗಳಿವೆ. ವ್ಯಕ್ತಿ ಮಂಗಳವಾರ, ಶುಕ್ರವಾರ ಮರಣಿಸಿದರೆ, ದುರ್ಮರಣ ಹೊಂದಿದ ಹಾಗೆಯೇ ಎಂಬ ವಿಚಾರ ಈ ಮಾನವರದ್ದು. ಹೀಗಾಗಿ ದುರ್ಮರಣಕ್ಕೀಡಾದ ವ್ಯಕ್ತಿ, ಮತ್ತೊಬ್ಬರನ್ನು ಬಲಿ ಬಯಸುತ್ತದೆ. ಆದುದರಿಂದ ಕುಟುಂಬದಲ್ಲಿ ಒಬ್ಬ ವ್ಯಕ್ತಿಯನ್ನು ಕಳೆದುಕೊಂಡಾಗಿದೆ. ಮತ್ತೊಂದು ಬಲಿ ಬೇಡ

ಎಂಬ ಕಲ್ಪನೆಯಿಂದ ಈ ಎರಡು ದಿನದಂದು ವ್ಯಕ್ತಿ ಮರಣಿಸಿದರೆ ಸತ್ತ ವ್ಯಕ್ತಿಯ ಚಿತೆಗೆ ಒಂದು ಬೆಳೆದ ಕೋಳಿಯನ್ನು ಚಿತೆಗೆ ನಿವಾಳಿಸಿ ಸ್ಮಶಾನದೊಳಗೆ ಹಾರಿಸಿ ಬಿಡುವುದಿದೆ. ಕಾರಣ ಸತ್ತ ವ್ಯಕ್ತಿ ಬಯಸುವ ಬಲಿ ಕೋಳಿಗೆ ನಾಟಲಿ, ಮನೆಯ ಸದಸ್ಯರಿಗೆ ಬೇಡ ಎಂಬ ಹಂಬಲ. ಇಂತಹ ನಂಬಿಕೆಗಳು ತರ್ಕಕ್ಕೆ ಬಿಟ್ಟಿರುವಂತಹದ್ದು, ಇದನ್ನು ಪ್ರಶ್ನಿಸುವಂತಿಲ್ಲ.

ಗರ್ಭಿಣಿಗೆ ಕೋಳಿ (ಲಾಕಿ) ಯನ್ನು ನಿವಾಳಿಸಿ ಬಳಿಕ ಗರ್ಭಿಣಿಯ ಎದುರು ದೊಡ್ಡ ತಟ್ಟೆಯ ಮೇಲೆ ತುದಿ ಬಾಳೆ ಎಲೆ ಇಡುತ್ತಾರೆ. ಆಕೆ ಬಯಸಿದ ಎಲ್ಲಾ ಸಿಹಿತಿನಿಸುಗಳನ್ನು, ಹಣ್ಣು ಹಂಪಲನ್ನು ಪಿರಮಿಡ್ ತರಹ ಅತ್ತೆಯಾದವಳು ಜೋಡಿಸಿಡುತ್ತಾಳೆ. ಹೀಗೆ ಬಡಿಸುವ ಖಾದ್ಯಗಳಲ್ಲಿ ಅವಲಕ್ಕಿ ಹೊದ್ದಿಲು, ಗರಿ ಗರಿ ಅಕ್ಕಿ ಪುಡಿ ಬೆರೆಸಿದ ನುಗ್ಗೆಸೊಪ್ಪಿನ ಪಲ್ಯ, ತುಂಡಾಗದಂತೆ ಪೂರ್ಣ ರೂಪದಲ್ಲಿ ಬೇಯಿಸಿ ಸಿಪ್ಪೆ ಸುಲಿದ ಎರಡು ಮೂರು ಮೊಟ್ಟೆ, ಒಂದು ಲೋಟ ಹಾಲು ಖಡ್ಡಾಯ. ಗರ್ಭಿಣಿಗೆ ಬಡಿಸಲಾದ ಎಲ್ಲಾ ಖಾದ್ಯಗಳನ್ನು ಸ್ವಲ್ಪ ಪ್ರಮಾಣದಲ್ಲಿ ಆಕೆಯ ಪಕ್ಕದಲ್ಲಿ ಒಂದು ಮಗುವನ್ನು ಕೂರಿಸಿ ಅದಕ್ಕೂ ತುದಿ ಎಲೆ ಹಾಕಿ ಬಡಿಸಬೇಕು.

ವಿಶೇಷವೇನೆಂದರೆ ಗರ್ಭಿಣಿಗೆ ಬಡಿಸದ ಹೊರತು ಸಭೆ ಭೋಜನ ಸ್ವೀಕರಿಸುವಂತಿಲ್ಲ. ಸಿಹಿ ತಿಂಡಿ ಹಣ್ಣು ಹಂಪಲನ್ನು ಬಡಿಸಿದ ಬಳಿಕ ಗರ್ಭಿಣಿಗೆ ಆಕೆಯ ಪತಿ ಉಡುಗೊರೆ ರೂಪದಲ್ಲಿ ಚಿನ್ನವನ್ನು ಹಾಕುತ್ತಾನೆ. (ಇದು ಅವನ ಯೋಗ್ಯತೆಯನ್ನು ಅವಲಂಬಿಸಿದೆ). ನಂತರ ಅತ್ತೆ ಮೊದಲು ಮೊಟ್ಟೆ ತೆಗೆದು ಸೊಸೆಯ ಕೈಯಲ್ಲಿ ಕೊಡುತ್ತಾರೆ. ಅದರ ಅರ್ಧ ಭಾಗವನ್ನು ಆಕೆ ಸಭೆಯಲ್ಲಿರುವ ಅಥವಾ ಕುಟುಂಬದ ಯಾವುದಾದರೂ 4 ವರ್ಷ ಒಳಗಿನ ಮಗುವಿಗೆ ತಿನ್ನಿಸಿ ಬಳಿಕ ತಾನು ತಿನ್ನುತ್ತಾಳೆ. ಬಳಿಕ ಸೊಸೆಗೆ ಅತ್ತೆ ಸಿಹಿ ತಿನ್ನಿಸುತ್ತಾರೆ, ನಂತರ ಪತಿ ಸಿಹಿ ತಿನಿಸುತ್ತಾನೆ. ಪತಿ ಕೊಡುವ ಸಿಹಿ ತಿಂಡಿ ಏನು ಅನ್ನುವುದನ್ನು ನೋಡಲು ಎಲ್ಲರೂ ಕಾದಿರುತ್ತಾರೆ. ಇದು ತಮಾಷೆಗಾಗಿಯೂ ಆಗಿರಬಹುದು. ಪತಿ ಜಿಲೇಬಿ / ಮಾಲ್ಪುರಿ ಕೊಟ್ಟರೆ ಹೆಣ್ಣು ಮಗುವೆಂದೂ, ಲಡ್ಡು / ಉಂಡೆ / ಪೇಡ ಕೊಟ್ಟರೆ ಗಂಡು ಮಗುವೆಂದೂ ಜನರ ಭಾವನೆ.

ಗರ್ಭಿಣಿ ಅವಳಿಗಿಷ್ಟವಾದ ತಿಂಡಿ ತಿಂದ ಬಳಿಕ ಆ ಎಲ್ಲಾ ವಸ್ತುವನ್ನು ಆಕೆಯ ತವರು ಮನೆಯವರಿಗೆ ಅರ್ಪಿಸಲಾಗುತ್ತದೆ. ತರುವಾಯ ಮತ್ತೊಂದು ಬಾಳೆಯ ಎಲೆಯಲ್ಲಿ ಮತ್ತೆ ಭೋಜನಕ್ಕೆ ತಯಾರಿಸಿದ ಎಲ್ಲಾ ಭಕ್ಷ್ಯಗಳ ಜೊತೆಗೆ ಅವಳಿಗೆ ಇಷ್ಟವಾದುದದ್ದನ್ನು ಅತ್ತೆ ಬಡಿಸುತ್ತಾಳೆ. ಬಡಿಸಿದ್ದೆಲ್ಲ ತಿನ್ನಲು ಸಾಧ್ಯವಾಗದು. ಇಲ್ಲಿ ಶಾಸ್ತ್ರಕ್ಕಾಗಿ ಯಾವುದಾದರೂ ಒಂದು ಬಗೆಯನ್ನು ಗರ್ಭಿಣಿ ಸ್ವೀಕರಿಸುತ್ತಾಳೆ. ಇದೂ ಆಕೆಯ ತವರು ಮನೆಗೆ ಸಲ್ಲುತ್ತದೆ. ಇದಾದ ಬಳಿಕ ಕೈ ಬಾಯಿ ತೊಳೆದು ಬಂದು ಅತ್ತೆ ಮತ್ತು ಮಾವ ಗಂಡನ ಜೊತೆ ಕೂರುತ್ತಾಳೆ. ಮಾವ ನೆರೆದ ಸಭಿಕರಲ್ಲಿ ನೀರು ತುಂಬಿದ ತಂಬಿಗೆಯನ್ನು ಹಿಡಿದು, ಸಭಿಕರಿಗೆ ಭೋಜನ ಸ್ವೀಕರಿಸಲು ವಿನಂತಿಸುತ್ತಾರೆ. ನೆರೆದ ಸಭೆ ಕುಟುಂಬಸ್ಥರು ಸಂತೋಷದಿಂದ ಭೋಜನ ಸ್ವೀಕರಿಸಿ ಗರ್ಭಿಣಿ ಹಾಗೂ ಮನೆಯವರನ್ನು ಹರಸುತ್ತಾರೆ. ಕುಟುಂಬಸ್ಥರ ಜೊತೆ ಸೇರಿ ಗರ್ಭಿಣಿಯೂ ಭೋಜನ ಸೇವಿಸುತ್ತಾಳೆ.

ಅತ್ತೆ ಈ ಸಂದರ್ಭದಲ್ಲಿ ಸೊಸೆಯ ಮಡಿಲು ತುಂಬಿಸಿ ಕಳುಹಿಸಿದರೆ ಮತ್ತೆ ಸೊಸೆ ಬರುವುದು ತೊಟ್ಟಿಲ ಮಗು ಬರುವಾಗ ಮಾತ್ರ. ಈ ಕಟ್ಟಳೆಯನ್ನು ಮಾಡದಿದ್ರೆ ಆಕೆ ಸದಾ ಅತ್ತೆ ಮನೆಗೆ ಬಂದು ಹೋಗಬಹುದು. ಹಿಂದೆ ಈ ಕಟ್ಟಳೆ ಕಡ್ಡಾಯವಾಗಿತ್ತು, ಈಗ ನಿಯಮ ಹಳ್ಳಿಗಳಲ್ಲಿ ಮಾತ್ರವಿದೆ. ಈಗಿನ ಪರಿಸ್ಥಿತಿ ಬದಲಾಗಿದೆ. ಎಷ್ಟೋ ಬಾರಿ (ಕಡೀರ್ದ ಬಾಲೆ ಪೆದ್ದುನಿ ಅಪ್ಪೆ ಇಲ್ಲಡ್) ಮೊದಲ ಕಂದನ ಹೆರಿಗೆ, ತವರಿಗೆ ಸೇರಿದ್ದು. ಆದರೆ ಈಗ ಆಟಿ ತಿಂಗಳಲ್ಲೇ ತವರು ಮನೆಗೆ ಹೋಗದ ಮದುಮಗಳು ಹೆರಿಗೆಗೆ ತವರು ಮನೆಗೆ ಹೋದಾಳೇ? ಇದಕ್ಕೂ ಬಲವಾದ ಕಾರಣಗಳಿವೆ. ಹಿಂದೆ ಈ ಕಟ್ಟಲೆ ಇದ್ದಾಗ ಕಡ್ಡಾಯವಾಗಿ ತವರು ಮನೆ ಸೇರುವ ಗರ್ಭಿಣಿಗೆ ಗ್ರಾಮೀಣ ಪ್ರದೇಶವಾದ ತನ್ನೂರಿನಲ್ಲಿ ಆಸ್ಪತ್ರೆಯ ವ್ಯವಸ್ಥೆ, ವೈದ್ಯರ ವ್ಯವಸ್ಥೆ ಸರಿಯಾಗಿರದೆ ಎಷ್ಟೋ ಬಾರಿ ಮಗುವನ್ನು ಕಳೆದುಕೊಳ್ಳಬೇಕಾಗುತ್ತಿತ್ತು ಅಥವಾ ತಾಯಿ, ಮಗು ಇಬ್ಬರನ್ನೂ ಕಳೆದುಕೊಳ್ಳಬೇಕಾಗುತ್ತಿತ್ತು. ಹಾಗಾಗಿ ಹೆಚ್ಚಿನ ಸೀಮಂತದಲ್ಲಿ ಮಡಿಲು ತುಂಬುವ ಕ್ರಮವಿಲ್ಲ. ಮುಂಡಾಳ ಜನಾಂಗದ ಹಳ್ಳಿಯ ಜನರಲ್ಲಿ ಈ ಪದ್ಧತಿ ಈಗಲೂ ಇದೆ. ನಗರದಲ್ಲಿ ವಾಸಿಸುವ ಈ ಜನಾಂಗದಲ್ಲಿ ಈ ಪದ್ಧತಿ ಇಲ್ಲ. ಮಡಿಲು ತುಂಬುವ ಕ್ರಮ, ಗರ್ಭಿಣಿ ಸೊಸೆಯ ಸೆರಗಿಗೆ ಅತ್ತೆ ಕರಿಜೀರಿಗೆ, ಒಳ್ಳೆಮೆಣಸು, ವೃತ್ತಾಕಾರದ ಬೆಲ್ಲ (ವಾಲೆಬೆಲ್ಲ) ಇಷ್ಟನ್ನು ಸೇರಿಸಿ ಕಟ್ಟುತ್ತಾರೆ. ಬಳಿಕ ದೈವ ದೇವರಲ್ಲಿ ಆಶೀರ್ವಾದ ಬೇಡುತ್ತಾರೆ. ಹೀಗೆ ಮನೆ ಬಿಟ್ಟು ಹೋಗುವ ಹೊತ್ತಿನಲ್ಲಿ ಎರಡೂ ಕಡೆಯ ಹಿರಿಯರು, ಬಾಂಧವರು ಸೇರಿ ತಮ್ಮ ದೈವ ದೇವರುಗಳಿಗೆ ಪ್ರಾರ್ಥಿಸುತ್ತಾರೆ. ಹಿರಿಯರಲ್ಲಿ ಹಿರಿಯರಾದವರು ಎರಡೂ ಕುಟುಂಬದ ದೈವ ದೇವರುಗಳನ್ನು ಹೀಗೆಂದು ಪ್ರಾರ್ಥಿಸುತ್ತಾರೆ. “ದಿನ ತುಂಬಿದ ಬಸುರಿಯನ್ನು ತವರು ಮನೆಗೆ ಕಳುಹಿಸುವ ಸಮಯ, ನಾವು ನರ ಮಾನವರು, ನಮಗೊಂದು ತಿಳಿಯದು, ತಾವು ಸತ್ಯಗಳು, ನಿಮಗೆ ಈ ಲೋಕದ ವಿಚಾರಗಳೆಲ್ಲ ತಿಳಿದಿದೆ. ಬಸುರಿ ಹೆಂಗಸು ಮನೆ ಬಿಟ್ಟು ತೆರಳುವ ಸಮಯವಿದು, ಈ ಗಳಿಗೆ ವಿಷವೋ, ಅಮೃತವೋ ನಮಗೆ ತಿಳಿಯದು, ನೀವುಗಳು ಈ ಹೊತ್ತಿನಲ್ಲಿ ವಿಷ ಗಳಿಗೆ ಇದ್ದರೆ ಗರುಡ ಬಾಯಿಗೆ ಹಾಕಿ ಅಮೃತ ಗಳಿಗೆಯನ್ನು ನಮಗೆ ನೀಡಬೇಕು. ತುಂಬಿದ ನಂಜಿನ ಹೊರೆ ಹೊಟ್ಟೆಯಲ್ಲಿದೆ, ಗರ್ಭಿಣಿಗೆ ಹೆರಿಗೆ ಸಂದರ್ಭದಲ್ಲಿ ಒಂದು ಜೀವ ಹೋಗಿ ಎರಡಾಗುವ ಸಮಯ. ಈ ಲೋಕ ಬಿಟ್ಟು ಆ ಲೋಕಕ್ಕೆ ಹೋಗಿ ಬರುವ ಸಮಯ. ಈ ಸಮಯದಲ್ಲಿ ಅವಳಿಗಿರುವ ಸಾವು ನೋವುಗಳನ್ನು ತಾವು ಸ್ವೀಕರಿಸಿ, ನಂಜು ನೀರನ್ನು ಹೊರಗೆ ಹಾಕಿ ತಾಯಿ, ಮಗುವನ್ನು ಕಾಪಾಡುವ ಭಾರ ನಿಮಗೆ ಸತ್ಯಗಳಿಗೆ ಇರುವಂತದ್ದು. ಹೀಗೆ ಒಳ್ಳೆಯದು ಮಾಡಿಕೊಟ್ಟರೆ ಕಟೀಲು ಅಮ್ಮನಿಗೆ ಒಂದು ಹೂವಿನ ಪೂಜೆ, ಬಪ್ಪನಾಡ್‌ದ ಅಮ್ಮನಿಗೊಂದು ಚೆಂಡು ಮಲ್ಲಿಗೆ ನಮ್ಮ ಗ್ರಾಮ ದೈವರಾಜ ಬಬ್ಬುವಿಗೊಂದು ಕುಡ್ತೆ ಹಾಲು, ಕುಟುಂಬದ ದೈವ ಪಂಜುರ್ಲಿಗೆ ಒಂದು ಕೋಳಿ, ಗಣಪತಿ ದೇವರಿಗೆ ಪಂಚಗಜ್ಜಾಯ, ಮಂಜುನಾಥ ಸ್ವಾಮಿಗೊಂದು ರುದ್ರಾಭಿಷೇಕ ಆ ಮಗಳ ಕೈಯಿಂದ ಕೊಡುತ್ತೇವೆ” ಎಂದು ಪ್ರಾರ್ಥಿಸಿ ಗರ್ಭಿಣಿಯನ್ನು ಕಳುಹಿಸಿಕೊಡುತ್ತಾರೆ. ಕೊನೆಗೆ ಗರ್ಭಿಣಿ ಹಿರಿಯರೆಲ್ಲರ ಪಾದಕ್ಕೆ ನಮಸ್ಕರಿಸುತ್ತಾಳೆ. ನಂತರ ಗರ್ಭಿಣಿ ತನ್ನ ತವರೂರಿನ ಜನ, ಕುಟುಂಬಸ್ಥರನ್ನು ಕೂಡಿಕೊಂಡು ತವರಿಗೆ ಪ್ರಯಾಣ ಬೆಳೆಸುತ್ತಾಳೆ. ಪತಿ ಅವರ ಜೊತೆ ಹೋಗುವ ಹಾಗಿಲ್ಲ. ಈಗಿನ ಕಾಲದ ಹುಡುಗರು ಪತ್ನಿ ತವರು ತಲುಪಿದ ಅರ್ಧ ಗಂಟೆಯೊಳಗೆ ಇವರೂ ಅಲ್ಲಿರುತ್ತಾರೆ. ಬಾಂಧವ್ಯದ ನಂಟೇ ಹೀಗೆ.

## ಮಗುವಿಗೆ ತೊಟ್ಟಿಲು ಹಾಕುವುದು:

ಪುರಾತನ ದಾಖಲೆಗಳ ಪ್ರಕಾರ (ಇವು ಸರಕಾರದ ದಾಖಲೆಗಳಲ್ಲಿ ಅನುಭವಸ್ಥೆ ಹಿರಿಯರ ಅನುಭವದ ದಾಖಲೆಗಳು) ಸ್ತ್ರೀಯೊಬ್ಬಳು ಗರ್ಭ ಧರಿಸಿದ ದಿನದಿಂದ ಒಂಭತ್ತು ತಿಂಗಳು, ಒಂಭತ್ತು ದಿನ, ಒಂಭತ್ತು ಗಳಿಗೆಯಲ್ಲಿ ನವ ಶಿಶುವಿಗೆ ಜನ್ಮ ನೀಡುತ್ತಾಳೆ. ಮಗು ಜನನವಾದ ಗಳಿಗೆಯನ್ನು ಆಕೆಯ ತಂದೆ, ತಾಯಿ, ಗಂಡ ಎಲ್ಲರೂ ದಾಖಲಿಸಿಕೊಳ್ಳುತ್ತಾರೆ. ಬಳಿಕ ಪುರೋಹಿತರಿಗೆ ಆ ಗಳಿಗೆಯನ್ನು ನೀಡಿ ಜಾತಕ ಬರೆಸಿಕೊಳ್ಳುತ್ತಾರೆ. ಮುಂಡಾಳರಲ್ಲೂ ಈ ಪದ್ಧತಿ ಇದೆ. ಮಗುವಿಗೆ ತೊಟ್ಟಿಲು ಹಾಕುವುದನ್ನು ಈ ಜನಾಂಗದಲ್ಲಿ ಮಗು ಜನಿಸಿದ ಹದಿನಾರನೆಯ ದಿನದಲ್ಲಿ ನಡೆಸುತ್ತಾರೆ. ತವರು ಮನೆಯವರು ಅಳಿಯನ ಮನೆಯವರಿಗೆ, ಕುಟುಂಬಸ್ಥರಿಗೆ, ನೆರೆಹೊರೆಯವರಿಗೆ ಹೇಳಿಕೆ ನೀಡುತ್ತಾರೆ. ಈ ಆಚರಣೆಗೆ "ತೊಟ್ಟಿಲು ಹಾಕುವುದು" ಎನ್ನುತ್ತಾರೆ. ಈ ಕ್ರಮಕ್ಕೂ ಪುರೋಹಿತರಿಂದಲೇ ದಿನ, ಗಳಿಗೆ ಕೇಳಿ ತಿಳಿದುಕೊಳ್ಳಬೇಕು. ಮಗುವಿನ ತಂದೆಗೆ ಹಾಗೂ ತಾಯಿಯ ಕುಟುಂಬದ ಸರ್ವ ಸದಸ್ಯರಿಗೂ ಮಗು ಜನಿಸಿ ತೊಟ್ಟಿಲು ಹಾಕುವ ಹದಿನಾರು ದಿನಗಳು 'ಸೂತಕ'ವಿರುವುದರಿಂದ ದೇವಸ್ಥಾನ, ದೈವಸ್ಥಾನಗಳಿಗೆ ಅವರ್‍ಯಾರು ಹೋಗುವಂತಿಲ್ಲ. ಈ ತಾಣಗಳಿಗೆ ಹೋಗುವುದು ನಿಷೇಧ. ಹಿಂದಿನ ಕಾಲದಲ್ಲಿ ಮಗು ತೊಟ್ಟಿಲು ಹಾಕುವವರೆಗೆ ಆ ಎಳೆ ಶಿಶುವನ್ನು ಕಂಗಿನ ಹಾಲೆಯಲ್ಲಿ ಮಲಗಿಸುತ್ತಿದ್ದರು. ನಂತರ ಕಂಗಿನ ಹಾಲೆ ಹೋಗಿ ರಬ್ಬರ್ ಶೀಟುಗಳು ಬಂತು, ಈಗ ಕರ್ಲಾನ್ ಬೆಡ್ಡುಗಳು ವಿವಿಧ ವಿನ್ಯಾಸದ ಕೃತಕ ನುಸಿ ಬಲೆ ಇರುವ ಡೇರೆಗಳು ಬಂದಿವೆ.

ಮಗುವನ್ನು ತೊಟ್ಟಿಲು ಹಾಕುವ ದಿನ ತೊಟ್ಟಿಲನ್ನು ಹೂವು, ಬಣ್ಣ ಬಣ್ಣದ ಕಾಗದಗಳಿಂದ ಶೃಂಗಾರ ಮಾಡುತ್ತಾರೆ. ತೊಟ್ಟಿಲಿನ ಸುತ್ತ ಧೂಪ ಹಾಕುತ್ತಾರೆ. ಮಗುವನ್ನು ಸ್ನಾನ ಮಾಡಿಸಿ, ಹೊಸ ಬಟ್ಟೆ ಧರಿಸಿ ದೈವರಾಜ ಬಬ್ಬುವನ್ನು ಪ್ರಾರ್ಥಿಸಿ ಕರಿಗಂಧವನ್ನು ಮಗುವಿನ ಹಣೆಗೆ ಹಚ್ಚುತ್ತಾರೆ. ಬಳಿಕ ಪುರೋಹಿತರು ನೀಡಿದ ಸಮಯಕ್ಕೆ ಸರಿಯಾಗಿ ಮಗುವನ್ನು ತೊಟ್ಟಿಲಿಗೆ ಹಾಕುತ್ತಾರೆ. ಒಂದು ಇಡೀ ತೆಂಗಿನ ಕಾಯಿಯನ್ನು (ಸಿಪ್ಪೆ ತೆಗೆಯದ) ತೊಟ್ಟಿಲ ಅಡಿಭಾಗದಿಂದ ತಂದು ತೊಟ್ಟಿಲ ಮೇಲಿಂದ ಹಾಯಿಸುತ್ತಾರೆ. ಇದಕ್ಕೆ ತೊಟ್ಟಿಲ ಎದುರು ಬದುರು ಇಬ್ಬರು ಮಗುವಿಗೆ ತಾಯಿಯ ತಾಯಿ ಅಥವಾ ತಂದೆಯ ತಾಯಿ ನಿಲ್ಲಬೇಕು. ಹೀಗೆ ಮೂರು ಬಾರಿ ತೊಟ್ಟಿಲ ಅಡಿಯಿಂದ ಹಾಯಿಸಿ ತೊಟ್ಟಿಲ ಮೇಲ್ಭಾಗದಿಂದ ತೆಗೆದುಕೊಳ್ಳಬೇಕು. ಪುರೋಹಿತರು ಮಗುವಿನ ಜಾತಕ ಫಲಕ್ಕೆ ಸರಿಹೊಂದುವ ಅಕ್ಷರ ಅಥವಾ ಹೆಸರನ್ನು ಸೂಚಿಸಿರುತ್ತಾರೆ. ಈ ಸಂದರ್ಭದಲ್ಲಿ ಮಗುವಿನ ಅಜ್ಜಿ (ತಾಯಿಯ ತಾಯಿ) ಅವರೆಲ್ಲ ಈ ಮೊದಲೇ ನಿರ್ಧರಿಸಿರುವ ಹೆಸರನ್ನು ಮಗುವಿನ ಕಿವಿಯಲ್ಲಿ ಜೋರಾಗಿ (ಅಂದರೆ ಸಭೆಗೆ ಕೇಳುವಂತೆ) 3 ಬಾರಿ ಉಸುರಿ, ತೊಟ್ಟಿಲಿಗೆ ಮಗುವನ್ನು ಹಾಕುತ್ತಾರೆ. 'ಬೆಕ್ಕಿಗೆ ಹಲ್ಲು ಬರುವವರೆಗೆ ಬಾಳಿ ಬದುಕು', 'ಕಾಗೆಯ ಆಯುಷ್ಯವನ್ನು ಪಡೆದುಕೊಂಡು ಬಾಳಿ ಬದುಕು' ಎಂಬುದಾಗಿ ಮಗುವನ್ನು ಹಾರೈಸುತ್ತಾರೆ. ಬಳಿಕ ಅತಿಥಿಗಳಿಗೆ ಸಿಹಿ ಹಂಚುತ್ತಾರೆ. ಅವರು ಮಗುವಿಗೆ ಉಡುಗೊರೆ ನೀಡಿ, ಭೋಜನ ಸ್ವೀಕರಿಸಿ ತೆರಳುತ್ತಾರೆ. ಹಿಂದೆ ಮಗುವಿನ ತಂದೆ ತನ್ನ ಅತ್ತೆಯ ಕೈಯಲ್ಲಿ ಬಾಣಂತಿ ಸಾಕಲು ತಗುಲಿದ ಖರ್ಚನ್ನು ನೀಡುತ್ತಿದ್ದ. ಕಾಲ ಸಂದಿದೆ ಈಗ

ಇದ್ಯಾವುದೂ ಇಲ್ಲ, ಆದರೆ ಬಾಣಂತಿಯೇ ತನ್ನ ಗಂಡನಿಗೆ ಹೇಳಿಸಿ ಹಣ ವಸೂಲಿ ಮಾಡುತ್ತಾಳೆ. ತನ್ನ ಅಮ್ಮನಿಗೆ ನೀಡುತ್ತಾಳೆ.

**ಕಿವಿತೂತು ಮಾಡುವ ಆಚರಣೆ ('ಕೊಜಂಬು', 'ಕೆಬಿ ಕುತ್ತಾವುನಿ'):**

ತುಳುನಾಡ ಸಂಸ್ಕೃತಿಯಲ್ಲಿ ಹೆಣ್ಣು ಮಕ್ಕಳಿಗೆ ಕಿವಿ, ಮೂಗು ಚುಚ್ಚುವ, ಗಂಡು ಮಕ್ಕಳಿಗೆ ಕಿವಿ ಚುಚ್ಚುವ ಸಂಪ್ರದಾಯವಿದೆ. ಮುಂಡಾಳರಲ್ಲಿ ದೈವದ ಚಾಕರಿಗಳನ್ನು ಮಾಡಲಿರುವುದರಿಂದ ಗಂಡು ಮಕ್ಕಳಿಗೆ ಒಂಟಿ ಕಿವಿ ಚುಚ್ಚುವ ಕ್ರಮವಿದೆ. ದೈವ ದೇವರ ಕೆಲಸ ಮಾಡುವವರಿಗೆ ಕಿವಿಯಲ್ಲಿ ಒಂಟಿ ಟಿಕ್ಕಿ, ತಲೆಯಲ್ಲೊಂದು ಜುಟ್ಟು, ಕೈಯಲ್ಲೊಂದು ಕಡಗ ಬೇಕಾಗುತ್ತದೆ. ಇವುಗಳು ಇದ್ದಾಗಲೇ ದೈವ, ದೇವರ ಸ್ಥಾನಗಳಲ್ಲಿ ಗೌರವ. ಇವೆಲ್ಲವು ಗೌರವದ ಸಂಕೇತವೂ ಆಗಿದೆ.

ಒಂದು ಗೊತ್ತಾದ ಶುಭ ದಿನ ಶುಭ ಮುಹೂರ್ತದಲ್ಲಿ ಒಂದು ಕೇರಿಯಲ್ಲಿರುವ ಹೆಣ್ಣು ಮಕ್ಕಳಿಗೆ ಮೂಗು, ಕಿವಿ, ಗಂಡು ಮಕ್ಕಳಿಗೆ ಒಂಟಿ ಕಿವಿ ತೂತು ಮಾಡುತ್ತಾರೆ. ಈ ಕಾರ್ಯಕ್ಕೆ ಪುರೋಹಿತರು ಬೇಕಾಗಿಲ್ಲ. ಪಳಗಿದ, ಧೈರ್ಯದ ಹೆಣ್ಣು ಹಿರಿಜೀವ ಅಥವಾ ಗಂಡು ಹಿರಿಜೀವ ಸಾಕು. ಕಿವಿ, ಮೂಗು ತೂತು ಮಾಡುವ ದಿನ ಕೇರಿಯ ಜನರೆಲ್ಲ ಈ ಕಾಯಕ ನಡೆಯುವ ಸ್ಥಳದ ಸುತ್ತ ಜಮಾಯಿಸಿರುತ್ತಾರೆ. ಒಬ್ಬೊಬ್ಬರ ಸರದಿ ಬಂದಾಗಲೂ ನಡುಕ, ಮೈ ಪುಳಕ. ತೂತು ಮಾಡುವ ಹಿರಿಯರು ಒಂದು ಲೋಟದಲ್ಲಿ ಉಗುರುಬಿಸಿ ನೀರು, ಒಂದು ಚೂಪಾದ ಸೂಜಿ, ಸಕ್ಕರೆ ಮೀಠಾಯಿ ಅಥವಾ ಬೆಲ್ಲದ ತುಂಡು, ಒಂದು ಕಾಡಿಗೆ ಡಬ್ಬ, ಒಂದು ಕಡ್ಡಿ ಇವಿಷ್ಟನ್ನು ಇಟ್ಟುಕೊಂಡಿರುತ್ತಾರೆ. ಎಳೆಯದಾಗಿರುವಾಗಲೇ ಕಿವಿತೂತು, ಮೂಗು ತೂತು ಮಾಡಿದರೆ ಹೆಚ್ಚು ನೋವಾಗುವುದಿಲ್ಲ. ಒಂದು ಸೊಳ್ಳೆ ಕಡಿದಷ್ಟು ನೋವು ಮಾತ್ರ. ಆದರೆ ದೊಡ್ಡವರಾದ ಬಳಿಕ ಕಿವಿ ಮೂಗು ಚುಚ್ಚಿಸಿಕೊಂಡರೆ ಚರ್ಮ ಮಾಂಸ ಗಟ್ಟಿ ದಪ್ಪವಾಗಿರುವ ಕಾರಣ ಹೆಚ್ಚು ನೋವು ತಿನ್ನಲೇಬೇಕಾಗುತ್ತದೆ. ಇಲ್ಲಿ ಮೊದಲು ಕಿವಿ ಮೂಗು ಚುಚ್ಚಿ ತುಳಸಿಕಡ್ಡಿ ಅಥವಾ ಮೆಣಸಿನ ಚೊಟ್ಟನ್ನು ತೂತಿನೊಳಗೆ ಹಾಕುತ್ತಾರೆ. ಚರ್ಮ ಜೋಡಿಕೆಯಾಗಿ ತೂತು ಮತ್ತೆ ಮುಚ್ಚದಂತೆ ಮಾಡಲು ಈ ಉಪಾಯ. ಕೆಲವರು ಆಗಲೇ ಕಿವಿಯೋಲೆ, ಮೂಗಿನ ಬೊಟ್ಟು, ಒಂಟಿಯನ್ನು ಹಾಕುತ್ತಾರೆ. ಇನ್ನು ಕೆಲವರು ಸ್ವಲ್ಪದಿನದ ಬಳಿಕ ನೋವು, ಗಾಯ ಮಾಸಿದ ಬಳಿಕ ಬೆಂಡೋಲೆ, ಟಿಕ್ಕಿ, ಮೂಗುಬೊಟ್ಟನ್ನಿಡುತ್ತಾರೆ. ಮೂಗುಬೊಟ್ಟು ಸ್ತ್ರೀಯರಿಗೆ ಖಡ್ಡಾಯ. 'ಮುತ್ತೈದೆ' ಯ ಐದು ವಸ್ತುಗಳಲ್ಲಿ ಮೂಗುತಿಯೂ ಒಂದು. ಹಿಂದಿನ ಕಾಲದಲ್ಲಿ ಮದುವೆ ಸಂದರ್ಭ ಹೆಣ್ಣಿಗೆ ಮೂಗುತಿ ಇಲ್ಲದಿದ್ದುದ್ದಕ್ಕಾಗಿ "ಮುಂಡೆ ಹೆಣ್ಣನ್ನು ನಾನು ಮದುವೆ ಆಗಲಾರೆನೆಂದು ಮದುವೆ ಮಂಟಪ"ದಿಂದ ಹೊರಟು ಹೋದ ಅದೆಷ್ಟೋ ದೃಷ್ಟಾಂತಗಳಿವೆ. ಮೂಗುತಿ ಇಲ್ಲದವಳು 'ಮುಂಡೆ' ಎನಿಸಿಕೊಳ್ಳುತ್ತಾಳೆ. ಇದು ತುಳುನಾಡ ಸಂಸ್ಕೃತಿ. ಗಂಡ ಸತ್ತ ಆ ಗಳಿಗೆಯೇ ಹೆಂಡತಿ ಮೂಗುತಿಯನ್ನು, ಕಾಲುಂಗುರ, ಕುಂಕುಮ, ಕರಿಮಣಿ, ಹೂವು–ಕೈಬಳೆಯನ್ನು ಅವನ ಮೃತ ಶರೀರದ ಮೇಲಿಟ್ಟು ವಿಧವೆತನವನ್ನು ತನ್ನದಾಗಿಸಿಕೊಳ್ಳುತ್ತಾಳೆ. ಆದ್ದರಿಂದಲೇ ಹೆಣ್ಮಕ್ಕಳ ಮೂಗಿನ ಮೂಗುತಿಗೆ ಅಷ್ಟೊಂದು ಪ್ರಾಶಸ್ತ್ಯ. ಇದೀಗ ಕಂಪ್ಯೂಟರಿನ ಮೂಲಕ ತೂತು ಮಾಡುವ ಗನ್

ಶೂಟ್ ಬಂದಿದೆ. ದಿಢೀರ್ ತೂತು, ದಿಢೀರ್ ಚಿನ್ನ ಈಗಿನವರಿಗೆ ಕಾಯುವ ತಾಳೆಯೂ ಇಲ್ಲ, ಸಮಯವೂ ಇಲ್ಲ.

ಈಗ ಕಾಲ ಬದಲಾಗಿದೆ ತುಳುನಾಡ ಸಂಸ್ಕಾರ, ಸಂಸ್ಕೃತಿ ಅಳಿವಿನಂಚಿನಲ್ಲಿದೆ. ಇಂದು ಮದುವೆಯ ದಿನ ಕೃತಕ ಮೂಗುತಿಯನ್ನು ಧರಿಸಿ (ಆ ಗಳಿಗೆಗಷ್ಟೇ ಸೀಮಿತ) ಮದುವೆಯನ್ನು ಮುಗಿಸಿ ಬಿಡುವ ಹೆಣ್ಮಕ್ಕಳಿದ್ದಾರೆ. 'ಹೆಣ್ಮಕ್ಕಳೇ ಸ್ಟ್ರಾಂಗು ಗುರು' ಎನ್ನುವ ಹಾಗೆ ಕಾಲಾಯ ತಸ್ಮಯ್ ನಮಃ. ಕಾಲಕ್ಕೆ ತಕ್ಕಂತೆ ಬದಲಾಗಬೇಕು ಸರಿ, ಆದರೆ ತಾಯಿ ಬೇರಾದ ಈ ಮಣ್ಣಿನ ಸಂಸ್ಕೃತಿ ಸಂಸ್ಕಾರವನ್ನು ಮರೆಯಬಾರದು.

## ಕೈಹಿಡಿಯುವುದು (ಕೈಪತ್ತಾವುನಿ):

ಪ್ರಸ್ತುತವಾಗಿ ಈ ಪದ್ಧತಿ ಈಗ ಇಲ್ಲವೆಂದಲ್ಲ. ಈಗ ಭಿನ್ನ ರೀತಿಯಲ್ಲಿ ಈ ಪದ್ಧತಿ ಸಮಾಜದಲ್ಲಿದೆ. ಹಿರಿಯರ, ತಂದೆ–ತಾಯಿಗಳ, ಕುಟುಂಬಸ್ಥರ ಸಮ್ಮುಖದಲ್ಲಿ ಧಾರೆ ಎರೆದು ಪತಿ–ಪತ್ನಿಯಾಗುವುದು 'ಮದುವೆ'. ಕೇವಲ ಮನೆ ಮಂದಿ ಕುಟುಂಬಿಕರು, ಊರ ಗುರಿಕಾರರು, ಸೇರಿ ವಿಧುರ ಮತ್ತು ವಿಧವೆಯನ್ನು ಒಂದು ಸೇರಿಸುವುದಕ್ಕೆ 'ಕೈ ಹಿಡಿಯುವುದು' (ಕೈ ಪತ್ತವುನಿ) ಎನ್ನುವರು. ಮದುವೆಗೆ ಪುರೋಹಿತರು ಬೇಕು. 'ಕೈ ಹಿಡಿಯುವ' ವಿವಾಹಕ್ಕೆ ಪುರೋಹಿತರು ಬೇಡ, ಊರ ಗುರಿಕಾರರು ಸಾಕು. ಮುಂಡಾಳರಲ್ಲಿ ಈ ಹಿಂದೆ ಇಂತಹ ವಿವಾಹಗಳಿತ್ತು. ದಲಿತ, ದಲಿತೇತರಲ್ಲೂ ಇಂತಹ ಮದುವೆಗಳು ನಡೆಯುತ್ತಿದ್ದವು. ತುಳುನಾಡಿನಲ್ಲಿ ಸಾಗುವಳಿ ಹೆಚ್ಚು, ಹಣದ ಕಾರುಬಾರು ಹೆಚ್ಚಿರುವ ಮಂದಿಗೆ, ಆಸ್ತಿ ಅಂತಸ್ತು ಹೊಂದಿರುವ ವ್ಯಕ್ತಿಗೆ ಹಿಂದಿನ ಸಮಾಜದಲ್ಲಿ 'ಕೈ ಹಿಡಿಯುವುದಕ್ಕೆ' ಹೆಣ್ಣನ್ನು ಕರೆದು ಕೊಡುತ್ತಿದ್ದರು. ಆಗ ಬಹು ಪತ್ನಿತ್ವ ಜಾರಿಯಲ್ಲಿತ್ತು. 'ಕೈ ಹಿಡಿಯುವುದಲ್ಲದೆ' ಸಂಧಿಗೊಂದಿಗಳಲ್ಲಿ ಯಾರಿಗೂ ತಿಳಿಯದ ಅದೆಷ್ಟೋ ಕಡೆಗಳಲ್ಲಿ ಮತ್ತೆ 'ಇಟ್ಟುಕೊಳ್ಳುವ' ಸಂಬಂಧಗಳೂ ಇತ್ತು. ಆದರೂ ಧರ್ಮಪತ್ನಿ (ಧಾರೆದ ಬುಡೆದಿ) ಚಕಾರವೆತ್ತುತ್ತಿರಲಿಲ್ಲ. ಕಾರಣ ಆಕೆಗಾಗಲೀ, ಆಕೆಯ ಮಕ್ಕಳಿಗಾಗಲೀ ಉಂಡು, ಉಟ್ಟು, ಧರಿಸಲು ಪುರುಷ ಯಾವ ಕೊರತೆಯನ್ನು ಮಾಡಿರುವುದಿಲ್ಲ.

'ಕೈ ಹಿಡಿಯುವುದು' ಎಂದರೆ ಪುರೋಹಿತರಿಲ್ಲದೆಯೇ, ಊರಿನ ಗುರಿಕಾರ ವಿಧುರ–ವಿಧವೆಯರನ್ನು ಸಂಸಾರಕ್ಕೆ ಅಣಿಗೊಳಿಸುವುದು. ಅಂದರೆ ಒಂದು ಗೊತ್ತುಪಡಿಸಿದ ದಿನ, ಗಳಿಗೆಯಂದು (ರಾತ್ರಿ ನಡೆಯುವ ಆಚರಣೆ ಇದು) ವಿಧುರನ ಕಡೆಯಿಂದ ವಿಧವೆಗೆ ನೀಡಿದ ಸೀರೆ, ಕುಪ್ಪಸ ತೊಡಿಸಿ, ಚಿನ್ನವನ್ನು ಧರಿಸಿ ವಿಧವೆಗೆ ಮುತ್ತೈದೆಯರು ಶೃಂಗರಿಸುತ್ತಾರೆ. ನಂತರ ಅವರನ್ನು ಎದುರು ಬದುರು ನಿಲ್ಲಿಸಿ ಹಿರಿಯರು ಸೇರಿ, ವಿಧುರ–ವಿಧವೆಯರ ಕೈಹಿಡಿಸುತ್ತಾ ಪತಿ–ಪತ್ನಿ ಎಂದು ಘೋಷಿಸುತ್ತಾರೆ. ನಡು ಮನೆಯ ಬಾಗಿಲಿಗೆ ಒಂದು ಬಿಳಿ ಬಟ್ಟೆಯ ಪರದೆಯನ್ನು ಹಾಕುತ್ತಾರೆ. ಅಥವಾ ಇಬ್ಬರು ವ್ಯಕ್ತಿಗಳು ನಡುಮನೆಯ ಬಾಗಿಲ ಬಳಿ ನಿಂತು ಬಿಳಿ ವಸ್ತ್ರವನ್ನು ಬಾಗಿಲಿಗೆ ಅಡ್ಡವಾಗಿ ಹಿಡಿದು ನಿಲ್ಲಬೇಕು. ವಿಧುರನನ್ನು ಮನೆಯ ಒಳಭಾಗದಲ್ಲೂ, ವಿಧವೆಯನ್ನು ಮನೆಯ

ಹೊರಭಾಗದಲ್ಲೂ ನಿಲ್ಲಿಸುತ್ತಾರೆ. ಮತ್ತು ಅವರಿಂದ ಪ್ರಮಾಣವನ್ನು ಹೇಳಿಸುತ್ತಾರೆ. ಮೊದಲು ಪುರುಷ, 'ಎಂತಹ ಕಷ್ಟ ಬಂದರೂ, ನಿನ್ನ ಕಷ್ಟ ಸುಖದಲ್ಲಿ ನಾನು ಸಮಾನ ಭಾಗೀದಾರನಾಗಿ, ಜೀವನಪೂರ್ತಿ ನಿನ್ನೊಂದಿಗೆ ಇದ್ದು, ಹಾಲು–ಜೇನು ಸೇರಿದಂತೆ ಬಾಳ್ವೆ ನಡೆಸುವೆನು. ಬದುಕಿನಲ್ಲಿ ಯಾವ ಅಡ್ಡಿ ಆತಂಕಗಳು ಬಂದರೂ ನಾನು ನಿನ್ನ ಕೈ ಬಿಡಲಾರೆ' ಎಂದು ದೈವ ದೇವರನ್ನು ಸಾಕ್ಷಿ ಮಾಡಿ ಪ್ರಮಾಣ ವಚನ ನೀಡಬೇಕು. ಅಂತೆಯೇ ಹೆಣ್ಣು ಕೂಡಾ 'ಯಾವ ತರಹದ ಕಷ್ಟ–ಕೋಟಲೆಗಳು ಬಂದರೂ ನಿಮ್ಮ ಬೆನ್ನು ಬಿಡುವುದಿಲ್ಲ, ನಿಮ್ಮ ಕಷ್ಟ ಸುಖದಲ್ಲಿ ನಾನು ಭಾಗಿಯಾಗಿ, ನೀವು ಬೆತ್ತ ಹಿಡಿದ್ರೆ, ನಾನು ಗೆರಟೆ ಹಿಡಿಯುವೆನು, ಬದುಕಿನ ಕೊನೇ ತನಕ ನಿಮ್ಮೊಂದಿಗಿದ್ದು, ನಿಮ್ಮ ಬೆನ್ನು ಬಿಡೆನು' ಎಂದು ವಚನ ನೀಡುತ್ತಾಳೆ. ಬಳಿಕ ಹೆಣ್ಣಿನ ಕೊರಲಿಗೆ ಗಂಡು, ಗಂಡಿನ ಕೊರಳಿಗೆ ಹೆಣ್ಣು ಹೂಮಾಲೆ ಹಾಕಿಕೊಳ್ಳುವುದರ ಮೂಲಕ ಅವರು ಪತಿಪತ್ನಿಯರಾಗುತ್ತಾರೆ. ಇದಕ್ಕೆ ಹೆಚ್ಚು ಜನರನ್ನು ಸೇರಿಸುವುದಿಲ್ಲ, ಬಂದ ಅತಿಥಿಗಳಿಗೆ ಊಟೋಪಚಾರ ನಡೆಯುತ್ತದೆ. ಅಂದಿನಿಂದ ಆ ವಿಧವೆಯ ಜವಾಬ್ದಾರಿಯೆಲ್ಲ ಆ ವಿಧುರನದಾಗಿ ಪತಿ–ಪತ್ನಿಯರಾಗಿ ಬಾಳುತ್ತಾರೆ.

ಈಗ ಸಮಾಜದಲ್ಲಿ ಈ ಪದ್ಧತಿ ಚಾಲ್ತಿಯಲ್ಲಿಲ್ಲ, ಬಹುಪತ್ನಿತ್ವಕ್ಕೆ ಕಾನೂನು ರೀತಿಯಲ್ಲೇ ನಿಷಿದ್ಧತೆ ಇದೆ. ಮನೆ ಮಂದಿಯ ಒಪ್ಪಿಗೆ ಪಡೆದು ವಿಧುರ–ವಿಧವೆ ಎರಡನೇ ಮದುವೆ ಆಗಬಹುದು. ಆದಾಗ್ಯೂ ಪತಿ–ಪತ್ನಿ ಜೀವಂತವಾಗಿದ್ದು ಎರಡನೆಯ ಮದುವೆಗೆ ಬಯಸಿದ್ರೆ ಅವರಿಬ್ಬರು ಇಚ್ಛಾಪೂರ್ವಕವಾಗಿ ವಿಚ್ಛೇದನ ಪಡೆದಿರಬೇಕು. ಭಾರತೀಯ ಕಾನೂನು ಸಂಹಿತೆಯ ಪ್ರಕಾರ ಹೆಂಡತಿ ಇದ್ದೂ ಅಥವಾ ಗಂಡ ಇದ್ದೂ ಅಕ್ರಮವಾಗಿ ಎರಡನೆಯ ಮದುವೆ ಆದರೆ ಅದು ಕಾನೂನು ಬಾಹಿರವಾಗುತ್ತದೆ. ಅಕ್ರಮ ಸಂಬಂಧವಾಗುತ್ತದೆ. ಕಾನೂನಿನ ಹದ್ದಿನ ಕಣ್ಣನ್ನು ತಪ್ಪಿಸಿ, ಈ ರೀತಿ ಅಕ್ರಮ ಸಂಸಾರ ಮಾಡಿದರೆ ಅವರು ಜೈಲು ಸಜೆಯನ್ನು ಅನುಭವಿಸಬೇಕಾಗುತ್ತದೆ. ಇಂದು ಈ ಬಹುಪತ್ನಿತ್ವ ಮುಂಡಾಳ ಜನಾಂಗದಲ್ಲೂ ಕಣ್ಮರೆಯಾಗಿದೆ.

## ಮರಣ (ಅಪರ ಕ್ರಿಯೆ):

ನಾನಾ ಕಾರಣಗಳಿಂದ ಲೌಕಿಕ ಜಗತ್ತನ್ನು ತೊರೆದು ಅಲೌಕಿಕ ಜಗತ್ತಿಗೆ ತೆರಳುವ ಈ ಸ್ಥಿತಿಯೇ ಮರಣ. 'ಸತ್ತಾಗ' ಮತ್ತು ಸತ್ತ ನಂತರದ ಕ್ರಿಯೆಗಳ ಬಗ್ಗೆ ತುಳುವರಿಗೆ ಅನೇಕ ನಂಬಿಕೆಗಳಿವೆ. ಬಹುಶ: ಇಂತಹ ನಂಬಿಕೆಗಳೇ ತುಳುನಾಡಿನ ಜನರು ಆಧ್ಯಾತ್ಮ ಲೋಕದೆಡೆ ಚಿಂತಿಸುವಂತೆ ಮಾಡಲು ಕಾರಣವೂ ಆಗಿದೆ ಮನುಷ್ಯ ತಾನು ಜೀವಿತದಲ್ಲಿರುವಷ್ಟು ದಿನವೂ ಆಧ್ಯಾತ್ಮದ ಬಗ್ಗೆ ಚಿಂತಿಸುವುದಿಲ್ಲ. ಬಹುಶ: ಅವನ ಮನಸ್ಸಿನಲ್ಲಿ ಸಾವಿನ ಬಗ್ಗೆ ಇರುವ ಭಯ ಇದಕ್ಕೆ ಕಾರಣವಾಗಿರಬಹುದು.

ತುಳುವರ ನಂಬಿಕೆಗಳ ಪ್ರಕಾರ ಜೀವಿತದಲ್ಲಿರುವಾಗ ನಮಗೆ ಜನ್ಮ ನೀಡಿರುವ ತಂದೆ ತಾಯಿಗಳಿಗೆ, ಹಿರಿಯರಿಗೆ, ಕಿರಿಯರು ಕೈ ಎತ್ತಿದರೆ ಮರಣಿಸಿದಾಗ ಚಿತೆಯಲ್ಲಿರುವ ಹೆಣದ ಕೈಕಾಲುಗಳು ಮೇಲ್ಮುಖವಾಗಿ ನೆಟ್ಟಗೆ ನಿಲ್ಲುತ್ತದಂತೆ, ಈ ಚಿಂತನೆಗಳು ಮಕ್ಕಳಿಗೆ ಅನ್ವಯಿಸುತ್ತದೆ.

ಅದೆಷ್ಟೋ ನಂಬಿಕೆಗಳು ಮುಂಡಾಳರಲ್ಲೂ ಇದೆ. ಪತ್ನಿಗಿಂತ ಮೊದಲು ಪತಿ ಮರಣಿಸಿದರೆ, ಕುಂಕುಮ ಅಳಿಸುತ್ತಾರೆ, ಮೊದಲೇ ಮುಡಿಸಿದ ಒಂದು ಚೆಂಡು ಮಲ್ಲಿಗೆ ಹೂವನ್ನು ಕೀಳುತ್ತಾರೆ ಅಥವಾ ಹೂವಿನ ದಂಡೆಯನ್ನು ತೆಗೆದು ಮರಣಿಸಿದ ಪತಿಯ ದೇಹದ ಮೇಲಿಡುತ್ತಾರೆ. ಗಂಡ ಸತ್ತ ಹೆಂಗಸೇ ಈ ಕಾರ್ಯವನ್ನು ಮಾಡಬೇಕೆಂಬ ನಿಯಮವಿದೆ. ಕೈತುಂಬಾ ಗಾಜಿನ ಬಳೆ ಹಾಕಿಸಿರುತ್ತಾರೆ. ಅದನ್ನೂ ಒಂದೂ ಬಿಡದೆ ತುಂಡರಿಸಿ ಪುಡಿ ಮಾಡುತ್ತಾರೆ. ಕಾಲುಂಗುರ, ಕರಿಮಣಿ, ಮೂಗುತಿ ತೆಗೆದು ಒಂದು ಬಟ್ಟೆಯಲ್ಲಿ ಸುತ್ತಿ ಪತಿಯ ಹೆಣದ ಎದೆಯ ಮೇಲಿಡುತ್ತಾರೆ. ಸ್ಮಶಾನಕ್ಕೆ ಹೆಣವನ್ನು ಒಯ್ಯುವ ಮುನ್ನ ತುಳಸೀ ನೀರನ್ನು ಹೆಣದ ಬಾಯಿಗೆ ಪ್ರತಿಯೊಬ್ಬರೂ ಹಾಕುತ್ತಾರೆ. ಗಂಡಸರು ತುಳಸಿ ನೀರನ್ನು ಸ್ಮಶಾನದಲ್ಲಿ ನೀಡುತ್ತಾರೆ. ಮೃತ ದೇಹವನ್ನು ಕೊಂಡೊಯ್ಯುವ ಮುನ್ನ ತಂದೆ ತಾಯಿ ಸತ್ತರೆ ಗಂಡು ಮಕ್ಕಳು, ಹೆಣ್ಣು ಹೆಂಗಸು ಸತ್ತರೆ ಮಗ ಅಥವಾ ಅಣ್ಣ ತಮ್ಮಂದಿರು ತಲೆ ಮೇಲೆ ಬಿಳಿಯ ಬಟ್ಟೆ ಹಾಕಬೇಕು. ಗ್ರಾಮದ ಗುರಿಕಾರ ಚಿಕ್ಕ ಹಸಿ ಮಡಕೆಯಲ್ಲಿ ತುಂಬಿಸಿಟ್ಟ ತುಳಸೀ ನೀರಲ್ಲಿ ತಂದಂತಹ ಬಿಳಿಬಟ್ಟೆಯನ್ನು ಅದ್ದಿ ಸೇರಿದ ಕುಟುಂಬಸ್ಥರಲ್ಲಿ, ನೆರೆದ ಜನರಲ್ಲಿ 'ಸರ್ವೆರ್‌ಡಲಾ ನೀರ್‌ಕುಂಟು ಪಾಡುವೆ ಪಂದ್ ಕೆನೋನುವೆ'ಎಂದು ಅಪ್ಪಣೆ ಕೇಳಿ ಬಳಿಕ ಆ ಗಂಡು ಮಕ್ಕಳ ತಲೆ ಮೇಲೆ ಬಿಳಿ ಬಟ್ಟೆಯನ್ನು ಹಾಕುತ್ತಾರೆ. ಸ್ಮಶಾನಕ್ಕೆ ತೆರಳುವ ಮುನ್ನ ಹೆಣವನ್ನು ಸ್ನಾನ ಮಾಡಿ ಅಲಂಕರಿಸುತ್ತಾರೆ.

ಸ್ಮಶಾನಕ್ಕೆ ಒಯ್ದು ಬಳಿಕ ಹೆಣದ ಮೇಲೆ ಹೇರಲ್ಪಟ್ಟ ಹೂವು, ವಸ್ತ್ರಗಳನ್ನು ಒಂದು ಬದಿಗಿಡುತ್ತಾರೆ. ಅಥವಾ ಅಲ್ಲಿರುವ ಸ್ಮಶಾನ ಕಾಯುವವರಿಗೆ ಕೊಡುತ್ತಾರೆ. ಅಥವಾ ಇನ್ಯಾರಾದರೂ ಅದರ ಅವಶ್ಯಕತೆ ಇರುವ ಕೆಳವರ್ಗದವರಿಗೆ ಅಥವಾ ಭಿಕ್ಷುಕರಿಗೆ ವಸ್ತ್ರಗಳನ್ನು ನೀಡುತ್ತಾರೆ. ಆದರೆ ಕರಿಮಣಿ, ಮೂಗುತಿ, ಕಾಲುಂಗುರದ ಜವಾಬ್ದಾರಿಯನ್ನು ಮಾತ್ರ ಮನೆಯ ಗಂಡಸರಿಗೆ ಕೊಟ್ಟಿದ್ದು, ಚಿತೆಯ ಮೇಲೆ ದೇಹವನ್ನಿರಿಸಿ ಕೊನೆ ಗಳಿಗೆಯ ಪ್ರಾರ್ಥನೆಯನ್ನು ಊರಿನ ಅಥವಾ ಗ್ರಾಮದ ಹಿರಿಯರು ಮಾಡುತ್ತಾರೆ. ತದನಂತರ ಚಿತೆಯ ಮೇಲಿರಿಸಿ ಹೋದ ಮೇಲೆ ಕಟ್ಟಿಗೆಯನ್ನು ಪೇರಿಸುವಾಗ ಈ ಚಿನ್ನವನ್ನು ಜಾಗರೂಕತೆಯಿಂದ ಮನೆಯ ಸದಸ್ಯರೊಬ್ಬರು ತೆಗೆದಿಡುತ್ತಾರೆ. ಇತ್ತ ಸ್ಮಶಾನಕ್ಕೆ ಹೆಣ ಕೊಂಡೊಯ್ದದಂತೆ ಮನೆ ಮಂದಿ ಹಾಗೂ ಕುಟುಂಬಸ್ಥರು ತಲೆಗೆ ಸ್ನಾನ ಮಾಡಿ ಮಡಿ ಉಟ್ಟು ಸ್ಮಶಾನದಲ್ಲಿ ಹೆಣ ಉರಿಸಿ ಬರುವವರೆಗೆ ಮನೆಯ ಹೊರಗೆ ನಿಲ್ಲಬೇಕು. ಕುಟುಂಬದ ಇತರ ಸದಸ್ಯರು ಮನೆಯನ್ನು ಗುಡಿಸಿ ಒರೆಸಿ ಶುದ್ಧಗೊಳಿಸುತ್ತಾರೆ. ಪಾತ್ರೆ ತೊಳೆದು, ತುಂಬಿಸಿಟ್ಟ ನೀರನ್ನು ಚೆಲ್ಲಿ ಹಂಡೆ, ಪಾತ್ರೆಗಳನ್ನು ಮತ್ತೆ ತೊಳೆದು ಹೊಸ ನೀರು ತುಂಬಿಸಿಡುತ್ತಾರೆ. ಮುಂಡಾಳರಲ್ಲಿ ಸ್ಮಶಾನಕ್ಕೆ ಹೆಣ್ಣು ಹೆಂಗಸರು ಹೋಗುವುದಿಲ್ಲ, ಇದು ಖಡ್ಡಾಯ.

ಸ್ಮಶಾನದಿಂದ ಹೆಣ ಸುಟ್ಟು ಬೂದಿಯಾಗುವವರೆಗೆ ಯಾರೂ ವಾಪಸ್ಸು ಬರಬಾರದು, ಬಂದ್ರೆ ಆ ಚಿತೆಯೊಳಗೆ ಗಣಗಳು ಸೇರುತ್ತವಂತೆ. ಉರಿದು ಬಸ್ಮವಾಗುವವರೆಗೆ ಇದ್ದ ಜನ ಬಳಿಕ ಮನೆಗೆ ಬಂದು ಸ್ನಾನ ಮಾಡಿ ಮಡಿಯಾಗುತ್ತಾರೆ. ಗ್ರಾಮದವರಿದ್ದರೆ ಗ್ರಾಮದ ಒಬ್ಬ ಹಿರಿಯ ಸದಸ್ಯ (ಗ್ರಾಮದ ಗುರಿಕಾರ), ಗ್ರಾಮವಿಲ್ಲದ ಕಡೆ, ಸೂತಕವಿಲ್ಲದ ಕುಟುಂಬದ ಸದಸ್ಯ ಶುದ್ಧೀಕರಣ ಮಾಡಬೇಕು. ಇದನ್ನು 'ತಲಿಪು' ಎನ್ನುವರು, ಇದಕ್ಕೆ ಒಂದು ಸೀಯಾಳ, ಮೂರು ಅಥವಾ ಐದು ಹೀಗೆ ಬೆಸ ಸಂಖ್ಯೆಯಲ್ಲಿ ಮಾವಿನ ಎಲೆಗಳು ಅಗತ್ಯ. ಈ ಸದಸ್ಯ ಕುಟುಂಬದವರನ್ನು 'ತಲಿಪು

ನೀರು ನೀಡಿ ಶುದ್ಧಿಗೊಳಿಸುವೆನು' ಎಂದು ಹೇಳಿ ಮಡಿಯುಟ್ಟ ಅಂಗಳದಲ್ಲಿ ಸೇರಿರುವ ಕುಟುಂಬಸ್ಥರನ್ನೆಲ್ಲ ಶುದ್ಧಿಗೊಳಿಸುತ್ತಾನೆ. ಬಳಿಕ ಮನೆಯೊಳಗೆ ಹೋಗಿ ಇಡೀ ಮನೆಯ ಒಳಗೆ ಹೊರಗೆ ಸೀಯಾಳದ ನೀರಿನಲ್ಲಿ ಮಾವಿನ ಎಲೆಯನ್ನು ಅದ್ದಿ, ಅದನ್ನು ಅವರೆಲ್ಲರ ಮೇಲೆ ಸಿಂಪಡಿಸುವ ಮೂಲಕ ಶುದ್ಧೀಕರಣ ಕಾರ್ಯ ನಡೆಸುತ್ತಾನೆ. ಬಳಿಕ ಬಂದವರಲ್ಲಿ ಹಿರಿಯಾಕೆಯೊಬ್ಬರು ಮನೆಯ ಎಡಭಾಗದಲ್ಲಿ ಅಗ್ಗಿಷ್ಟಿಕೆ ಹಾಕಿ, ದೊಡ್ಡ ಬಾಯಿ ಇರುವ ಅಲ್ಯುಮಿನಿಯಂ ದೊಡ್ಡ ಮಡಕೆಯಲ್ಲಿ ಎಲ್ಲರಿಗಾಗುವಷ್ಟು ಗಂಜಿ ಬೇಯಿಸುತ್ತಾರೆ. ಕೆಲವೆಡೆ ಒಣಮೆಣಸಿನಿಂದ, ಕೆಲವರು ಹಸಿಮೆಣಸಿನಿಂದ ಚಟ್ನಿಯನ್ನು ತಯಾರಿಸಿ, ಗಂಜಿ, ಚಟ್ನಿ ತಯಾರಿಸಿ ದು:ಖದ ಊಟ ('ದು:ಖದ ವನಸ್') ವನ್ನು ಎಲ್ಲರೂ ಮಾಡುತ್ತಾರೆ. ಬಳಿಕ ಅವರವರ ಮನೆಗೆ ತೆರಳುತ್ತಾರೆ. ಕುಟುಂಬಿಕರು ಆ ಮನೆಯಲ್ಲಿ ಉಳಿದುಕೊಳ್ಳುತ್ತಾರೆ. ಇತ್ತೀಚೆಗೆ ಜನರಿಗೆ ಸಮಯದ ಅಭಾವವಿರುವುದರಿಂದ ದು:ಖದ ಊಟಕ್ಕೂ ನಿಲ್ಲುವವರು ಕಡಿಮೆ. ದು:ಖದ ಮನೆಯಲ್ಲಿ ಸತ್ತ ದಿನದಿಂದ ಉತ್ತರಕ್ರಿಯೆಯವರೆಗೆ ಮನೆ ಮಂದಿ ಅಕ್ಕಿಯಿಂದ ತಯಾರಿಸಿದ ತಿಂಡಿಗಳು, ಮೀನು-ಮಾಂಸಗಳನ್ನು ಸೇವನೆ ಮಾಡಬಾರದು ಹಾಗೂ ಆವರೆಗೆ ಬಾಳೆ ಎಲೆ ಬಳಸುವಂತಿಲ್ಲ. ಈ ಮಂದಿ ಉತ್ತರಕ್ರಿಯೆಯವರೆಗೆ ಭೂತಸ್ಥಾನ, ದೇವಸ್ಥಾನಗಳಿಗೆ ಹೋಗುವಂತಿಲ್ಲ.

ಮುಂಡಾಳರಲ್ಲಿ ವ್ಯಕ್ತಿ ಮರಣಿಸಿದ ದಿನದಿಂದ ಮೂರನೆಯ ದಿನ ಸ್ಮಶಾನದಿಂದ ಬೂದಿ ತರುವ ಕ್ರಮವಿದೆ. ಮನೆಯ ಗಂಡಸರು, ಕುಟುಂಬ, ಗ್ರಾಮದ ಮಂದಿ ಸ್ಮಶಾನಕ್ಕೆ ಹೋಗಿ ಸತ್ತ ವ್ಯಕ್ತಿಯ ಬೂದಿಯನ್ನು ತರಬೇಕು. ಅದಕ್ಕೆ ಮೊದಲು ಸತ್ತ ವ್ಯಕ್ತಿಗೆ ಇಷ್ಟವಾದ ತಿಂಡಿಯನ್ನು ಪಾನೀಯವನ್ನು ಅಲ್ಲಿಟ್ಟು ಪ್ರಾರ್ಥಿಸಿ, ಕಾಗೆ ಅದನ್ನು ಮುಟ್ಟಿದ ಬಳಿಕ ಬೂದಿಯನ್ನು ಒಂದು ಶುದ್ಧ ಬಿಳಿ ಬಟ್ಟೆಯಲ್ಲಿ ಕಟ್ಟಿ ತರುತ್ತಾರೆ. ಈ ಕೆಲಸಕ್ಕೂ ಗ್ರಾಮದ ಹಿರಿಸದಸ್ಯನೇ ಅಗತ್ಯವಾಗಿ ಬೇಕು. ಬೂದಿ ತಂದ ದಿನ ಬಂದವರೆಲ್ಲ ಸೇರಿ ಉತ್ತರಕ್ರಿಯೆಗೆ ದಿನ ನಿಗದಿಪಡಿಸುತ್ತಾರೆ. ಬೂದಿ ತಂದ ದಿನದಿಂದ ಸತ್ತ ವ್ಯಕ್ತಿಗೆ ಸಂಬಂಧದಲ್ಲಿ ಮಾವ ಅನ್ನಿಸಿಕೊಂಡವರು ಮನೆಯ ಖಾಲಿ ಇರುವ ಕೋಣೆಯಲ್ಲಿ ಪೂರ್ವ ಅಥವಾ ಪಶ್ಚಿಮಾಭಿಮುಖವಾಗಿ ಒಂದು ಮಣೆ ಮೇಲೆ ಒಂದು ತಂಬಿಗೆ ನೀರಿಟ್ಟು, ದೀಪ ಬೆಳಗಬೇಕು. ಬೆಳಿಗ್ಗೆ ಹಾಗೂ ಸಾಯಂಕಾಲ ಎರಡು ಹೊತ್ತು ದೀಪ ಇಡಬೇಕು. ಉತ್ತರ ಕ್ರಿಯೆ ನಡೆಯುವ ದಿನದವರೆಗೆ ಪ್ರತಿದಿನ ಬೆಳಿಗ್ಗೆ ತಂಬಿಗೆಯ ನೀರು ಬದಲಾಯಿಸಬೇಕು. ಈ ಕಾರ್ಯವನ್ನು ಮಾಡುವ ವ್ಯಕ್ತಿ ಶುದ್ಧದಲ್ಲಿರಬೇಕು. ಮಧು-ಮಾಂಸ ಸೇವಿಸಬಾರದು, ದಿನದಲ್ಲಿ ಒಪ್ಪತ್ತು ಊಟ ಮಾಡಬೇಕು.

ಮುಂಡಾಳರಲ್ಲಿ ಉತ್ತರಕ್ರಿಯೆ ಮಾಡುವ ದಿನಗಳಲ್ಲಿ ಕೆಲವು ನಿಯಮವಿದೆ. ಮದುವೆಯಾಗದ ಬಾಲಕ, ಬಾಲಕಿ ತೀರಿದರೆ 11 ದಿನದಲ್ಲಿ ಉತ್ತರಕ್ರಿಯೆ ನಡೆಸಬೇಕು. ಹಿರಿಯರಿದ್ದು ಕಿರಿಯರು ತೀರಿದರೆ ಉಳಿದಂತೆ 13 ರಲ್ಲಿ ಈ ಕ್ರಿಯೆ ನಡೆಯಬೇಕು. ಉತ್ತರ ಕ್ರಿಯೆಯ ಹಿಂದಿನ ರಾತ್ರಿ ಬೇಸರದ ಊಟ (ಮುರಿಯದ ವನಸ್) ಮಾಡಬೇಕು, (ಈ ದಿನ ಸಂಜೆ ವ್ಯಕ್ತಿಗೆ ಸಂಬಂಧಪಟ್ಟ ಗಂಡು ಮಕ್ಕಳು ಮೀಸೆ ಅಥವಾ ತಲೆಕೂದಲು ಬೋಳಿಸಬೇಕು) ಈ ದಿನ ಇಲ್ಲಿ ಸೇರಿದ ಕುಟುಂಬಸ್ಥರು, ಮಹಿಳೆಯರು ಒಂದು ಕೋಣೆಯ ಚಾಪೆ ಮೇಲೆ ಕುಳಿತು ಮುರಿಯ ಇಡುತ್ತಾರೆ. ಈ ಪದ್ಧತಿ ಹಿಂದೆ ಇದ್ದು ಈಗಿನವರಲ್ಲಿ ಈ ಪದ್ಧತಿ ಇಲ್ಲ. ಆದರೆ, ಉತ್ತರಕ್ರಿಯೆಯ

ದಿನದಂದು ಮುಂಜಾನೆ ಪಿಂಡ ಪ್ರದಾನದ ಬಳಿಕ ಮನೆಗೆ ಬಂದ ಕುಟುಂಬಸ್ಥರು ಬೂದಿ ಕುಂಬಳಕಾಯಿ, ಬಾಳೆಕಾಯಿ ಹಾಗೂ ಬಾಳೆದಿಂಡು ಇವಿಷ್ಟನ್ನು ಹೊಸ್ತಿಲ ಸರಿ ಎದುರುಭಾಗದದಲ್ಲಿ ಕೆಳಗೆ ಅಂಗಳದಲ್ಲಿ ಒಂದು ಚಾಪೆ ಹಾಕಿ ಅದರ ಮೇಲಿಡುತ್ತಾರೆ. ಗ್ರಾಮದ ಹಿರಿಯ, ಕುಟುಂಬದ ಹಿರಿಯರು ಮೊದಲು ದೈವ-ದೇವರನ್ನು ಪ್ರಾರ್ಥಿಸಿ ಆ ವಸ್ತುಗಳನ್ನು ಕತ್ತಿಯಿಂದ ತುಂಡರಿಸುತ್ತಾರೆ. ಬಳಿಕ ಸತ್ತ ವ್ಯಕ್ತಿಗೆ ಸಂಬಂಧಪಟ್ಟ ವ್ಯಕ್ತಿಗಳು ಆ ವಸ್ತುಗಳನ್ನು ಕೊಯ್ಯುತ್ತಾರೆ. ಕೊಯ್ದದಂತಹ ಈ ಮೂರು ವಸ್ತುಗಳನ್ನು ಸೇರಿಸಿ ಸಾಂಬಾರು ಮಾಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಉತ್ತರಕ್ರಿಯೆಯು ದೇವಸ್ಥಾನಗಳ ಹೊರವಲಯದ ಸಭಾಂಗಣದಲ್ಲಿ ನಡೆಯುವುದರಿಂದ ಈ ಮೂರು ವಸ್ತುಗಳಿಂದ ತಯಾರಿಸಿದ ಖಾದ್ಯವನ್ನು ಬಾಳೆ ಎಲೆಗೆ ಬಡಿಸುವ ಸಂಪ್ರದಾಯವಿರುತ್ತದೆ. ಈ ಮೂರು ವಸ್ತುಗಳನ್ನು ಸತ್ತ ವ್ಯಕ್ತಿಯ ಮನೆಯವರು, ವ್ಯಕ್ತಿ ಸತ್ತ ದಿನದಿಂದ ಬೇಸರದ ಊಟ ಮುಗಿಸುವವರೆಗೆ ತಮ್ಮ ನಿತ್ಯದ ಅಡುಗೆಗೆ ಬಳಸಬಾರದು. ಕುಟುಂಬದವರಿಂದ ತುಂಡು ಮಾಡಲ್ಪಟ್ಟ ಬಾಳೆದಿಂಡು, ಬಾಳೆಕಾಯಿ, ಬೂದು ಕುಂಬಳಕಾಯಿಯ ಸಾಂಬಾರನ್ನು ಅನ್ನದೊಂದಿಗೆ ಬಂದ ಜನರಿಗೆ ಭೋಜನದ ವೇಳೆ ಬಡಿಸುತ್ತಾರೆ. ಬಂದವರು ಸಾವಿನ ಊಟ (ಸಾವುದ ವನಸ್) ಮಾಡಿ ತೆರಳುತ್ತಾರೆ.

ಕುಟುಂಬಸ್ಥರು ಉತ್ತರಕ್ರಿಯೆಗೆ 'ಪುದೆ' ನೀಡುವ ಕ್ರಮ ಮುಂಡಾಳರಲ್ಲಿದೆ. 'ಪುದೆ' ಎಂದರೆ ಬುಟ್ಟಿಯಲ್ಲಿ ಬೂದುಕುಂಬಳ, ಬಾಳೆಕಾಯಿ, ಬಾಳೆದಿಂಡು, ಬಾಳೆಎಲೆ, ಉಳಿದಂತೆ ಇತರ ತರಕಾರಿಗಳನ್ನು ಕೊಡುವುದು. ಪುರಾತನ ಕಾಲದಲ್ಲಿ ಉತ್ತರಕ್ರಿಯೆಯನ್ನು ಮನೆಯಲ್ಲೇ ಮಾಡುತ್ತಿದ್ದರು. ಕುಟುಂಬಸ್ಥರಿಂದ ಬಂದ 'ಪುದೆ'ಯೇ ಅಡುಗೆಗೆ ಸಾಕಾಗುತ್ತಿತ್ತು. ಈಗ ಇದನ್ನು ದೇವಸ್ಥಾನದ ಪಕ್ಕದ ಹಾಲ್‌ಗಳಲ್ಲಿ ನಡೆಸುತ್ತಾರೆ. ಪುರೋಹಿತರೇ ಆಹಾರ ತಯಾರಿಸಿಸುವುದರಿಂದ ಮಡಿ-ಮೈಲಿಗೆ ಕಾರಣದಿಂದ ಮುಂಡಾಳರು ಪುದೆ ಒಯ್ಯುವ ಕ್ರಮ ನಿಂತಿದೆ. ನಾವು ಕೊಟ್ಟರೂ ಪುರೋಹಿತರು ಶಾಸ್ತ್ರಕ್ಕೆ ಒಂದು ಕಾಯಿ ಹಾಕುತ್ತಾರಷ್ಟೇ. ಕುಟುಂಬಸ್ಥರು, ಊರವರು, ಬಂಧುಗಳ ಸಮ್ಮುಖದಲ್ಲಿ ವಿಧಿವಶರಾದ ವ್ಯಕ್ತಿಯ ಭಾವಚಿತ್ರದೆದುರು ಪ್ರಾರ್ಥಿಸಿ, ಹೂ ಹಾಕಿ ಆಶೀರ್ವಾದ ಪಡೆಯುತ್ತಾರೆ. ಬಳಿಕ ತಯಾರಿಸಿದ ಅಡುಗೆಯನ್ನು ತುದಿ ಎಲೆಗೆ ಬಡಿಸುತ್ತಾರೆ. ಸತ್ತ ವ್ಯಕ್ತಿಗೆ ಗಂಡು ಮಕ್ಕಳಿದ್ದರೆ ಅವರು, ಮಕ್ಕಳಿಲ್ಲದಿದ್ದರೆ ತಮ್ಮಂದಿರು ತಲೆ ಮೇಲೆ ಬಿಳಿ ಬಟ್ಟೆ ಧರಿಸಿ, ಬಡಿಸಿದ ಆಹಾರವನ್ನು ಕಾಗೆಗಿಡುತ್ತಾರೆ. ಕಾಗೆ ಮುಟ್ಟಿದ ಬಳಿಕವಷ್ಟೇ ನೆರೆದ ಜನ ಸಮೂಹಕ್ಕೆ ಭೋಜನವನ್ನು ಬಡಿಸುತ್ತಾರೆ.

### ಒಳಗೆ ಕರೆಯುವುದು (ಉಲಯಿ ಲೆಪ್ಪುನು):

ಗ್ರಾಮೀಣ ಜನರು ಈ ಕ್ರಿಯೆಯನ್ನು ಆಚಾರವಾಗಿ ನಂಬಿದ್ದಾರೆ. ಇದನ್ನು ತುಳುವರು 'ಪದಿನಾಜೇಟ್ ಸೇರವುನಿ' ಎನ್ನುತ್ತಾರೆ. ಸತ್ತ ವ್ಯಕ್ತಿಯನ್ನು ಲೌಕಿಕ ಜಗತ್ತಿನಿಂದ ಅಲೌಕಿಕ ಜಗತ್ತಿಗೆ ಸೇರ್ಪಡೆಗೊಳಿಸುವ ಕ್ರಮ ಇದಾಗಿದೆ. ಸತ್ತ ವ್ಯಕ್ತಿಯನ್ನು ಸತ್ತ ಹಿರಿಯರ ಗುಂಪಿಗೆ ಸೇರಿಸುವುದು. ಮುಂಡಾಳ ಸಮಾಜದಲ್ಲೂ ಈ ಕ್ರಿಯೆ ಇದೆ. ಉತ್ತರಕ್ರಿಯೆಯಲ್ಲಿ ಭಾಗವಹಿಸಿದ ಕುಟುಂಬದ

ಸದಸ್ಯೆಯೊಬ್ಬಳು ಊಟದ ಬಳಿಕ ಬೇಗ ಬಂದು ಕಡುಬಿಗಾಗಿ ಅಕ್ಕಿಯನ್ನು ನೆನೆ ಹಾಕುತ್ತಾರೆ. ಗಂಡಸರು ಕೋಳಿ, ಮೀನು ಮಾಂಸಗಳನ್ನು ತರುತ್ತಾರೆ. ರಾತ್ರಿಯ ಒಳಗೆ ಕರೆಯುವ ಆಚರಣೆಗೆ ಕಡುಬು, ಕೋಳಿ ಅಡುಗೆ ಮುಖ್ಯವಾಗಿರಬೇಕು. ಉತ್ತರಕ್ರಿಯೆಯ ಮಧ್ಯಾಹ್ನದ ಊಟ ಸಸ್ಯಾಹಾರವಾದರೆ, ರಾತ್ರಿಯ ಊಟ ಮಾಂಸಾಹಾರ. ಉತ್ತರಕ್ರಿಯೆ ರಾತ್ರಿ ಮಾಡುವುದಿಲ್ಲ. ತಮಾಷೆಗೆ ಹೇಳುವುದಿದೆ, "ಬೊಜ್ಜದ ಊಟಕ್ಕೆ ಬರದವರು ಒಳಗೆ ಕರೆಯುವುದಕ್ಕೆ ಖಂಡಿತ ಬರುತ್ತಾರೆ" (ಸಾವುಗು ಬರಂದಿನಾಯೆ ಉಲಯಿ ಲೆಪ್ಪುನೇಕ್ ಖಂಡಿತ ಬರ್ಪೆ). ಕುಟುಂಬದ ಹೆಂಗಸರು, ಗಂಡಸರು ಕೈಸೇರಿ ಈ ಆಹಾರ ತಯಾರಿಸುತ್ತಾರೆ.

ಉತ್ತರಕ್ರಿಯೆಯ ರಾತ್ರಿ ಒಳಗೆ ಕರೆಯುವಾಗ, ಒಪ್ಪತ್ತು ಊಟದಲ್ಲಿ ನೀರು, ದೀಪ ಇಡುತ್ತಿದ್ದ ಮಾವ ಎನಿಸಿದ ವ್ಯಕ್ತಿ ಹಾಗೂ ಕುಟುಂಬಸ್ಥರು, ತಂಬಿಗೆಯ ನೀರಿನಲ್ಲಿ ಸತ್ತ ವ್ಯಕ್ತಿಯನ್ನು ಆಹ್ವಾನ ಮಾಡಿ ಹೊರಗಿನಿಂದ ಒಳಗೆ ತರುತ್ತಾರೆ. ಹದಿನಾರು ತುದಿ ಬಾಳೆಎಲೆಗೆ ಬಡಿಸುವಲ್ಲಿ ಮಣೆಯ ಮೇಲಿಡುತ್ತಾರೆ. ಗ್ರಾಮೀಣ ಜನರ ನಂಬಿಕೆಯ ಪ್ರಕಾರ ಹೊರಗಿನಿಂದ ಸತ್ತ ವ್ಯಕ್ತಿಯನ್ನು ತಂಬಿಗೆ ನೀರಲ್ಲಿ ಆಹ್ವಾನಿಸಿ ಒಳಗೆ ಕರೆ ತರಬೇಕಾದರೆ ತಂಬಿಗೆ ನೀರಿರುವ ಮಣೆ ಭಾರವಾಗುತ್ತದೆ. ಅದನ್ನು ಹಿಡಿದ ವ್ಯಕ್ತಿ ಆ ಮಣೆ ಹಾಗೂ ನೀರನ್ನು ಕೆಳಗೆ ಹಾಕದಂತೆ ಉಳಿದವರು ಸಹಕರಿಸುತ್ತಾರೆ. ತದನಂತರ ತಯಾರಿಸಿದ ಮಾಂಸಾಹಾರದ ಅಡುಗೆಯನ್ನು ಹದಿನಾರು ತುದಿ ಬಾಲೆ ಎಲೆಗೆ ಪತಿ ಅಥವ ಪತಿ, ಮಕ್ಕಳು, ರಕ್ತಸಂಬಂಧಿಗಳು ಒಟ್ಟು ಸೇರಿ ಬಡಿಸುತ್ತಾರೆ. ಗ್ರಾಮದ ಗುರಿಕಾರ "ಇಂದು ಒಳ್ಳೆಯದಾ ಕೆಟ್ಟದಾ ನಮಗೆ ತಿಳಿಯುವುದಿಲ್ಲ, ಇಷ್ಟು ದಿನ ನಮ್ಮೊಂದಿಗಿದ್ದು ಈಗ ಪರಲೋಕ ಸೇರಿದ್ದೀರಿ, ಅವರ ಅಪರಕ್ರಿಯೆಯನ್ನು ಮುಗಿಸಿ, ಬೂದಿ ಕಾರ್ಯ ಮುಗಿಸಿ ಹನ್ನೊಂದು ಅಥವಾ ಹದಿಮೂರರಲ್ಲಿ ಶುದ್ಧ ಕಾರ್ಯ ಮಾಡಿದೆವು. ಮಧ್ಯಾಹ್ನ ಕಾಗೆಗೆ ಊಟವಿಟ್ಟು, ಪಿಂಡ ಪ್ರಧಾನ ಕಾರ್ಯವನ್ನು ನಡೆಸಿದೆವು, ಈಗ ಮದು ಮಾಂಸದ ಆಹಾರ ಮಾಡಿ ಒಳಗೆ ಕರೆಯುವ ಸಮಯ. ನಾವು ಮಾಡಿದ ಈ ಕಾರ್ಯದಲ್ಲಿ ಯಾವುದೇ ತೆರನಾದ ತಪ್ಪುಗಳಿದ್ದರೆ ಅದನ್ನು ಕ್ಷಮಿಸಿ, ಈವರೆಗೆ ಹರಸಿ ನಮಗೆ ಹೇಗೆ ಬೆಂಬಲವಾಗಿದ್ದಿರೋ ಹಾಗೆಯೇ ಮುಂದೆಯೂ ನಿಮ್ಮ ಆತ್ಮ ನಮ್ಮ ಹಿರಿಯರೊಂದಿಗೆ ಸೇರಿಕೊಳ್ಳಬೇಕು. ಕುಟುಂಬಕ್ಕೆ ಯಾವ ತರವಾದ ದೋಷ ಬಾರದಂತೆ ಕಾಯಬೇಕು. ಬಡಿಸಿದ ಆಹಾರವನ್ನು ಸಂತೋಷದಿಂದ ಸ್ವೀಕರಿಸಬೇಕು" ಎಂಬುದಾಗಿ ಸತ್ತ ವ್ಯಕ್ತಿಯನ್ನು ಪ್ರಾರ್ಥಿಸುತ್ತಾರೆ. ಕೈ ಮುಗಿದು ಅಡ್ಡ ಬಿದ್ದು, ಬಾಗಿಲು ಹಾಕಿ ಹೊರ ಬರುತ್ತಾರೆ. ಇದು ಸತ್ತ ವ್ಯಕ್ತಿ ಹಾಗೂ ಪಿತೃಗಳು ಆಹಾರ ಸೇವಿಸುತ್ತಾರೆಂಬ ನಂಬಿಕೆ. ಸ್ವಲ್ಪ ಸಮಯದ ಬಳಿಕ ನೀರು ಸಿಂಪಡಿಸಿ, ಒಂದು ಎಲೆಯನ್ನು ಸ್ವಲ್ಪ ಕೆಳಗಡೆ ಜಾರಿಸಿ, ಬಡಿಸಿದ ಆಹಾರ (ಎಡೆ)ವನ್ನು ಸಂಬಂಧಿಕರು ಊಟ ಮಾಡುತ್ತಾರೆ.

ಮರಣಾನಂತರ ವ್ಯಕ್ತಿ ಏನಾಗುವನೆಂಬ ವಿಚಾರ ಯಾರಿಗೂ ತಿಳಿಯದು. ಸಾವಿನ ಬಗೆಗಿರುವ ಮನುಷ್ಯ ಚಿಂತನೆಗಳೇ ಅವನ ಈ ಎಲ್ಲಾ ಆಚರಣೆಗಳಿಗೆ ಕಾರಣವಾಗುವುದು. ಒಳಗೆ ಕರೆಯುವ ಆಚರಣೆಯ ಬಳಿಕ ಸತ್ತ ವ್ಯಕ್ತಿಗೂ ಜೀವಂತ ವ್ಯಕ್ತಿಗಳಿಗೂ ಇರುವ ಸಂಬಂಧ ಕಳಚುವುದು. ಮುಂಡಾಳರಲ್ಲೂ ಮರಣ ಬಗ್ಗೆ ಕೆಲವು ನಂಬಿಕೆಗಳಿವೆ. ವ್ಯಕ್ತಿ ಮಂಗಳವಾರ

ಅಥವಾ ಶುಕ್ರವಾರ ಮರಣಿಸಿದರೆ ದೋಷ ಹಾಗೂ ಅದು ಎರಡು ಬಲಿ ಕೇಳುವುದೆಂಬ ನಂಬಿಕೆ. ಆ ಕಾರಣಕ್ಕಾಗಿ ಈ ಎರಡು ದಿನದಲ್ಲಿ ಸತ್ತರೆ, ಒಂದು ಅಥವಾ ಎರಡು ಲಾಕಿ (ಚಿಕ್ಕ ಕೋಳಿ)ಯನ್ನು ಚಿತೆಯ ಮೇಲಿಂದ ಹಾರಿಸುತ್ತಾರೆ. ಕೆಲವೊಮ್ಮೆ ಚಿತೆಗೇ ಹಾಕುತ್ತಾರೆ. ಇನ್ನು ಕೆಲವು ಜನಾಂಗದಲ್ಲಿ ಹೆಣ ಹೂಳಿಡುವ ಹೊಂಡಕ್ಕೆ ಆ ಕೋಳಿಯನ್ನು ಹಾಕುತ್ತಾರೆ. ಕೋಳಿ ಇಲ್ಲದಿದ್ದರೆ ಎರಡು ಕೋಳಿ ಮೊಟ್ಟೆಯನ್ನು ಹೊಂಡದೊಳಗೆ ಹಾಕುತ್ತಾರೆ. ಮುಂಡಾಳರಲ್ಲಿ ಹೊಂಡಕ್ಕೆ ಕೋಳಿ ಅಥವಾ ಕೋಳಿ ಮೊಟ್ಟೆಯನ್ನು ಹಾಕುವ ಪದ್ಧತಿ ಇಲ್ಲ. ಮುಂಡಾಳರಲ್ಲಿ ಸಾಮಾಜಿಕವಾಗಿ ಆಚರಿಸುವ ಆಚರಣೆಗಳಾಗಲೀ, ಧಾರ್ಮಿಕವಾಗಿ ಆಚರಿಸುವ ಆಚರಣೆಗಳಾಗಲೀ ಅದು ಆ ಮಣ್ಣಿನ ಸತ್ವದಿಂದ ಹುಟ್ಟಿಕೊಂಡವುಗಳು. ಕೇವಲ ಆಚರಣೆಗಳಿಗಾಗಿರುವ ಆಚರಣೆಗಳಲ್ಲ. ಆಚರಣೆಗಳಿಗೂ ಜೀವಿಸುವ ವ್ಯಕ್ತಿಗಳಿಗೂ ಅವಿನಾಭಾವ ಸಂಬಂಧಗಳಿವೆ. ಭೌಗೋಳಿಕ ಕಾರಣಗಳಿಂದಾಗಿ ಭಾಷೆಯಲ್ಲಿ ಹೇಗೆ ವ್ಯತ್ಯಾಸಗಳಾಗುತ್ತವೆಯೋ ಹಾಗೆಯೇ ಈ ಪಂಗಡದಲ್ಲೂ ಸಾಮಾಜಿಕವಾದ, ಧಾರ್ಮಿಕವಾದ ಆಚರಣೆ, ವಿಧಿವಿಧಾನಗಳಲ್ಲಿ ವ್ಯತ್ಯಾಸವಿದೆ. ಇದನ್ನು ಪ್ರಾದೇಶಿಕ ವ್ಯತ್ಯಾಸ ಎನ್ನುವರು. ಇಂತಹ ಹಲವಾರು ವ್ಯತ್ಯಾಸಗಳು ಮುಂಡಾಳರ ಸಾಮಾಜಿಕ ಹಾಗೂ ಧಾರ್ಮಿಕ ಆಚರಣೆಗಳಲ್ಲೂ ಕಂಡು ಬರುತ್ತದೆ.

# ಅಧ್ಯಾಯ 3

## ಮುಂಡಾಳ ಜನಾಂಗದ ಧಾರ್ಮಿಕ ಆಚರಣೆಗಳು

- ಆಟಿ ಅಮಾವಾಸ್ಯೆ
- ಸಂಕ್ರಮಣ
- ನಾಗರ ಪಂಚಮಿ
- ಅಷ್ಟಮಿ
- ಚೌತಿ
- ಮನೆ ತುಂಬಿಸುವುದು
- ಪುದ್ದಾರ್ ಹಾಗೂ ಬಿಸು
- ದಸರಾ
- ದೀಪಾವಳಿ – ಸತ್ತವರ ಹಬ್ಬ
  ನರಕ ಚತುರ್ಥಿ
  ಬಲೀಂದ್ರ ಪೂಜೆ
- ಮುಂಡಾಳರ ಜನಪದ ಆಚರಣೆಗಳು

# ಅಧ್ಯಾಯ 3

## ಮುಂಡಾಳ ಜನಾಂಗದ ಧಾರ್ಮಿಕ ಆಚರಣೆಗಳು

### ಆಟಿ ಅಮಾವಾಸ್ಯೆ:

ಕ್ಯಾಲೆಂಡರ್ ಪ್ರಕಾರ ಜುಲೈ ತಿಂಗಳ ಮಧ್ಯ ಭಾಗದಲ್ಲಿ ಆಟಿ ಅಮಾವಾಸ್ಯೆ ಆಚರಣೆಯ ಸಮಯವಾಗಿದೆ. ಕ್ರೈಸ್ತ ಭಾಂದವರಲ್ಲಿ ಆಗಸ್ಟ್ ಒಂದು ತಿಂಗಳು ಕಪ್ಪು ತಿಂಗಳು ಬರುವಂತೆ ತುಳುವರಲ್ಲೂ ಒಂದು ತಿಂಗಳು ಅನಿಷ್ಟ ಕಪ್ಪು ತಿಂಗಳು ಬರುವುದು. ಅದೇ 'ಆಷಾಢ' ತಿಂಗಳು. 'ಆಟಿ' ಎಂದೇ ಪ್ರಸಿದ್ಧತೆ ಪಡೆದ ತುಳುವರ ಈ ತಿಂಗಳಲ್ಲಿ ಭೋರ್ಗರೆಯುವ ಪುನರ್ವಸು ಮತ್ತು ಪುಷ್ಯ ನಕ್ಷತ್ರದ ಮಳೆಯ ಮುಸಲಧಾರೆ. ಈ ತಿಂಗಳಲ್ಲಿ ಸೂರ್ಯೋದಯವನ್ನು ನೋಡುವುದೇ ಅಪರೂಪ. ಧಾರಾಕಾರವಾಗಿ ಬಿಡದೆ ಸುರಿವ ಮಳೆಗೆ ಮಾರಿದೇವತೆ ರೋಗಗಳನ್ನು ಬಿತ್ತುತ್ತಾಳೆ. ದುಡಿಮೆಗೆ ಕೆಲಸವಿಲ್ಲದೆ, ಆಹಾರಕ್ಕೆ ಕೊರತೆಯಾಗಿ, ಬದುಕಲು ಕಷ್ಟಕರವಾದ ತಿಂಗಳು ಈ 'ಆಟಿ' ತಿಂಗಳು. ದೇಹವಿಡೀ ಸದಾ ಮಂಜುಗಡ್ಡೆಯಂತೆ ತಣ್ಣಗಾಗುವುದು. ಹಿಂದೆ ನಿರಂತರ ಸುರಿವ ಮಳೆಗೆ ಬರುವ ಕಾಯಿಲೆಗಳಿಗೆ, ಪಂಡಿತರ ಗಿಡಮೂಲಿಕೆಗಳ ಔಷಧಿ ನಾಟದೇ ಸಾಯುವ ಮುದಿ ಜೀವಿಗಳು ಅನೇಕ. ತುಳುವರು ಆಷಾಢದ ಮಳೆಯ ಬಗ್ಗೆ ಹೇಳುವಾಗ 'ಪುಷ್ಯ ನಕ್ಷತ್ರದಲ್ಲಿ ಸುರಿವ ಧಾರಾಕಾರದ ಮಳೆ ಹೆಣವನ್ನು ಹೊರಗಿಡಲೂ ಬಿಡದು'(ಪುರ್ಸೆ ಬರ್ಸ ಪುಣೊನು ಪಿದಯಿ ದೀವೆರೆಲಾ ಬುಡಂದ್) ಎನ್ನುವಲ್ಲಿ ಆ ತಿಂಗಳಲ್ಲಿ ಸುರಿವ ಮಳೆಯ ಸ್ಥಿತಿಯನ್ನು ತಿಳಿಸುತ್ತದೆ. ದಲಿತರಲ್ಲಿ ಒಂದು ವರ್ಗವಾದ ಮುಂಡಾಳ ಜನಾಂಗವು ಧಾರ್ಮಿಕವಾಗಿ, ಆರ್ಥಿಕವಾಗಿ ಬಲಹೀನರಾದ ಕಾರಣ ತಮ್ಮ ಹೊಟ್ಟೆ ಪಾಡಿಗಾಗಿ ಪರದಾಡುವ ಕಾಲವೂ ಇದಾಗಿದೆ. ಆಟಿ ತಿಂಗಳಲ್ಲಿ ಸತ್ತರೆ ಸ್ವರ್ಗ ಪ್ರಾಪ್ತಿಯಾಗುವುದೆಂಬ ನಂಬಿಕೆಯೂ ಈ ಜನಾಂಗದಲ್ಲಿದೆ. ಆಷಾಢ ತಿಂಗಳಲ್ಲಿ ಮುಂಡಾಳರಲ್ಲೂ ದೈವಸ್ಥಾನದ ಬಾಗಿಲು ಮುಚ್ಚಿರುತ್ತದೆ. ದೀಪ ಬೆಳಗುವ ಕ್ರಮ ಈ ತಿಂಗಳು ಪೂರ್ತಿ ನಿಷಿದ್ಧ. ಆಟಿ ತಿಂಗಳಲ್ಲಿ ದೇವಸ್ಥಾನದಲ್ಲೂ ಜನಜಂಗುಳಿ ಕಡಿಮೆ.

ಮುಂಡಾಳರ ಗ್ರಾಮ ದೈವವಾದ ಬಬ್ಬುಸ್ವಾಮಿಯ ಗುಡಿಯಲ್ಲೂ ಈ ತಿಂಗಳು ದೀಪವಿಡುವ ಕಾರ್ಯಕ್ರಮವಿಲ್ಲ. ಈ ಆಟಿ ತಿಂಗಳಲ್ಲಿ, ನಾರಾಯಣ ದೇವರ ಅಪ್ಪಣೆ ಪಡೆದು ಘಟ್ಟದಿಂದ ಕೆಳಗಿಳಿದು ದಕ್ಷಿಣ ಭಾಗಕ್ಕೆ ಬಂದು ನೆಲೆಸಿರುವ ಎಲ್ಲಾ ದೈವಗಳು ಭೂಮಿಯಲ್ಲಿ ಪನಿಯಾರ, ಆವರ, ಅಗೆಲು ಸಿಗದೆ ಮತ್ತೆ ಪುನ: ಆಹಾರ ಹುಡುಕುತ್ತಾ ಘಟ್ಟ ಪ್ರದೇಶಗಳಿಗೆ ತೆರಳುತ್ತವೆಯಂತೆ. ಮುಂಡಾಳ ಜನಾಂಗದಲ್ಲೂ ಆಷಾಢ ತಿಂಗಳಲ್ಲಿ ಅನಿಷ್ಟದ ತಿಂಗಳೆಂಬ ನಂಬಿಕೆ ಇದೆ. ಆ ಕಾರಣದಲ್ಲಿ ಶುಭ ಕಾರ್ಯದ ಮಾತುಗಳಾಗಲೀ, ಶುಭವಾರ್ತೆಗಳಾಗಲೀ, ಶುಭ ಕಾರ್ಯಗಳಾಗಲೀ ನಡೆಯುವುದಿಲ್ಲ. ಆದರೆ, ಆಷಾಢ ತಿಂಗಳಲ್ಲಿ ಕೆಲವು ಆಚರಣೆಗಳು ನಡೆಯುವುದು. ಮುಂಡಾಲರಲ್ಲಿ ಸಂಕ್ರಮಣದಿಂದ ಸಂಕ್ರಮಣದ ವರೆಗೆ ಆಷಾಢ ತಿಂಗಳು. ಈ ತಿಂಗಳಲ್ಲಿ 'ಆಟಿ ಅಮಾವಾಸ್ಯೆ' ಶ್ರೇಷ್ಟವಾದದ್ದು. ಆಟಿ ಅಮಾವಾಸ್ಯೆಯ ದಿನದಂದು ಸಾವಿರದೊಂದು ಬಗೆಯ ಔಷಧೀಯ ಗುಣಗಳು ಈ ಪಾಲಾಷ ಮರದಲ್ಲಿ ಸೇರ್ಪಡೆಗೊಳ್ಳುವುದು, ಎಂಬ ನಂಬಿಕೆ

ತುಳುವರದ್ದು. ಆದರೆ ಈ ಆಚರಣೆಯನ್ನು ಹಿಂದೂ ಧರ್ಮದವರು ಮಾತ್ರವಲ್ಲ, ತುಳುವರು ಮಾತ್ರವಲ್ಲ, ಕ್ರೈಸ್ತ, ಮುಸ್ಲಿಂ ಬಾಂಧವರೂ ಆಚರಿಸುತ್ತಾರೆ.

ಬೆಳಿಗ್ಗೆ ಬೆತ್ತಲೆ ಹೋಗಿ, ಪಾಲಾಕ್ಷ ಮರದ ತೊಗಟೆಯನ್ನು ಚೂಪಾದ ಕರಿ ಕಲ್ಲಿನಿಂದ ಕೆತ್ತಿ ತರುತ್ತಾರೆ. ತಂದ ತೊಗಟೆಯ ಹೊರಗಿನ ಭಾಗವನ್ನು ಕತ್ತಿ ಅಥವಾ ಚೂರಿಯಿಂದ ಕೆತ್ತಿ ಬಿಸಾಡಬೇಕು. ನಂತರ ತೊಳೆದು ಶುಚಿಗೊಳಿಸಿದ ಪಾಲಾಕ್ಷ (ಹಾಳೆಯ ಮರ)ದ ತೊಗಟೆಯ ಜೊತೆಗೆ ಕಾಳು ಮೆಣಸಿನ ಕಾಳು, ಜೀರಿಗೆ, ಓಮ ಬೆರೆಸಿ ಅರೆದು, ಅದರಲ್ಲಿರುವ ಹಾಲಿನ ರಸವನ್ನು ಸೋಸಿ, ಬಿಸಿಮಾಡಿಟ್ಟ ಬಿಳಿಕಲ್ಲನ್ನು (ಬೊಲ್ಕಲ್ಲನ್ನು) ಒಗ್ಗರಣೆ ಕೊಡಬೇಕು. ತರುವಾಯ ಈ ಹಾಲನ್ನು ಬರೀ ಹೊಟ್ಟೆಗೆ ಕುಡಿಯಬೇಕು. ಈ ರಸ ಕಹಿ ಎಂಬ ಕಾರಣಕ್ಕೆ ಕೆಲವರು ಒಂದು ಚಮಚ, ಕೆಲವರು ಅರ್ಧ ಲೋಟ ಹೀಗೆ ಕುಡಿಯುತ್ತಾರೆ. ಹಿಂದಿನ ರಾತ್ರಿ ನೆನೆಹಾಕಿದ ಮೆಂತ್ಯೆಯನ್ನು ಬೆಳ್ತಿಗೆ ಅಕ್ಕಿಯೊಂದಿಗೆ ಸೇರಿಸಿ ಬೇಯಿಸಬೇಕು. ಅದಕ್ಕೆ ತೆಂಗಿನಹಾಲು, ಬೆಲ್ಲ ಸೇರಿಸಿ, ಕುದಿಸಿ ಮೆಂತ್ಯೆ ಗಂಜಿ ತಯಾರಿಸಿ, ಈ ಕಷಾಯ ಕುಡಿದ ಬಳಿಕ ಈ ಸಿಹಿ ಮೆಂತ್ಯೆಯನ್ನು ಮನೆ ಮಂದಿ ಎಲ್ಲಾರೂ ತಿನ್ನುತ್ತಾರೆ. ಕಹಿಯಾದ ಬಾಯಿಗೆ ಸಿಹಿಯಾದ ಮೆಂತ್ಯೆ ಗಂಜಿಯನ್ನು ಮನೆ ಮಂದಿ ಇಷ್ಟಪಟ್ಟು ತಿನ್ನುತ್ತಾರೆ. ಮುಂಡಾಳರಲ್ಲಿ ಕೆಲವು ದೈವಸ್ಥಾನದಲ್ಲಿ ಪ್ರಾರ್ಥಿಸಿ ಈ ಹಾಳೆದ ಮರದ (ಪಾಲಾಕ್ಷ ಮರದ) ತೊಗಟೆಯನ್ನು ಅಲ್ಲಿಯ ಗ್ರಾಮಸ್ಥರಿಗೆ ನೀಡುವ ವಾಡಿಕೆಯೂ ಇದೆ.



ಈ ಹಾಳೆ ಮರದಲ್ಲಿ ದೆವ್ವ, ಪಿಶಾಚಿಗಳು ವಾಸಿಸುತ್ತವೆ ಎಂಬ ನಂಬಿಕೆ. ಪೂರ್ವ ಕಾಲದ ಜನರು ಹೇಳುವಂತೆ ನಿಶಾಚರಿಗಳು ಎದುರಾದಾಗ, ನಾವು ಬೆತ್ತಲೆಯಾಗಬೇಕಂತೆ. ಆಗ ಅದಕ್ಕೆ ನಾಚಿಕೆಯಾಗಿ ಅವು ಅಲ್ಲಿಂದ ಹೊರಟು ಹೋಗುವುದೆಂಬ ನಂಬಿಕೆ. ಈ ನಂಬಿಕೆಗಳು ವಿದ್ಯಾವಂತರಿಗೆ ಪೊಳ್ಳಾಗಿ, ಹುರುಳಿಲ್ಲದ ಮಾತಿನಂತೆ ಕಂಡರೂ, ಜನಪದರ ನಂಬಿಕೆಗಳು ಅನುಭವದಿಂದ ಬಂದವುಗಳಾಗಿರುವುದರಿಂದ ಕೆತ್ತೆ ತರಲು ಬತ್ತಲೆ ಹೋಗಬೇಕೆನ್ನುವುದಕ್ಕೆ ಇದೂ ಒಂದು ಕಾರಣವಾಗಿರಬಹುದು. ಹಾಳೆಯ ಮರದ ತೊಗಟೆಯನ್ನು ಬತ್ತಲೆ ತರುವಲ್ಲಿ ಅದರ ಹಿಂದಿರುವ ಜನಪದ ಚಿಂತನೆ ಅದ್ಭುತವಾದದ್ದು. ಹಿಂದಿನ ಕಾಲದಲ್ಲಿ ಮುಂಡಾಲ ಮುಂತಾದ ದಲಿತ ಜನಾಂಗದ ಜನರಿಗೆ ಕಿತ್ತು ತಿನ್ನುವ ಬಡತನವಿದ್ದು, ಬಟ್ಟೆ-ಬರೆಗಳಿಗೂ ಬರಗಾಲವಿತ್ತು. ಈ ಬಗ್ಗೆ ದಲಿತರದ್ದು ಒಂದು ವಿಚಾರವಾದರೆ ದಲಿತೇತರದ್ದು ಇನ್ನೊಂದು ವಿಚಾರ. ಹಾಗಾಗಿ ಈ ಜನ



ಉಳಿದ ಲೋಕಕ್ಕೆ ಬೆಳಕಾಗುವ ಮುನ್ನ ಬತ್ತಲೆ ಹೋಗಿ ಪಾಲಾಕ್ಷ ಮರದ ತೊಗಟೆಯನ್ನು ತರುವ ವಾಡಿಕೆಯನ್ನು ಮಾಡಿರಲೂಬಹುದು.

ಇದಕ್ಕೆ ಒಂದು ಜನಪದ ಕತೆಯೂ ಇದೆ. ಇದು ಜನ ಸೃಷ್ಟಿಸಿದ ಕತೆಯೂ ಆಗಿರಬಹುದು. ದೆವ್ವಗಳಿಗೆ ಭಯ ಪಡದ ವ್ಯಕ್ತಿಯೊಬ್ಬ ತನ್ನ ಗೆಳೆಯನಿಗೆ ಪ್ರತಿಜ್ಞೆ ಮಾಡಿ ಮುಂಜಾನೆ ಸೂರ್ಯೋದಯಕ್ಕೆ ಮುನ್ನ ಹಾಳೆಮರದ ತೊಗಟೆ ತರಲು ತೆರಳುತ್ತಾನೆ. ತಾನು ಹೋಗಿ ಬಂದುದಕ್ಕೆ ಕುರುಹಾಗಿ ಆತ ಮರಕ್ಕೆ ಮೊಳೆ ಹೊಡೆದು ಬರಬೇಕಿತ್ತು. ಆ ವ್ಯಕ್ತಿಯ ಪ್ರಕಾರ ದೆವ್ವ ಪಿಶಾಚಿಗಳು ಜನರ ಭ್ರಮೆಯಷ್ಟೇ. ವಾಸ್ತವವಾಗಿ ಅವು ಯಾವುದೂ ಇಲ್ಲ, ಹಾಗೆಯೇ ಆ ವ್ಯಕ್ತಿ ಹಾಳೆ ಮರದ ತೊಗಟೆಯನ್ನು ಕಲ್ಲಿನಿಂದ ಕೆತ್ತಿ ಚೀಲದಲ್ಲಿ ತುಂಬಿಸುತ್ತಾನೆ. ಇನ್ನೇನು ತೆರಳಬೇಕಾಗಿ ಬಂದಾಗ, ಬಂದ ಕುರುಹಿಗೆ ಮರಕ್ಕೆ ಮೊಳೆ ಹೊಡೆಯುತ್ತಾನೆ. ಇಂದಿನ ಪೀಳಿಗೆಯ ವ್ಯಕ್ತಿ ಆತ ಬತ್ತಲೆ ಹೋಗಿರಲಿಲ್ಲ, ಬಿಳಿ ಧೋತಿ ಧರಿಸಿದ್ದ. ತನ್ನ ಕೆಲಸದ ಬಳಿಕ ಹಿಂತಿರುಗಿ ಹೊರಡಬೇಕೆನ್ನುಷ್ಟರಲ್ಲಿ ಯಾರೋ ತನ್ನ ಧೋತಿಯನ್ನು ಹಿಡಿದು ಎಳೆದ ಹಾಗಾಯಿತು. ನಿರ್ಜನ ಪ್ರದೇಶ, ಕತ್ತಲೆ ಕಾಡು ಬೇರೆ, ನಿಶಾಚರಿಗಳಿಲ್ಲ ಎಂಬ ದೃಢ ಸಂಕಲ್ಪ ಮಾಡಿ ಬಂದಿದ್ದ ವ್ಯಕ್ತಿಯ ಮನಸ್ಸಿನಲ್ಲಿನ ಭಯದ ಛಾಯೆ ಮೂಡುತ್ತದೆ. ತನ್ನನ್ನು ದೆವ್ವವೇ ಹಿಡಿದಿದೆ ಎಂದು ತಿಳಿದು ಭಯ ಭೀತನಾದ ವ್ಯಕ್ತಿಗೆ ಹೃದಯ ಸ್ತಂಭನವಾಗಿ ಅಲ್ಲೇ ಕುಸಿದು ಬೀಳುತ್ತಾನೆ. ಮರುದಿನ ಬಾರದ ಗೆಳೆಯನಿಗಾಗಿ ಹುಡುಕಾಡಿ, ಪಾಲಾಕ್ಷ ಮರದ ಬಳಿ ಬಂದಾಗ ಗೆಳೆಯನಿಗೆ ವಿಷಯ ತಿಳಿಯಿತು. ಅಲ್ಲಿ ನಿಜವಾಗಿ ನಡೆದ ಕತೆಯೇ ಬೇರೆ. ಸತ್ತ ವ್ಯಕ್ತಿ ಹಾಳೆಮರಕ್ಕೆ ಮೊಳೆ ಹೊಡೆಯುವ ಸಂದರ್ಭದಲ್ಲಿ ತನ್ನ ಧೋತಿಯ ಒಂದು ತುದಿಯನ್ನು ಎಡಗೈಯಲ್ಲಿ ಹಿಡಿಕೊಂಡಿದ್ದನು. ಮೊಳೆ ಬಡಿಯುವಾಗ ಧೋತಿಯ ಒಂದು ಭಾಗವನ್ನು ಸೇರಿಸಿ ಹೊಡೆದದ್ದು ಆತನಿಗೆ ತಿಳಿಯಲೇ ಇಲ್ಲ. ಹಾಗಾಗಿ ಮೊಳೆಯೊಂದಿಗೆ ಧೋತಿಯ ಬಟ್ಟೆಯೂ ಭದ್ರವಾಗಿ ಮರಕ್ಕೆ ನಾಟಿಕೊಂಡಿತ್ತು. ಹಾಳೆಯ ಮರದ ತೊಗಟೆಯನ್ನು ಬತ್ತಲೆ ಹೋಗಿ ತರುವುದಕ್ಕೆ ಈ ಕತೆಯೂ ಒಂದು ಕಾರಣವಾಗಿರಬಹುದು.

ಒಟ್ಟಿನಲ್ಲಿ ಆಟಿ ಅಮಾವಾಸ್ಯೆ ಆಚರಣೆಯ ಹಿಂದಿರುವ ತುಳುವರ ಉದ್ದೇಶಕ್ಕೆ ಕೈಮುಗಿಯಲೇಬೇಕು. ನಾವು ದಿನನಿತ್ಯ ತಯಾರಿಸುವ ಅಡುಗೆ ತಯಾರಿಯಲ್ಲಿ ಸ್ತ್ರೀಯರ ಪಾತ್ರ ಬಹಳಷ್ಟಿದೆ. ಸ್ತ್ರೀಯರಿರಲಿ, ಪುರುಷರಿರಲಿ, ಅಡುಗೆ ತಯಾರಿಸುವ ವೇಳೆ ಅವರ ಮುಡಿಯಿಂದ ಕೂದಲು ಗಾಳಿಗೆ ಹಾರಿ ಹೋಗಿ ಆ ಪದಾರ್ಥದಲ್ಲಿ ಸೇರಿಕೊಳ್ಳುವುದು. ಅದು ನಮ್ಮೆಲ್ಲರ ಜಠರವನ್ನು ಸೇರುವುದು. ಪ್ಲಾಸ್ಟಿಕ್‌ನಂತೆಯೇ ಕರಗದೇ ಇರುವ ವಸ್ತು ಕೂದಲು. ಇದು ಮುಂದೆ ಮಾರಕ ರೋಗಗಳಿಗೆ ಕಾರಣವಾಗುವುದು. ಹಿಂದಿನ ಕಾಲದಲ್ಲಿ ವ್ಯವಸ್ಥಿತವಾದ ಆಸ್ಪತ್ರೆಗಳು, ಆಧುನಿಕವಾದ ವೈದ್ಯಕೀಯ ಸೌಲಭ್ಯಗಳು ಇರದ ಕಾಲವದು. ಏನೇ ರೋಗ ಬಂದರೂ ಪಂಡಿತರ ಗಿಡಮೂಲಿಕೆಯ ಔಷಧಿಯನ್ನು ಸೇವಿಸಬೇಕಾಗಿತ್ತು. ಪರಿಸ್ಥಿತಿ ಹೀಗಿರುವಾಗ ಆಟಿ ತಿಂಗಳ, ಆಟಿ ಅಮಾವಾಸ್ಯೆಯಂದು ಜನ ಹಾಳೆಯ ಮರದ ರಸವನ್ನು ಔಷಧ ರೂಪದಲ್ಲಿ ಈ ಕಾರಣಕ್ಕಾಗಿ ಸೇವಿಸುತ್ತಿದ್ದಿರಲೂಬಹುದು. ಏಕೆಂದರೆ ಜಠರದಲ್ಲಿ ಸೇರಿಕೊಂಡಿರುವ ಕೂದಲು, ಕಲ್ಲಿನಂತಹ ವಸ್ತುಗಳನ್ನು ಕರಗಿಸಿ ಮಲದ ಮೂಲಕ ಹೊರಗೆ ಹಾಕುವ ಶಕ್ತಿ ಉಳ್ಳದ್ದು, ಈ ಹಾಳೆಯ ಮರದ

ತೊಗಟೆಯ ರಸ. ಈ ರಸವನ್ನು ಆಟಿ ಅಮಾವಾಸ್ಯೆಯಂದು ಮಾತ್ರ ಸೇವಿಸಬೇಕು. ಬೇರೆ ದಿನಗಳಲ್ಲಿ ಇದರ ತೊಗಟೆಯನ್ನು ಸುಳಿದು ಕಷಾಯ ಮಾಡಿ ಕುಡಿಯುವ ಕ್ರಮ ತುಳುನಾಡಿನಲ್ಲಿಲ್ಲ. ಆದರೆ ಮಾಡಿದ ಕಷಾಯವನ್ನು ಹಿಂದಿನವರು ಅಕ್ಕಿ ಪಾತ್ರೆಯ ಒಳಗಿಟ್ಟು, ಈಗಿನವರು ರೆಫ್ರಿಜರೇಟರಿನಲ್ಲಿಟ್ಟು ದಿನಾ ಸ್ವಲ್ಪ ಸ್ವಲ್ಪ ಕುಡಿಯುವರು.

ಹಾಲೆ ಮರದ ತಾಯಿ ಬೇರು ಪಾತಾಳದವರೆಗೆ ಇಳಿದು, ಭೂಮಿಯಲ್ಲಿ ಭದ್ರವಾಗಿ ನೂರಾರು ವರ್ಷ ಉಳಿಯುವುದು. ಬೇರು ಆಳಕ್ಕೆ ಇಳಿಯುವುದರಿಂದ ಭೂಮಿಯ ತಳಭಾಗದಲ್ಲಿರುವ ಔಷಧೀಯ ಅಂಶಗಳನ್ನು ಹೀರಿಕೊಳ್ಳುತ್ತದೆ. ಇನ್ನೊಂದು ಬಹಳ ಮುಖ್ಯ ಕಾರಣವೂ ಆಗಿರಬಹುದಾದ ಹಿನ್ನೆಲೆಯಲ್ಲಿ ಹಾಗೂ ವೈಜ್ಞಾನಿಕ ಚಿಂತನೆಯ ಹಿನ್ನೆಲೆಯಲ್ಲಿ ಈ ಅಂಶವೂ ಗಮನಾರ್ಹ. ಆಟಿ ತಿಂಗಳು ಬಹಳ ಶೀತಲ ಸಮಯ, ದೇಹದ ಉಷ್ಣಾಂಶ ಅತೀ ಕಡಿಮೆಯಾಗಿ ಶೀತ, ಕೆಮ್ಮು, ಜ್ವರ, ಕಾಲರ, ನೀರ್‌ಕೊಟ್ಲೆ, ಮೈಲಿಗೆಯಂತಹ ಸಾಂಕ್ರಾಮಿಕ ರೋಗ ಬರುವ ಕಾಲವಿದು. ಆಟಿ ತಿಂಗಳ ಆಟಿ ಅಮಾವಾಸ್ಯೆಗೆ ಕುಡಿಯುವ ಹಾಳೆ ಮರದ ತೊಗಟೆಯ ಕಷಾಯ ಬಲು ಉಷ್ಣ. ತಣ್ಣಗಿರುವ ದೇಹಕ್ಕೆ ಉಷ್ಣಾಂಶವಿರುವ ಈ ಕಷಾಯವನ್ನು ನೀಡಿದಾಗ ದೇಹದಲ್ಲಿ ಸಮಶೀತೋಷ್ಣವನ್ನು ಕಾಯ್ದುಕೊಳ್ಳಲು ನೆರವಾಗಬಹುದೆಂಬ ದೃಷ್ಟಿಯಿಂದ ತುಳುವರಲ್ಲಿ ಈ ಆಚಾರಣೆಗಳು ಬಂದಿರಲೂಬಹುದು. ಇದಕ್ಕೆ ಸಾಕ್ಷಿ ಆ ಸಂದರ್ಭದ ಆಹಾರಗಳು. ಬಡತನ, ದೀರ್ಘವಾಗಿ ಸುರಿಯುವ ಮಳೆಯಿಂದ, ವಾತಾವರಣದ ಸಮೋಷ್ಣತೆಯನ್ನು ದೇಹದಲ್ಲಿ ಕಾಪಾಡಲು ಕಣಿಲೆ, ಚಗಟೆ ಸೊಪ್ಪು, ಕೆಸು ಎಲೆ, ಕೆಸುಗೆಡ್ಡೆ, ಗುಜ್ಜೆ, ಅದರ ಬೀಜಗಳು ಆಹಾರದಲ್ಲಿ ಬಳಸುವುದು ಇದಕ್ಕೊಂದು ಸಾಕ್ಷಿ ಎನ್ನಬಹುದು. ಇಂತಹ ಆಹಾರವನ್ನು ಹಳ್ಳಿಗಳೂ ಸೇರಿದಂತೆ ಎಲ್ಲರೂ ಬಳಸುತ್ತಾರೆ. ಮುಂಡಾಲರೂ ಇದಕ್ಕೆ ಹೊರತಲ್ಲ.

ಕಾಲ ಬದಲಾಗಿದೆ, ಮಳೆ ಕೈ ಕೊಟ್ಟಿದೆ. ಬಡತನದ ಬೇಗೆಯಿಲ್ಲ, ಹಾಗಾಗಿ ಆಟಿ ತಿಂಗಳ ಮಳೆ, ಜನರಿಗೆ ಸ್ವಲ್ಪ ಮಟ್ಟಿನ ಕಿರಿಕಿರಿ ಮಾಡುತ್ತದೆ. ಯುವ ಪೀಳಿಗೆಗೆ ಇದರ ಬಿಸಿ ಮುಟ್ಟಿಲ್ಲ. ಬದಲಾಗಿ ಈ ಪರಂಪರೆಗಳಿಗೆ ಇಂತಹ ತುಳುವರ ಜೀವನಾಡಿಯಾದ ಈ ಹಬ್ಬಗಳ ಬಗ್ಗೆ ಪ್ರಾತ್ಯಕ್ಷಿಕತೆಯ ಮೂಲಕ ವಿವರಿಸಬೇಕಾದ ಅಗತ್ಯ ಬಂದಿರುವುದು ತುಳುವರ ಪಾಲಿಗಂತೂ ವಿಷಾದಕರ ಸಂಗತಿಯಾಗಿದೆ. ಮುಂಡಾಲ ಜನಾಂಗವೂ ಇತ್ತೀಚಿನ ದಿನಗಳಲ್ಲಿ ಸ್ವಲ್ಪ ಬೆಳವಣಿಗೆ ಹೊಂದಿದ್ದು, ಹೆಚ್ಚಿನ ಮಕ್ಕಳು ವಿದ್ಯಾವಂತರಾಗಿದ್ದಾರೆ. ಪಟ್ಟಣದ ಈ ಕೂಸುಗಳು ಇಂತಹ ಆಚರಣೆಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕಾಗಿದೆ. ಯಾಕಂದ್ರೆ ಮಣ್ಣಿನ ಸತ್ವ ಉಳಿದು ಕೊಂಡಿದೆ ಎಂದಾದ್ರೆ ಅದು ದಲಿತರ ಆಚರಣೆಗಳಿಂದ ಮಾತ್ರ ಎಂಬ ಮಾತನ್ನು ನಾನಿಲ್ಲಿ ಉಲ್ಲೇಖಿಸಲು ಇಚ್ಛಿಸುತ್ತೇನೆ.

## ಸಂಕ್ರಮಣ:

ಶ್ರೀ ಬಬ್ಬುಸ್ವಾಮಿ ದೈವಸ್ಥಾನದಲ್ಲಿ ವರ್ಷದ 12 ತಿಂಗಳಲ್ಲಿ, ತಿಂಗಳಿಗೊಂದರಂತೆ ಸಂಕ್ರಮಣ ಪೂಜೆ ನಡೆಯುತ್ತದೆ. ಈ ದಿನ ದೈವದ ಗುಡಿ, ಅಂಗಣವನ್ನು ಶುದ್ಧೀಕರಿಸುತ್ತಾರೆ. ಬಳಿಕ ಬಬ್ಬುಸ್ವಾಮಿಗೆ ಪನಿಯಾರದೊಂದಿಗೆ ಧೂಪದಾರತಿಯನ್ನು ಬೆಳಗುತ್ತಾರೆ. ಉಳಿದ ಪರಿವಾರ ದೈವಗಳಿಗೂ ಪನಿಯಾರ, ದೀಪದಾರತಿಯಾಗುತ್ತದೆ. ಈ ಸಂದರ್ಭದಲ್ಲಿ ದರ್ಶನವನ್ನು ಏರ್ಪಡಿಸುತ್ತಾರೆ. ಕೆಲವೊಂದು ಬಬ್ಬುಸ್ವಾಮಿಯ ದೈವಸ್ಥಾನಗಳಲ್ಲಿ ಅದರದೇ ಆದ ದರ್ಶನ ಪಾತ್ರಿ ಇರುತ್ತಾರೆ. ಗ್ರಾಮದ ಗುರಿಕಾರ, ಆಡಳಿತ ಮಂಡಳಿ, ಗ್ರಾಮದ ಜನರು ಅವರವರ ದೈವಸ್ಥಾನಕ್ಕೆ ದರ್ಶನದ ಪಾತ್ರಿಯನ್ನು ಆಯ್ಕೆ ಮಾಡುತ್ತಾರೆ. ಅನುಕೂಲವಿರುವ ಬಬ್ಬುಸ್ವಾಮಿ ದೈವಸ್ಥಾನಗಳಲ್ಲಿ ಮುಕ್ಕಾಲ್ದಿಗೆ, ದರ್ಶನಪಾತ್ರಿ ತಿಂಗಳ ಸಂಬಳದ ರೂಪದಲ್ಲಿ ವರಮಾನವನ್ನು ನೀಡುವುದೂ ಇದೆ. ಬಬ್ಬುಸ್ವಾಮಿ ಕಾಯಕಯೋಗಿ, ಅವನು ದುಡಿದುದರಲ್ಲಿ ಒಂದಂಶ ಅವನ ಸೇವೆಯನ್ನು ಗೈಯುವ ಮುಕ್ಕಾಲ್ದಿ, ದರ್ಶನಪಾತ್ರಿಗೆ ನೀಡಿದರೆ ಬಬ್ಬುವಿಗೂ ಸಮಾಧಾನ ಆಗಬಹುದೇನೋ ಎನ್ನುವ ವಿಚಾರ.

ಹಲವಾರು ಬಬ್ಬುಸ್ವಾಮಿಯ ದೈವಸ್ಥಾನದಲ್ಲಿ ನೇಮಕ ಹೊಂದಿದ ದೈವ ಪಾತ್ರಿ ಇರುವುದಿಲ್ಲ. ಇತರ ದೈವಸ್ಥಾನಗಳಿಂದ ಪಾತ್ರಿಯನ್ನು ಕರೆಯಿಸಿಕೊಂಡಿರುತ್ತಾರೆ. ಸಂಕ್ರಮಣದ ಮೂಲ ಉದ್ದೇಶ, ಶ್ರೀ ಭಗವಾನ್ ಬಬ್ಬುಸ್ವಾಮಿಯನ್ನು ಪಾತ್ರಿಯ ದೇಹದಲ್ಲಿ ದರ್ಶನ ರೂಪದಲ್ಲಿ ದೈವವನ್ನು ಆಹ್ವಾನಿಸಿ, ಗ್ರಾಮದ ಭಕ್ತರ, ಊರಿನ ಭಕ್ತರ ಸಮಸ್ಯೆಗಳಿಗೆ ಪರಿಹಾರವನ್ನು ನೀಡುವುದಾಗಿದೆ. ಮನುಷ್ಯರಿಗೆ ಕಷ್ಟ ಕಾರ್ಪಣ್ಯಗಳು ಹೇಳಿ ಕೇಳಿ ಬರುವುದಿಲ್ಲ. ಉಲ್ಬಣಗೊಂಡಿರುವ ಸಮಸ್ಯೆಯ ಪರಿಹಾರಕ್ಕಾಗಿ ವರ್ಷದ ನೇಮೋತ್ಸವಕ್ಕೆ ಕಾದು ಕುಳಿತುಕೊಳ್ಳಲು ಅಸಾಧ್ಯವಾಗಿರುತ್ತದೆ. ಸೂಕ್ತ ಪರಿಹಾರ ದೊರಕಿಸಿಕೊಡುವ ವ್ಯವಸ್ಥೆಯ ಹಾಗೂ ಸೂಕ್ತ ಪರಿಹಾರ ದೊರೆಯುವ ಸ್ಥಳದ ಅಗತ್ಯ ಆ ಭಕ್ತನಿಗಿರುವ ಕಾರಣ ಸಂಕ್ರಮಣದಂತಹ ಆಚರಣೆ ಜನತೆಗೆ ಜೀವದಾನವನ್ನೇ ನೀಡಿದೆ. ಅದಕ್ಕಾಗಿ ಭಕ್ತರು ಹುಡುಕಿದ ಸ್ಥಳ ದೈವರಾಜ ಬಬ್ಬುವಿನ ದೈವಸ್ಥಾನ, ಆಯ್ಕೆ ಮಾಡಿದ ಪರಿಹಾರ ಮಾರ್ಗವೇ 'ದರ್ಶನ'.

ಸಂಕ್ರಮಣದಂದು ಶ್ರೀ ಬಬ್ಬುಸ್ವಾಮಿಯನ್ನು ದರ್ಶನ ಪಾತ್ರಿ ಮಾನಿಚ್ಚಿಯಲ್ಲಿ ಎಣ್ಣೆ ಬೂಳ್ಯದ ಮೂಲಕ ತನ್ನ ಶರೀರದಲ್ಲಿ ದೈವವನ್ನು ಆಹ್ವಾನಿಸಿಕೊಳ್ಳುತ್ತಾನೆ. ಮಾನಿಚ್ಚಿಯಲ್ಲಿ ದೈವದ ಪಾತ್ರಿ ನೀಡುವ 'ವಾಕ್','ಅಭಯ' ಅದು ಪಾತ್ರಿಯ ನುಡಿಗಳಲ್ಲ, ದೈವರಾಜ ಬಬ್ಬುವಿನ ನುಡಿಗಳಾಗಿರುತ್ತದೆ. ಇದನ್ನು ಮುಂಡಾಳ ಜನಾಂಗದ ಜೊತೆಗೆ ಬಬ್ಬುವಿನ ಸರ್ವ ಆರಾಧಕರೂ ಪ್ರಬಲವಾಗಿ ನಂಬಿರುತ್ತಾರೆ. ತಮ್ಮ ಸಮಸ್ಯೆ, ಕಷ್ಟಗಳಿಗೆ ಪರಿಹಾರ ಒದಗುವ ಸ್ಥಳ ಬಬ್ಬುಸ್ವಾಮಿಯ ದೈವಸ್ಥಾನಗಳು ಎಂಬುದು ಜನರ ನಂಬಿಕೆ. ಹಾಗಾಗಿ ಸಂಕ್ರಮಣದ ದಿನ ಪೂಜೆಯ ಬಳಿಕ ಪ್ರಶ್ನೆ ಕೇಳುವ ಕ್ರಮವಿದೆ. ಭಕ್ತಾಧಿಗಳು ದರ್ಶನದಲ್ಲಿರುವ ಪಾತ್ರಿಯಲ್ಲಿ ತಮ್ಮ ಸಮಸ್ಯೆಯನ್ನು ಅರಿಕೆ ಮಾಡಿಕೊಳ್ಳುತ್ತಾರೆ. ಅದಕ್ಕೆ ಸರಿಯಾದ ಪರಿಹಾರವನ್ನು ಶ್ರೀ ಬಬ್ಬುಸ್ವಾಮಿ ಒದಗಿಸಿ ಕೊಡುತ್ತಾರೆ.

ಶ್ರೀ ಬಬ್ಬುಸ್ವಾಮಿಯ ಕೆಲವು ದೈವಸ್ಥಾನಗಳಲ್ಲಿ ತಿಂಗಳಲ್ಲಿ ಎರಡು ಬಾರಿ ದರ್ಶನವನ್ನು ಮಾಡುತ್ತಾರೆ. ಇಲ್ಲಿ ಹಣ ಮಾಡುವ ಉದ್ದೇಶವಿಲ್ಲ. ಕೇವಲ ಜನರ ಕಷ್ಟಗಳಿಗೆ ಸ್ಪಂದಿಸುವ 'ಜನಸೇವೆಯೇ ಜನಾರ್ಧನ ಸೇವೆ' ಎಂಬ ನಿಲುವುಗಳ ಚಿಂತನೆ ಇಲ್ಲಿದೆ. ದೈವರಾಜ ಬಬ್ಬುಸ್ವಾಮಿ, ಹಾಗೂ ರಾಜನ್ ದೈವಗಳಿಗೆ ಪನಿಯಾರದ ಜೊತೆ ಸೀಯಾಳ ನೀಡಿದರೆ, ಸ್ಥಳದ (ಜಾಗೆದ) ಪರಿವಾರ ದೈವಗಳಾದ ಜಾಗೆದ ಗುಳಿಗ, ರಾಹುಗುಳಿಗ, ಸಂಕಲೆಗುಳಿಗ, ಸುಬ್ಬಿಗುಳಿಗ ಮುಂತಾದ ಆರ್ಭಟದ ದೈವಗಳಿಗೆ ಪನಿಯಾರದ ಜೊತೆಗೆ ಹರಕೆಯ ಕೋಳಿಯ ರಕ್ತತರ್ಪಣವನ್ನು ನೀಡುತ್ತಾರೆ. ಒಟ್ಟಿನಲ್ಲಿ ದೈವರಾಜ ಬಬ್ಬುಸ್ವಾಮಿ ಹೇಗೆ ತನ್ನ ಜನಾಂಗದ ಜನರಾದ ಮುಂಡಾಳರನ್ನು 'ಹೆಣ್ಣು ಕೋಳಿ ತನ್ನ ಮರಿಗಳನ್ನು ರೆಕ್ಕೆಯೊಳಗೆ ಬೆಚ್ಚಗಿಟ್ಟು ಕಾಪಾಡಿತೋ' (ಪೆರಡೆ ತನ್ನ ಕಿನ್ನಿಲೆನ್ ತಾಂಕಿಲೆಕ) ಅದೇ ರೀತಿ, ಅವನ ಜನಾಂಗವೂ ಬಬ್ಬುವಿನ ಭಕ್ತಾಧಿಗಳ, ಜನಾಂಗದ ಜನರ ಕಷ್ಟಗಳಿಗೆ ಈ ಸಂಕ್ರಮಣದಂತಹ ಆಚರಣೆಗಳ ಮೂಲಕ 'ಕೆರೆಯ ನೀರನ್ನು ಕೆರೆಗೆ ಚೆಲ್ಲಿದಂತೆ' ಸ್ಪಂದಿಸುತ್ತಿರುವುದು ಶ್ಲಾಘನೀಯ. ಶ್ರೀ ಬಬ್ಬುಸ್ವಾಮಿಯ ಆದರ್ಶ, ಮೌಲ್ಯಗಳ ಪ್ರತಿಫಲಿತ ಕ್ರಿಯೆ ಇದಾಗಿದೆ.

**ನಾಗರ ಪಂಚಮಿ:**

ಆಷಾಡ ಕಳೆದು 'ಮುಖೆ' ನಕ್ಷತ್ರದಲ್ಲಿ ಬರುವುದೇ 'ಸೋಣ'. ಸೋಣ ತಿಂಗಳು ಸಂಕ್ರಾತಿಯಂದು ಪ್ರಾರಂಭವಾಗುತ್ತದೆ. ಪರಿಶಿಷ್ಟರಿಂದ ಮತ್ತು ಕೊರಗರಿಂದ ಆರಾಧಿಸಲ್ಪಡುವ ಕಂಬೆರ್ಲು ಮುಂತಾದ ಕ್ಷೇತ್ರಗಳಲ್ಲಿ ಕಾಣ ಬರುವ ಮುಖ್ಯ ಆರಾಧನಾ ಶಕ್ತಿಯೇ ತುಳುವ ಮೂಲದ ಬೆರ್ಮೆರ್. ಪೂರ್ವದಲ್ಲಿ ಈ ನಾಡಿನಲ್ಲಿ ನಾಗವಂಶದ ಮೂಲ ನಿವಾಸಿಗಳು ವಾಸಿಸುತ್ತಿದ್ದು, ಅವರು ಮುಂದೆ 'ನಾಗ ಸಂತತಿ'ಯೆಂದು ಕರೆಯಲ್ಪಟ್ಟರು. ಏಳನೆಯ ಶತಮಾನದ್ದು ಎನ್ನಲಾದ 'ನಾಗರ ಖಂಡ' ಎಂಬ ಗ್ರಂಥದಲ್ಲಿ ಇದರ ಉಲ್ಲೇಖವಿದೆ ಎನ್ನುತ್ತಾರೆ ವಿದ್ವಾಂಸರು. 'ಹರಿವಂಶ' ಎಂಬುದು ರಾಮಾಯಣದಷ್ಟೇ ಪ್ರಾಚೀನ ಗ್ರಂಥವಾಗಿದೆ. ಈ ಗ್ರಂಥದಲ್ಲಿ ತುಳುನಾಡಿನ ಹುಟ್ಟಿನ ಕತೆಯಿದೆ. ತುಳುನಾಡಿನ ಉದ್ದಗಲಕ್ಕೂ ಸಾವಿರಾರು ಸಂಖ್ಯೆಯಲ್ಲಿ ಬ್ರಹ್ಮಸ್ಥಾನ, ನಾಗಸ್ಥಾನ, ಆಲಡೆಗಳು, ನಾಗಬ್ರಹ್ಮ ಸ್ಥಾನಗಳು ಸ್ಥಾಪನೆಯಾಗಿವೆ.

ತುಳುವರು ಮಾತೃ ಪ್ರಧಾನ ಕುಟುಂಬ ಪದ್ಧತಿಯನ್ನು ಅನುಸರಿಸುವವರು. 'ನಾಗ' ತುಳುವರ ಸಂತಾನ ಶಕ್ತಿ ನೀಡುವ ದೇವರು. ಸಂತಾನ ಪ್ರಾಪ್ತಿಯಾಗಲೆಂದೇ ತುಳುವರು ನಾಗನಿಗೆ ಶರಣು ಹೋಗುತ್ತಾರೆ. ಸಂತಾನ ಹೀನತೆ, ದೃಷ್ಟಿ ದೋಷ, ಚರ್ಮವ್ಯಾದಿ, ನರದೋಷಗಳಿಗೆ ತುಳುವರು ನಾಗನನ್ನು ವಿಶೇಷವಾಗಿ ಪೂಜಿಸುತ್ತಾರೆ. ಮೃತ ನಾಗ ಶರೀರ ನೋಡಿದರೆ ಅದಕ್ಕೆ ಸದ್ಗತಿ ಮಾಡಬೇಕು. ಇಲ್ಲದಿದ್ದರೆ ನೋಡಿದವರ ಸಂತತಿ ನಶಿಸುವುದೆಂಬ ನಂಬಿಕೆ ತುಳುವರಲ್ಲಿ ಈಗಲೂ ಇದೆ. ಐತಿಹಾಸಿಕವಾಗಿ ತುಳುನಾಡು ನಾಗದೇವನ ವಾಸಸ್ಥಳ. ಇಲ್ಲಿ ಭೂಮಿಯಡಿಯಲ್ಲಿ ಕೊಪ್ಪರಿಗೆಗಳು ಸಿಕ್ಕಿರುವುದಕ್ಕೆ ಸಾಕ್ಷಿಗಳಿವೆ. ಕೊಪ್ಪರಿಗೆಗಳನ್ನು ನಾಗದೇವನು ರಕ್ಷಿಸಿಕೊಂಡು ಬರುತ್ತಾನೆ ಎಂಬ ದೃಢವಾದ ಚಿಂತನೆಗಳು ತುಳುವರಲ್ಲಿ ಗಾಢವಾಗಿದೆ.

ಹಿಂದಿನ ಕಾಲದಲ್ಲಿ ತುಳುವ ಮೂಲದ ಜನ ಸೌರಮಾನ ಯುಗಾದಿಯ ಮೊದಲ ದಿನ ನಾಗನಿಗೆ ತನು, ತಂಬಿಲ ನೀಡುವ ಸಂಪ್ರದಾಯವಿತ್ತು. ತುಳುವರು ಇದೀಗ ಆಷಾಢ ತಿಂಗಳ ಕೊನೆಯ ಭಾಗದಲ್ಲಿ ಅಂದರೆ ಶ್ರಾವಣ ಮಾಸದ ಶುಕ್ಲ ಪಂಚಮಿಯಂದು ಬರುವ ನಾಗರಪಂಚಮಿಯೇ ನಾಗನಿಗೆ ಸರಿಯಾದ ದಿನವೆಂದು ನಿಗಧಿಪಡಿಸಿ, ಆಗಲೇ ನಾಗನಿಗೆ ತನು, ತಂಬಿಲದ ವ್ಯವಸ್ಥೆಯನ್ನು ಮಾಡುತ್ತಾರೆ. ಮೂಲತ: ದಲಿತರು ಮಣ್ಣಿನ ಜೊತೆ ನೇರ ಸಂಬಂಧ ಉಳ್ಳವರು. ಹಾಗಾಗಿ ಈ ಜನಾಂಗದಲ್ಲಿ 'ನಾಗಾರಾಧನೆ' ಭಿನ್ನ ರೀತಿಯಲ್ಲಿದೆ. ಮೂಲದಲ್ಲಿ ಮುಂಡಾಳರ ಪೂರ್ವಿಕರು ನಾಗಾರಾಧನೆಯನ್ನು ಸ್ವತ: ತಾವೇ ಮಾಡುತ್ತಿದ್ದರು. ದಲಿತರ ಮೂಲ ಸ್ಥಾನಗಳು ವೈಭವೀಕೃತ ದೇವಸ್ಥಾನಗಳದಲ್ಲಿಲ್ಲ. ದಟ್ಟವಾದ ಬೆಟ್ಟ, ಕಾಡು, ಗುಡ್ಡಗಳಲ್ಲೇ ನಾಗನಬೀಡು ಇದೆ. ಅಲ್ಲಿಯೇ ಪೂಜೆ ಪುರಸ್ಕಾರಗಳನ್ನು ಅವರ ಮೂಲದ ಹಿರಿಯರು ನಡೆಸುತ್ತಾರೆ. ತುಳುನಾಡಿನಲ್ಲಿ ವಾಸಿಸುವ ಮುಂಡಾಳರ ನಾಗಮೂಲಗಳು ಬಹಳ ಒಳಪ್ರದೇಶಗಳಲ್ಲಿ ಅಂದರೆ ಗ್ರಾಮೀಣ ಪ್ರದೇಶಗಳಲ್ಲಿದೆ. ನಾಗರ ಪಂಚಮಿಯ ದಿನ ನಾಗಬನಗಳಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ನಾಗನ ಕಲ್ಲುಗಳಿಗೆ ಅಥವಾ ದೇವಸ್ಥಾನಗಳ ಪಕ್ಕದಲ್ಲಿರುವ ನಾಗಬನಗಳಲ್ಲಿರುವ, ಕಾಡ–ಬನಗಳಲ್ಲಿರುವ ಅಶ್ವತ್ಥಕಟ್ಟೆಯ ಬುಡದಲ್ಲಿರುವ ನಾಗನ ಕಲ್ಲುಗಳಿಗೆ ಹಾಲಾಭಿಷೇಕ, ಸೀಯಾಳಾಭಿಷೇಕ ಮಾಡಿ ವಿಶೇಷ ಪೂಜೆ ಮಾಡುವ ಕ್ರಮ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ಈ ವಿಶೇಷವಾದ ದಿನದಂದು ಮುಂಡಾಳ ಜನಾಂಗದವರು ಎಲ್ಲರಂತೆ ಶುದ್ಧಾಚಾರದಿಂದ ನಾಗನಿಗೆ ವಿವಿಧ ರೀತಿಯ ಅಭಿಷೇಕಗಳನ್ನು ಮಾಡಿಸುತ್ತಾರೆ.

ನಾಗರ ಪಂಚಮಿಯಂದು ಮುಂಡಾಳ ಜನಾಂಗವು ಸ್ನಾನ ಮಾಡಿ, ಮಡಿಯನ್ನು ತೊಟ್ಟು ಕುಟುಂಬಸ್ಥರಾಗಿ ಮೂಲನಾಗನ ಸ್ಥಳಕ್ಕೆ ಬರುವರು. ಅಲ್ಲಿರುವ ಅವರ ಹಿರಿಯರು ಅಥವಾ ಪುರೋಹಿತರು ಪರಿಸರವನ್ನು ಸ್ವಚ್ಛಗೊಳಿಸಿ, ಬಾವಿಯ ನೀರಿನಿಂದ ನಾಗಕಲ್ಲುಗಳನ್ನು ತೊಳೆದು, ಅರಶಿನ ಹುಡಿ ಆ ಕಲ್ಲಿಗೆ ಲೇಪಿಸಿ, ಸಕ್ಕರೆ ಹಾಲು, ಎಳನೀರು, ಸೀಯಾಳ ಮುಂತಾದ ವಸ್ತುಗಳಿಂದ ನಾಗನಿಗೆ ಅಭಿಷೇಕ ಮಾಡುತ್ತಾರೆ. ಬಳಿಕ ನಾಗದೇವರಿಗೆ ಇಷ್ಟವಾದ ಕೇದಗೆ, ಮುಡ್ವಲ, ಸಂಪಿಗೆ, ಹಿಂಗಾರ, ಸೇವಂತಿಗೆ, ಮಲ್ಲಿಗೆ ಮೊದಲಾದ ಹೂವುಗಳಿಂದ ನಾಗನನ್ನು ಸಿಂಗರಿಸುತ್ತಾರೆ. ಹೊದ್ದಿಲು, ತೆಂಗಿನಕಾಯಿ, ಬೆಲ್ಲ, ಬಾಳೆಹಣ್ಣು ಇವುಗಳನ್ನು ನೈವೇದ್ಯದ ರೂಪದಲ್ಲಿ ನಾಗನಿಗೆ ಸಮರ್ಪಿಸುತ್ತಾರೆ. ನಾಗನಿಗೆ ಹಾಲೆರೆಯುವ ಉದ್ದೇಶ, ಭೂಮಿ ತಾಯಿಯನ್ನು, ನಾಗನನ್ನು ತಂಪುಗೊಳಿಸುವುದು. ಅವರು ತಂಪಾದ್ರೆ, ನಮ್ಮನ್ನು ತಂಪಾಗಿರಿಸುತ್ತಾರೆ. ನಾಗದೇವರಿಗೆ ಹಾಲೆರೆಯುವ, ಸೀಯಾಳ ಅಭಿಷೇಕ ಮಾಡುವ ಈ ಕ್ರಿಯೆಯೇ 'ತನು' ಎರೆಯುವ ಕ್ರಿಯೆಯಾಗಿದೆ. ಈ ಕ್ರಿಯೆಯನ್ನು ಮುಂಡಾಳರಲ್ಲಿ ಹಿರಿಯರೊಬ್ಬರು ಮಾಡುತ್ತಾರೆ. ಬಳಿಕ ನೆರೆದ ಕುಟುಂಬಸ್ಥರು ಅವರಿಗೆ ದಕ್ಷಿಣೆ ನೀಡುತ್ತಾರೆ. ತರುವಾಯ ಮನೆಗೆ ಬಂದು ಕುಚಲಕ್ಕಿಯಿಂದ ತಯಾರಿಸಿದ ಹಳದಿ ಎಲೆಯಿಂದ ಮಾಡಲ್ಪಟ್ಟ ಸಿಹಿಕಡುಬನ್ನು ಮನೆಮಂದಿ ಎಲ್ಲಾ ಕುಳಿತು ಆಸ್ವಾದಿಸುತ್ತಾರೆ. ಮುಂಡಾಳರ ನಾಗಮೂಲಗಳು ಇತ್ತೀಚಿಗಿನ ಬೆಳವಣಿಗೆಯ ಪ್ರಕಾರ ಪುರೋಹಿತ ವರ್ಗದ ಅಥವಾ ದಲಿತೇತರರ ನಾಗಕಲ್ಲುಗಳಲ್ಲಿ ಸೇರ್ಪಡೆಗೊಂಡಿದೆ. ಆದರೆ ಹಾಗಾಗಲು ಸಾಧ್ಯವಿದೆಯೇ ಎಂಬ ತರ್ಕ ಇಲ್ಲಿ ಹುಟ್ಟಿಕೊಳ್ಳುತ್ತದೆ. ಏಕೆಂದರೆ 'ಎತ್ತಣ ಮಾಮರ, ಎತ್ತಣ ಕೋಗಿಲೆ, ಎತ್ತಲಿಂದೆತ್ತ

ಸಂಬಂಧವಯ್ಯ?' ಎನ್ನುವ ವಚನದ ಸಾಲುಗಳಂತೆ ಎಲ್ಲಿ ದಲಿತರು? ಎಲ್ಲಿ ಪುರೋಹಿತ ವರ್ಗ? ಒಂದು ರೀತಿಯಲ್ಲಿ ದಲಿತ ವರ್ಗಗಳಲ್ಲಿ ನಾಗ ನಂಬಿಕೆಗಳ ಬಗ್ಗೆ ಭಯ ಹುಟ್ಟಿಸಿರುವುದೇ ಈ ಪುರೋಹಿತ ವರ್ಗ. ದಲಿತೇತರರಿಂದ ಬ್ರಾಹ್ಮಣ ವರ್ಗಕ್ಕೆ ಹಲವು ರೀತಿಯ ಪ್ರಯೋಜನಗಳಿರಬಹುದು. ಇದು ಇಂದು ನಿನ್ನೆಯ ಸಮಸ್ಯೆಗಳಲ್ಲ. ಪ್ರಾಚೀನ ಕಾಲದಿಂದಲೂ ಇರುವಂತಹದ್ದು. ಹಾಗಾಗಿ ನಾಗದೋಷದಿಂದ ಯಾವುದೇ ಸಮಸ್ಯೆಗಳು ತಲೆದೋರಿದಾಗಲೂ ಈ ವರ್ಗ ಶರಣು ಬೀಳುವುದು ವೈದಿಕರಲ್ಲಿಗೆಯೇ ಎಂಬುದನ್ನು ನಾವು ಮರೆಯುವಂತಿಲ್ಲ.

ಮೂಲಭೂತವಾಗಿ ಮಣ್ಣಿನ ಜೊತೆಗೆ ಬಾಂಧವ್ಯವುಳ್ಳ ದಲಿತ ಜನಾಂಗಕ್ಕೆ ದೈವ, ದೇವರುಗಳು ಒಲಿದಿರುವುದನ್ನು ನಾವು ತಿಳಿದಿದ್ದೇವೆ. ಮುಂಡಾಳರ ನಾಗಮೂಲಗಳಲ್ಲಿ ನಾಗರಾಧನೆಯ ಕಾರ್ಯಗಳನ್ನು ಮಾಡುವವರು ಬ್ರಾಹ್ಮಣರಲ್ಲ. ಈ ಪದ್ಧತಿ ಬಹಳ ಪುರಾತನದ್ದು, ಹಿಂದಿನ ಕಾಲದಲ್ಲಿ ನಾಗಮಣಿಗಳು ಹಿರಿಯರಿಗೆ ದೊರಕುತ್ತಿತ್ತು. ಗಾಯಗೊಂಡ ಹಾವುಗಳಿಗೆ ಅದರ ಮೈಸವರಿ ಗಿಡಮೂಲಿಕೆಯ ಔಷಧಿ ಲೇಪಿಸಿ, ಅದರ ಗಾಯವನ್ನು ಗುಣಪಡಿಸುತ್ತಿದ್ದ ಉಲ್ಲೇಖಗಳು ಪುರಾಣ ಗ್ರಂಥಗಳಲ್ಲಿದೆ. ಹಾಗಾಗಿ ಮುಂಡಾಳರು ನಾಗಾರಧಕರೂ ಆಗಿರುವ ಕಾರಣ ಅವರ ಸಮಸ್ಯೆಗಳಿಗೆ ಅವರ ನಾಗನ ಮೂಲದಲ್ಲೇ ಪರಿಹಾರವನ್ನು ಕಾಣುತ್ತಾರೆ. ಅಷ್ಟು ಮಾತ್ರವಲ್ಲ ನೈಸರ್ಗಿಕವಾಗಿ ನಿಸರ್ಗ ಪ್ರಿಯ ನಾಗದೇವನನ್ನು ಮುಂಡಾಳ ಜನಾಂಗದವರೇ ಪೂಜಿಸಿದರೆ ಫಲ ಜಾಸ್ತಿ ಎನ್ನುವ ನಂಬಿಕೆಗಳೂ ಇದೆ. ಇನ್ನೊಂದು ಮಗ್ಗುಲಲಿ ಚಿಂತಿಸಿದರೆ ನಾಗಾರಾಧಕರು ಸಸ್ಯಾಹಾರಿಗಳು. ಆದರೆ ಮುಂಡಾಳರು ಮೂಲದಲ್ಲಿ ಲಿಂಗಾಯಿತರಾಗಿದ್ದರೂ, ಬರಗಾಲಕ್ಕೆ ಬಲಿಯಾಗಿ ಮಧುಮಾಂಸ ಸೇವಿಸಿದವರು. ಮುಂದೆ ತಮ್ಮ ನಂತರ ತಮ್ಮ ಮಕ್ಕಳು ನಾಗನ ಸೇವೆ ಮಾಡುವರೆಂಬ ನಂಬಿಕೆ ಅವರಿಗಿಲ್ಲ. ಮಾಡದೇ ಹೋದ್ರೆ ನಾಗದೋಷ ತಲೆತಲೆಮಾರುಗಳಿಗೂ ತಟ್ಟುವುದೆಂಬ ಭಯ. ಈ ಕಾರಣಕ್ಕಾಗಿಯೋ ಅಥವಾ ಮುಂದೆ ಇದರ ಚಾಕರಿ ಮಾಡುವ ಸಂದರ್ಭದಲ್ಲಿ ತಮ್ಮ ನಂತರದ ಪೀಳಿಗೆಗೆ ತೊಂದರೆ ಬರುವುದು ಎಂದು ಲೆಕ್ಕಾಚಾರ ಹಾಕಿಕೊಂಡಿದ್ದರಿಂದಲೋ ಹೀಗೆ ಹತ್ತು ಹಲವು ಕಾರಣಗಳಿಂದಾಗಿ ಮುಂಡಾಳರೂ ನಾಗರಪಂಚಮಿ ದಿವಸ ನಾಗಾರಾಧನೆಯ ಕ್ರಿಯೆಗೆ ಪುರೋಹಿತರನ್ನೇ ಆಶ್ರಯಿಸಿದ್ದಾರೆ, ಪುರೋಹಿತರನ್ನೇ ನೇಮಕ ಮಾಡುತ್ತಾರೆ.

ಇಲ್ಲಿ ಮತ್ತೊಂದು ಅಂಶ ಗಮನಾರ್ಹವಾದುದು. ಬಬ್ಬುವಿನ ಅವತಾರವೇ 'ಕಂಬೆರ್ಲು'. ಮುಂಡಾಳ ಜನಾಂಗದ ಉದ್ಧಾರಕ್ಕಾಗಿ ಬಬ್ಬು ನಾಗರೂಪದಲ್ಲಿ ಭೂಲೋಕದಲ್ಲಿ ಅವತರಿಸಿದ್ದು, ಕಂಬೆರ್ಲು ಜನಾಂಗ ಶುದ್ಧ ಸಸ್ಯಾಹಾರಿಯಾಗಿರುವುದರಿಂದ ಹಾಗೂ ಮುಂಡಾಳರು ಮಾಂಸಾಹರಿಗಳಾಗಿದ್ದುದರಿಂದ 'ಮುಂದೆ ನಿಮ್ಮ ಉದ್ದಾರಕ್ಕಾಗಿ ಬೇರೆ ಅವತಾರ ತಾಳಿ ಬರುವೆ' ಎಂಬ ನುಡಿಯನ್ನಿತ್ತು ಮಾಯಕವಾಗುತ್ತದೆ. ಇವತ್ತಿಗೂ ಬಡಕಾಯಿ ಅಂದರೆ ಮಂಗಳೂರಿನ ಸುರತ್ಕಲ್‌ನಿಂದ ಆಚೆಗೆ ವಾಸ ಮಾಡುವ ಮುಂಡಾಳ ಜನಾಂಗದವರಲ್ಲಿ ಕಂಬೆರ್ಲು ಆರಾಧನೆಯೇ ಜಾಸ್ತಿ. ಕಂಬೆರ್ಲು ನಾಗರೂಪಿಯಾಗಿದ್ದು, ಬಬ್ಬುವಿನ ಹಲವು ಅವತಾರಗಳಲ್ಲಿ ಒಂದಾಗಿದೆ.

ನಾಗನಿಗೆ ಸಂಬಂಧಪಟ್ಟಂತೆ ಸಾರ್ವಜನಿಕವಾದ ಕೆಲವು ನಿಯಮಗಳಿವೆ. ನಾಗನ ಕಟ್ಟೆ, ನಾಗನ ಗುಡಿಗಳಿಗೆ, ನಾಗಕೆರೆಗಳಿಗೆ 12 ವರ್ಷ ತುಂಬಿದ ಕನ್ಯೆಯರಿಗೆ, 7 ತಿಂಗಳು ತುಂಬಿದ ಗರ್ಭಿಣಿ ಸ್ತ್ರೀಯರಿಗೆ, ಅಮೆ, ಸೂತಕ, ಮುಟ್ಟಾದವರಿಗೆ ನಿಷೇಧವಿದೆ. ಇದನ್ನು ಮುಂಡಾಳ ಜನಾಂಗದವರೂ ಅನುಸರಿಸುತ್ತಾರೆ.

## ಮುಂಡಾಳರಲ್ಲಿ ಕಂಬುಳ (ಕಂಬುಲ):

ಉಡುಪಿಯ ಕುಮಾರ ಚಾವಡಿಯಲ್ಲಿ ಮುಂಡಾಳ ವರ್ಗದವರು ಈ ಕಂಬುಲದಲ್ಲಿ ಪ್ರಧಾನ ಭೂಮಿಕೆಯಲ್ಲಿದ್ದಾರೆ. ಕಂಬುಲದ ಮೊದಲ ದಿನ ಮುಂಜಾನೆ ಕಂಬುಲದ ಗದ್ದೆಯ ಬದುಗಳನ್ನು ಸೇಡಿಯಿಂದ (ರಂಗೋಲಿ) ಅಲಂಕರಿಸುವ ಹಕ್ಕು ಮುಂಡಾಳರದ್ದು. ಗದ್ದೆಯ ಬದುವಿಗೆ ಹೊಸ ಮಣ್ಣು ಸವರಿ, ಸೇಡಿಯಿಂದ ಅದನ್ನು ಅಲಂಕರಿಸುತ್ತಾರೆ. ಚೆಂದ ಕಾಣುವ ಸಲುವಾಗಿ ಈ ರಂಗೋಲಿಯನ್ನು ಹಾಕುವುದಿಲ್ಲ. ಧಾರ್ಮಿಕ ಆಚರಣೆಯೊಳಗಡೆ ಅದಕ್ಕೆ ವಿಶೇಷವಾದ ಮಹತ್ವವಿದೆ. ಸೇಡಿಯ ಈ ಅಲಂಕಾರ ಕಂಬುಲದ ಗದ್ದೆಯ ಪವಿತ್ರತೆಯನ್ನು ಸಂಕೇತಿಸುತ್ತದೆ. ಈ ಕಾರ್ಯಕ್ಕೆ ಹಿಂದೆ ಮುಂಡಾಳರಿಗೆ ಭತ್ತ ಮತ್ತು ತಾಂಬೂಲ ನೀಡುತ್ತಿದ್ದರು. ಕಾಲ ಬದಲಾದ ಕಾರಣ ಈಗ ಹಣ ಮತ್ತು ತಾಂಬೂಲ ನೀಡುತ್ತಾರೆ. ಕೊರಗರು ಇಲ್ಲಿ ಡೋಲು ಬಡಿಯುತ್ತಾರೆ. ಉಡುಪಿಯ ಕಂಬುಲ ಮುಂಡಾಳ ಜನಾಂಗದವರಿಗೆ ಹಾಗೂ ಕೊರಗ ಜನಾಂಗದವರಿಗೆ ಬಹು ದೊಡ್ಡ ಹಬ್ಬವಾಗಿದೆ.

## ಅಷ್ಟಮಿ (ಅಷ್ಟೆಮಿ):

ಸೋಣ ತಿಂಗಳ ಅಮವಾಸ್ಯೆ ಕಳೆದು ಎಂಟು ದಿನಗಳಲ್ಲಿ ಬರುವುದೇ ಅಷ್ಟಮಿ. ಶ್ರೀ ಕೃಷ್ಣ ಪರಮಾತ್ಮ ಕಂಸನ ಕಾರಾಗೃಹದಲ್ಲಿ ವಸುದೇವ, ದೇವಕಿಯ ಪುತ್ರನಾಗಿ, ದೇವಕಿಯ ಎಂಟನೆಯ ಗರ್ಭದಲ್ಲಿ ರಾತ್ರಿ ಹನ್ನೆರಡು ಗಂಟೆ, ಹದಿನಾರು ಸೆಕುಂಡಲ್ಲಿ ಜನ್ಮ ತಾಳುತ್ತಾನೆ. ರಾಕ್ಷಸರನ್ನು ಸದೆ ಬಡಿದು ಭೂಲೋಕಕ್ಕೆ ಬೆಳೆದು ತೋರಿದ ಪವಾಡ ಪುರುಷನೇ ಕೃಷ್ಣ. ಕೃಷ್ಣ ಹುಟ್ಟಿದ ಈ ದಿನವನ್ನು ತುಳುವರೂ ಸೇರಿದಂತೆ ನಾಡಿನಾದ್ಯಂತ ಕೃಷ್ಣಾಷ್ಟಮಿ ಎಂದೇ ಆಚರಿಸುತ್ತಾರೆ.

ಅಷ್ಟಮಿಯಂದು ಬೆಳಿಗ್ಗೆ ಉದ್ದು, ಅಕ್ಕಿಯನ್ನು ನೆನೆಹಾಕಿ ಮೂಡೆ, ಕೊಟ್ಟಿಗೆ, ಗುಂಡ ಮುಂತಾದ ಅಕ್ಕಿ ತಿಂಡಿಗಳನ್ನು ತಯಾರಿಸುತ್ತಾರೆ. ಅಷ್ಟಮಿಯ ಮೊದಲ ದಿನ 'ಬಲೊತು ಕುಲ್ಲುನಿ' ಇದೆ. ಇದು ಮರುದಿನದ ಅಷ್ಟಮಿಯ ಉಪವಾಸಕ್ಕೆ ನಡೆಸುವ ತಯಾರಿಯಾಗಿದೆ. ಅಕ್ಕಿಯ ಕಡುಬು ಪಾಯಸ (ಸಾರ್ನೆದಡ್ಯ) ವನ್ನು ಹೊಟ್ಟೆ ತುಂಬಾ ತಿಂದು, ನಡುರಾತ್ರಿ ಚಂದ್ರೋದಯಕ್ಕೆ ಮುನ್ನ ಸ್ನಾನ ಮಾಡಿ ಉಪವಾಸ ಪ್ರಾರಂಭಿಸುತ್ತಾರೆ. ಅಷ್ಟಮಿಯ ದಿನದ ಚಂದ್ರೋದಯಕ್ಕೆ ಉಪವಾಸ ಬಿಡುತ್ತಾರೆ. ಚಂದ್ರೋದಯದಿಂದ ಚಂದ್ರೋದಯಕ್ಕೆ ಮಧ್ಯೆ ಬರುವ ಮಧ್ಯಾಹ್ನಕ್ಕೆ ಸೀಯಾಳ ಕುಡಿಯುತ್ತಾರೆ. ಅದೇ ಫಲಹಾರ. ನಿದ್ದೆ ಬಿಟ್ಟು ಜಾಗರಣೆ ಕೂರುವಾಗ ಚೆನ್ನೆಮಣೆ,

ಕಥೆ, ತಪ್ಪಂಗಾಯಿ ಆಟಗಳ ಮನರಂಜನೆಯ ಮೂಲಕ ಈ ಜಾಗರಣೆಯನ್ನು ನಡೆಸುತ್ತಾರೆ. ಮುಂಡಾಳ ಜನಾಂಗದಲ್ಲೂ ಈ ಆಚರಣೆ ಇದೆ. ಚಂದ್ರೋದಯದ ಬಳಿಕ ತುಳಸಿಕಟ್ಟೆಯ ಬಳಿ ದೇವರಿಗೆ ಅರ್ಘ್ಯ ನೀಡುವ ಮೂಲಕ ಉಪವಾಸವನ್ನು ಮುಕ್ತಾಯಗೊಳಿಸುತ್ತಾರೆ. ಉಪವಾಸ ಹಿಡಿದವರು ಬಿಟ್ಟಾಗ ಬಿಸಿಹಾಲು, ಸಿಹಿಕಡುಬು ಸೇವಿಸುತ್ತಾರೆ. ಕೃಷ್ಣ ಹುಟ್ಟಿದ ಸಮಯದಲ್ಲಿ ಶ್ಯಾವಿಗೆ ಪಾಯಸವನ್ನು ಸೇವಿಸುವ ಪದ್ಧತಿ ಇದೆ. ಕಾರಣ ಕೃಷ್ಣನ ಜನನ ಭೂಲೋಕಕ್ಕೆ ಸಿಹಿಸುದ್ದಿ.

ಜನ್ಮಾಷ್ಟಮಿಯ ದಿನ ತರಕಾರಿ ಖಾದ್ಯಗಳನ್ನು ತಯಾರಿಸುತ್ತಾರೆ. ಎಷ್ಟೇ ಬಡವರಾದರೂ ವರ್ಷದ ಮೊದಲ ಹಬ್ಬವನ್ನು ಆಚರಿಸಲೇಬೇಕು. ಇದಕ್ಕೊಂದು ದೃಷ್ಟಾಂತಗಳೂ ಇದೆ. ಬಹಳ ವರ್ಷಗಳ ಹಿಂದೆ ಅಷ್ಟಮಿ ಮಾಡಲು ಆರ್ಥಿಕ ಸಮಸ್ಯೆ ತಲೆದೋರಿದಾಗ ತಾಯಿಯೊಬ್ಬಳು ತನ್ನ ಮೊದಲ ಮಗನನ್ನು ಉಳ್ಳವರ ಅಂದರೆ ಸ್ಥಿತಿವಂತರ ಮನೆಯಲ್ಲಿ ಅಡವಿಟ್ಟು ಹಣ ತಂದು ಅಷ್ಟಮಿಯ ಹಬ್ಬದಡಿಗೆ ಮಾಡಿ ತನ್ನ ಉಳಿದ ಮಕ್ಕಳಿಗೆ ನೀಡಿದಳಂತೆ. ಬಳಿಕ ಭತ್ತ ಕೊಯ್ದು ಬಂದ ಪಗಾರದಿಂದ ಉಳ್ಳವರ ಕೈಯಿಂದ ತನ್ನ ಹಿರಿಮಗನನ್ನು ಬಿಡಿಸಿಕೊಂಡಳಂತೆ. ಹಾಗಾಗಿ ಮುಂಡಾಳ ಜನಾಂಗದಲ್ಲೂ ಎಷ್ಟೇ ಬಡವರಾಗಿರಲಿ, ಅಷ್ಟಮಿ ಹಬ್ಬವನ್ನು ಮಾಡಿಯೇ ಮಾಡುತ್ತಾರೆ. ಆ ಘಟನೆಯ ದ್ಯೋತಕವಾಗಿ ಇವತ್ತಿಗೂ ಹಿರಿಯ ಮಕ್ಕಳಿಗೆ ಅಕ್ಕಿ ತಿಂಡಿ, ಪಾಯಸ ಮಾಡಿ ಬಡಿಸಬೇಕೆಂಬ ನಿಯಮವಿದೆ. ಮುಂಡಾಳ ಜನಾಂಗದ ಶ್ರೀ ಬಬ್ಬುಸ್ವಾಮಿ ದೈವಸ್ಥಾನದಲ್ಲಿ ಈ ಆಚರಣೆಗಳಿಲ್ಲ. ಆದರೆ ಮನೆಗಳಲ್ಲಿ ಕೃಷ್ಣಾಷ್ಟಮಿ ಆಚರಿಸಿ, ತರಕಾರಿ ಅಡುಗೆ, ಅಕ್ಕಿ ತಿಂಡಿ, ಪಾಯಸ ತಯಾರಿಸಿ, ಮೊದಲು ತಮ್ಮ ಸತ್ತ ಪೂರ್ವಜರಿಗೆ ತುದಿ ಬಾಳೆಎಲೆಯಲ್ಲಿ ಮನೆಯ ಹಿರಿಯರು ಸದಸ್ಯರು ಬಡಿಸಿ, 'ಮಾಡಿದ ಅಡುಗೆಯನ್ನು ಪ್ರೀತಿಯಿಂದ ಬಂದು ಸ್ವೀಕರಿಸಬೇಕೆಂದು' ಪ್ರಾರ್ಥಿಸುತ್ತಾರೆ. ಮನೆ ಮಂದಿ ಎಲ್ಲ ಅಡ್ಡ ಬಿದ್ದು ಪ್ರಾರ್ಥಿಸಿ ಬಳಿಕ ಆ ಆಹಾರವನ್ನು ಮನೆಯಂಗಳದಲ್ಲಿ ಕಾಗೆ ಮುಟ್ಟಲು ಇಡುತ್ತಾರೆ. ಕಾಗೆ ಮುಟ್ಟಿದ ಬಳಿಕವಷ್ಟೇ ಮನೆಯ ಯಜಮಾನಿ ಮನೆ ಮಂದಿಗೆಲ್ಲ ಊಟ ಬಡಿಸುತ್ತಾಳೆ. ಬಾಳೆ ಎಲೆಯಲ್ಲಿ ಎಲ್ಲರೂ ಜೊತೆಗೂಡಿ, ನೆಲದಲ್ಲಿ ಕುಳಿತು ಊಟ ಮಾಡಬೇಕು. ಇದು ಈ ಹಬ್ಬದ ವಿಶೇಷತೆ. ಮುಂಡಾಳ ಜನಾಂಗದಲ್ಲಿ ಸ್ಥಿತಿವಂತರಿದ್ದರೆ ಕೃಷ್ಣನ ಆರಾಧಕರಾಗಿದ್ದರೆ ದೇವರ ಭಾವಚಿತ್ರದ ಮುಂದೆ ತುದಿ ಬಾಳೆಎಲೆಯಲ್ಲಿ ಎಳ್ಳುಂಡೆ, ಚಕ್ಕುಲಿ, ಫಲ ವಸ್ತು, ಕಜ್ಜಾಯ, ಹಾಲು ಪಾಯಸವನ್ನು ಇಟ್ಟು ಪೂಜಿಸಿ ಬಳಿಕವಷ್ಟೇ ಹಬ್ಬದೂಟವನ್ನು ಮಾಡುತ್ತಾರೆ. ಮರುದಿನ ಅಷ್ಟಮಿ ಪಾಡ್ಯ, ಹುಲಿವೇಷಗಳು, ಇನ್ನಿತರ ವೇಷಗಳ ಕುಣಿತಗಳು ಈ ಹಬ್ಬಕ್ಕೆ ಇನ್ನಷ್ಟು ಮೆರುಗನ್ನು ನೀಡುತ್ತದೆ. ಪಾಡ್ಯ, ಕೃಷ್ಣ ಬೆಣ್ಣೆ ಕದ್ದ ಕುರುಹಾಗಿ ಇವತ್ತಿಗೂ ಮೊಸರು ಕುಡಿಕೆಯನ್ನು ಆಚರಿಸುತ್ತಾರೆ.

**ಚೌತಿ:**

ಅಷ್ಟಮಿ ಕಳೆದು ಹನ್ನೆರಡು ದಿನಕ್ಕೆ ಚೌತಿ ಹಬ್ಬವು ಬರುವುದು. ಈ ಹಬ್ಬವನ್ನು ತುಳುನಾಡಿನಾದ್ಯಂತ ಆಚರಿಸುತ್ತಾರೆ. ರೈತಾಪಿ ಮನೆಗಳಲ್ಲಿ ಚೌತಿಯ 'ಪೊಡ್ಡೊಲು' ಆಚರಣೆ ವಿಶೇಷವಾದ ಸ್ಥಾನವನ್ನು ಪಡೆದಿದೆ. ಚೌತಿಯ ಹಬ್ಬವನ್ನು ಮನೆದೈವಗಳಿಗೆ, ಗ್ರಾಮ ದೈವಗಳಿಗೆ, ಗರೋಡಿಗಳಿಗೆ ಮುಂತಾದ ಆರಾಧನಾ ಸ್ಥಳಗಳಲ್ಲಿ ಊರವರೆಲ್ಲ ಸೇರಿ ಆಚರಿಸುತ್ತಾರೆ.

ಚೌತಿ ಆಚರಣೆಗೊಂದು ಪುರಾಣದ ಕಥೆ ಇದೆ. ಚೌತಿಯಂದು ಗಣೇಶ ಮೋದಕ, ಕಡುಬು ತಿಂದು, ಸಾಲದಕ್ಕೆ ಗರಿಕೆ ಹುಲ್ಲನ್ನು ಸೇವಿಸುತ್ತಾನೆ. ಮೂಷಿಕನ ಮೇಲೆ ಕುಳಿತು ಗದ್ದೆಯ ಬದಿಯಲ್ಲಿ ಬರುತ್ತಿರಬೇಕಾದರೆ, ತುಂಬಿದ ಹೊಟ್ಟೆ ಬಿರಿಯುತ್ತದೆ. ತಕ್ಷಣ ತನ್ನ ಹತ್ತಿರದಿಂದ ಹರಿದಾಡುತ್ತಿದ್ದ ಸರ್ಪವನ್ನು ಹಿಡಿದು ತನ್ನ ಬಿರಿದ ಹೊಟ್ಟೆ ಅಡ್ಡಲಾಗಿ ಕಟ್ಟುತ್ತಾನೆ. ಆಕಾಶದಿಂದ ಇದನ್ನು ನೋಡಿದ ಚಂದ್ರನಿಗೆ ನಗು ತಡೆಯಲಾಗಲಿಲ್ಲ. ತಕ್ಷಣ ಕೋಪೋದ್ರೇಕನಾದ ಗಣೇಶ ತನ್ನ ಒಂದು ದಾಡೆಯನ್ನು ಮುರಿದು ಚಂದ್ರನತ್ತ ಎಸೆಯುತ್ತಾನೆ. ಮಾತ್ರವಲ್ಲ 'ಚೌತಿಯಂದು ಯಾರು ನಿನ್ನನ್ನು ನೋಡುತ್ತಾರೋ ಅವರಿಗೆ ದೋಷ ತಟ್ಟಲೆಂದು' ಶಾಪ ನೀಡುತ್ತಾನೆ. ಹಾಗಾಗಿ ಚೌತಿಯನ್ನು ಚಂದ್ರನನ್ನು ನೋಡಿದವರಿಗೆ ಮುಂದೆ ಒಂದು ದಿನ ಅಪವಾದ ತಟ್ಟುತ್ತದೆ. ಇದು ನಂಬಿಕೆ ಮಾತ್ರವಲ್ಲ, ನಿಜವೂ ಹೌದು. ಹಾಗಾಗಿ ಯಾರು ಈ ಅಪವಾದಕ್ಕೆ ಗುರಿಯಾಗುತ್ತಾರೋ ಅವರು ಗಣೇಶನ ದೇವಸ್ಥಾನಕ್ಕೊಂದು ಹಣ್ಣುಕಾಯಿ ಇತರ ಸೇವೆಗಳನ್ನು ಮಾಡಿ ದೋಷಮುಕ್ತರಾಗುತ್ತಾರೆ. ಈ ದಿನ ಗಣೇಶನ ದೇವಾಲಯಗಳಲ್ಲಿ ವಿಜೃಂಭಣೆಯಿಂದ ಚೌತಿಯನ್ನು ಆಚರಿಸುತ್ತಾರೆ.

ಪ್ರತಿಯೊಬ್ಬ ಹಿಂದೂ ಮನೆಗಳಲ್ಲಿ ಚೌತಿಯನ್ನು ಗಡದ್ದಾಗಿ ಆಚರಿಸುತ್ತಾರೆ. ಮುಂಡಾಳ ಜನಾಂಗದಲ್ಲೂ ಮನೆಮಂದಿಯೆಲ್ಲ ಬೆಳಿಗ್ಗೆದ್ದು ಸ್ನಾನಾದಿಗಳನ್ನು ಮುಗಿಸಿ, ಹತ್ತಿರದ ಗಣೇಶನ ಗುಡಿಗೆ ತೆರಳಿ ಹೋಮ, ಪಂಚಗಜ್ಜಾಯ, ಅಪ್ಪದ ಪೂಜೆಗಳನ್ನು ಮಾಡುತ್ತಾರೆ. ಮನೆಗೆ ಬಂದು ತರಕಾರಿ ಅಡುಗೆಗಳನ್ನು ತಯಾರಿಸಿ, ಮೊದಲು ಹೊರಗಡೆ ತುದಿ ಬಾಳೆಎಲೆಯಲ್ಲಿ ತಮ್ಮ ಪೂರ್ವಿಕರಿಗೆ ಇಡುತ್ತಾರೆ. ಕಾಗೆಗಿಟ್ಟ ಬಳಿಕವೇ ಮನೆಯ ಹಿರಿಯರು, ಮಕ್ಕಳು–ಮರಿಗಳು ಹೀಗೆ ಮನೆ ಮಂದಿಗೆಲ್ಲ ಮನೆಯ ಯಜಮಾನಿ ಬಾಳೆ ಎಲೆ ಹಾಕಿ ಊಟ ಬಡಿಸುತ್ತಾಳೆ. ಕಾಗೆ ಆಹಾರವನ್ನು ಸ್ವೀಕರಿಸದ ಹೊರತು, ಮನೆ ಮಂದಿ ಊಟ ಮಾಡುವ ಹಾಗಿಲ್ಲ. ಊಟವಾದ ಬಳಿಕ ದೇವರಿಗೆ ಕಟ್ಟಿದ ಕಬ್ಬನ್ನು ಬಿಟ್ಟು, ಉಳಿದ ಕಬ್ಬನ್ನು ಮನೆಮಂದಿ ಎಲ್ಲಾ ಸೇರಿಕೊಂಡು ಸಂತೋಷವಾಗಿ ತಿನ್ನುತ್ತಾರೆ. ಮನೆಗಳಲ್ಲಿ, ಮೈದಾನಗಳಲ್ಲಿ, ಗಲ್ಲಿಗಳಲ್ಲಿ, ಕೇರಿಗಳಲ್ಲಿ, ದೇವಸ್ಥಾನಗಳಲ್ಲಿ, ಸಂಘ–ಸಂಸ್ಥೆಗಳಲ್ಲಿ ವಿಘ್ನೇಶನ ಮೂರ್ತಿಯನ್ನಿಟ್ಟು 1, 3, 5, 7, 9 ಹೀಗೆ ಬೆಸ ದಿನಗಳು ಇಟ್ಟು ಪೂಜೆಗಳನ್ನು ಮಾಡಿ ಕೊನೆಗೊಂದು ದಿನ ಮೆರವಣಿಗೆ ಮಾಡಿ ನೀರಿಗೆ ಹಾಕುತ್ತಾರೆ. ವಿಘ್ನೇಶನ ವಿಗ್ರಹವನ್ನು ಪೂಜೆಗಿಡುವ ದಿನಗಳು ಹೆಚ್ಚಾದಂತೆ, ದಿನಗಳ ಲೆಕ್ಕಾಚಾರದಲ್ಲೇ ಪಂಚಕಜ್ಜಾಯಗಳ ಸಂಖ್ಯೆಯು ಹೆಚ್ಚುತ್ತಾ ಹೋಗುತ್ತದೆ. ಇದೆಲ್ಲವನ್ನು ನಿಭಾಯಿಸುವುದು ಈಗಿನ ದಿನಗಳಲ್ಲಿ ಕಷ್ಟವಾದ ಕಾರಣ 75% ಜನ ಒಂದೇ ದಿನ ಇಟ್ಟು ಗಣೇಶನನ್ನು ವಿಸರ್ಜಿಸುತ್ತಾರೆ. 20 ಜನ 3 ದಿನವಿಡುತ್ತಾರೆ. ಸಂಘ ಸಂಸ್ಥೆಗಳು ಮಾತ್ರ 9, 11 ದಿನ ಬಿಟ್ಟು ವಿಘ್ನೇಶನ ವಿಗ್ರಹವನ್ನು ವಿಸರ್ಜಿಸುತ್ತಾರೆ. ವಿಗ್ರಹದ ಗಾತ್ರದಲ್ಲೂ ವರ್ಷ ಕಳೆದಂತೆ ಒಂದು ಹಿಡಿ ಮಣ್ಣು ಜಾಸ್ತಿ ಸೇರಿಸುತ್ತಿರಬೇಕೆಂಬ ನಂಬಿಕೆ ಜನಪದರದು.

ಮುಂಡಾಳ ಜನಾಂಗದ ಶ್ರೀ ಬಬ್ಬುಸ್ವಾಮಿ ದೈವಸ್ಥಾನಗಳಲ್ಲಿ 'ಚೌತಿ ಕರಿಪುನಿ' ಎಂಬ ಆಚರಣೆ ಇದೆ. ಚೌತಿಯಿಂದ ಪ್ರಾರಂಭವಾಗಿ ಕನ್ಯ ತಿಂಗಳ ದಸರಾದ (ಮಾರ್ನಮಿ) ವರೆಗೆ ಭತ್ತದ ತೆನೆ(ಕುರಾಲ್)ಯನ್ನು ಬಬ್ಬುಸ್ವಾಮಿಯ ದೈವಸ್ಥಾನಗಳಲ್ಲಿ ಗ್ರಾಮಸ್ಥರಿಗೆ ನೀಡುತ್ತಾರೆ. ಇದಕ್ಕೆ

'ಸಾನದಿಂಜಾವುನಿ' ಎನ್ನುತ್ತಾರೆ. (ಯಾವಾಗ ಕುರಲ್ ಕೊಡಬೇಕೆಂಬುದನ್ನು ಆಯಾ ದೈವಸ್ಥಾನದ ಗುರಿಕಾರಾದಿಗಳು ನಿರ್ಣಯಿಸುತ್ತಾರೆ).

ಚೌತಿಯಂದು ಮೊದಲು ಮುಕ್ಕಾಲ್ದಿ ಹಾಗೂ ಗ್ರಾಮದ, ಊರಿನ ಹತ್ತು ಸಮಸ್ತರಿಂದ ಬಬ್ಬುಸ್ವಾಮಿ ದೈವಸ್ಥಾನದ ಶುಚಿತ್ವದ ಕಾರ್ಯಗಳು ನಡೆಯುತ್ತದೆ. ಬಳಿಕ ದೈವದ ಗರ್ಭಗುಡಿಯೊಳಗೆ ಬಬ್ಬುಸ್ವಾಮಿಗೆ ತುದಿ ಬಾಳೆ ಎಲೆಗೆ ಹೊದ್ದಿಲು, ತೆಂಗಿನಕಾಯಿಯ ತಿರುಳು, ಬೆಲ್ಲದ (ಉರುಟು ಬೆಲ್ಲ / ವಾಲೆಬೆಲ್ಲ) ತುಂಡುಗಳು ಅಡಿಕೆ ತುಂಡುಗಳ ಜೊತೆ ವೀಳ್ಯದೆಲೆ, ಸೀಯಾಳ, ದೀಪವನ್ನಿಟ್ಟು ಊದುಬತ್ತಿ ಹಚ್ಚಿಡುತ್ತಾರೆ, ಹೊರಗಡೆ ಅಂಗಳದಲ್ಲಿರುವ ಪರಿವಾರ ದೈವಗಳಿಗೂ ಇದೇ ರೀತಿ ಪನಿಯಾರವನ್ನಿಟ್ಟು ದೀಪ ಬೆಳಗಿ ಊದುಬತ್ತಿ ಹಚ್ಚಿಡುತ್ತಾರೆ. ದೈವರಾಜ ಕೋಡ್ದಬ್ಬುವಿಗೆ ಧೂಪಾರತಿ ಬೆಳಗುತ್ತಾರೆ. ಕಬ್ಬನ್ನು ಸಿಪ್ಪೆ ಸುಲಿದು, ಸೀಳು ಮಾಡಿ, ತುಂಡುಗಳಿಂದ ದೈವದ ಮಣೆ ಮಂಚದ ಇದಿರು ಅಂದವಾಗಿ ಪೋಣಿಸಿಡುತ್ತಾರೆ. ಈ ಕಾರ್ಯಗಳೆಲ್ಲವನ್ನು ದೈವದ ಚಾಕರಿಯ ಮುಕ್ಕಾಲ್ದಿಯೇ ಮಾಡಬೇಕಾಗುತ್ತದೆ. ದೈವದ ಪಾತ್ರಿಯನ್ನು ಕರೆಸಿ, ಪತ್ತ್ ಮಾನಿಚ್ಚಿಯಲ್ಲಿ ಸಮಸ್ತರೆದುರು ದೈವವನ್ನು ಪಾತ್ರಿ ತನ್ನಲ್ಲಿ ಆಹ್ವಾಹನೆ ಮಾಡಿಕೊಳ್ಳುತ್ತಾನೆ. ದರ್ಶನ ಮೂಲಕ ದೈವದ ಪಾತ್ರಿಯ ಶರೀರದಲ್ಲಿ ಬಬ್ಬುಸ್ವಾಮಿ, ಆಹ್ವಾನಗೊಳ್ಳುತ್ತಾರೆ. ಮೊದಲು ತನ್ನನ್ನು ಜೋಗಕ್ಕೆ ಬರಿಸಿದ ಕಾರಣವನ್ನು ದೈವ ಕೇಳುತ್ತದೆ. ಸೇರಿದ ಜನರ ನಡುವೆ ಗುರಿಕಾರ 'ವರ್ಷಾವಧಿ ಚೌತಿಗಾಗಿ ನಿನ್ನನ್ನು ಕರೆಸಿಕೊಂಡದ್ದೆಂದೂ, ನಮ್ಮೆಲ್ಲರನ್ನು ರಕ್ಷಿಸಿ ಕಾಪಾಡಬೇಕೆಂದೂ' ಬೇಡಿಕೊಳ್ಳುತ್ತಾರೆ. ಊರಿನ ಹಿರಿಯ, ಗುರಿಕಾರ, ಗ್ರಾಮದ ಹಾಗೂ ಊರಿನ ಜನ, ಆಡಳಿತ ಮೊಕ್ತೇಸರರು ಈ ಸಂದರ್ಭದಲ್ಲಿ ಹಾಜರಿದ್ದು, ದರ್ಶನ ಆವೇಶಗೊಂಡ ಬಬ್ಬುವಿನಲ್ಲಿ ತಮ್ಮ ಕಷ್ಟ ಕಾರ್ಪಣ್ಯಗಳನ್ನು ತೋಡಿಕೊಳ್ಳುತ್ತಾರೆ. ಅದಕ್ಕೆ ಪರಿಹಾರವನ್ನು ದೈವರಾಜ ಬಬ್ಬುಸ್ವಾಮಿ ಮಾನಿಚ್ಚಿಯಲ್ಲಿರುವ ದರ್ಶನ ಪಾತ್ರಿಯ ಮೂಲಕ ನೀಡುತ್ತಾನೆ. ಎಲ್ಲರ ಪ್ರಶ್ನೆ ಮುಗಿದ ಬಳಿಕ ಮಾನಿಚ್ಚಿಯಲ್ಲಿರುವ ಶ್ರೀ ಬಬ್ಬುಸ್ವಾಮಿ ಜೋಗ ಬಿಟ್ಟು ಮಾಯ ಸೇರಿತ್ತಾನೆ. ಬಳಿಕ ನೆರೆದ ಭಕ್ತರೆಲ್ಲರಿಗೂ ದೈವಕ್ಕೆ ಬಡಿಸಿಟ್ಟ ಪನಿಯಾರವನ್ನು ಹಂಚುತ್ತಾರೆ. ಹೀಗೆ ಮುಂಡಾಳ ಜನಾಂಗ ಬಬ್ಬುಸ್ವಾಮಿ ದೈವಸ್ಥಾನದಲ್ಲಿ ಚೌತಿ ಹಬ್ಬವನ್ನು ಆಚರಿಸುತ್ತಾರೆ.

**ಮನೆ ತುಂಬಿಸುವುದು (ಕುರಲ್ ಪಾಡುನಿ):**

ಪ್ರಾಚೀನ ಕಾಲದಿಂದಲೂ ದಲಿತರು ಬ್ರಾಹ್ಮಣರ, ಜಮೀನ್ದಾರ, ಪಾಳೆಯಗಾರರ ಜೀತಕ್ಕಿದ್ದುದರಿಂದ ಮುಂಡಾಳ ಜನಾಂಗವೂ ಸೇರಿದಂತೆ ಈ ಜನಕ್ಕೆ ಸ್ವಂತ ಭೂಮಿ ಸಾಗುವಳಿಗೆ ಸಿಗಲಿಲ್ಲ. ಇತರರ ಗದ್ದೆಗಳಲ್ಲಿ ಕೆಲಸ ಮಾಡುವುದರಿಂದ ಇವರಲ್ಲಿ ಈ ಆಚರಣೆಗಳಿಲ್ಲ. ಇದ್ದೂ ಬೆರಳೆಣಿಕೆಯಷ್ಟು ಮಾತ್ರ. ಸ್ವಂತ ಭೂಮಿ ಇರುವ ಜನ ಇದನ್ನು ಆಚರಿಸುತ್ತಾರೆ.



ಈ ಆಚರಣೆಯು 'ಮನೆ ತುಂಬಿಸುವ' ಆಚರಣೆಯಾಗಿದೆ. ಸೋಣ ತಿಂಗಳ ಚೌತಿ ಹಬ್ಬದ ಸಮಯವಿದು. ಎಣೆಲ್ ಕೊಯಿಲು ಬೆಳೆಯುತ್ತಾ ಬರುವಾಗ ತುಳುನಾಡಿನ ಜನ ಭತ್ತ ಕಟ್ಟಿ ಮನೆ ತುಂಬಿಸುವ ಆಚರಣೆಯನ್ನು ಮಾಡುತ್ತಾರೆ. ಮನೆಯ ಯಜಮಾನ ಬೆಳ್ಳಂಬೆಳಗು ಗದ್ದೆಗೆ ತೆರಳಿ ಭತ್ತದ ತೆನೆಗಳು ಹಾಗೂ ಅರ್ಧ ಬಲಿತ ಎಳನೀರು (ಇದನ್ನು ಕೈಯಲ್ಲೆ ತೆಗೀಬೇಕು, ಕತ್ತಿ ಬಳಸಬಾರದು)ನ್ನು ಒಂದು ತುದಿ ಬಾಳೆ ಎಲೆ ಒಳಗೆ ಜೋಡಿಸಿ ತಂದು, ಮೊರದ ಮೇಲಿಟ್ಟು, ತುಳಸೀ ಕಟ್ಟೆಯ ಎದುರುಗಡೆ, ಪೂರ್ವದಿಕ್ಕಿಗೆ ಮುಖ ಮಾಡಿ ಇದರೆ ಜೊತೆಗೆ ಅರಿವೆ ಸೊಪ್ಪಿನ ದಂಟು, ಮುಳ್ಳುಸೌತೆ, ವೀಳ್ಯದೆಲೆ–ಅಡಿಕೆ, ಕಪ್ಪು ಕೆಸುವಿನ ದಂಟು (ತಲಾ ಒಂದೊಂದರೆಂತೆ) ಇಟ್ಟು ಜ್ಯೋತಿ ಬೆಳಗಿಸಿ, ದೈವ–ದೇವರನ್ನು ಪ್ರಾರ್ಥಿಸುತ್ತಾರೆ. ಬಳಿಕ ದೇವರ ಮಂಟಪ, ದೈವದ ಮಣೆಮಂಚ, ಮನೆಯ ಹೆಬ್ಬಾಗಿಲು, ತೊಟ್ಟಿಲು, ತುಳಸಿಕಟ್ಟೆಗೆ ತಂದಂತಹ ಪೈರನ್ನು ಕಟ್ಟುತ್ತಾರೆ. ಈ ಭತ್ತದಿಂದ ಏಳು ಭತ್ತದ ಕಾಳನ್ನು ಸುಲಿದು ಹಾಲಿಗೆ ಬೆರೆಸಿ ಎಲ್ಲರೂ ಸೇವಿಸುತ್ತಾರೆ. ಈ ದಿನ ಮಾಂಸಾಹಾರ ಅಡುಗೆ ನಿಷೇಧ. ಹಣ, ಮನೆಯ ವಸ್ತುಗಳನ್ನು ಪರರಿಗೆ ಕೊಡುವುದೂ ನಿಷೇಧ, ಮನೆ ತುಂಬಿಸುವ ಈ ಆಚರಣೆಗೆ ದಿನ ನೋಡಬೇಕು. ಭರಣಿ ಕೃತಿಕೆ ಬಂದಂತಹ ದಿನಗಳಲ್ಲಿ ಇದನ್ನು ಮಾಡುವುದಿಲ್ಲ.

ಇತ್ತೀಚಿನ ದಿನಗಳಲ್ಲಿ ಗದ್ದೆಗಲ ಜಾಗವನ್ನು ಕಟ್ಟಡಗಳು ಆಕ್ರಮಿಸಿದೆ. ಮುಂದಿನ ಪೀಳಿಗೆಗೆ ಈ ಎಲ್ಲ ಆಚರಣೆಗಳು ಆಶ್ಚರ್ಯಕರ ಸಂಗತಿಗಳಾಗಬಹುದು. ಕೇವಲ ಚಿತ್ರಕಲೆಗಳಲ್ಲಿ ಸಿನೇಮಾದಲ್ಲಿ ಮಾತ್ರವೇ ಇದನ್ನೆಲ್ಲ ನೋಡುವ ದೌರ್ಭಾಗ್ಯ ಪ್ರಾಪ್ತಿಯಾಗಬಹುದು. ಭಾರತ ಕೃಷಿ ಪ್ರಧಾನ ರಾಷ್ಟ್ರ. ಜನಪದರ ಉಸಿರೇ ಈ ಭೂಮಿ. ಇದು ನಾಶವಾದ್ರೆ ನಮ್ಮೆಲ್ಲರ ಉಸಿರು ನಿಂತಂತೆಯೇ ಸರಿ.

## ಪುದ್ದಾರ್ (ಹೊಸ ಅಕ್ಕಿಯ ಊಟ):

ಇದೂ ಕೃಷಿ ಸಂಬಂಧಿ ಆಚರಣೆ. ಆದರೂ ತುಳುನಾಡಿನ ಎಲ್ಲಾ ಜನತೆ ಆಚರಿಸುವ ಹಬ್ಬ. ನಮ್ಮ ಹಿರಿಯರ ಕಾಲದಿಂದಲೂ ತುಳುನಾಡು ಬಹಳ ಸಂಭ್ರಮದಿಂದ ಆಚರಣೆಗೊಳಲ್ಪಡುತ್ತಿದ್ದ ಮೊದಲ ಹೊಸ ಅಕ್ಕಿ ಊಟ ('ಪುದ್ದಾರ್') ಇಂದು ಮರೆಯಾಗುತ್ತಿರುವುದು ಬೇಸರದ ವಿಚಾರವೂ ಆಗಿದೆ. 'ಹೊಸ ಅಕ್ಕಿ ಊಟ' ತುಳುನಾಡಿನಲ್ಲಿ 'ಪುದ್ದಾರ್' ಎಂದೇ ಪ್ರಚಲಿತದಲ್ಲಿರುವ ಈ ಆಚರಣೆಗೆ ಒಂದು ವಿಶೇಷತೆ ಇದೆ. ಮಲಯಾಳಿ ಪದ 'ಪುದಿಯ' (ಹೊಸತು [ಪೊಸತ್]) 'ಅರಿ' (ಅಕ್ಕಿ) ಒಟ್ಟಾಗಿ ಪುರಿಯರಿ (ಹೊಸಅಕ್ಕಿ [ಪೊಸಅರಿ]) ಎನ್ನುವ ಈ ಶಬ್ದ ಕಾಲಕ್ರಮೇಣ ಮೌಖಿಕ ಪರಂಪರೆಯ ಒಳಗೆ ಪ್ರಯೋಗಕ್ಕೆ ಸಿಲುಕಿ 'ಪುದ್ದಾರ್' ಆಗಿರುವ ಸಾಧ್ಯತೆಗಳೂ ಇದೆ.



ಕೃಷಿಕರು ತಾವು ಬೆಳೆಸಿದ ಬೆಳೆಯಲ್ಲಿ ದೊರಕಿದ ಹೊಸ ಅಕ್ಕಿಯನ್ನು ಕುಟುಂಬಸ್ಥರೊಂದಿಗೆ ಬೆರೆತು ಅಡಿಗೆ ಮಾಡಿ, ಹೊಸ ಬಗೆ ಬಗೆಯ

ಪದಾರ್ಥದೊಂದಿಗೆ ಊಟ ಮಾಡುವ ಆಚರಣೆಯನ್ನು 'ಪುದ್ದಾರ್' ಎನ್ನುವರು. ಕಂಬ್ಳದ ಗದ್ದೆಯಲ್ಲಿ ಬೆಳೆದ ಭತ್ತ ಕೊಯ್ಲಿಗೆ ಬಂದಾಗ ಸಂಪ್ರದಾದಂತೆ ಭತ್ತದ ತೆನೆಗಳನ್ನು ತಂದು, ಪೂಜೆ ಮಾಡಿ'ಮನೆ ತುಂಬಿಸುವ' ಕ್ರಮವೂ ನಮ್ಮ ತುಳುನಾಡಿನಲ್ಲಿದೆ. ಇದೇ 'ಕುರಲ್ ದಿಂಜಾವುನಿ'. ಕೆಲವೆಡೆ ಅದೇ ದಿನ ಆ ಹೊಸ ಭತ್ತವನ್ನು ಅದರ ಕವಚ ತೆಗೆದು ಬೇಯಿಸುತ್ತಿರುವ ಅನ್ನಕ್ಕೆ ಬೆರೆಸಿ ಹೊಸ ಅಕ್ಕಿ ಊಟ ಮಾಡುತ್ತಾರೆ. ಇದೊಂದು ಅನುಕೂಲ ಶಾಸ್ತ್ರ. ನಿಜವಾಗಿ ಭತ್ತವನ್ನು ಕೊಯ್ದು ಮನೆಗೆ ತಂದ ಬಳಿಕ ಆಚರಿಸುವ ಹೊಸ ಅಕ್ಕಿ ಊಟದ ಆಚರಣೆ ಅರ್ಥಪೂರ್ಣವಾಗಿದೆ. ಭತ್ತದ ಕಣಜದ ಎದುರುಗಡೆ 'ಪೊಲಿ' ಕರೆದು, ಪೂಜೆ ಮಾಡಿ, ಮಣ್ಣಿನ ಮಡಕೆಯ ಬಾಯಿಗೆ ಪೊಲಿ ಹಗ್ಗ ಕಟ್ಟಿ ಗಂಧದ ಗೆರೆ ಹಾಕಿ ಶೃಂಗಾರ ಮಾಡಿ ಹೊಸ ಭತ್ತವನ್ನು ಬೇಯಿಸಿ, ಒಣಗಿಸಿ, ನೆರೆಮನೆಯ ಹೆಂಗಸರೆಲ್ಲ ಮೊರದಲ್ಲಿ ಅದರ ದೂಳನ್ನು ಹಾರಿಸಿ, ಶುಚಿಗೊಳಿಸಿದ ಅಕ್ಕಿಯೇ ಪುದ್ದಾರಿಗೆ ಬಳಸುವ ಹೊಸ ಅಕ್ಕಿ.

ಈ ಸಂದರ್ಭದಲ್ಲಿ ಪುದ್ದಾರಿನ ಅನ್ನ ಬೇಯಿಸಲು ಮಣ್ಣಿನ ಹೊಸ ಮಡಿಕೆ, ಸುತ್ತಲೂ ಕಟ್ಟಲು ಪೊಲಿ ಹಗ್ಗ, ಮಿಟಾಯಿ ಹೂವು, ಪಾದೆ ಹೂವಿನ ಮಾಲೆ ಮಾಡಿ ಮಡಿಕೆಯನ್ನು ಸಿಂಗರಿಸುತ್ತಾರೆ. ಈ ಮಡಿಕೆಯಲ್ಲಿ 7 ಸೇರಿ ಅಕ್ಕಿ ಹಾಕಿ ಬೇಯಿಸುತ್ತಾರೆ. ನೀರು ಬಿಸಿಯಾದಾಗ ಮೊದಲು ಮನೆ ಮಂದಿ ನಾಲ್ಕು ಹೊಸ ಅಕ್ಕಿ, ತುಂಬೆಯ ಹೂವನ್ನು ಆ ಮಡಕೆಗೆ ಹಾಕಿ ಕೈ ಮುಗಿಯುವರು. ಬಳಿಕ ಮನೆಯ ಯಜಮಾನ, ಯಜಮಾನಿ ಒಟ್ಟಾಗಿ ಪಾತ್ರೆಯಲ್ಲಿ ಹೊಸ ಅಕ್ಕಿ ಹಾಕಿ ತೊಳೆದು ಮಣ್ಣಿನ ಮಡಕೆಗೆ ಹಾಕಿ ಅನ್ನ ಬೇಯಿಸುವರು. ಪುದ್ದಾರಿನ ಊಟಕ್ಕೆ 12 ಬಗೆಯ ಪದಾರ್ಥ ಮಾಡಬೇಕು. ಉಪ್ಪಲ್ಲಿ ಹಾಕಿದ ಹಲಸಿನ ತೊಳೆಯ ಉಪ್ಕರಿ, ಹಲಸಿನ ಬೀಜದ ಪಲ್ಯ, ಮುಳ್ಳುಸೌತೆಯ ತಲ್ಲಿ, ಕೆಸು ಹಾಗೂ ಅರಿವೆಯ ಸಾಂಬಾರು (ಇದು ಅತೀ ಅಗತ್ಯವಾಗಿರಬೇಕು). ಅರಿವೆ ಸೊಪ್ಪಿನ ಪಲ್ಯ, ಮಾವಿನ ಉಪ್ಪಿನಕಾಯಿ, ಕಡ್ಲೆ-ತೊಂಡೆಕಾಯಿ ಗಸಿ, ಬೆಂಡೆಕಾಯಿ, ಹೀರೆಕಾಯಿ ಪಲ್ಯ, ಒಂದೆಲಗ (ತಿಮರೆ) ಚಟ್ನಿ, ಬಾಳೆ ಹೂವಿನ ಚಟ್ನಿ, ಮಾವಿನ ಕಾಯಿಯ ಚಟ್ನಿ, ಸೌತೆಕಾಯಿ-ಮುಳ್ಳುಸೌತೆ ಸೇರಿ ಸಾಂಬಾರು ಇಷ್ಟು ಬಗೆಯ ತರಕಾರಿ ಪದಾರ್ಥ ಮಾಡುತ್ತಾರೆ.

ಊಟದ ಸಮಯದಲ್ಲಿ ಮನೆಯ ಯಜಮಾನಿ ತಲೆ ಸ್ನಾನ ಮಾಡಿ ತಲೆಗೆ ಬೈರಾಸು ಸುತ್ತಿ ಬಂದು ತುಳಸಿಕಟ್ಟೆಯಲ್ಲಿ ದೀಪ ಉರಿಸಿ, ಒಂದು ತಂಬಿಗೆ ನೀರಿಟ್ಟು, ಬಾಳೆ ಎಲೆಯಲ್ಲಿ ಗಂಧ ಪ್ರಸಾದ ಇಟ್ಟಿರ್ತಾರೆ. ಅದನ್ನು ಹಣೆಗೆ ಹಚ್ಚಿ ತರುವಾಯ ಮನೆಯೊಳಗೆ ಮಣೆ ಇಟ್ಟು ಊಟಕ್ಕೆ ಕುಳಿತುಕೊಳ್ಳುತ್ತಾರೆ. ಇದನ್ನು ಮನೆ ಮಂದಿ ಪಾಲಿಸುವರು. ಈ ದಿನ ತುದಿ ಎಲೆಯಲ್ಲೇ ಊಟ ಮಾಡಬೇಕೆಂಬ ನಿಯಮವಿದೆ. ಅನ್ನ ಪದಾರ್ಥಗಳನ್ನು ಎಲೆಗೆ ಹಾಕಿದ ಬಳಿಕ ಕಿರಿಯರೆಲ್ಲ ಕುಟುಂಬದ ಹಿರಿಯರಲ್ಲಿ ಪುದ್ದರ್ ಉಣ್ಣುವೆವೆಂದು (ಪುದ್ದರ್ ಉನ್ಪೆ) ಎಂದು ಹೇಳಬೇಕು. ಊಟ ಮಾಡಿ ಏಳುವಾಗ ಎಲೆಯಲ್ಲಿ ನಾಲ್ಕು ಅನ್ನದ ಅಗುಳನ್ನು ಉಳಿಸಬೇಕೆಂಬ ಕಟ್ಟು ಕಟ್ಟಳೆ ಇದೆ. ಹಾಗೆಯೇ ಊಟದ ಬಳಿಕ ಸೇರಿದ ಜನರೆಲ್ಲ ಎಲೆ ಅಡಿಕೆ ಹಾಕಿಕೊಳ್ಳುವ ವಾಡಿಕೆ ಇದೆ. ಕೆಲವೆಡೆ ಜನಪದ ಆಟವಾದ ಚೆನ್ನೆ ಮಣೆಯನ್ನು ಮನೆ ಮಂದಿ ಸೇರಿ ಆಡುತ್ತಾರೆ. ಮನಸ್ಸು, ಸಂಬಂಧಗಳನ್ನು ಗಟ್ಟಿಗೊಳಿಸುವ ಹಾಗೂ ಒಂದಾಗಿಸುವ ಹಬ್ಬ ಎಂದರೆ ಪುದ್ದಾರ್.

ಮುಂಡಾಳ ಜನಾಂಗದಲ್ಲಿ ಕೆಲವರು ದಸರಾ ದಿನಗಳಲ್ಲಿ ಇನ್ನು ಕೆಲವರು ದೀಪಾವಳಿ ಸಂದರ್ಭದಲ್ಲಿ ಮನೆಗೆ ಹೊಸ ಭತ್ತ ಕಟ್ಟಿ ಹೊಸ ಅಕ್ಕಿ ಊಟದ ಆಚರಣೆಯನ್ನು ಮಾಡುತ್ತಾರೆ. ದಸರದ ಮೂರನೆಯ ಪೂಜೆ ದಿನ ಶ್ರೀ ಬಬ್ಬುಸ್ವಾಮಿಯ ದೈವಸ್ಥಾನದಲ್ಲಿ ಸಂಗ್ರಹಿಸಿದ ಹೊಸ ಭತ್ತದ ತೆನೆ ಹಾಗೂ ಬೆಳೆಸಿದ ವಿವಿಧ ಬಗೆಯ ತರಕಾರಿಯನ್ನಿಟ್ಟು ಸಂಜೆಯ ವೇಳೆ ಪೂಜೆ ಮಾಡುತ್ತಾರೆ. ನಂತರ ಎಲ್ಲರಿಗೂ ಹೊಸಭತ್ತವನ್ನು ಪ್ರಾರ್ಥಿಸಿ ಕೊಡುತ್ತಾರೆ.

ಪ್ರತೀ ಗ್ರಾಮದ ಕೋರ್ದಬ್ಬು ದೈವಸ್ಥಾನಗಳಲ್ಲಿ ಆ ಗ್ರಾಮದ ಮುಂಡಾಳ ಜಾತಿಯ ಜನರಿಗೆ ಅಂದರೆ ಗ್ರಾಮಸ್ಥರಿಗೆ ಈ ಹೊಸಭತ್ತದ ತೆನೆಯನ್ನು ವಿತರಿಸುತ್ತಾರೆ. ಐದು ತೆನೆ ಗೊಂಚಲನ್ನು ಅದರ ದಂಟನ್ನು ತುಂಡರಿಸಿ, ಮಾವಿನ ಎಲೆಯ ಮೇಲಿಟ್ಟು ಸುತ್ತಿ, ಬಾಳೆ ದಿಂಡಿನ ನಾರಿನಿಂದ ಬಿಗಿಯಾಗಿ ಕಟ್ಟಿ ಕೋಟೆ ಬಬ್ಬುವಿನಲ್ಲಿ ಮಗದೊಮ್ಮೆ ಪ್ರಾರ್ಥಿಸಿ ಗ್ರಾಮದ ಜನರಿಗೆ ನೀಡುತ್ತಾರೆ. ಅವರು ಅದನ್ನು ತಂದು ನಡುಮನೆಯ ಕಂಬಕ್ಕೆ, ದೇವರ ಪೀಠದ ಕಂಬಕ್ಕೆ ಕಟ್ಟುತ್ತಾರೆ. ಅನ್ನ ಮಾಡುತ್ತಿರುವಾಗ ಅದಕ್ಕೆ ಈ ಹೊಸಭತ್ತದ ತೆನೆಯಿಂದ ಹತ್ತು, ಹನ್ನೆರಡು ಭತ್ತ ತೆಗೆದು ಶುಚಿಗೊಳಿಸಿ ಕುದಿಯುವ ಅನ್ನಕ್ಕೆ ಬೆರೆಸುತ್ತಾರೆ. ಕೆಲವರು ಪಾಯಸಕ್ಕೆ ಈ ಹೊಸ ಅಕ್ಕಿಯನ್ನು ಹಾಕುತ್ತಾರೆ. ಹಲವು ಬಗೆಯ ತರಕಾರಿ ಪದಾರ್ಥದೊಂದಿಗೆ ಮನೆ ಮಂದಿ ಎಲ್ಲ ಪುದ್ದಾರ್ ಊಟ ಮಾಡಲು ನೆಲದ ಮೇಲೆ ತುದಿ ಬಾಳೆ ಎಲೆಯ ಮುಂದೆ ಕುಳಿತಿರುವಾಗ, ಮನೆಯ ಹಿರಿಯನು ತಲೆಗೆ ಮುಂಡಾಸು ಸುತ್ತಿ, ದೈವ, ದೇವರನ್ನು ಸ್ಮರಿಸಿ, 'ಎಂಕ್ಲು ಪುದ್ದಾರ್ ಉನ್ಪ–ಪುದ್ದಾರ್ ಉನ್ಪ–ಪುದ್ದಾರ್ ಉನ್ಪ' ಎಂದು ಮೂರು ಬಾರಿ ಹೇಳುತ್ತಾರೆ. ನಂತರ ಎಲ್ಲರೂ 'ಪುದ್ದಾರ್ ಉನ್ಪ' ಎಂದು ಹೇಳಿ ಗಡದ್ದಾಗಿ ಹೊಟ್ಟೆ ತುಂಬುವಷ್ಟು ಊಟ ಮಾಡುತ್ತಾರೆ. ತುಳುವರ ನಂಬಿಕೆ ಪ್ರಕಾರ ಯಾರು ಹೊಸ ಅಕ್ಕಿ ಊಟದ (ಪುದ್ದಾರ್) ದಿನ ಹೊಟ್ಟೆ ತುಂಬಾ ಉಣ್ಣುತ್ತಾರೋ, ಅವರ ಹೊಟ್ಟೆ ಯಾವತ್ತೂ ಖಾಲಿ ಇರುವುದಿಲ್ಲವಂತೆ. ಅಂದರೆ ಆ ವ್ಯಕ್ತಿಗೆ ಬಡತನ ಬರುವುದಿಲ್ಲ ಎಂಬ ನಂಬಿಕೆ. ಈ ದಿನ ಮೀನು, ಮಾಂಸ, ಮದ್ಯ ನಿಷೇಧ. ಹೀಗೆ ಮುಂಡಾಳ ಜನಾಂಗವು ಹೊಸ ತೆನೆ ಕಟ್ಟುವ (ಕುರಲ್ ಕಟ್ಟುವ) ಹೊಸ ಅಕ್ಕಿ ಉಣ್ಣುವ (ಪುದ್ದಾರ್) ಆಚರಣೆಯನ್ನು ಮಾಡುತ್ತಾರೆ.

### ಸೌರಮಾನ ಯುಗಾದಿ (ಪೊಸ ವರ್ಸ–ಬಿಸು):

ಸುಗ್ಗಿ ತಿಂಗಳ ಅಮಾವಾಸ್ಯೆಯ ಮರುದಿನ ಯುಗಾದಿ ಪಾಡ್ಯ ಬರುವುದು. ತುಳು ನಾಡಿನಾದ್ಯಂತ ಜೀವಿಸುವ ತುಳುವರಿಗಿದು ಹೊಸ ವರ್ಷ. ಹೊಸದಾಗಿ ಮದುವೆ ಆದ ಮದುಮಕ್ಕಳಿಗಂತು ತವರು ಮನೆಗೆ ಬಂದು ಸಂತೋಷದಿ ಕಾಲ ಕಳೆಯುವ ದಿನ ಇದಾಗಿದೆ. ತುಳುವರು ಇದನ್ನೇ 'ಬಿಸು' ಎನ್ನುವರು. ಬೆಳಗ್ಗೆದ್ದು ಕಣಿ ನೋಡುವುದರಿಂದ ಆ ವರ್ಷವಿಡೀ ಹರುಷ ತುಂಬುವುದೆಂಬ ನಂಬಿಕೆ. ಜನರು ದೇವರ (ಕೃಷ್ಣ) ವಿಗ್ರಹದ ಮುಂದೆ ಹೊಂಗೆ ಹೂವಿನಿಂದ ಅಲಂಕರಿಸಲ್ಪಟ್ಟ ದೇವರ ಎದುರು ದೀಪ, ಕನ್ನಡಿ ಇಡುವರು. ಬೆಳಗಾಗಿ ಎದ್ದ ಕೂಡಲೇ ಮನೆ ಮಂದಿಯನ್ನು ಕಣಿ ತೋರಿಸಲು ಹಿರಿಯರು ಕರೆತರುತ್ತಾರೆ. ಮೊದಲು ಹಿರಿಯರ ಪಾದಗಳಿಗೆ ಕಿರಿಯರು ನಮಸ್ಕರಿಸಿ ಆಶೀರ್ವಾದ ಪಡೆಯುವರು. ನಂತರ ಹೊಸ ಅಕ್ಕಿಯ ಅನ್ನ,

ಹೊಸದಾಗಿ ಬೆಳೆದ ತರಕಾರಿಯ ವಿವಿಧ ಬಗೆಯ ಪದಾರ್ಥದ ಜೊತೆಗೆ, ಬಾಯಿ ಸಿಹಿಗಾಗಿ ಪಾಯಸ ತಯಾರಿಸಿ ಮನೆ ಮಂದಿ ಎಲ್ಲಾ ಈ ಹೊಸ ವರ್ಷವನ್ನು ಪ್ರೀತಿಯಿಂದ ಸ್ವಾಗತಿಸುತ್ತಾರೆ. ಮುಂಡಾಳ ಜನಾಂಗದಲ್ಲಿ ಚಂದ್ರಮಾನ ಯುಗಾದಿ ಆಚರಣೆ ಇಲ್ಲ. ಸೌರಮಾನ ಯುಗಾದಿ (ಬಿಸು)ಯನ್ನು ಮಾತ್ರ ಆಚರಿಸುತ್ತಾರೆ.

ಭಗವಾನ್ ಶ್ರೀ ಬಬ್ಬುಸ್ವಾಮಿಯ ದೈವಸ್ಥಾನದಲ್ಲಿ ವಿಶೇಷ ಧೂಪದಾರತಿಯನ್ನು ಬೆಳಗುತ್ತಾರೆ. ದೈವಗಳಿಗೆ ಪನಿಯಾರ ಬಡಿಸುತ್ತಾರೆ. ಕೆಲವು ದೈವಸ್ಥಾನಗಳಲ್ಲಿ ದೈವ ದೇವರಿಗೆ ಅಗೆಲು, ತಂಬಿಲ, ಪೂಜೆ ಪುರಸ್ಕಾರಗಳನ್ನು ನಡೆಸುವರು.





**ದಸರಾ (ಮಾರ್ನೆಮಿ):**

ಕನ್ಯಾ (ನಿರ್ನಾಲ್) ತಿಂಗಳ ಅಮಾವಾಸ್ಯೆಯಂದು ದಸರಾ ಹಬ್ಬ ಪ್ರಾರಂಭಗೊಳ್ಳುತ್ತದೆ. ಒಂಬತ್ತು ದಿನಗಳು ಆಚರಿಸುವ ಹಬ್ಬವಿದು. ಒಂಭತ್ತು ದೇವಿಯರು ಉದ್ಭವಗೊಳ್ಳುವ ಈ ಹಬ್ಬದಲ್ಲಿ ವಿಜಯದಶಮಿ ಹಾಗೂ ಆಯುಧ ಪೂಜೆಗೆ ವಿಶೇಷ ಸ್ಥಾನವಿದೆ. ಆ ಊರಿನಲ್ಲಿ ಎಷ್ಟು ದೇವಿ ದೇವಸ್ಥಾನಗಳಿವೆಯೋ ಅಲ್ಲೆಲ್ಲ ದೇವಿಯನ್ನಲಂಕರಿಸಿ ಪೂಜೆ ಮಾಡುತ್ತಾರೆ. ಶಾರದಾ ದೇವಿಯ ಮೂರ್ತಿ ಸ್ಥಾಪಿಸಿ, 9 ದಿನ ವಿವಿಧ ವಸ್ತ್ರಾಲಂಕಾರಗಳಿಂದ ಪೂಜಿಸುವರು. ಮಾರ್ನಮಿಯಂದು ಶಾರದೆಯ ಈ ವಿಗ್ರಹವನ್ನು ಕೆರೆಗೆ ಹಾಕುವರು. ಊರಿನ ಸರ್ವ ದೋಷಗಳನ್ನು, ರೋಗಗಳನ್ನು ಶಾರದೆಯು ತನ್ನನ್ನು ನೀರಿಗೆ ಹಾಕುವ ಮೂಲಕ ನಿವಾರಿಸುತ್ತಾಳೆ ಎಂಬುದು ಜನರ ನಂಬಿಕೆಯಾಗಿದೆ.

ವ್ಯವಸಾಯ ಮಾಡುವವರು ಮಾರ್ನಮಿಯಂದು ಗದ್ದೆಯಿಂದ ಭತ್ತದ ತೆನೆ (ಕುರಾಲ್) ತಂದು ಮನೆ ತುಂಬುವರು. ಹಾಗೂ ಮಾರ್ನಮಿ ಮುಗಿದ ಬಳಿಕ ಭತ್ತದ ಕೊಯ್ಲಿಗೆ ಪ್ರಾರಂಭ ಮಾಡುತ್ತಾರೆ.

ಮುಂಡಾಳ ಜನಾಂಗದ ಬಬ್ಬುಸ್ವಾಮಿ ದೈವಸ್ಥಾನಗಳಲ್ಲೂ ಮಾರ್ನಮಿಯವರೆಗೆ ಭತ್ತದ ತೆನೆ (ಕುರಾಲ್) ನೀಡುತ್ತಾರೆ. ದಸರಾ (ಮಾರ್ನಮಿ) ಕಳೆದ ಬಳಿಕ ಮನೆ ತುಂಬಿಸುವ ಆಚರಣೆ ಈ ಜನಾಂಗದಲ್ಲೂ ಇಲ್ಲ. ಮಾತ್ರವಲ್ಲ ಕೆಲವು ಬಬ್ಬುಸ್ವಾಮಿ ದೈವಸ್ಥಾನಗಳಲ್ಲಿ ದೈವದ ಆಯುಧಾಭರಣಗಳಿಗೆ ಆಯುಧ ಪೂಜೆಯನ್ನು ಮಾಡುತ್ತಾರೆ. ನಿತ್ಯ ಪೂಜೆ ನಡೆಯುವ ಬಬ್ಬುಸ್ವಾಮಿಯ ದೈವಸ್ಥಾನಗಳಲ್ಲಿ ಈ ದಿನ ವಿಶೇಷ ಪೂಜೆಗಳಿಲ್ಲ.

**ದೀಪಾವಳಿ:**

ದೀಪಾವಳಿ (ದೀಪೊಲಿ ಪರ್ಬ) ಬಲಿಚಕ್ರವರ್ತಿಯಿಂದಲೇ, ದೀಪಾವಳಿಗೂ ತುಳು ನೆಲಕ್ಕೂ ಪ್ರಾಚೀನವಾದ ನಂಟಿದೆ. ತುಳುನಾಡು ಕೃಷಿ ಭೂಮಿ, ಅನ್ನ ಕೊಡುವ ನೆಲವನ್ನು ಅತಿ ಶ್ರದ್ಧಾ ಭಕ್ತಿಯಿಂದ ಆರಾಧಿಸುವುದೇ 'ದೀಪಾವಳಿ' ಹಬ್ಬದ ವಿಶೇಷತೆ. ತುಳು ಭೂಮಿಯ ಮೂಲ ಜನಾಂಗದ ನಿರ್ಮಾಣವಾಗಿರುವುದು. ಆನಪದರ ನಂಬಿಕೆಯಂತೆ ಉಡುಪಿ ಹಾಗೂ ತಿರುಪತಿಯ ಕೆಲವೆಡೆ ಇದ್ದ ಪ್ರಾಚೀನ ಮಂದಿರಗಳು ಬಲಿಚಕ್ರವರ್ತಿಯ ಪೂಜಾ ಕೇಂದ್ರ ಗಳಾಗಿದ್ದವು. ಆರ್ಯರು ಹಾಗೂ ದ್ರಾವಿಡರಲ್ಲಿ ಉಲ್ಬಣಿಸಿದ ಸಂಘರ್ಷದಿಂದ ಉಂಟಾದ ದುರಂತದ ಪರಿಣಾಮದಿಂದ ವಾಮನ ರೂಪ ಪಡೆದು ಬಂದ ವಿಷ್ಣುವಿನಿಂದ ಮೂರು ಹೆಜ್ಜೆ ಭೂಮಿಗಾಗಿ ಪಾತಾಳಕ್ಕೆ ಬಲಿ ತುಳಿಯಲ್ಪಡಬೇಕಾಯಿತು. ಪ್ರಾಮಾಣಿಕತೆ, ಸ್ವಾಮಿಭಕ್ತಿ, ಅತಿಥಿ ಸತ್ಕಾರಗಳಿಗೆ ಹೆಸರಾದ ದ್ರಾವಿಡರು ಮೂಲೆ ಗುಂಪಾದರು. ಆರ್ಯರ ಅಟ್ಟಹಾಸ ಹೆಚ್ಚಾಯಿತು. ಒಂದನ್ನು ಕಳೆದುಕೊಳ್ಳುವರು ಇನ್ನೊಂದನ್ನು ಪಡೆದರು ಎಂಬ ಮಾತಿನಂತೆ, ತುಳುನಾಡಿಗೂ ಬಲಿ ಚಕ್ರವರ್ತಿಗೂ ಇರುವ ಸಾಂಸ್ಕೃತಿಕ ಸಂಬಂಧ ಬಹಳ ಗಟ್ಟಿಯಾಗಿದೆ.

ದ್ರಾವಿಡರು ಪುನರ್ ಜನ್ಮವನ್ನು ನಂಬುವುದಿಲ್ಲ. ಆದರೆ ಸತ್ತ ವ್ಯಕ್ತಿಯ ಆತ್ಮ ಆತನ ಮನೆಯಲ್ಲಿ ಸದಾ ಇರುವುದೆಂದು ದ್ರಾವಿಡರು ನಂಬುತ್ತಾರೆ. ಪಂಚಭೂತಗಳಿಂದ ನಿರ್ಮಾಣಗೊಂಡ ದೇಹಕ್ಕೆ ಸಾವಿದೆ, ಆತ್ಮಕ್ಕೆ ಸಾವಿಲ್ಲ ಎಂಬುದು ದ್ರಾವಿಡರ ಧೋರಣೆ. ಹಾಗಾಗಿ ಮನೆಯಲ್ಲಿ ಮರಣಿಸಿದ ಹಿರಿಯರ ಸ್ಮರಣಾರ್ಥವಾಗಿ 'ಸತ್ತವರ ದಿನ'ವೆಂದೂ, ಮರುದಿನ 'ಇದ್ದವರ ದಿನ'ವೆಂದೂ, ಮೂರನೆಯ ದಿನವನ್ನು 'ಗೋವುಗಳ ಹಬ್ಬ' ವೆಂದೂ, ಅರ್ಥಪೂರ್ಣವಾಗಿ ದೀಪಾವಳಿಯನ್ನು ಮೂರು ದಿನಗಳು ಆಚರಿಸುತ್ತಾರೆ.

**ಸತ್ತವರ ಹಬ್ಬ: (ಸೈತಿನಕಲೆ ಪರ್ಬ)**

ಮುಂಡಾಳ ಜನಾಂಗ ವಲಸೆ ಬಂದಿರುವ ಕಾರಣ ನಗರ, ನಗರೇತರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ನಗರ ಪ್ರದೇಶದಲ್ಲಿ ವಾಸಿಸುವ ಮುಂಡಾಳರಲ್ಲಿ ಈ ಹಬ್ಬವನ್ನು ವಿಶೇಷವಾಗಿ ಆಚರಿಸುವುದಿಲ್ಲ. ಮಣೆಯಲ್ಲಿ ಹೊಸ ಸೀರೆ, ಧೋತಿ, ಬಿಳಿಬಟ್ಟೆ, ಅವರು ಉಪಯೋಗಿಸಿರುವ ಚಿನ್ನಾಭರಣಗಳನ್ನು ಇಡುತ್ತಾರೆ. ಕೇವಲ ಸಾಂಕೇತಿಕವಾಗಿ ಮಾತ್ರ ಹಳ್ಳಿಗಳಲ್ಲಿ ಮಧ್ಯಾಹ್ನ ಸತ್ತವರಿಗೆ

ತುದಿ ಬಾಲೆ ಎಲೆಯಲ್ಲಿ ಬೂದು ಕುಂಬಳಕಾಯಿ ಸಾಂಬಾರು, ಸಿಪ್ಪೆಯ ಪಲ್ಯ, ಅನ್ನ, ಕಡುಬು ಬಡಿಸುವ ಪದ್ಧತಿ ಇದೆ. ರಾತ್ರಿ ನಡುಮನೆಯಲ್ಲಿ ಮೂರು ತುದಿ ಎಲೆ ಹಾಕಿ ಅದರಲ್ಲಿ ಹಳದಿ ಎಲೆಯಲ್ಲಿ ಮಡಿಸಿಟ್ಟ ಸಿಹಿ ಕಡುಬು, ಅನ್ನ, ಮೀನುಸಾರು, ಸಪ್ಪೆ ಕಡುಬು ಬಡಿಸುತ್ತಾರೆ. ಒಂದು ತಂಬಿಗೆ ನೀರನ್ನು ಇಡುತ್ತಾರೆ. ಅಡುಗೆ ಕೋಣೆಯ ಹೊರಗೆ ಬಿಸಿ ನೀರಿಡುತ್ತಾರೆ. ಮನೆಯ ಯಜಮಾನರು "ಇಂದು ದೀಪಾವಳಿಯ ಮೊದಲ ದಿನ. ಸತ್ತವರ ಹಬ್ಬ, ಹೊರಗೆ ಬಿಸಿ ನೀರಿದೆ, ಸ್ನಾನ ಮಾಡಿ ಬಂದು ಹೊಸಬಟ್ಟೆ ಉಟ್ಟು, ಪ್ರೀತಿಯಿಂದ ಮಾಡಿ ಬಡಿಸಿದ ಆಹಾರವನ್ನು ಸ್ವೀಕರಿಸಿ, ಈ ಸಂಸಾರವನ್ನು ಮೊದಲಿನಂತೆ ರಕ್ಷಿಸಬೇಕು" ಎಂದು ಪ್ರಾರ್ಥಿಸುತ್ತಾರೆ.

ಸತ್ತವರು (ಕುಲೆಗಳು) ಊಟ ಮಾಡಲೆಂದು, ಮನೆಯವರು ಬಾಗಿಲು ಹಾಕಿ ಹೊರ ಚಾವಡಿಗೆ ಬಂದು ನಿಲ್ಲುತ್ತಾರೆ. ಕಾಕತಾಳಿಯವೋ ಏನೋ ಆ ಊಟವನ್ನು ಆಮೇಲೆ ನಾವು ಸೇವಿಸಿದರೆ ಅದು ಸಪ್ಪೆಯಾಗಿರುತ್ತದೆ. ಅದರ ಸ್ವಾದ, ಪರಿಮಳ ಎಲ್ಲವೂ ಮಾಯವಾಗಿರುತ್ತದೆ. ಅಂದರೆ ಸತ್ತವರಿಗೆ ಬಡಿಸಿದ ಆಹಾರವು ನಾವು ಸೇವಿಸುವಾಗ ಅದು ಸಪ್ಪೆಯಾಗಿದ್ದರೆ, ಸತ್ತವರು ಬಂದು ಊಟ ಮಾಡಿ ಹೋಗಿದ್ದಾರೆ ಎಂಬುದು ತುಳುವರ ನಂಬಿಕೆ.

## ನರಕ ಚತುರ್ಥಿ:

ನರಕ ಚತುರ್ಥಿ ಜೀವಂತ ಇದ್ದವರ ಹಬ್ಬ. ಅಂದರೆ ದೀಪಾವಳಿಯ ಎರಡನೇ ದಿನದ ಹಬ್ಬ ನರಕ ಚತುರ್ದಶಿ. ಮೊದಲ ದಿನದ ಸಂಜೆ ಹಂಡೆಯನ್ನು ತೊಳೆದು 'ಸೇಡಿ'ಯ ಅಲಂಕಾರವನ್ನು ಅದರ ಸುತ್ತ ಬಳಿದು, ಅದರ ಬಾಯಿಯ ಸುತ್ತಲೂ ಬಿಳಿ ಹಾಗೂ ಗುಲಾಬಿ ಬಣ್ಣದ ಹೂವಿನ ಬಳ್ಳಿಯನ್ನು ಸುತ್ತಿಡುವರು. ಬಳಿಕ ಮಾರನೆಯ ದಿನ ಆ ಹಂಡೆಯೊಳಗೆ ಪೂರ್ತಿ ನೀರು ತುಂಬಿಸಿ ಬಿಸಿ ನೀರು ಕಾಯಿಸುವರು. ಹಂಡೆಗೆ ನೀರು ತುಂಬಿಸಿ, ಬೆಂಕಿ ಹಚ್ಚುವ ವೇಳೆ ಹೊರಗಡೆ ಗಂಡು ಮಕ್ಕಳು ಪಟಾಕಿ ಸಿಡಿಸುತ್ತಾರೆ.

ತುಳುನಾಡು ಕೃಷಿ ಪ್ರಧಾನ ನಾಡಾಗಿರುವುದರಿಂದ ದಿನದ ಇಪ್ಪತ್ತನಾಲ್ಕು ದಿನವೂ ದುಡಿಮೆ, ಇವರಿಗೆ ವಿಶ್ರಾಂತಿ ಇರುವುದಿಲ್ಲ. ಆ ಕಾರಣಕ್ಕಾಗಿ ನರಕ ಚತುರ್ದಶಿ ದಿನ ಮೈತುಂಬಾ ಎಣ್ಣೆ ಹಚ್ಚಿ ವ್ಯಾಯಾಮ ಮಾಡಿ, ಬಿಸಿ ನೀರಿನ ಅಭ್ಯಂಜನವನ್ನು ಮಾಡುವುದರಿಂದ ಮುಂದಿನ 364 ದಿನವೂ ದೇಹಕ್ಕೆ ಶಕ್ತಿ, ಮನಸ್ಸಿಗೆ ಹುರುಪು ತುಂಬಿಕೊಂಡಿರುತ್ತದೆ ಎಂಬುದು ತುಳುವರ ನಂಬಿಕೆ. ಆ ದಿನದ ವಿಶೇಷ ಕುಟ್ಟಿದ ಅವಲಕ್ಕಿಯನ್ನು ಬೆಲ್ಲ, ತೆಂಗಿನಕಾಯಿ, ತುಪ್ಪ, ಏಲಕ್ಕಿ ಬೆರೆಸಿ ತಿನ್ನುವುದು.

ಮಧ್ಯಾಹ್ನ ಸಿಹಿ ಕಡುಬಿನೊಂದಿಗೆ ಹಲವಾರು ಖಾದ್ಯಗಳೊಂದಿಗೆ ಮನೆಮಂದಿಯೆಲ್ಲ ಒಟ್ಟು ಸೇರಿ ಸಂತೋಷದಲ್ಲಿ ಭೋಜನ ಮಾಡುವರು.

## ಬಲೀಂದ್ರ ಪೂಜೆ (ಬಲೀಂದ್ರ ಲೆಪ್ಪುನಿ):

ಕೇರಳವನ್ನು ಮಹಾಬಲಿ ಚಕ್ರವರ್ತಿ ಆಳುತ್ತಿದ್ದನು. ಈತ ಜನರನ್ನು ಮಕ್ಕಳಂತೆ ಪ್ರೀತಿಸುತ್ತಿದ್ದನು. ಇವನ ರಾಜ್ಯದಲ್ಲಿ ಸುಖ ಸಂಪತ್ತು ತುಂಬಿ ತುಳುಕಾಡುತ್ತಿತ್ತು. 'ಯಥಾ ರಾಜ ತಥಾ: ಪ್ರಜಾ' ಎನ್ನುವಂತೆ ಈತನ ಪ್ರಜೆಗಳು ಸತ್ಯವಂತರೂ ಉತ್ತಮರೂ ಆಗಿದ್ದರು. ಕಳ್ಳತನ, ದರೋಡೆ, ಕೊಲೆ, ಅತ್ಯಾಚಾರ, ಸುಲಿಗೆ ಮುಂತಾದ ಘಟನೆಗಳು ಈ ರಾಜ್ಯದಲ್ಲಿ ತೀರಾ ವಿರಳವಾಗಿತ್ತು. ಒಂದು ದಿನ ಬಲಿ ಚಕ್ರವರ್ತಿಯು ಇಂದ್ರನ ಪದವಿಗೆ ಸಮಾನವಾದ ಸ್ಥಾನ ಪಡೆಯಬೇಕೆಂಬ ಹಂಬಲದಿಂದ ಒಂದು ವಿಶೇಷ ಯಾಗವನ್ನು ಮಾಡುತ್ತಾನೆ. ಇದನ್ನು ನೋಡಿದ ಇಂದ್ರಾದಿ ದೇವತೆಗಳು ಮಾನವನೊಬ್ಬ ಬಲಿಷ್ಠವಾಗುವನೆಂದು ಭಯಭೀತರಾಗಿ, ಓಡಿ ಹೋಗಿ ವಿಷ್ಣುವಿನ ಸಹಾಯವನ್ನು ಬೇಡುತ್ತಾರೆ. ವಿಷ್ಣು ಯಾಗದ ಸಮಯದಲ್ಲಿ ವಾಮನನಾಗಿ ಬ್ರಾಹ್ಮಣ ರೂಪ ಧರಿಸಿ, ತನ್ನ ತಪ್ಪಸ್ಸಿಗೆಂದು ಬಲಿ ಚಕ್ರವರ್ತಿಯಲ್ಲಿ ಮೂರಡಿ ನೆಲವನ್ನು ಬೇಡುತ್ತಾನೆ. ಬಲಿಚಕ್ರವರ್ತಿ ಭೂಮಿಯನ್ನು ಅಳೆಯಲು ಹೇಳಿದನು. ನೋಡು ನೋಡುತ್ತಿದ್ದಂತೆ ಬ್ರಾಹ್ಮಣನ ದೇಹ ತ್ರಿವಿಕ್ರಮ ರೂಪ ತಳೆಯಿತು. ಒಂದು ಪಾದ ಇಡೀ ಭೂಭಾಗವನ್ನು ಆವರಿಸಿತು. ಎರಡನೆಯ ಪಾದ ಇಡೀ ಆಕಾಶವನ್ನೇ ಆವರಿಸಿತು. ಮೂರನೆಯ ಪಾದವನ್ನು ಎಲ್ಲಿಡಲಿ? ಎಂದು ಬಲಿಯನ್ನು ಕೇಳಿದಾಗ, ಬಲಿ ಚಕ್ರವರ್ತಿಯು ಭಕ್ತಿ ಭಾವದಿಂದ ತಲೆ ಬಾಗಿದನು. ತ್ರಿವಿಕ್ರಮನಾದ ವಿಷ್ಣು ಬಲಿಯ ನೆತ್ತಿಯ ಮೇಲೆ ಪಾದವನ್ನಿಟ್ಟಾಗ ಬಲಿಯು ಪಾತಾಳಕ್ಕಿಳಿಯುತ್ತಾನೆ. ದೇವರು ಬಲಿಯ ಭಕ್ತಿಗೆ ಮೆಚ್ಚಿ ವರವನ್ನು ಬೇಡಲು ಕೇಳಿದಾಗ, "ಪ್ರಭು ಭೂಮಿಯ ಬೆಳಕು ನೋಡುವ ಭಾಗ್ಯ ಕೊಡಿ ವರ್ಷಕ್ಕೊಮ್ಮೆ ಪ್ರಜೆಗಳನ್ನು ಕಾಣಲು ಅಪ್ಪಣೆ ಕೊಡಿ" (ಪ್ರಭು ಭೂಮಿದ ಬೊಲ್ಪಿ ತೂಪಿನ ಭಾಗ್ಯ ಕೊರ್ಲೆ, ವರ್ಷಗೊರ ಎನ್ನ ಜನಕ್ಲೆನ್ ತೂವೆರೆ ಎಂಕೆ ಅಪ್ಪಣೆ ಕೊರ್ಲೆ") ಎಂದು ಬೇಡುತ್ತಾನೆ. ಆಗ ವಿಷ್ಣುವು "ಓ ಭೂಮಿಪುತ್ರ ಬಲಿಯೇಂದ್ರ ನೀನು ಮನಸ್ಸಿಗೆ ನೋವು ಮಾಡಿಕೊಳ್ಳಬೇಡ. ಇನ್ನು ಮುಂದೆ ಈ ಭೂಮಿಯಲ್ಲಿ ಕರಿಕಲ್ಲು ಕಾಯಿಯಾದಾಗ, ಬಿಳಿಕಲ್ಲು ಹೂ ಬಿಡುವಾಗ, ಉಪ್ಪು ಕರ್ಪೂರವಾದಾಗ, ಅಂಗಳ ಪಾದೆಕಲ್ಲಾದಾಗ, ಗೊಡ್ಡು ಎಮ್ಮೆ ದೊಡ್ಡದಾದಾಗ, ಕೋಣ ದಡ್ಡನಾದಾಗ, ತುಂಬೆಯಡಿಯಲ್ಲಿ ಕೂಟವಾದಾಗ, ನೆಕ್ಕಿಯಡಿಯಲ್ಲಿ ಆಟವಾದಾಗ, ಸಮುದ್ರಕ್ಕೆ ಸೇತುವೆಯಾದಾಗ, ಆಕಾಶಕ್ಕೆ ಏಣಿಯಾದಾಗ, ಗುರುಗುಂಜಿ ಕಪ್ಪು ಚಿಕ್ಕಿ ಮಾಸಿ ಹೋದಾಗ, ಮಜಲು ಹಕ್ಕಿ ಕಾಡಿಗೆ ಹಾಕುವಾಗ, ಕೊಟ್ರುಂಜಕೊಡಿ ಏರಿದಾಗ, ಆಟಿ ತಿಂಗಳಲ್ಲಿ ಬರುವ ಅಮಾವಾಸ್ಯೆ, ಸೋಣ ತಿಂಗಳಲ್ಲಿ ಬರುವ ಸಂಕ್ರಮಣ, ಬೊಂತೆಲ್ ತಿಂಗಳಲ್ಲಿ ಬರು ಕೊಡಿಹಬ್ಬ ಈ ಮೂರರ ಬಲಿ ಕೊಂಡು ಓಡಿ ಹೋಗು ಬಲೀಂದ್ರ" ಎಂಬುದಾಗಿ ಬಲೀಂದ್ರನಿಗೆ ವರ ನೀಡುತ್ತಾನೆ.

"ಕರ್ಗಲ್ಲ್ ಕಾಯಾನಗಾ, ಬೊಲ್ಗಲ್ ಪೂವಾನಗಾ
ಉರ್ದು ಮದ್ದೊಲಿ ಆನಗಾ, ಗೊಡ್ಡೆರ್ಮೆ ಗೋಣೆ ಆನಗಾ
ಉಪ್ಪು ಕರ್ಪೂರಾನಗಾ, ಜಾಲ್ ಪಾದೆ ಆನಾಗಾ

ತುಂಬೆದಡಿಟ್ಟ್ ಕೂಟ ಆನಗಾ, ನೆಕ್ಕಿದಡಿಟ್ಟ್ ಆಟ ಆನಗಾ
ದಂಬೆಗೆ ಪಾಂಪು ಪಾಡ್ನಗಾ, ಅಲೆಟ್ಟ್ ಬೊಲ್ಯನ್ಯೆ ಮುರ್ಕುನಗಾ
ಎರುದಡ್ಡೆ ಆನಗಾ, ಗುರುಗುಂಜಿದ ಕಲೆ ಮಾಜಿನಗಾ
ಮಂಲೊಲ್ ಪಕ್ಕಿ ಮೈ ಪಾಡ್ನಗ, ಕೊಟ್ರುಂಞ ಕೊಡಿಯೇರ್ನಗಾ
ದಂಟೆದಜ್ಜಿ ಮದ್ಮಲಾನಗ, ಕಲ್ಲಕೋರಿ ಕೆಲೆಪುನಗಾ
ನಂದಿಕೋಲು ಮುಕ್ಕುರು ದಕ್ನಗಾ
ಬೊಲ್ಲಮಲೆ, ಸಲ್ಲಮಲೆ ಒಂಜಾನಗಾ
ಮೂಜಿ ದಿನತ ಉಚ್ಯ, ಮೂಜಿ ದಿನತ ಬಲಿ
ಕಂಡ ಕಂಡ ತುಡಾರ್ ತೂವರೆ ಆಜಿ ದಿನತ ಪೊಲಿ ಕೊನವರೆ
ಆವೂರ ಬಲಿಕನಲ, ಈ ಊರ ಪೊಲಿ ಕೊನೊಲ ಬಲೀಂದ್ರ
ಅರಕ್ದ ಒಟ್ಟೆ, ಓಡುಡು ಮಯಣದ ಮೋಂಟು ಜಲ್ಲೊಡು
ಪೊಟ್ಟು ಗಟ್ಟಿ ಪೊಡಿ ಬಜಿಲ ಪೊಲಿ ಕೊನೊವೊರೆ
ಕೊಟ್ಟುಗು ಗೊಂಡೆ ಪೂ ಕಟ್ದ್ ಬಲ ಬಲೀಂದ್ರ"
ಎಂದು ಕರೆದಾಗ "ಕೂ... ಕೂ... ಕೂ... ಎಂದು ಅಲ್ಲಿ ಸೇರಿದವರು ಮೂರುಸ 'ಕೂ' ಹಾಕುತ್ತಾರೆ.



ಮುಂಡಾಳರಲ್ಲಿ ಈ ಬಲೀಂದ್ರ ಪೂಜೆಯನ್ನು ಬಬ್ಬುಸ್ವಾಮಿ ದೈವಸ್ಥಾನದಲ್ಲಿ ದೀಪಾವಳಿಯ ಮೂರನೇ ದಿನದಂದು ಆಚರಿಸುತ್ತಾರೆ. ಮುಂಡಾಳರ ಧಾರ್ಮಿಕ ಆಚರಣೆಗಳಲ್ಲಿ ಬಲೀಂದ್ರ ಪೂಜೆ (ಬಲೀಂದ್ರ ಲೆಪ್ಪುನಿ)ಯೂ ಒಂದು. ದಲಿತೇತರರಲ್ಲಿ ಮೂಲತ: ಕೃಷಿ ಭೂಮಿ ಇರುವ ಕಡೆಗಳಲ್ಲಿ ಬಲೀಂದ್ರ ಪೂಜೆ ಆಚರಿಸುತ್ತಾರೆ. ಆದರೆ ಅಲ್ಲಿಯೂ ಬಲೀಂದ್ರನಿಗೆ ಕೂssssssssss ಹೇಳುವುದು ಗದ್ದೆಯಲ್ಲಿ ಕೆಲಸ ಮಾಡುವ ದಲಿತರೇ.

ಮುಂಡಾಳರ ಬಬ್ಬುಸ್ವಾಮಿ ದೈವಸ್ಥಾನಗಳಲ್ಲಿ ಗ್ರಾಮದ ಹೆಂಗಸರು, ಗಂಡಸರು ಒಟ್ಟು ಸೇರಿ ದೈವಸ್ಥಾನವನ್ನು ನೀರಿನಿಂದ ತೊಳೆದು ಶುಚಿಗೊಳಿಸುತ್ತಾರೆ. ಅಂಗಣಕ್ಕೆ ಸೆಗಣಿ ಬಳಿದು ಶುದ್ಧಿಗೊಳಿಸುತ್ತಾರೆ. ಮುಕ್ಕಾಲ್ದಿ ಸಂಜೆ ದೈವಸ್ಥಾನದ ಒಳಗೆ ಹಾಗೂ ಹೊರಗೆ ತೀರ್ಥ ನೀರನ್ನು ಸಿಂಪಡಿಸಿ ಶುದ್ಧಿಗೊಳಿಸುತ್ತಾರೆ. ಶುದ್ಧಿಯ ಬಳಿಕ ಅಂಗಣದಲ್ಲಿ ಹೋಮವಿಡುತ್ತಾರೆ. ದಿನ ಪೂಜೆಯ ಬಳಿಕ ದರ್ಶನ ನಡೆಯುತ್ತದೆ. ಮಾನಿಚ್ಚಿಯಲ್ಲಿ ಬಬ್ಬುಸ್ವಾಮಿಯನ್ನು ದರ್ಶನದ ಮೂಲಕ ಆಹ್ವಾನಿಸುತ್ತಾರೆ. ಬಬ್ಬುಸ್ವಾಮಿ ದೈವಸ್ಥಾನದ ಅಂಗಣದಲ್ಲಿರುವ ಪ್ರತೀ ದೈವಗಳ ಕಲ್ಲಿನೆದುರು ತುದಿ ಬಾಳೆ ಎಲೆಯಲ್ಲಿ ಅವಲಕ್ಕಿ, ಬೆಲ್ಲದ ತುಂಡು, ಹಣ್ಣುಕಾಯಿ, ವೀಳ್ಯದೆಲೆ, ಅಡಿಕೆ ತುಂಡುಗಳು, ಬಲಿತ

ತೆಂಗಿನಕಾಯಿಯ ತಿರುಳುಗಳು ಒಂದೊಂದು ಹಣತೆ ಉರಿಸಿ ಇಡುತ್ತಾರೆ. ದೈವದ ಪಾತ್ರಿಯ ಮೈಮೇಲೆ ಆವೇಶಗೊಳ್ಳುವ ಮೂಲಕ ಬಬ್ಬುಸ್ವಾಮಿ ಗ್ರಾಮಸ್ಥರಲ್ಲಿ ಆ ಸ್ಥಳದಲ್ಲಿ ತಾನಿರುವುದು ಸತ್ಯ ಎಂಬುದನ್ನು ಖಾತ್ರಿಗೊಳಿಸುತ್ತದೆ. ದೈವವು ಪಾತ್ರಿಯ ಮೈಮೇಲೆ ಆವೇಶಗೊಳ್ಳುವ ಕ್ರಿಯೆಗೆ 'ಮಾನಿಚ್ಚಿ' ಎನ್ನುವರು.

ಇತರ ದೈವಗಳಿಗೆ ಪನಿಯಾರ ಬಡಿಸಿದಂತೆ ಆ ದೈವಗಳ ಎಡಭಾಗದಲ್ಲಿ ನೆಲದ ಮೇಲೆ ಭೂಮಿಗೆ ಸ್ಪರ್ಶಿಸುವಂತೆ (ಭೂಮಿಗೂ ಬಲೀಂದ್ರನಿಗೂ ಇರುವ ಅನ್ಯೋನ್ಯ ಸಂಬಂಧದ ಹಿನ್ನೆಲೆಯಲ್ಲಿ) ಮೊರದಲ್ಲಿ ತುದಿ ಬಾಳೆ ಎಲೆ ಹಾಕಿ ಅದರಲ್ಲೂ ಪನಿಯಾರ ಅವಲಕ್ಕಿ, ಹೊದ್ದಿಲು, ಬೆಲ್ಲದ ತುಂಡು, ತೆಂಗಿನ ಕಾಯಿಯ ತಿರುಳು, ನಾಲ್ಕು ಮೂಲೆಗೊಂದರಂತೆ ಹಣತೆ ಹಾಗೂ ಮಧ್ಯದಲ್ಲಿ ಒಂದು ಹಣತೆಯನ್ನು ಉರಿಸಿ ಬೆಳಗಿಸಿಡುತ್ತಾರೆ. ಅದರ ಮುಂಭಾಗದಲ್ಲಿ ಬಲೀಂದ್ರ ಕಂಬ ನೆಡಲು ಗುಳಿ ತೋಡಿರುತ್ತಾರೆ.

ಪ್ರತೀ ಶ್ರೀ ಬಬ್ಬುಸ್ವಾಮಿ ದೈವಸ್ಥಾನಗಳಲ್ಲೂ ಬಲೀಂದ್ರ ಕಂಬವಿರುತ್ತದೆ. ಬಲೀಂದ್ರ ಪೂಜೆಯ ಮರುದಿನ ಅದನ್ನು ದೈವಸ್ಥಾನದ ಅಟ್ಟದಲ್ಲಿ ಭದ್ರವಾಗಿಡುತ್ತಾರೆ. ಈ ಕಂಬವನ್ನು ಹಬ್ಬದ ದಿನ ತೆಗೆದು ಮೊದಲೇ ಶುಚಿಗೊಳಿಸುತ್ತಾರೆ. ಈ ಕಂಬಕ್ಕೆ ಸಾಲಾಗಿ ಎರಡು ಅಡ್ಡ ಗಳುಗಳನ್ನು ಕಟ್ಟಿರುತ್ತಾರೆ. ತುದಿ ಭಾಗಕ್ಕೆ ನಾಲ್ಕು ಮೇಲ್ಮುಖವಾಗಿ ಚಿಕ್ಕ ಗಳುಗಳನ್ನು ಜೋಡಿಸಿಡುತ್ತಾರೆ. ಬಹಳ ಸುಂದರವಾಗಿ ಹೂವಿನ ಅಲಂಕಾರವನ್ನು ಮಾಡಿರುವ ಈ ಕಂಬಕ್ಕೆ ತೀರ್ಥ ನೀರಿನ ಶುದ್ಧವಾಗಿ ದೈವದ ಮಾನಿಚ್ಚಿಯಲ್ಲೇ ಮೂರು ಸುತ್ತು ದೈವಸ್ಥಾನಕ್ಕೆ ಪ್ರದಕ್ಷಿಣೆ (ಬಲಿ) ಬರುತ್ತಾರೆ. ಗ್ರಾಮಸ್ಥರೆಲ್ಲ ಈ ಬಲಿಯಲ್ಲಿ (ಪ್ರದರ್ಶನ) ಶ್ರದ್ಧಾಭಕ್ತಿಯಿಂದ ಪಾಲ್ಗೊಳ್ಳುತ್ತಾರೆ. ಮುಂಡಾಳ ಗ್ರಾಮಸ್ಥರ ಗಂಡಸರು ಮುಂದೆ, ಹೆಂಗಸರು ಮಕ್ಕಳು ಮರಿಗಳು ಹಿಂದೆ ಇದ್ದು ಮೂರು ಸುತ್ತು ಬಲಿ ಪ್ರದಕ್ಷಿಣೆ ಬರುವ ಈ ವಿಧಾನಕ್ಕೆ 'ದರ್ಶನ ಬಲಿ' ಎನ್ನುವರು. ಈ ಕಂಬವನ್ನು 'ಮುಕ್ಕಾಲ್ದಿ' ಹಿಡಿದುಕೊಂಡಿದ್ದು, ಮೂರು ಸುತ್ತು ಪ್ರದಕ್ಷಿಣೆಯ ಬಳಿಕ ಪರಿಯಾರ ಬಡಿಸಿಟ್ಟ ಮೊರದ ಬಳಿ ಇರುವ ಗುಳಿಯಲ್ಲಿ ಈ ಕಂಬವನ್ನು ಗಟ್ಟಿಯಾಗಿ ಊರುತ್ತಾರೆ. ಬಳಿಕ ಈ ಬಲೀಂದ್ರ ಕಂಬಕ್ಕೆ 24 ದೀಪಗಳ ಅಲಂಕಾರವಾಗುತ್ತದೆ. ಹೊದಿಲು ಅವಲಕ್ಕಿಯನ್ನು ಒಂದು ಬಿಳಿ ವಸ್ತ್ರದಿಂದ ಈ ಕಂಬಕ್ಕೆ ಕಟ್ಟುತ್ತಾರೆ. ತರುವಾಯ ಬಲೀಂದ್ರನನ್ನು "ಓ ಪೊತ್ತಿಲಾ... ಬಲಿಗಿಂಡ ... ಬಲಿಯೇಂದ್ರ ಬಲಿಬಲ್ಲ ... ಬಲಿಯೇ ... ಓ... ಕೂ ..." ಎಂದು ಸರ್ವರೂ ಆಕಾಶಕ್ಕೆ ಮುಖ ಮಾಡಿ ಬಲೀಂದ್ರನನ್ನು ಕರೆಯುವರು. ಬಾನಂಗಳದಲ್ಲಿ ಮಾರ್ದನಿಸುವ ಸ್ವರ ಕೇಳಿ ಬಲೀಂದ್ರ ಭೂಮಿಗಿಳಿದು ಬಂದು ನಮ್ಮೆಲ್ಲರನ್ನು ಹರಸುವನೆಂಬ ನಂಬಿಕೆ ಈ ತುಳುವರದು. ಮುಂಡಾಳರಲ್ಲಿ ಬಬ್ಬುಸ್ವಾಮಿ ದೈವಸ್ಥಾನದಲ್ಲಿ ನಡೆಯುವ ಬಲೀಂದ್ರ ಪೂಜೆ ಪೂರ್ಣ ಜವಾಬ್ದಾರಿ ಗುರಿಕಾರನದ್ದಾಗಿರುತ್ತದೆ. ಅವನಿಗೆ ಎಲ್ಲರೂ ಸಹಕಾರ ನೀಡಿ ಬಲೀಂದ್ರ ಪೂಜೆಯನ್ನು ಮಾಡುತ್ತಾರೆ.

ಬಲೀಂದ್ರ ಪೂಜೆಯ ಬಳಿಕ ಮಾನಿಚ್ಚಿಯಲ್ಲಿ ಬಂದ ದೈವದೊಂದಿಗೆ ದೈವದ ಗಂಧಪ್ರಸಾದ ಸ್ವೀಕರಣೆ, ಪ್ರಶ್ನೆ ಕೇಳುವ ಕಾರ್ಯವೂ ನಡೆಯುತ್ತದೆ. ಗೌರವ ಸಮ್ಮಾನಗಳಿಂದ ದೈವವನ್ನು ಪಾತ್ರಿಯ ಮೈಯಿಂದ ಮಾಯಕಕ್ಕೆ ಕಳುಹಿಸಿ, ಸೇರಿದ ಜನರೆಲ್ಲ ಬಡಿಸಿಟ್ಟ ಪನಿಯಾರವನ್ನು ಪ್ರಸಾದ

ರೂಪದಲ್ಲಿ ಸ್ವೀಕರಿಸಿ, ದೈವದ ಆಶೀರ್ವಾದ ಪಡೆದು ಅವರವರ ಮನೆಗೆ ತೆರಳುತ್ತಾರೆ. ಈ ಬಲೀಂದ್ರ ಪೂಜೆಯನ್ನು ಮುಂಡಾಳರು ನವೆಂಬರ್ ತಿಂಗಳ ದೀಪಾವಳಿ ಸಂದರ್ಭದಲ್ಲಿ ಮಾತ್ರ ನಡೆಸುತ್ತಾರೆ. ಅಕ್ಟೋಬರ್ ತಿಂಗಳ ಮಧ್ಯಭಾಗದಿಂದ ನವೆಂಬರ್ ತಿಂಗಳ ಮಧ್ಯಭಾಗವು ('ಬೊಂತೆಲ್'ನಿಂದ 'ಜಾರ್ದೆ'' ದೀಪೊಲಿ'ಯಿಂದ 'ಕೊಡಿ' ವರೆಗೆ) ಬಲೀಂದ್ರ ಪೂಜೆಯ ಆಚರಣಾ ತಿಂಗಳಾಗಿರುತ್ತದೆ.

**ಮುಂಡಾಳ ಜನಾಂಗದ ಜನಪದ ಆಚರಣೆ:**

ತುಳುನಾಡಿನ ದಲಿತ ಜನಾಂಗವಾದ ಮುಂಡಾಳರಲ್ಲಿ ಮಂಗಳೂರಿನ ಉತ್ತರಭಾಗದಲ್ಲಿ ನೆಲೆಸಿರುವ ಮುಂಡಾಳ ಜನಾಂಗ ಹಾಗೂ ಗೊಡ್ಡ ಜನಾಂಗ ಮಾರಿ ನಿವಾರಣೆಗಾಗಿ, ಮಾರಿಯಮ್ಮನ ಪ್ರೀತ್ಯರ್ಥವಾಗಿ ಕಂಗೀಲು ಕುಣಿತ ಅಥವಾ ಕರಂಗೋಲು ಎಂಬ ಕುಣಿತವನ್ನು ನಡೆಸುತ್ತಾರೆ. ಮಾರ್ಚ್ ತಿಂಗಳ ಹುಣ್ಣಿಮೆಯಂದು ಮುಂಡಾಳ ಜನಾಂಗದವರು ಸೊಂಟಕ್ಕೆ ತೆಂಗಿನ ಗರಿ ಸುತ್ತಿಕೊಂಡು ಪ್ರತೀ ಮನೆಗೂ ತೆರಳಿ 'ಮಾಯಿಡೇ ಬತ್ತ್‌ಂಡವು ಮಾಯಿದ ಪುಣ್ಣಮೆ' ಪಾಡ್ದನಕ್ಕೆ ಲಯಬದ್ಧವಾಗಿ ಹೆಜ್ಜೆ ಹಾಕುತ್ತಾ ಕುಣಿಯುತ್ತಾರೆ. ಊರಿಗೆ ಬಂದು ನೆಲೆನಿಂತ ಮಾರಿಯನ್ನು ಓಡಿಸುವ ಆಚರಣೆ ಇದಾಗಿದೆ. ಡಾ. ಚಿನ್ನಪ್ಪಗೌಡ ಹಾಗೂ ಡಾ. ಅಭಯಕುಮಾರ್‌ರವರು ಇದು ಮನ್ಸ, ಮುಗೇರಲ್ಲಿ ಇರುವ ಒಂದು ಆಚರಣೆ ಎನ್ನುತ್ತಾರೆ. ನವೀನ್ ಸುವರ್ಣಪಡ್ರೆ ತಮ್ಮ ಕೃತಿಯಲ್ಲಿ (ಶ್ರೀ ಬಬ್ಬುಸ್ವಾಮಿ ಮತ್ತು ಶ್ರೀ ತನ್ನಿಮಾನಿಗ ಕೃತಿ ಪು.82) ಮುಂಡಾಳರೂ ಕಂಗೀಲು ಆಚರಣೆ ಮಾಡುತ್ತಾರೆಂಬ ಉಲ್ಲೇಖವನ್ನು ಮಾಡಿದ್ದಾರೆ. ಒಟ್ಟಾರೆಯಾಗಿ ಕೃಷಿ ಪ್ರಧಾನ ವ್ಯವಸ್ಥೆ ಒಳಗಡೆ ಇರುವ ಮನ್ಸ, ಮುಗೇರ, ಬಾಕುಡ, ಮುಂಡಾಳ ಮುಂತಾದ ಜನಾಂಗದ ಜನ ಊರಿಗೆ ಒಳಿತಾಗುವ, ಮಾರಿಯನ್ನು ಓಡಿಸುವ ಮಹತ್ತರ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದಂತು ಸ್ಪಷ್ಟವಾಗಿದೆ. ಅಂದರೆ ಆಗಿನ ಕಾಲದ ದಲಿತ ಜನಾಂಗದಲ್ಲಿ ಜನಪರ ಕಾಳಜಿ ಹಾಗೂ ಸಮನ್ವಯ ಹಿತಚಿಂತನೆ ಎಷ್ಟಿತ್ತು ಎಂಬುದನ್ನು ಇದು ತಿಳಿಸುತ್ತದೆ. ಇಲ್ಲಿ ಜಾತಿಯ ಪ್ರಶ್ನೆ ಮುಖ್ಯವಲ್ಲ, ಸಮನ್ವಯದ ಏಳಿಗೆ, ಸಮಷ್ಟಿಯ ಉದ್ಧಾರ, ಸಮಷ್ಟಿ ಸ್ವಾಸ್ಥ್ಯ ಬಹಳ ಮುಖ್ಯವಾಗಿತ್ತೆಂಬುದು ನನ್ನ ಅಭಿಪ್ರಾಯವಾಗಿದೆ. ಮುಂಡಾಳ ಜನಾಂಗದಲ್ಲೂ ಕರಂಗೋಲು ಕುಣಿತ ಈ ಹಿಂದೆ ಇದ್ದಿರಬಹುದು ಎಂಬುದು ಈ ಮುಂತಾದವರ ವಿಚಾರವಾದಿಗಳ ವಿಚಾರಗಳಿಂದ ತಿಳಿದು ಬರುತ್ತದೆ ಎಂಬುದಷ್ಟೇ ಇಲ್ಲಿರುವ ಸತ್ಯ.

# ಅಧ್ಯಾಯ 4

## ಭೂತಾರಾಧನೆ ಮತ್ತು ಅದರ ವೈವಿಧ್ಯತಾ ಆಚರಣೆಗಳು

- ಭೂತಾರಾಧನೆ ಎಂದರೇನು? ಪದ ನಿಷ್ಪತ್ತಿ, ವ್ಯಾಖ್ಯಾನಗಳು
- ಭೂತಗಳ ವಿಧಗಳು
- ಭೂತಾರಾಧನೆಯ ವಿಧಗಳು
- ಭೂತ/ದೈವಗಳಿಗೆ ನೀಡುವ ಸೇವೆಗಳು
- ಕೋಲ/ನೇಮೋತ್ಸವ ಹುಟ್ಟಿಕೊಳ್ಳಲು ಕಾರಣಗಳು

# ಅಧ್ಯಾಯ 4

# ಭೂತಾರಾಧನೆ ಮತ್ತು ಅದರ ವೈವಿಧ್ಯತಾ ಆಚರಣೆಗಳು

## 'ಭೂತ' ಪದದ ನಿಷ್ಪತ್ತಿ:

ತುಳುನಾಡಿನ ಒಂದು ವಿಶಿಷ್ಟ ಸಂಸ್ಕೃತಿಗಳಲ್ಲಿ ಭೂತಾರಾಧನೆಯೂ ಒಂದು. ತುಳುವರು ಆರಾಧಿಸುವ ಭೂತಗಳು ದುಷ್ಟ ಶಿಕ್ಷಕ ಶಿಷ್ಟ ರಕ್ಷಕ ಶಕ್ತಿಗಳಾಗಿವೆ. ಭೂತಗಳು ಕೇವಲ ರಕ್ಷಕರು ಮಾತ್ರವಲ್ಲ ತುಳುನಾಡಿನ ಆರಾಧ್ಯ ಶಕ್ತಿಗಳಾಗಿದೆ. 'ಭೂತ' ಎಂಬ ಪದವನ್ನು ಭಾಷಾ ವಿಜ್ಞಾನದ ನಿಟ್ಟಿನಲ್ಲಿ ವಿಶ್ಲೇಷಿಸುವುದಾದರೆ,'ಭೂತ' ಇದು ತುಳು ಪದ, ಕನ್ನಡದ ಪದವಲ್ಲ. ಸಂಸ್ಕೃತ ಭಾಷೆಯಲ್ಲಿ 'ಪೂತಂ' ಎಂಬ ಪದ ಪ್ರಯೋಗವಿದೆ. ಇದರರ್ಥ 'ಪವಿತ್ರವಾದುದು'. ಈ ಪ್ರಯೋಗ ಕಾಲಕ್ರಮೇಣ ಪೂತಂ > ಪೂತೋ > ಬುತೊ> ಭೂತೊ ಆಗಿರಬಹುದೆಂಬ ಅಭಿಪ್ರಾಯವನ್ನು ಡಾ। ಲಕ್ಷ್ಮೀ ಜಿ. ಪ್ರಸಾದ್ ವ್ಯಕ್ತಪಡಿಸುತ್ತಾರೆ. ವ್ಯಾಕರಣದ ಹಿನ್ನೆಲೆಯಲ್ಲಿ ವಿವರಿಸಿದಾಗಲೂ ಇದು ಸತ್ಯವಾಗಿರಬಹುದೆಂಬ ನಂಬಿಕೆ ಬರುತ್ತದೆ. 'ಭೂತಕಾಲ' ಎಂದರೆ – ಆಗಿಹೋದ, ನಡೆದು ಹೋದ ಎಂಬರ್ಥವಿದೆ. ಅಂದರೆ 'ಹಿಂದೆ ಇದ್ದವರು' (ಭೂತಕಾಲ) ಎಂಬರ್ಥ. ಈ ಅರ್ಥ ಹೆಚ್ಚು ಅನ್ವಯವಾಗುತ್ತದೆ.

'ಭೂತ'ಗಳೆಂದರೆ ಭೂತಕಾಲದಲ್ಲಿ (ಗತಕಾಲದಲ್ಲಿ) ಬದುಕಿದ್ದು ಶೋಷಣೆಗೊಳಗಾಗಿ ಕಾಲಕ್ರಮೇಣ ಜೋಗ ಬಿಟ್ಟು ಮಾಯಕ್ಕೆ ಸಂದವರು ಎಂದು ಅರ್ಥೈಸಿಕೊಳ್ಳಬಹುದು. ಒಟ್ಟಾರೆಯಾಗಿ 'ಧರ್ಮೋ ರಕ್ಷತಿ: ರಕ್ಷಿತ:' ಎಂಬ ಮಾತು ಭೂತಗಳಿಗೆ ಸರಿಹೊಂದುತ್ತದೆ. ಭೂತಗಳು ಭಕ್ಷಕರಲ್ಲ ಸಮಯ ಬಂದಾಗ ಶಿಕ್ಷಕರೂ ಆಗುತ್ತಾರೆ, ರಕ್ಷಕರೂ ಆಗುತ್ತಾರೆ.

## ಭೂತಾರಾಧನೆ ಎಂದರೇನು?

ಮಾನವನು ಹುಟ್ಟಿಗಿಂತ ಹಿಂದೆ ಸಾವಿನ ನಂತರ ಅಗೋಚರನಾಗಿರುತ್ತಾನೆ. ಇವೆರಡರ ನಡುವೆ ಇರುವ ವ್ಯವಸ್ಥೆಯೇ ಜೀವನ ಗೋಚರಕ್ಕೆ ಒಳಪಡುವಂತಹುದ್ದು. ಹುಟ್ಟಿಗಿಂತ ಹಿಂದೆ ಏನಾಗಿದ್ದೆ? ಸಾವಿನ ನಂತರ ಏನಾಗುವೆ? ಎಂಬ ಪ್ರಶ್ನೆ ಇಂದಿಗೂ ನಿಗೂಢ. ಆದರೆ ಇವೆರಡರ ನಡುವೆ ಮನುಷ್ಯ ಅಗೋಚರವಾಗಿರುವ ಈ ವಿಚಾರಗಳಿಗೆ ಉತ್ತರವನ್ನು ಹುಡುಕುತ್ತಾನೆ. ಕೆಲವೊಮ್ಮೆ ಉತ್ತರ ದೊರೆಯದೆ ನಿರಾಶನಾಗುತ್ತಾನೆ. ಇನ್ನು ಕೆಲವೊಮ್ಮೆ ಉತ್ತರ ಲಭಿಸಿತೆಂದು, ಸಿಗದ ಉತ್ತರವನ್ನೇ ಉತ್ತರವೆಂದು ತಿಳಿದು ಭ್ರಮೆಗೊಳಗಾಗುತ್ತಾನೆ. ಎಲ್ಲಿಯವರೆಗೆ ಈ ಚಿಂತನೆ ಬದುಕಿನಲ್ಲಿರುವುದೋ, ಅಲ್ಲಿಯವರೆಗೆ ಮನುಷ್ಯ ತನ್ನ ಸುತ್ತಲಿನ ಪ್ರಪಂಚದಲ್ಲಿ ಗೋಚರ, ಅಗೋಚರಗಳ ಹುಡುಕಾಟವನ್ನು ಮಾಡುತ್ತಲೇ ಇರುತ್ತಾನೆ. ಈ ಹುಡುಕಾಟವೇ ಬದುಕಾಗುತ್ತದೆ. ಅಂದರೆ 'ನಂಬಿಕೆ'ಯ ಬುನಾದಿಯಲ್ಲಿ ಬದುಕು ಸವೆಸುವ ಮನುಷ್ಯನಿಗೆ ಬಲಿಷ್ಠವಾದ ರಕ್ಷಕನೊಬ್ಬನ

ಅವಶ್ಯಕತೆ ಕಾಣಿಸಿಕೊಳ್ಳುತ್ತದೆ. ಹಾಗಾಗಿ ಆತ ಅನುಮಾನುಷ ಶಕ್ತಿಗಳನ್ನು ವಿಶ್ವಾಸಿಸುತ್ತಾನೆ. ಈ ವಿಶ್ವಾಸವೇ ಆತನ ನಂಬಿಕೆಗೂ ಅಡಿಪಾಯವಾಗುತ್ತದೆ.

**ಭೂತರಾಧನೆಯ ಬಗೆಗಿರುವ ವಾಖ್ಯಾನಗಳು**:

"ತುಳುನಾಡಿನ ಸಂಸ್ಕೃತಿಯನ್ನು ಬಿಂಬಿಸುವ ಮಹತ್ವದ ಆಚರಣೆ ಧಾರ್ಮಿಕ ವಿಷಯದೊಂದಿಗೆ ಜನಪದವೂ ಸೇರಿರುವುದರಿಂದ ಇದೊಂದು ಜನಪದ ರಂಗಕಲೆಯೂ ಹೌದು. ಭೂತಾರಾಧನೆಗೆ ಇತಿಹಾಸ ಪೂರ್ವದ ಇತಿಹಾಸವಿದೆ", ಎಂಬುದಾಗಿ 'ಫಾದರ್ ಹೆರಾಸ'ನ ಅಭಿಪ್ರಾಯಿಸುತ್ತಾರೆ. ಏರ್ಯ ಲಕ್ಷ್ಮೀ ನಾರಾಯಣ ಆಳ್ವರ-ಪ್ರಕಾರ "ಭೂತಾರಾಧನೆ ಎಂದರೆ ವೀರಾರಾಧನೆಯ ಒಂದು ರೂಪ. ಭಕ್ತಿ ಪ್ರಧಾನವಾದ ಈ ಧಾರ್ಮಿಕ ಕ್ರಿಯೆಯ ಸೊಬಗು ಬಂದಿರುವುದು, ಅದರ ಬಣ್ಣಗಾರಿಕೆ, ಹಿಮ್ಮೇಳ ವಾದ್ಯ ಹಾಗೂ ಮೈ ಜುಂಮ್ಮೆನಿಸುವ ಕುಣಿತಗಳಿಂದ" ಎನ್ನುತ್ತಾರೆ. ಮನುಷ್ಯ ಸುಖದಲ್ಲಿ ದೈವ-ದೇವರನ್ನು ನೆನೆಯದಿದ್ದರೂ, ತನ್ನ ಕಷ್ಟದ ದಿನಗಳಲ್ಲಿ, ಕಷ್ಟದ ನಿವಾರಣೆಗಾಗಿ ಕಾಣದ ಶಕ್ತಿಗೆ ಮೊರೆ ಹೋಗುತ್ತಾನೆ. ಆತನ ಈ ಕಳಕಳಿಯ ಮೊರೆ ಹೋಗುವ ಭಾವನೆಯಿಂದ ಭೂತವನ್ನು ಆರಾಧಿಸುವ ಪದ್ಧತಿ ನಿರ್ಮಾಣಗೊಂಡಿದೆ. "ನಮ್ಮ ಬಾಳಿನಲ್ಲಿ ಕಂಡು ಬರುವ ಯಾವುದೋ ಕೊರತೆಯನ್ನು ತುಂಬಿಸಲು, ನೆಮ್ಮದಿ ಪಡೆಯಲು, ಸತ್ಯವನ್ನೂ, ಶಿವನನ್ನೂ ಅರಸಲು ಸಮಾಜ ಜೀವನದ ಸೌಖ್ಯ ಹೆಚ್ಚಿಸಲು, ಭೂತಾರಾಧನೆ ಜನಜೀವನದೊಂದಿಗೆ ಬೆರೆತು ಬಂದಿದೆ". ಎಂದು ಅಮೃತ ಸೋಮೇಶ್ವರರ ಅಭಿಪ್ರಾಯಪಡುತ್ತಾರೆ.

ದಕ್ಷಿಣ ಕನ್ನಡದ ಮುಖ್ಯ ಕಸುಬು ವ್ಯವಸಾಯ. ಬೇಸಾಯಕ್ಕೂ ಭೂತಾರಾಧನೆಗೂ ಅತ್ಯಂತ ನಿಕಟ ಸಂಬಂಧವಿದೆ. ಭೂತಾರಾಧನೆಗೆ ಪ್ರಮುಖವಾಗಿ ಬಳಸುವ ಅಡಕೆ, ತೆಂಗಿನಕಾಯಿ, ತೆಂಗಿನಗರಿ (ಹಸಿ ಹಾಗೂ ಒಣ ತೂಟೆಯ ಬೆಂಕಿಗೆ), ಭತ್ತ ಮತ್ತು ಅರಳು ಇವೆಲ್ಲವೂ ಕೃಷಿ ಸಂಬಂಧಿ ವಸ್ತುಗಳು. ಮತ ಬೇಧವಿಲ್ಲದೆ ಜನರ ಪಾಲ್ಗೊಳ್ಳುವಿಕೆಯೇ ಭೂತಾರಾಧನೆಯ ವೈಶಿಷ್ಟ್ಯ. ದಕ್ಷಿಣ ಕನ್ನಡ ಪ್ರತಿ ಹಳ್ಳಿ-ಪಟ್ಟಣಗಳಲ್ಲೂ ಭೂತ ಸ್ಥಾನಗಳಿವೆ. 'ದಕ್ಷಿಣ ಕನ್ನಡದಲ್ಲಿ ಭೂತವಿಲ್ಲದ ಗ್ರಾಮವಿಲ್ಲ', ಎಂಬ ನಾಣ್ನುಡಿ ಕೂಡಾ ಇದೆ. ಭೂತಗಳನ್ನು ತೃಪ್ತಿಪಡಿಸಲು ವರ್ಷವೂ ಜನ ಉತ್ಸವ, ಪರ್ವಗಳನ್ನು ನಡೆಸುತ್ತಾರೆ. ಭೂತವನ್ನು ಸತ್ಯದ ಪ್ರತೀಕ ಎನ್ನಲಾಗಿದೆ (ಪ್ರತಿರೂಪ). ಈ ಉತ್ಸವಗಳಿಗೆ ಕೋಲ, ಬಲಿ, ನೇಮ, ಧರ್ಮನೇಮ, ತಂಬಿಲ, ಬಂಡಿ, ಪರ್ವ ಮುಂತಾದ ಹೆಸರುಗಳಿವೆ.







## ಭೂತಗಳ ವಿಧಗಳು:

ಭೂತಗಳನ್ನು ಮೂರು ವಿಧಗಳಲ್ಲಿ ವಿಂಗಡಿಸಬಹುದು:

**1**. ಪ್ರಾಣಿರೂಪದ ಭೂತಗಳು:–ಪ್ರಾಣಿ ರೂಪದ ಭೂತಗಳು ಅಥವಾ ಪ್ರಾಣಿ ಮೂಲದ ದೈವಗಳು. (ಹುಲಿ, ಹಂದಿ, ನಂದಿ ಮತ್ತು ಕೋಣಗಳು) ಅವುಗಳೆಂದರೆ: ಪಂಜುರ್ಲಿ, ಪಿಲಿಭೂತ, ಎರು ಬಂಟ, ಪಿಲಿ ಚಾಮುಂಡಿ ಇತ್ಯಾದಿ.ತುಳುನಾಡು ಕೃಷಿ ಪ್ರಧಾನ ನಾಡಾಗಿದ್ದು, ಹೆಚ್ಚಿನ ಜನರ ಉದ್ಯೋಗ ವ್ಯವಸಾಯವಾಗಿತ್ತು. ಹಾಗಾಗಿ ತಮ್ಮ ಬೆಳೆಗಳಿಗೆ ಪ್ರಾಣಿಗಳಿಂದಾಗುವ ಉಪದ್ರವವನ್ನು ನಿವಾರಿಸುವುದಕ್ಕಾಗಿ ಹುಟ್ಟಿಕೊಂಡ ಪ್ರಾಣಿರೂಪದ ದೈವಗಳೇ ಪಿಲಿಚಾಮುಂಡಿ, ಪಂಜುರ್ಲಿ ಮುಂತಾದುವುಗಳಾಗಿವೆ.

**2**. ಮಾನವರ ಮರಣದ ಬಳಿಕ ದೈವತ್ವ ಪಡೆದ ಭೂತಗಳು3. ಪುರಾಣದಿಂದ ಆಯ್ಕೆಗೊಂಡ ವ್ಯಕ್ತಿಗಳ ಭೂತಗಳು:– ಕೋಟಿ ಚೆನ್ನಯ್ಯ, ಅಬ್ಬಗ–ದಾರಗ, ಕಲ್ಕುಡ–ಕಲ್ಲುರ್ಟಿ, ಕಾಂತ ಬಾರೆ–ಬುದಬಾರೆ, ಕೋಟಿಕುಂಜ–ದೇವಕುಂಜ, ಕೊಡಮಣಿಂತ್ತಾಯ, ಕಿಕ್ಕುಣಂತಾಯಿ, ಅಣ್ಣಪ್ಪ ಶಿವತ್ತಾಯಿ, ಹಳ್ಳಿತ್ತಾಯಿ, ಅಡಕೆತಾಯಿ, ನಾರಳತ್ತಾಯ, ಮರ್ವಿಮಾಣಿ, ಬೀರ್ನಾಚಾರಿ, ಪರಮಭೂತ, ಬಿರ್ಮಣಬೈದ್ಯ, ಪರಿವಾರನಾಯಕ, ಪರವಭೂತ, ಬಚ್ಚನಾಯಕ ಇವೆಲ್ಲವು ಮಾನವರಾಗಿ ಹುಟ್ಟಿ ತಮ್ಮ ಧೈರ್ಯ–ಸಾಹಸಗಳನ್ನು ಮೆರೆದು ದೈವತ್ವಕ್ಕೇರಿದವರು.

## ಭೂತಾರಾಧನೆಯ ವಿಧಗಳು:

ತುಳುನಾಡಿನ ಜನರ ಧಾರ್ಮಿಕ ಜೀವನದ ಪ್ರಮುಖ ಅಂಗವೇ ಭೂತಾರಾಧನೆ. ತುಳುನಾಡಿನಲ್ಲಿ ಆಚರಿಸುವ ಭೂತಗಳ ನೇಮೋತ್ಸವವನ್ನು ಎರಡು ವಿಧವಾಗಿ ವಿಂಗಡಿಸಬಹುದು. 1) ಮನೆಯಲ್ಲಿ ನಡೆಸುವ ಭೂತ ನೇಮಗಳು 2) ಗುಡಿಯ ಹೊರಭಾಗದಲ್ಲಿ ನಡೆಸುವ ಭೂತನೇಮಗಳು. ಭೂತಾರಾಧನೆಯ ಜೊತೆಗೆ ಇನ್ನಷ್ಟು ವಿಶಿಷ್ಟ ರೀತಿಯ ಆಚರಣೆಗಳಿವೆ. ಉದಾ:– ಸಿರಿ, ಯಕ್ಷಾರಾಧನೆ.

ಭೂತಗಳನ್ನು ಸೀಮೆ ದೈವ, ಗ್ರಾಮದೈವ, ಮನೆದೈವಗಳೆಂದು ವರ್ಗೀಕರಿಸಬಹುದು. ಗ್ರಾಮ ದೈವಗಳಲ್ಲಿ ಪ್ರತಿಸ್ಥಾಪಿಸಲ್ಪಟ್ಟ ಭೂತಗಳ ಸುತ್ತಲೂ ಅನೇಕ ದಂತಕಥೆಗಳನ್ನು ಹೆಣೆಯಲಾಗಿದೆ. ಇಲ್ಲಿ ಭೂತಕ್ಕೆ ಸಂಬಂಧಪಟ್ಟ ಕಾರ್ಯಗಳನ್ನು ಎಲ್ಲಿ? ಯಾವ ಸ್ಥಳಗಳಲ್ಲಿ ನಡೆಸಬೇಕೆಂಬ ನಿಯಮಗಳಿವೆ. ಕನ್ನಡ ಮಾತನಾಡುವ ಪ್ರದೇಶದಲ್ಲಿ ವೈದಿಕರೇ ಭೂತಕ್ಕೆ ಪೂಜೆ ಸಲ್ಲಿಸಿದರೆ, ತುಳುನಾಡಿನಲ್ಲಿ ಇದರ ಆರಾಧನೆ ಕೆಲವು ಜಾತಿಗಳಿಗೆ ಮಾತ್ರ ಮೀಸಲಾಗಿರುತ್ತದೆ. ನಲಿಕೆ, ಪರವ ಪಂಬದ, ಪಾಣಾರ ಜಾತಿಯವರು ಮಾತ್ರ ಭೂತದ ಕೆಲಸಗಳಲ್ಲಿ ಪಾಲ್ಗೊಳ್ಳುವರು. ಭೂತದೊಂದಿಗೆ ಪ್ರಶ್ನೆ ಕೇಳುವುದು, ಅದರಿಂದ ತಮ್ಮ ಸಮಸ್ಯೆಗಳಿಗೆ ಪರಿಹಾರ ಯಾಚಿಸುವುದು ಈ ಉತ್ಸವದಲ್ಲಿ ಒಂದು ಪದ್ಧತಿ. ಭೂತದ ವೇಷಧಾರಿ ಆಯಾಭೂತ ಪಾಡ್ದನ ಕೇಳಿಕೊಂಡು, ಆ ಭೂತದ ಸಂಧಿ ಗೂಡುವಾಗ ಮೈಯಲ್ಲಿ ಭೂತವನ್ನು ಆಹ್ವಾಹನೆಗೊಳಿಸಿ ವಾದ್ಯದ ತಾಳಕ್ಕೆ ತಕ್ಕಂತೆ ಕುಣಿಯುತ್ತಾನೆ.

ಭೂತ ನೆಲೆ ನಿಂತ ಜಾಗಕ್ಕೆ 'ಸಾನ' ಎನ್ನುವರು. ಈ ಸಾನದ ಒಳಗೆ ಹಲವು ಹಿತ್ತಾಳೆಯ ಮುಖವಾಡ, ಖಡ್ಗ, ಮೂರ್ತಿಗಳಿವೆ. ಹೆಚ್ಚಿನ ಗುಡಿಗಳ ಒಳಗೆ ಭೂತಗಳಿಗಾಗಿಯೇ ತೂಗುಮಂಚ (ಪಡಿಮಂಚ) ಗಳೂ ಇವೆ. ಈ ಪಡಿ ಮಂಚದ ಮೇಲೆ ದೀಪ ಇಟ್ಟು ಭೂತದ ಖಡ್ಗ, ಗಂಟೆಗಳನ್ನು ಇಡುತ್ತಾರೆ. ಆರಾಧನೆಯ ವೇಳೆ ಭೂತಧಾರಿ ಮುಖಕ್ಕೆ ಬಣ್ಣ ಹಚ್ಚುತ್ತಾರೆ ಇದನ್ನು 'ಅರದಲ'ಎನ್ನುವರು. ಪ್ರತಿಯೊಂದು ಭೂತದ ವರ್ಣಿಕೆಯು ಒಂದಕ್ಕೊಂದು ಭಿನ್ನವಾಗಿದೆ. ಭೂತದ ವೇಷ ತೊಟ್ಟು, ಕುಣಿಯುವ ನರ್ತನಕ್ಕೆ 'ಕೋಲ' ಎನ್ನುವರು. ಈ ಉತ್ಸವಕ್ಕಾಗಿಯೇ ವಿಶೇಷ ಚಪ್ಪರ ಕಟ್ಟುತ್ತಾರೆ. ಕೋಲದ ಪೂರ್ವದಲ್ಲಿ ಮಣ್ಣು ಮುಹೂರ್ತ ನಡೆಯುವುದು. ಭೂತಗಳಿಗೆ ಅನುಗುಣವಾಗಿ ಅವುಗಳ ವೇಷಭೂಷಣಗಳಿರುವುದು.

ಹುಲಿಯ ಮುಖವಾಡವಿರುವ 'ಪಿಲಿ ಚಾಮುಂಡಿ', ವರಾಹ ಮುಖವಾಡವಿರುವ 'ಪಂಜುರ್ಲಿ' ಹಾಗೂ ಕೊಂಬು ಉಳ್ಳ ಮೈ ಸಂದಾಯ – ಇವೆಲ್ಲವೂ ಭೂತಗಳೇ ಆಗಿವೆ. ಭೂತಗಳಿಗೂ 'ಎಡೆ' ಇಡುವ ಕ್ರಮವಿದೆ. ಇದನ್ನು 'ಅಗೆಲ್' ಎನ್ನುವರು. ಹಲವು ಭೂತಗಳಿಗೆ ಮಧ್ಯ, ಕಳ್ಳು, ಕೋಳಿ, ಮೀನು, ಮೊಟ್ಟೆ, ಅನ್ನ, ಬಸಳೆ ಸಾರು, ಹೊದ್ದಿಲು, ತೆಂಗಿನಕಾಯಿಯ ತುಂಡುಗಳು, ಬಾಳೆಹಣ್ಣು – ಮುಂತಾದುವುಗಳನ್ನು ಅಗೆಲು, ಬಾರಣೆ ರೂಪದಲ್ಲಿ ನೀಡುತ್ತಾರೆ. ತಮ್ಮ ದನಕರುಗಳು ಕಳೆದುಹೋದಲ್ಲಿ, ವಸ್ತುಗಳು ಕಳುವಾದಲ್ಲಿ, ತಮ್ಮ ಕುಟುಂಬದ ವ್ಯಕ್ತಿಗಳಿಗೆ ವ್ಯಾದಿ ಕಷ್ಟಗಳು ಸಂಭವಿಸಿದಲ್ಲಿ, ಹೊಲದ ಪೈರುಗಳಿಗೆ ತೊಂದರೆಯಾದಲ್ಲಿ ಜನರು ಭೂತಗಳಿಗೆ ಮೊರೆ ಹೋಗುತ್ತಾರೆ.

### ದೈವಗಳಿಗೆ ನೀಡುವ ಸೇವೆಗಳ ವರ್ಗೀಕರಣ:

ದೈವಗಳಿಗೆ ನೀಡುವ ಸೇವೆಗಳನ್ನು ನಾಲ್ಕು ರೀತಿಯಲ್ಲಿ ವರ್ಗೀಕರಿಸಬಹುದು. ಅವುಗಳೆಂದರೆ;

1) ಪಸರ್ನೆ (ಪನಿಯರ–ಪಂಚಕಜ್ಜಾಯ) ಸೇವೆ:– ದೈವಗಳಿಗೆ ನೀಡುವ ಪನಿಯಾರ, ಪಂಚಕಜ್ಜಾಯದ ಸೇವೆಗಳನ್ನು 'ಪಸರ್ನೆ' ಎನ್ನುವರು. ಪನಿಯಾರದಲ್ಲಿ ತುದಿ ಬಾಳೆ ಎಲೆಯ ಮೇಲೆ ಹೊದ್ದಿಲು ಸಿಪ್ಪಿ ಸುಲಿದ ಬಾಳೆಹಣ್ಣುಗಳು, ಸುಲಿದು ಗಡಿಮಾಡಲ್ಪಟ್ಟ ತೆಂಗಿನಕಡಿಗಳು, ಬೆಲ್ಲ (ಕಚ್ಚು ಬೆಲ್ಲ ಅಥವಾ ವಾಲೆ ಬೆಲ್ಲ), 5 ವೀಳ್ಯದೆಲೆ ಅದರ ಮೇಲೊಂದು ಅಡಿಕೆ, ದೀಪ, ಅಗರಬತ್ತಿ ಇತ್ಯಾದಿಗಳನ್ನು ಇಡುತ್ತಾರೆ.
2) ಭೋಗ/ತಂಬಿಲ:– ಕಾಲಾವದಿಗೆ, ವರ್ಷಾವಧಿಗೆ ನೀಡುವ ಪರ್ವ – ಕಾಲಕಾಲಕ್ಕೆ ನೀಡುವ ರಕ್ತ ಸಹಿತ, ರಕ್ತರಹಿತ ಆಹಾರ.
3) ನೇಮೋತ್ಸವ:– ಇದು ನೇಮ ನಿಯಮಬದ್ಧತೆಗೆ ಒಳಪಟ್ಟ ಆಚರಣೆಗಳಾಗಿವೆ. ಅಬ್ಬರದ ಆರ್ಭಟಗಳಿಗಿಲ್ಲಿ ಅವಕಾಶಗಳಿಲ್ಲ.
4) ಕೋಲ:– ದೈವಗಳಿಗೆ ರಕ್ತತರ್ಪಣ ನೀಡುವ ಆಚರಣೆಗಳು.

## ಕೋಲಗಳು ಹುಟ್ಟಿಕೊಳ್ಳಲು ಕಾರಣಗಳು:

ಕೋಲಗಳು ಹುಟ್ಟಿಕೊಳ್ಳಲು ಹಲವಾರು ಕಾರಣಗಳಿವೆ:

ತುಳುನಾಡನ್ನು ಹಲವಾರು ಅರಸು ಮನೆತನಗಳು ಆಳಿದ್ದು, ತುಳುನಾಡು ಅರಸರ ಅಧಿಕಾರದ ವ್ಯಾಪ್ತಿಗೆ ಒಳಪಟ್ಟಿತ್ತು. ವೈರಿಗಳಿಂದ ರಾಜ್ಯವನ್ನು ರಕ್ಷಿಸುವುದಕ್ಕಾಗಿ ಯುದ್ಧಗಳು ನಡೆಯುತ್ತಿದ್ದುವು. ಆ ಸಂದರ್ಭದಲ್ಲಿ ಅನ್ನದ ಋಣಬಾಧೆಯನ್ನು ನಿವಾರಿಸಲು ಮಾಂಡಲೀಕ, ಪಾಳೆಯಗಾರರ ಸೇವಕಪ್ರಜೆಗಳಾದ ಬಿಲ್ಲವ, ಬಂಟ, ಮೊಗವೀರ, ಮ್ಯೊಲಿ, ಮಡಿವಾಳ, ಮುಂಡಾಳ, ಮೂಲ್ಯ, ಕೊರಗ, ಕೈಪುಡ, ಮುಗೇರ, ನಲಿಕೆ, ಪರವ–ಪಂಬದ, ಮೇರ, ಮನ್ಸ, ಬಾಕುಡ ಮೊದಲಾದ ಶೂದ್ರರು ಆಳುವ ರಾಜರ ಹಾಗೂ ರಾಜ್ಯದ ರಕ್ಷಣೆಯ ಭಾರವನ್ನು ಹೊರುತ್ತಿದ್ದರು. ಈ ಪ್ರಾಮಾಣಿಕ, ನಿಷ್ಠಾವಂತ ಜನ ತಮ್ಮ ಜೀವದ ಹಂಗು ತೊರೆದು ಕೆಚ್ಚೆದೆಯಿಂದ ಕಾದಾಡಿ ವೀರಮರಣ ಹೊಂದುತ್ತಿದ್ದರು. ಈ ಅಂಶಗಳು ಭೂತಾರಾಧನೆಯ ಸಂದರ್ಭದಲ್ಲಿ ಸೂಚ್ಯವಾಗಿ ಕಾಣಸಿಗುವುದು. ದೈವಾರಾಧನೆಯಲ್ಲಿ ಬಳಸುವ ಖಡ್ಸಲೆ, ಕತ್ತಿ (ಬಾಳ್), ಬಿಲ್ಲು ಬಾಣ, ಬೆತ್ತ ಜೀವಟಿಗೆ (ದೀವಟಿಗೆ) ವೀರತ್ವದ ಸಂಕೇತವಾಗಿದೆ.

ದೈವಾರಾಧನೆಯ ಸಂದರ್ಭ ದೈವ ಮಾಡುವ ಆರ್ಭಟ, ಬೆಂಕಿಯಾಟ, ಖಡ್ಗದ ಕೈಚಳಕ, ಇವೆಲ್ಲವು ಆಚರಣೆಯ ಸಮಯದಲ್ಲಿ ಹೊರ ನೋಟಕ್ಕೆ ಕಾಣುವ ಮನರಂಜನೆಗಳಾದರೂ, ಒಳನೋಟದಲ್ಲಿ ಇದೆಲ್ಲವು ವೈರಿಗಳನ್ನು ಸದೆ ಬಡಿಯಲು ಅಥವಾ ಅವರಲ್ಲಿ ಜೀವನ್ಮರಣದ ಭಯ ಸೃಷ್ಟಿಸಲು ಇರುವ ವಿವಿಧ ಕಸರತ್ತುಗಳ ಸಂಕೇತಗಳೇ ಆಗಿವೆ.

# ಅಧ್ಯಾಯ 5

## ಭೂತಾರಾಧನೆಯಲ್ಲಿ ವ್ಯಕ್ತಿ ವೈಶಿಷ್ಟ್ಯತೆ ಹಾಗೂ ವಸ್ತು ಪರಿಕಲ್ಪನೆಗಳು

- ಮುಕ್ಕಾಲ್ದಿ
- ಗುರಿಕಾರ
- ದರ್ಶನ / ಮಾನಿಚ್ಚಿ
- ಮಧ್ಯಸ್ಥ
- ಕೋಲದ ಪೂರ್ವ ತಯಾರಿ
- ಬಾಲ್ ಭಂಡಾರ
- ಕೊಡಿಯಡಿ
- ಕೋಳಿ ಅಂಕ
- ಪಾಡ್ದನಗಳು

# ಅಧ್ಯಾಯ 5

# ಭೂತಾರಾಧನೆಯಲ್ಲಿ ವ್ಯಕ್ತಿ ವೈಶಿಷ್ಟ್ಯತೆ ಹಾಗೂ ವಸ್ತುಪರಿಕಲ್ಪನೆಗಳು

## ಮುಕ್ಕಾಲ್ದಿ:

ದೈವಸ್ಥಾನಗಳಲ್ಲಿ ದೈವದ ತನ್ನ ಚಾಕರಿಯನ್ನು ಮಾಡಿಕೊಳ್ಳಲು ಒಬ್ಬ ಅಥವಾ ಇಬ್ಬರು ಮುಕ್ಕಾಲ್ದಿ ವ್ಯಕ್ತಿಗಳನ್ನು ನೇಮಿಸಿರುತ್ತಾರೆ. ದೈವಾರಾಧನೆಯ ಸಂದರ್ಭದಲ್ಲಿ ಮುಕ್ಕಾಲ್ದಿಯ ಪ್ರಸ್ತುತಿ ಬಹಳ ಪ್ರಮುಖವಾದುದು. ಬಬ್ಬುಸ್ವಾಮಿಯ ದೈವಸ್ಥಾನದಲ್ಲೂ ಇದು ಚಾಲ್ತಿಯಲ್ಲಿದೆ. ಗ್ರಾಮದ ವ್ಯಕ್ತಿಗಳಲ್ಲಿ ಒಬ್ಬರನ್ನು ಅಥವಾ ಇಬ್ಬರನ್ನು ಈ ಕಾರ್ಯಕ್ಕಾಗಿ ಆಯ್ಕೆ ಮಾಡಲಾಗುವುದು. ಮುಂಡಾಳ ಜನಾಂಗದಲ್ಲಿ ಅಳಿಯಕಟ್ಟು ಚಾಲ್ತಿಯಲ್ಲಿಯಲ್ಲಿರುವ ಕಾರಣ, ಮಾವನ ಬಳಿಕ ಈ ಸೇವೆಯ ಕಾರ್ಯಕ್ಕೆ ಅಳಿಯ ಹಕ್ಕುದಾರನಾಗುತ್ತಾನೆ. ಒಂದು ವೇಳೆ ಅಳಿಯ ಇಲ್ಲದಿದ್ದರೆ ಮಗ ಅದರ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಬಹುದು. ಬಬ್ಬುಸ್ವಾಮಿ ದೈವಸ್ಥಾನದ ಗ್ರಾಮಸ್ಥರಲ್ಲಿ ಗ್ರಾಮದ ಹಿರಿಯರು ಸೇರಿ ಮುಕ್ಕಾಲ್ದಿ ಕಾರ್ಯಕ್ಕೆ ಇಬ್ಬರನ್ನು ಆಯ್ಕೆ ಮಾಡುತ್ತಾರೆ. ಆಯ್ಕೆ ಮಾಡಿದ ಈ ವ್ಯಕ್ತಿಗಳು ಅವರ ಕುಟುಂಬದ ದೈವವಾದ ಪಂಜುರ್ಲಿಯನ್ನು ದರ್ಶನದಲ್ಲಿ ಕರೆಸಿ, ಅಪ್ಪಣೆ ಕೇಳಬೇಕು. ಮನೆ ಮಂದಿ, ಪಂಜುರ್ಲಿಯ ಅನುಗ್ರಹದ ಮೇರೆಗೆ ಇವರು ದೈವದ ಚಾಕರಿಗೆ ಅರ್ಹರಾಗುತ್ತಾರೆ. ಇದನ್ನು ಗ್ರಾಮಸ್ಥರ ಸಮ್ಮುಖದಲ್ಲಿ ಅರುಹಿ, ಗ್ರಾಮದ ಹಿರಿಯರ ಅಪ್ಪಣೆ ಮೇರೆಗೆ ದೈವಕ್ಕೆ ಹೂ–ನೀರ್ ಇಡುವ ದೈವದ ಚಾಕರಿಗೆ ಮುಕ್ಕಾಲ್ದಿಯನ್ನು ನೇಮಿಸಲಾಗುವುದು. ಈ ನೇಮಕ ಸುಮ್ಮನೆ ಹೆಸರಿಗಷ್ಟೇ ಆಗಿರುವುದಿಲ್ಲ. ನೇಮಕಗೊಂಡ ಈ ವ್ಯಕ್ತಿಗಳು ಜೀವಂತವಿರುವವರೆಗೆ ಈ ಕಾರ್ಯವನ್ನು ನಿಭಾಯಿಸಬೇಕಾಗುತ್ತದೆ. ಕುಟುಂಬದ ಸದಸ್ಯರ, ಕುಟುಂಬದ ದೈವ ಪಂಜುರ್ಲಿಯ ಅಪ್ಪಣೆ ಪಡೆದು, ಗ್ರಾಮಸ್ಥರು ಗೊತ್ತುಪಡಿಸಿದ ಬಬ್ಬುಸ್ವಾಮಿ ದರ್ಶನದಲ್ಲಿ ಒಬ್ಬುವಿನ ಅಪ್ಪಣೆ ಪಡೆದ ಬಳಿಕವಷ್ಟೇ ಈ ವ್ಯಕ್ತಿಗಳು ಮುಕ್ಕಾಲ್ದಿ ಕಾರ್ಯಕ್ಕೆ ನೇಮಕರಾಗುತ್ತಾರೆ. ಒಂದು ಶುಭ ಮುಹೂರ್ತದಲ್ಲಿ ಬಬ್ಬುಸ್ವಾಮಿಯನ್ನು ಮಾನಿಚ್ಚಿಯಲ್ಲಿ ಕರೆಸಿ, ದರ್ಶನ ಪಾತ್ರಿಯ ಕೈಯಿಂದ ವೀಳ್ಯದೆಲೆಯಲ್ಲಿ ಎಣ್ಣೆಯನ್ನು ಹಣೆ, ತಲೆಗೆ ಸವರಿಕೊಳ್ಳುವ ಮೂಲಕ ಈ ವ್ಯಕ್ತಿಗಳು 'ಮುಕ್ಕಾಲ್ದಿತನ'ವನ್ನು ಪಡೆದುಕೊಳ್ಳುತ್ತಾರೆ. ಈ ವ್ಯಕ್ತಿಗಳು ಒಂದೇ ಕುಟುಂಬದವರಾಗಿರಬಾರದು. ಏಕೆಂದರೆ ಒಬ್ಬ ವ್ಯಕ್ತಿಯ ಕುಟುಂಬದಲ್ಲಿ ಸೂತಕಗಳು ಸಂಭವಿಸಿದರೆ ಇನ್ನೊಬ್ಬ ವ್ಯಕ್ತಿ ಆತನ ಸೂತಕ (ಅಮೆ) ಮುಗಿಯುವವರೆಗಿನ ಬಬ್ಬುವಿನ ಚಾಕರಿ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಈ ಒಂದು ಕಾರಣಕ್ಕಾಗಿ ಮುಕ್ಕಾಲ್ದಿ ಕಾರ್ಯಕ್ಕೆ ಭಿನ್ನ ಕುಟುಂಬದ ವ್ಯಕ್ತಿಗಳನ್ನು ಆಯ್ಕೆ ಮಾಡುತ್ತಾರೆ. ಮುಕ್ಕಾಲ್ದಿ ಕಾರ್ಯಕ್ಕೆ ನೇಮಿಸಿದ ವ್ಯಕ್ತಿಗಳ ಜವಾಬ್ದಾರಿ ಕೇವಲ ಹೂ–ನೀರಿಟ್ಟು ದೈವದ ಚಾಕರಿಯನ್ನು ಮಾಡುವುದಾಗಿದೆ. ಇವರು ದೈವಸ್ಥಾನದ ಇತರ ಕಾರ್ಯ ಕಲಾಪಗಳ ಜವಾಬ್ದಾರಿಯನ್ನು ವಹಿಸುವುದಿಲ್ಲ.

## ಗುರಿಕಾರ:

ಇಡೀ ದೈವಸ್ಥಾನದ ಉಸ್ತುವಾರಿಕೆಯ ಹೊಣೆಯನ್ನು ಹೊರುವ ವ್ಯಕ್ತಿಯೇ ಗುರಿಕಾರ. ಗುರಿಕಾರರ ಸ್ಥಾನಕ್ಕೂ ಕೂಡಾ ಇಬ್ಬರು ವ್ಯಕ್ತಿಗಳನ್ನು ನೇಮಕ ಮಾಡುತ್ತಾರೆ. ಇವರು ಒಂದೇ ಕುಟುಂಬದವರಾಗಬಹುದು. ಗುರಿಕಾರರನ್ನು ಕೂಡಾ ಬಬ್ಬುಸ್ವಾಮಿಯನ್ನು ಮಾನಿಚ್ಚಿಯಲ್ಲಿ (ಆವೇಶ / ದರ್ಶನದಲ್ಲಿ) ಬರಮಾಡಿಕೊಂಡು ವೀಳ್ಯದೆಲೆಯಲ್ಲಿ ತಲೆಗೆ/ಹಣೆಗೆ ಎಣ್ಣೆಯನ್ನು ಸವರುವ ಮೂಲಕ ಆಯ್ಕೆ ಮಾಡುತ್ತಾರೆ. ಗುರಿಕಾರ ಸ್ಥಾನಕ್ಕೆ ಆಯ್ಕೆಯಾಗುವ ವ್ಯಕ್ತಿಗೆ ಕೆಲವೊಂದು ಅರ್ಹತೆಗಳಿರಬೇಕು. ಪ್ರಾಚೀನ (ಹಿಂದಿನ) ಕಾಲದಲ್ಲಿ ಅಕ್ಷರಸ್ಥರು ಬಹಳ ಹೇರಳವಿದ್ದ ಕಾರಣ ಗುರಿಕಾರನಾಗಲು, ಸ್ವಲ್ಪ ಮಟ್ಟಿಗೆ ಅನುಭವವುಳ್ಳ ಅಂದರೆ ಆಸ್ತಿಕರಾಗಿದ್ದು, ದೈವದ ಸೇವೆಯಲ್ಲಿ ಪಾಲ್ಗೊಳ್ಳಲು ಸ್ವತ: ಅಭಿರುಚಿವುಳ್ಳ ವ್ಯಕ್ತಿಗಳು ಹಾಗೂ ವ್ಯವಹಾರ ಜ್ಞಾನವುಳ್ಳವರು ಈ ಹುದ್ದೆಗೆ ಅರ್ಹರಾಗಿರುತ್ತಾರೆ. ಇತ್ತೀಚಿಗಿನ ಕಾಲಘಟ್ಟದಲ್ಲಿ ದೈವಸ್ಥಾನದ ಖರ್ಚುವೆಚ್ಚಗಳು ಜಾಸ್ತಿ ಇದ್ದ ಕಾರಣ, ಅದರ ವ್ಯವಹಾರ ಜ್ಞಾನವುಳ್ಳವರು, ವಿದ್ಯಾವಂತರು ಹಾಗೂ ದೈವಾರಾಧನೆಯಲ್ಲಿ ಶ್ರದ್ಧೆವುಳ್ಳವರು ಅಗತ್ಯ. ಹಾಗಾಗಿ ಇಂತಹವರು ಈ ಗುರಿಕಾರ ಸ್ಥಾನಕ್ಕೆ ಅರ್ಹರಾಗಿರುತ್ತಾರೆ, ಆದರೆ ಇದು ಖಡ್ಡಾಯವಲ್ಲ.

ಮುಕ್ಕಾಲ್ದಿಯ ಅನುಪಸ್ಥಿತಿಯಲ್ಲಿ ಗುರಿಕಾರ ಆ ಕಾರ್ಯವನ್ನು ಮಾಡಬಹುದು. ಗುರಿಕಾರನ ಅನುಪಸ್ಥಿತಿಯಲ್ಲಿ ಮುಕ್ಕಾಲ್ದಿ ಅವರ ಕಾರ್ಯಕಲಾಪಗಳನ್ನು ಮಾಡುವ ಹಾಗಿಲ್ಲ. ದೈವಸ್ಥಾನದ ಯಾವ ಸ್ಥಾನವನ್ನೂ ಗುರಿಕಾರ ತುಂಬಿಸಬಹುದು. ಆದರೆ ಬೇರೆ ಯಾರೂ, ಗುರಿಕಾರನ ಸ್ಥಾನವನ್ನು ನಿಭಾಯಿಸುವ ಹಾಗಿಲ್ಲ.

## ದರ್ಶನ/ಮಾನಿಚ್ಚಿ:

ಪ್ರತಿಯೊಂದು ದೈವಕ್ಕೂ ದರ್ಶನದ ಮೂಲಕ ಬರಮಾಡಿಕೊಳ್ಳುವ ಒಬ್ಬ ವ್ಯಕ್ತಿ ಇರುತ್ತಾನೆ. ಇವನೇ ದೈವದ ಪಾತ್ರಿ. ಕೆಲವೊಂದು ದೈವಸ್ಥಾನಗಳಲ್ಲಿ ಅದರದೇ ಆದ ಪಾತ್ರಿಗಳಿರುತ್ತಾರೆ. ಇದೀಗ ಎಲ್ಲವೂ ದುಬಾರಿಯಾಗಿರುವುದರಿಂದ ಪಾತ್ರಿಗಳ ವೆಚ್ಚವೂ ಏರಿದೆ. ಹಾಗಾಗಿ ಈಗ ಹೆಚ್ಚಿನ ಬಬ್ಬುಸ್ವಾಮಿ ದೈವಸ್ಥಾನಗಳಲ್ಲಿ ದೈವಸ್ಥಾನದಿಂದಲೇ ನೇಮಕವಾದ ಪಾತ್ರಿಗಳಿಲ್ಲ. ದೈವವನ್ನು ಮಾನಿಚ್ಚಿಯಲ್ಲಿ (ಬರಿಸಿ) ಆಹ್ವಾನ ಮಾಡಿಕೊಳ್ಳುವ ಸಂದರ್ಭಗಳು ಬಂದಾಗ, ಬೇರೆ ಕಡೆಯಿಂದ ತಾಂಬೂಲ ನೀಡಿ ಪಾತ್ರಿಗಳನ್ನು ಕರೆಸಿಕೊಳ್ಳುತ್ತಾರೆ. ದರ್ಶನದಲ್ಲಿ ದೈವವನ್ನು ಆಹ್ವಾನ ಮಾಡಿಕೊಳ್ಳಲು ಒಂದು ದಿನವನ್ನು ನಿಗಧಿಗೊಳಿಸಿ, ಇದರ ಸಂಕೇತವಾಗಿರುವ ಅವುಗಳ ಪರಾಕ್ರಮಗಳನ್ನು ಪ್ರತಿನಿಧಿಸುವ ಆಯುಧಗಳನ್ನು ಮಂಚದ ಮೇಲಿಟ್ಟು ಪೂಜಿಸುತ್ತಾರೆ. ಈ ಕಾರ್ಯವನ್ನು ಬಬ್ಬುವಿನ ಚಾಕರಿಗೆ ನೇಮಿಸಲ್ಪಟ್ಟ ಮುಕ್ಕಾಲ್ದಿ ಮಾಡುತ್ತಾನೆ. ದೈವದ ಪಾತ್ರಿ ಸ್ವಚ್ಛಗೊಳಿಸಿದ ವಿಶಿಷ್ಟ ವಸ್ತ್ರವನ್ನು ಧರಿಸುತ್ತಾನೆ. ಸೇರಿದ ಜನಸ್ತೋಮದ ದರ್ಶನ ಪಾತ್ರಿಯನ್ನು ಭಕ್ತಿ ಭಾವಗಳಿಂದ ಜನ ಪ್ರಾರ್ಥಿಸುತ್ತಾರೆ. ಆಗ ಅಗೋಚರ / ಅಲೌಕಿಕ ಜಗತ್ತಿಗೆ ದೈವ/ಭೂತದ ಅವತರಣಿಕೆಯಾಗುತ್ತದೆ. ಇದನ್ನೇ 'ದರ್ಶನ' ಎನ್ನುವರು. ಅಲೌಕಿಕ ಜಗತ್ತಿನಿಂದ ಲೌಕಿಕ ಜಗತ್ತಿಗೆ ಪಾದಾರ್ಪಣೆ ಮಾಡಿದ

ವ್ಯಕ್ತಿ ಜನರ ಮತ್ತು ದೈವ ಮಧ್ಯವರ್ತಿಯಾಗಿ ವ್ಯವಹರಿಸುತ್ತಾನೆ. ಈ ದರ್ಶನ ಪಾತ್ರಿಗಳಾಗಲು ಎಲ್ಲರೂ ಅರ್ಹರಲ್ಲ. ಕೇವಲ ಮುಂಡಾಳ, ಪರವ, ಪಂಬದ, ನಲಿಕೆ ಜನಾಂಗದವರು ಮಾತ್ರ ದೈವದ ಪಾತ್ರಿಗಳಾಗುತ್ತಾರೆ. ಇವರ ಮೇಲೆ ದರ್ಶನದ ವೇಳೆಯಲ್ಲಿ ಭೂತವು ಕಾಣಿಸಿಕೊಳ್ಳುತ್ತದೆ. ಈ ಸಂದರ್ಭದಲ್ಲಿ ಸಂಕಷ್ಟಕೊಳಪಟ್ಟು ಅನೇಕ ಮಂದಿ ತಮ್ಮ ಸಮಸ್ಯೆಗೆ ಪರಿಹಾರವನ್ನು ಕೇಳುತ್ತಾರೆ. ನಂತರ ದೈವರಾಜ ಶ್ರೀ ಬಬ್ಬುವಿನಿಂದ ಅಥವಾ ಇತರ ದೈವಗಳಿಂದ ತಮ್ಮ ಸಮಸ್ಯೆಗೆ ಪರಿಹಾರ ಲಭಿಸಿದಕ್ಕಾಗಿ ಪೂರಕವಾಗಿ ದೈವಕ್ಕೆ ಕಾಣಿಕೆ ನೀಡುತ್ತಾರೆ. ಈ ಕಾಣಿಕೆಗಳು ಹಣದ ರೂಪದಲ್ಲೇ ಇರಬೇಕೆಂಬ ನಿಯಮಗಳಿಲ್ಲ. ಸೇವೆಗಳ ರೂಪದಲ್ಲಿ ಎಣ್ಣೆ, ಹಣ್ಣು-ಹಂಪಲುಗಳು, ನಗ-ನಾಣ್ಯಗಳು, ಆಹಾರ ರೂಪದಲ್ಲಿರುವ ವಸ್ತುಗಳು, ದಾನ (ಅನ್ನದಾನ)ದ ರೂಪದ ವಸ್ತುಗಳು, ಕುರಿ, ಕೋಳಿ ಮೊದಲಾದ ಪ್ರಾಣಿ-ಪಕ್ಷಿಗಳ ರೂಪದಲ್ಲೂ ಸ್ವೀಕೃತವಾಗಿರುತ್ತದೆ.

ಇಲ್ಲಿ ಭೂತ ಮೈಮೇಲೆ ಆಹ್ವಾನಗೊಂಡ ವ್ಯಕ್ತಿಯ ನುಡಿಗಳನ್ನು ದೈವದ ನುಡಿಗಳೆಂಬಂತೆಯೇ ಸ್ವೀಕರಿಸಿ, ಅದರ ನುಡಿಯ ಆದೇಶದಂತೆ ಜನರು ನಡೆಯುತ್ತಾರೆ. ದೈವ ನೇಮೋತ್ಸವ ಸಮಯಗಳು ಜನಪದರಿಗೆ ಪ್ರಸಕ್ತವಾದ ಕಾಲವಾಗಿದೆ. ಮೈಮೇಲೆ ಭೂತಾವೇಶ ಬಂದು ನಲಿಯುವ, ನುಡಿಕೊಡುವ, ಆಹಾರ (ಅಗೆಲು) ಸ್ವೀಕರಿಸುವ ವ್ಯಕ್ತಿಯು ಆ ಸಂದರ್ಭದಲ್ಲಿ ದೈವವನ್ನೇ ಪ್ರತಿನಿಧಿಸುತ್ತಾನೆ, 'ದೈವಾವೇಶ' ಮತ್ತು 'ಕಾಯ ಬಿಟ್ಟು ಮಾಯಕ್ಕೆ' ಸೇರುವ ಒಳಗಿನ ಸಮಯ ಮಾತ್ರ ದೈವಾರಾಧಕರಿಗೆ (ಜನರಿಗೆ) ಮಹತ್ವದ್ದಾಗಿರುತ್ತದೆ. ಉಳಿದಂತೆ ಈ ವ್ಯಕ್ತಿಯು (ನಲಿಕೆ, ಪರವ, ಪಂಬದ) ಕೇವಲ ನಮ್ಮ ನಿಮ್ಮಂತೆ ಸಾಮಾನ್ಯ ವ್ಯಕ್ತಿಯಾಗಿರುತ್ತಾನೆ, ಮೇಲ್ವರ್ಗದ ದಬ್ಬಾಳಿಕೆಗೆ ಒಳಗಾದ ವ್ಯಕ್ತಿಯಾಗಿರುತ್ತಾನೆ. ದೈವರಾಧನೆಯ ಸಂದರ್ಭದಲ್ಲಿ ತನ್ನೊಂದು ನುಡಿಯಿಂದ ಸರ್ವ ಜನಾಂಗವನ್ನು ತನ್ನ ಹತೋಟಿಯಲ್ಲಿಡುವ ಮಾಯಕಾರನಾಗುತ್ತಾನೆ. ಆಗ ಸರ್ವರೂ ಆ ಮಾಯಕಾರನ ನುಡಿಗೆ ತಲೆಬಾಗುತ್ತಾರೆ. ವಾಸ್ತವದಲ್ಲಿ ತಾನು ತಲೆ ತಗ್ಗಿಸುತ್ತಾ, ದೈವಾರಾಧನೆಯಲ್ಲಿ ಎಲ್ಲರನ್ನು ಭಕ್ತಿಭಾವಕ್ಕೆ ತಲೆದೂಗುವಂತೆ ಮಾಡುವ ಶಕ್ತಿ ಮಾಯಕಾರನಿಗಿರುತ್ತದೆ. ಎಲ್ಲರಿಂದ ಶೋಷಣೆಗೆ ಒಳಪಟ್ಟ ಈ ನಲಿಕೆಯವ ದೈವವನ್ನು ಆವೇಶ ಭರಿಸಿಕೊಂಡಾಗ ತನಗೆ ಶೋಷಣೆ ನೀಡಿದ ವ್ಯಕ್ತಿಯನ್ನು ತನ್ನೆದುರಿಗೆ ಕೈ ಜೋಡಿಸಿ ತಲೆತಗ್ಗಿಸಿ ನಿಲ್ಲಿಸುತ್ತಾನೆ. ಇದುವೇ ದೈವಾರಾಧನೆ / ಭೂತಾರಾಧನೆಯ ವಿಶೇಷತೆ.

ದರ್ಶನಕ್ಕೆ ಗ್ರಾಮದ ಜನರು ನಿಶ್ಚೈಸಿದ ದಿನದಂದು ಪಾತ್ರಿ ತಯಾರಾಗಿ ದರ್ಶನ ಮೂಲಕ ನೃತ್ಯ ಮಾಡುತ್ತಾನೆ. ಒಂದು ಕೈಯಲ್ಲಿ ದೈವ ಉಪಯೋಗಿಸುವ ಖಡ್ಗ, ಇನ್ನೊಂದು ಕೈಯಲ್ಲಿ ಹಿಂಗಾರ ಹೂ ಹಿಡಿದು ನರ್ತಿಸುತ್ತಾರೆ. ಕೆಲವು ಕಡೆ ದೀಪ ಹಿಡಿದು ನರ್ತಿಸುತ್ತಾರೆ. ಇದನ್ನು 'ದೀಪ ನೃತ್ಯ' ಎನ್ನುವರು. ಕಾಲಿನ ಹೆಜ್ಜೆಯನ್ನು ವಾದ್ಯದ ತಾಳಕ್ಕೆ ಹೊಂದಿಸಿ ಹಿಂದೆ ಮುಂದೆ ಹೆಜ್ಜೆ ಇಡುತ್ತಾ ಕುಣಿಯುವ ಈ ಶೈಲಿಗೆ 'ಕಾಲಾಟ' ಎಂಬ ಹೆಸರಿದೆ. ಕೆಲವೆಡೆ ಒಂದು ಕೈಯಲ್ಲಿ ಖಡ್ಗ ಇನ್ನೊಂದು ಕೈಯಲ್ಲಿ ಅಡ್ಡಕೊಲು ಹಿಡಿದು ಆವೇಶಭರಿತ ನರ್ತನ ಮಾಡುತ್ತಾರೆ. ಈ ನರ್ತನಕ್ಕೆ 'ಯೋಧ ಕುಣಿತ' ಎನ್ನುವರು ತುಳುನಾಡಿನಲ್ಲಿ ಇದನ್ನು "ಪಯ್ಯೊಲಿ" ಎನ್ನುತ್ತಾರೆ.

## ಮಧ್ಯಸ್ಥ:

ದೈವ ಹಾಗೂ ಭಕ್ತರ ಮಧ್ಯೆ ಇದ್ದು, ದೈವದ ನುಡಿಗಳನ್ನು ಜನರಿಗೆ ಹಾಗೂ ಜನರ ಸಮಸ್ಯೆಗಳನ್ನು ದೈವಕ್ಕೆ ನಿವೇದಿಸುವ ವ್ಯಕ್ತಿಯೇ ಮಧ್ಯಸ್ಥ. ಹಿಂದೆ ಹಿರಿಯರು ಈ ಕಾರ್ಯವನ್ನು ಮಾಡುತ್ತಿದ್ದರು. ಮದು, ಮದಿಪು, ನುಡಿ ಇವುಗಳನ್ನು ಹಿರಿಯರೇ ನೆರವೇರಿಸುತ್ತಿದ್ದರು. ಇದೀಗ ಹಿರಿಯರ ಸಂಖ್ಯೆ ನಶಿಸಿದೆ. ಕಿರಿಯರಿಗೆ ದೈವಾರಾಧನೆಯ ವಿಧಿವಿಧಾನಗಳಾಗಲೀ, ಮಧು, ಮದಿಪು, ನುಡಿ ಇವುಗಳ ಬಗೆಗಿರುವ ವಿಚಾರಗಳಾಗಲೀ ತಿಳಿದಿಲ್ಲ. ಆದ ಕಾರಣ ಈ ಬಗ್ಗೆ ಸರ್ವ ರೀತಿಯಲ್ಲೂ ತಿಳುವಳಿಕೆ ಇರುವ ಒಬ್ಬ ವ್ಯಕ್ತಿಯನ್ನು ನೇಮಿಸುತ್ತಾರೆ. ಅವನೇ ಮಧ್ಯಸ್ಥ. ಮಧ್ಯಸ್ಥ ಆಯಾ ಗ್ರಾಮದಲ್ಲಿ ಇರುವುದಿಲ್ಲ ಆತನನ್ನು ಬೇರೆ ಕಡೆಯಿಂದ ತರಿಸಿಕೊಳ್ಳಬೇಕಾಗುತ್ತದೆ. ವರ್ಷಾವಧಿ ನೇಮೋತ್ಸವದ ಸಂದರ್ಭದಲ್ಲಿ ಮಧ್ಯಸ್ಥನನ್ನು ನೇಮಿಸಿ ಅಷ್ಟು ದಿನದ ಪಗಾರವನ್ನು ಆತನಿಗೆ ನೀಡಬೇಕಾಗುತ್ತದೆ.

## ಕೋಲದ ಪೂರ್ವ ತಯಾರಿ:

ಕೋಲ/ನೇಮೋತ್ಸವ ನಡೆಯುವ ಮೊದಲು ಊರ ಹಿರಿಯರು, ಜಾತಿ ಗುರಿಕಾರರು, ದೈವದ ಸೇವೆಯ ಸರ್ವ ಸದಸ್ಯರುಗಳು ದೈವಸ್ಥಾನದಲ್ಲಿ ನೆಲೆ ಸೇರಿ ಕೋಲ/ನೇಮಗಳಿಗೆ ದಿನ ಗೊತ್ತುಪಡಿಸುವರು. ದಿನ ನಿಗದಿಯಾದ ದಿನದಿಂದ ಕೋಲ/ನೇಮೋತ್ಸವ ಮುಕ್ತಾಯದವರೆಗೆ ಇವರೆಲ್ಲರೂ ಮತ್ತು ಸಂಬಂಧಪಟ್ಟ ಜಾತಿ ಜನರು, ಜಾತ್ಯೇತರರು ನೇಮಕ್ಕೆ ಸಂಬಂಧಿಸಿದ ನಿಯಮ–ನಿಷ್ಠೆಗಳನ್ನು ಅನಿವಾರ್ಯವಾಗಿ ಪಾಲಿಸಲು ಸಿದ್ಧರಾಗಿರುತ್ತಾರೆ. ಗ್ರಾಮ ದೈವದ ಕೋಲ/ನೇಮೋತ್ಸವಗಳು ನಿಶ್ಚಿತಗೊಂಡ ತರುವಾಯ ಆ ಊರಿನ ಜನ, ಜಾತಿಜನ, ಸುತ್ತಲ ಜನ, ತಮ್ಮ ಮನೆದೈವವನ್ನು ದರ್ಶನ ಬರಿಸುವ, ರಕ್ತ ತರ್ಪಣೆನೀಡುವ, ಕುರಿ ಕೋಳಿ ಬಲಿ, ಭೋಗ ತಂಬಿಲ, ಗೊಂದೋಲು ಮೊದಲಾದುವುಗಳನ್ನು ನಡೆಸಬಾರದು, ನಡೆಸುವಂತಿಲ್ಲ.

## ಬಾಲ್ ಭಂಡಾರ:

ನೂತನ ಶಿಲಾನ್ಯಾಸ ಹೊಂದಿ ಪ್ರತಿಷ್ಠಾಪನೆಗೊಂಡ ದೈವಸ್ಥಾನಗಳಲ್ಲಿ ದೈವದ ಬಾಲ್–ಭಂಡಾರ ಇರಲೂಬಹುದು, ಇರದಿರಲೂಬಹುದು. ಕೆಲವೊಮ್ಮೆ ಕೇವಲ ದೈವದ ಮುಖ, ಖಡ್ಗಲೆ ಮಾತ್ರವಿರುತ್ತದೆ. ಇಂತಹ ಸಂದರ್ಭದಲ್ಲಿ ಆ ಪರಿಸರದ ಪಕ್ಕದ ದೈವಸ್ಥಾನದಿಂದ ಬಾಲ್–ಭಂಡಾರವನ್ನು ಎರವಲು ಪಡೆಯುತ್ತಾರೆ. ಇದಕ್ಕೂ ಕೆಲವು ವಿಧಿವಿಧಾನಗಳಿವೆ. ನೇಮೋತ್ಸವದ ಹಿಂದಿನ ಸಂಜೆ ಮೆರವಣಿಗೆಯಲ್ಲಿ ದೈವದ ಭಂಡಾರವನ್ನು ತರುತ್ತಾರೆ. ಹೆಂಗಳೆಯರು ಸೀರೆಯುಟ್ಟು ಕಲಶ ಹಿಡಿದು ಮುಂದಿನ ಸಾಲಲ್ಲಿ ಇರುತ್ತಾರೆ. ಊರ ಜನರೆಲ್ಲಾ ಅವರ ಹಿಂದೆ ನಡೆದು ಬರುತ್ತಾರೆ. ಇವರ ಹಿಂದೆ ಬೇರೆ ಆ



ದೈವಸ್ಥಾನದಿಂದ ಶುದ್ಧಿಗೊಳಿಸಿರುವ ದೈವದ ಬಾಲ್-ಭಂಡಾರವಿರುವುದು. ಇದನ್ನು ಪಲ್ಲಕ್ಕಿ ಸಮೇತ ತೆರವಾದ ವಾಹನದಲ್ಲಿ ಮೆರವಣಿಗೆ ತರುತ್ತಾರೆ. ಮೆರವಣಿಗೆಯಲ್ಲಿ ಸಾವಿರಾರು ಸುಡುಮದ್ದುಗಳನ್ನು ಸಿಡಿಸುತ್ತ, ವಿಜ್ರಂಭಣೆಯಿಂದ ದೈವದ ಆಯುಧಗಳನ್ನು ಭಂಡಾರದ ಮನೆಯಿಂದ ಹೊರಟು ನೇಮೋತ್ಸವ ನಡೆಯುವಲ್ಲಿಗೆ ತರುತ್ತಾರೆ.

ಒಂದು ವೇಳೆ ದೈವದ ಆಯುಧಗಳು ಆ ದೈವಸ್ಥಾನಗಳಲ್ಲಿ ಇದ್ದರೆ, ಅದನ್ನು ನೇಮೋತ್ಸವದ ಹಿಂದಿನ ಸಾಯಂಕಾಲ ಹೋಮದ ಮೂಲಕ ಶುದ್ಧೀಗೊಳಿಸಿ ಪೂಜೆಗಿಡುತ್ತಾರೆ. ಮುಕ್ಕಾಲ್ದಿ ಈ ಶುದ್ಧಿಗೊಳಿಸುವ ಕಾರ್ಯವನ್ನು ನೆರವೇರಿಸುತ್ತಾನೆ. ಉಳಿದ ಸದಸ್ಯರು ನೇಮೋತ್ಸವದ ಇತರ ಕಾರ್ಯಗಳಲ್ಲಿ ತೊಡಗುತ್ತಾರೆ. ಹೀಗೆ ಊರಿನ ಸರ್ವರ ಸಹಕಾರದಿಂದ ನೇಮೋತ್ಸವವು ಸಾಂಗವಾಗಿ ನೆರವೇರುತ್ತದೆ.

**ಕೊಡಿಯಡಿ:**



ತುಳುನಾಡಿನ ಭೂತಾರಾಧನೆಯ ಸಂದರ್ಭದಲ್ಲಿರುವ ಒಂದು ವಿಶಿಷ್ಟ ಆಚರಣೆ ಇದಾಗಿದೆ. **'ಕೊಡಿ'** ಎಂಬ ಪದಕ್ಕೆ ಹಲವಾರು ಅರ್ಥಗಳಿವೆ. ಮೂಲತ: ದೈವಾರಾಧನೆ, ಮದುವೆ ಸಮಾರಂಭಗಳಲ್ಲಿ ಸಮಾರಂಭದ ಮೊದಲ ದಿನದ ಸಂಧ್ಯಾಕಾಲದಲ್ಲಿ ಚಪ್ಪರಕ್ಕೆ ನಿಯಮಾನುಸಾರವಾಗಿ ಕಟ್ಟುವ ರಚನೆಗೆ **'ಕೊಡಿ'** ಎನ್ನುವರು. ಧಾರ್ಮಿಕವಾಗಿ ಈ ಆಚರಣೆ ತುಳುನಾಡಿನಲ್ಲಿ ಕಾಣಸಿಗುವುದು ದೈವಸ್ಥಾನ, ದೇವಸ್ಥಾನಗಳ ಉತ್ಸವದ ಸಂದರ್ಭಗಳಲ್ಲಿ ಮಾತ್ರ. ಪಾರಂಪರಿಕ ಆಚರಣೆಗಳ ಸಂದರ್ಭದಲ್ಲಿ ಹಲವು ಪಂಗಡಗಳಲ್ಲಿ ಮದುವೆ ಗೊತ್ತಾದ ಬಳಿಕದಿಂದ ಮದುವೆ ನಡೆಯುವ ದಿನದವರೆಗೆ ಸೂತಕಗಳು ಆಗದಂತೆ ಅಥವಾ ಆದರೂ ಮದುವೆಗೆ ವಿಘ್ನ ಬಾರದಂತೆ 'ನಾಂದಿ' ಮಾಡುವ ಕ್ರಮವಿದೆ. ಅಂತೆಯೇ ದೈವದ / ದೇವರ ಉತ್ಸವಕ್ಕೆ ಮೊದಲು **'ಕೊಡಿ'** ಏರುವುದು ವಾಡಿಕೆ. ಇದರ ಉದ್ದೇಶ 'ರಕ್ಷಣೆ ನೀಡುವುದಾಗಿದೆ'. **'ಕೊಡಿ'** ಏರಿದ

ಗಳಿಗೆಯಿಂದ ಕೊಡಿ ಜಾರುವ (ಇಳಿಸುವ) ತನಕ ಸಂಬಂಧಪಟ್ಟ ಪರಿಸರಕ್ಕೆ, ಅಲ್ಲಿಯ ಭಕ್ತ ಬಾಂಧವರಿಗೆ ಧಾರ್ಮಿಕ ನಿಟ್ಟಿನಲ್ಲಿ ದೈವ ರಕ್ಷಣೆ ಒದಗಿಸುತ್ತದೆ ಎಂಬುದು ದೈವ ಭಕ್ತರ ನಂಬಿಕೆಯಾಗಿದೆ. 'ಕೊಡಿ' ಏರಿದ ಬಳಿಕ ಆ ಪರಿಸರದಲ್ಲಿ ವಾಸಿಸುವ ಭಕ್ತರು ದೇಶವಿದೇಶಗಳಿಗೆ ಪ್ರಯಾಣ ಬೆಳೆಸುವುದು ನಿಷಿದ್ಧ ಎಂಬ ನಂಬಿಕೆಯೂ ಇದೆ. ಅನಿವಾರ್ಯವಾಗಿ ಹೋಗಲೇಬೇಕಾದ ಸಂದರ್ಭ ಪ್ರಾಪ್ತವಾದಲ್ಲಿ ತಪ್ಪು ಕಾಣಿಕೆ ಸಲ್ಲಿಸಿ ಹೋಗಬಹುದು. 'ಕೊಡಿ' ಆಚರಣೆ ವಿಭಿನ್ನ ರೀತಿಯಲ್ಲಿದೆ. ದೇವಸ್ಥಾನಗಳಲ್ಲಿ ಗರ್ಭ ಗುಡಿಯ ಮುಂಭಾಗದಲ್ಲಿ ಧ್ವಜ ಸ್ತಂಭವಿರುವುದು, ಇದೇ 'ಕೊಡಿಮರ'. ದೈವಸ್ಥಾನಗಳಲ್ಲಿ ಗರ್ಭಗುಡಿಯ ಮುಂದೆ ಕೊಡಿಮರವನ್ನು ನೆಡುತ್ತಾರೆ. ಉತ್ಸವಗಳ ಸಂದರ್ಭಗಳಲ್ಲಿ ಧ್ವಜವನ್ನು ಅಥವಾ ದೈವದ ಪುತ್ತಳಿಯ ಬಟ್ಟೆಯ ಚಿತ್ರ ಏರಿಸುವ ವಾಡಿಕೆಯೂ ಇದೆ, ಇದನ್ನೇ 'ಕೊಡಿ ಏರುವುದು' ಎನ್ನುತ್ತಾರೆ. ಇದೊಂದು ಧಾರ್ಮಿಕ ಬಂಧನವೂ ಹೌದು. ಮುಂದೆ ಈ ಧಾರ್ಮಿಕ ವಿಧಿಯಿಂದ ನಡೆಯಲಿರುವ ಉತ್ಸವ, ಕೋಲ, ನೇಮಗಳಿಗೆ ಯಾವುದೇ ವಿಘ್ನಗಳು ಬಾರದಂತೆ ಕ್ಷೇತ್ರದ ದೈವ/ದೇವರುಗಳು ರಕ್ಷಣೆ ನೀಡಿ ಕಾಪಾಡುತ್ತಾರೆ. ಮಾತ್ರವಲ್ಲ ಈ ವಿಧಿಯಿಂದ ಮುಂದಿನ ಕಾಲಾವಧಿಯ ವರೆಗೆ ಆ ಕ್ಷೇತ್ರಕ್ಕೆ ಸಂಬಂಧಪಟ್ಟ ಪರಿಸರದ ಜನರಿಗೆ ಕ್ಷುದ್ರ ಶಕ್ತಿಗಳಿಂದಾಗುವ ಉಪದ್ರ, ದೆವ್ವ-ಪಿಶಾಚಿಗಳಿಂದಾಗುವ ತೊಂದರೆಗಳು, ಸೋಂಕು ಮೊದಲಾದ ಮಾರಕ ದೋಷಗಳಿಂದ ಮುಕ್ತಿ ದೊರಕುವುದೆಂಬುದನ್ನು ಪ್ರಬಲವಾದ ನಂಬಿಕೆಯೂ ಜನಪದರಲ್ಲಿದೆ. ದೇವಸ್ಥಾನಗಳಲ್ಲಿ ಗರ್ಭಗುಡಿಯ ಮುಂಭಾಗದಲ್ಲಿ ಖಾಯಂ ಆಗಿರುವ ಗರುಡಗಂಭವಿದೆ (ಕೊಡಿಮರ), ಇದರ ತುದಿಗೆ ಕೊಡಿ (ಪುತ್ಥಳಿ, ಚಿತ್ರ, ಬೇತಾಳ) ಏರಿಸುತ್ತಾರೆ. ದೈವಸ್ಥಾನಗಳಲ್ಲಿ ಕೃತಕ ಕೊಡಿಯಡಿ ನಿರ್ಮಾಣ ಮಾಡುತ್ತಾರೆ.

ಕೋಲದ ಸಂದರ್ಭದಲ್ಲಿ ಚಪ್ಪರದ ಮುಖದ್ವಾರಕೆ ವಿರುದ್ಧ ದಿಕ್ಕಿನಲ್ಲಿ 'ಮತ್ತಾರ್ನೆ' ಯನ್ನು ಸ್ಥಾಪಿಸುತ್ತಾರೆ. ದೈವಸ್ಥಾನದಿಂದ (ಬಾಲ್ ಬಂಡಾರ) ದಿಂದ ತಂದಿರುವ ದೈವಕ್ಕೆ ಸಂಬಂಧಪಟ್ಟಂತಹ ಮುಖವಾಡ ಇತರ ಪರಿಕರ (ಮುಖವಾಡ, ಖಡ್ಸಲೆ, ಮಣಿ, ಕುಂಚಲ)ಗಳನ್ನು ಇಡುವ ವ್ಯವಸ್ಥೆ ಇದಾಗಿರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ವ್ಯವಸ್ಥೆಯಲ್ಲಿ ಬದಲಾವಣೆ ಕಂಡು ಬಂದಿದ್ದು, ದೈವಕ್ಕೆ ಸಂಬಂಧಪಟ್ಟ ಈ ಎಲ್ಲಾ ಪರಿಕರಗಳನ್ನು ಮರದ ಪಲ್ಲಕಿಯಲ್ಲಿ ಇಡುವ ವ್ಯವಸ್ಥೆ ಇದೆ. ಈ ಕೊಡಿಯಡಿಯಲ್ಲಿ ದೈವದ ಕುಣಿತ, ದೈವದಲ್ಲಿ ಪ್ರಶ್ನೆ ಕೇಳುವುದು, ಅರಿಕೆ ಮಾಡಿಕೊಳ್ಳುವುದು, ದೈವ ದರ್ಶನ, ದೈವದ ಪ್ರಸಾದ ನೀಡುವಿಕೆ ಇತ್ಯಾದಿ ಕಾರ್ಯಗಳು ನಡೆಯುವವು. ಅದರ ಕೆಲಸಕ್ಕಾಗಿ ನಿಯಮಿಸಿದ ವ್ಯಕ್ತಿಗಳು ಹಾಗೂ ದೈವ ಸಂಬಂಧಿ ವ್ಯಕ್ತಿಗಳಿಗೆ ಮಾತ್ರ ಈ ಕೊಡಿಯಡಿಯಲ್ಲಿ ಪ್ರವೇಶವಿರುತ್ತದೆ. ಕೊಡಿಯಡಿಯಲ್ಲಿ ಸಾರ್ವಜನಿಕರು ಕುರ್ಚಿ ಹಾಕಿ ಕುಳಿತುಕೊಳ್ಳುವುದು ನಿಷೇಧವಿದೆ.

ಕೊಡಿಯಡಿಯು ಬಹಳ ಪವಿತ್ರವಾದ ಸ್ಥಳ. ಅದನ್ನು ಕಟ್ಟುವಲ್ಲಿ ನಿಷ್ಠೆ-ನೇಮಗಳು ಅಗತ್ಯ. ತುಳು ಜನಪದರಲ್ಲಿ ಕೊಡಿಕಟ್ಟುವುದು ಧಾರ್ಮಿಕ ಆಚರಣೆಯಾಗಿದೆ. ಊರಿನ ಪ್ರಮುಖರು ಜಾತಿ ಗುರಿಕಾರರು, ತಲೆಗೆ ಮುಂಡಾಸು ಕಟ್ಟಿ, ಭಕ್ತಿ ಭಾವದಿಂದ ದೈವ-ದೇವರುಗಳನ್ನು (ಆ ಪ್ರಾಂತ್ಯದಲ್ಲಿ ನೆಲೆಗೊಂಡಿರುವ ಇತರ ದೈವ-ದೇವರುಗಳನ್ನು) ಮುಂದೆ ನಡೆಯಲಿರುವ ನೇಮೋತ್ಸವವು

ಸುಸೂತ್ರವಾಗಿ ಜರುಗಲೆಂದು ಮನದುಂಬಿ ಪ್ರಾರ್ಥಿಸಿಕೊಳ್ಳುವರು. ಮೊದಲು ಕೊಡಿ ಏರಲಿರುವ ಚೌಕಟ್ಟಿಗೆ ಕೆಂಪು ಬಣ್ಣದ ಬಟ್ಟೆಯ ವಿನ್ಯಾಸದ ಪಟ್ಟಿಗಳಿರುವ ಬಿಳಿ ವಸ್ತ್ರದ ಮಧ್ಯ ಭಾಗದಲ್ಲಿ ಶ್ರದ್ಧಾ ಭಕ್ತಿಯಿಂದ ಪ್ರಾರ್ಥಿಸಿದ, ಜುಟ್ಟುಳ್ಳ (ಮುಗವಿರುವ) ತೆಂಗಿನಕಾಯಿಯನ್ನು ಬಿಳಿವಸ್ತ್ರದಿಂದ ಬಿಗಿದು ಕಟ್ಟುವರು. ಈ ಕಾರ್ಯವನ್ನು ನಲಿಕೆಯವರು ಮಾಡುವರು. ಅದರ ಸುತ್ತಲೂ ಚಕ್ರಾಕಾರದಲ್ಲಿ ತೆಂಗಿನ ಎಳೆ ಸೋಗೆಯಿಂದ ಮಾಡಿದ ಗರಿಯನ್ನು (ಕುಕ್ಕೊಲಿ/ಬಾಲೊಲಿ) ಶೃಂಗರಿಸಿ ಇಳಿಬಿಡುವರು. ಆಮೇಲೆ ತೆಂಗಿನಸೋಗೆಯಿಂದ ತಯಾರಿಸಿದ ಚಪ್ಪರದ (ಮಡಲ್‌ದ ದೊಂಪ) ಅಡಿಭಾಗಕ್ಕೆ ಈ 6 ಅಡಿ ಚೌಕದ ಶುಭ್ರ ಬಿಳಿ ವಸ್ತ್ರವನ್ನು ಬಿಗಿದು ಕಟ್ಟುವರು. ಕಲ್ಪವೃಕ್ಷ ಶುದ್ಧತೆಗೆ, ಭಾವನಾತ್ಮಕ ಸಂಬಂಧಗಳಿಗೆ ಕಾರಣವಾಗಿದೆ, ಆದ್ದರಿಂದ ಇಲ್ಲಿ ತೆಂಗಿನ ಮರದ ವಸ್ತುಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿರುವುದನ್ನು ನಾವು ಗಮನಿಸಬಹುದು.

ಮೊದಲ ದಿನದ ನೇಮದಿಂದ ಪ್ರಾರಂಭಗೊಂಡು ಕೊನೆಯ ನೇಮದವರೆಗೆ ಪ್ರತಿ ದೈವವೂ ಕೊಡಿಯಡಿಯನ್ನು ಪರೀಕ್ಷಿಸುವುದಿದೆ. ಕೊಡಿಯಡಿಯಲ್ಲಿ ಊರ ಹಾಗೂ ಕೂಡು ಕುಟುಂಬದ ವ್ಯಾಜ್ಯಗಳು ದೈವಾವೇಶದ ನುಡಿಗಟ್ಟಿನಲ್ಲಿ ತೀರ್ಮಾನವಾಗುತ್ತಿದ್ದುದು, ಊರ ಜನರಲ್ಲಿ ದೈವದ ಬಗ್ಗೆ ಭಕ್ತಿ ಮತ್ತಷ್ಟೂ ಹೆಚ್ಚಾಗಲು ಕಾರಣವಾಗಿದೆ. ನೇಮೋತ್ಸವದ ಸಂದರ್ಭದಲ್ಲಿ 'ಕೊಡಿಯಡಿ'ಯಲ್ಲಿ ಊರ ಸಮಸ್ತರ ಮತ್ತು ಕೌಟುಂಬಿಕ ಕಲಹಗಳ ಜಟಿಲ ಸಮಸ್ಯೆಗಳಿಗೆ ಪರಿಹಾರ ಒದಗುತ್ತದೆ. ದೈವ ದರ್ಶನದ ಸಮಯದಲ್ಲಿ ನುಡಿಗಟ್ಟಿನ ವಾಗ್ದಾನದಲ್ಲಿ ಇಂತಹ ಸಮಸ್ಯೆಗಳು ತೀರ್ಮಾನವಾಗುತ್ತಿರುವುದು ಸರ್ವರ ಗೋಚರಕ್ಕೆ ನಿಲುಕಿದ ವಿಚಾರಗಳಾಗಿವೆ. ಇದೆಲ್ಲವನ್ನು ಗಮನದಲ್ಲಿರಿಸಿರುವ ಸಮಸ್ತರು 'ಕೊಡಿಯಡಿ'ಯ ಪಾವಿತ್ರ್ಯವನ್ನು ರಕ್ಷಿಸುವಲ್ಲಿ ಕಂಕಣಬದ್ಧರಾಗಿರುತ್ತಾರೆ. ಈಗಿನ ಕಾಲದಲ್ಲಿ ಅನ್ಯಾಯಗಳಾದಾಗ ನ್ಯಾಯ ತೀರ್ಮಾನಕ್ಕೆ ನ್ಯಾಯಾಲಯಗಳಿವೆ. ಆದರೆ ಹಿಂದಿನ ಕಾಲದಲ್ಲಿ ಕಾಠಿಣ್ಯಕರವಾದ ಎಂತೆಂತಹ ವ್ಯಾಜ್ಯಗಳು 'ಕೊಡಿಯಡಿ'ಯಲ್ಲಿಯೇ ನ್ಯಾಯ ತೀರ್ಮಾನಗೊಳ್ಳುತ್ತಿದ್ದವು. ಒಂದರ್ಥದಲ್ಲಿ ಹೇಳುವುದಾದರೆ, ಈ 'ಕೊಡಿಯಡಿ'ಯು ಊರಿನ 'ನ್ಯಾಯಚಾವಡಿ'ಯೂ ಆಗಿದೆ ಎಂದರೆ ತಪ್ಪಾಗಲಾರದು. ಜನರ ಈ ಅಚಲವಾದ ನಂಬಿಕೆ, ವಿಶ್ವಾಸಗಳೇ 'ಕೊಡಿಯಡಿ'ಯ ಪಾವಿತ್ರ್ಯವನ್ನು ಕಾಪಾಡಲು ಹಾಗೂ ಅದರ ಮೇಲೆ ಜನರಿಗೆ ಭಯ-ಭಕ್ತಿ ಮೂಡಲು ಕಾರಣವಾಗಿದೆ.

ಕೊಡಿಯಡಿಯ ಒಳಗೆ ನಾಯಿ, ಹಂದಿಗಳ ಪ್ರವೇಶ ನಿಷಿದ್ಧ. ಸತ್ತ ಅಥವಾ ಹೆತ್ತ ಸೂತಕ ಇದ್ದ ಕುಟುಂಬದ ಸದಸ್ಯರಿಗೆ, ಮುಟ್ಟಾದ ಮಹಿಳೆಯರಿಗೆ ಪ್ರವೇಶವಿಲ್ಲ. ಒಂದು ಪಕ್ಷ ಸೂಚಕವಾದರೆ, ಕೋಲ ನಡೆಯುವ ಸ್ಥಳ ಶುದ್ಧೀಕರಣವಾಗಲೇಬೇಕೆಂಬ ಪೂರ್ವಿಕರ ನಂಬಿಕೆಯೂ ಇದೆ. ಈ ಕಾರಣಗಳಲ್ಲದೆ ಮಧ್ಯಪಾನ, ಬೀಡಿ, ಸಿಗರೇಟು ಇತ್ಯಾದಿ ಅಮಲು ಸೇವಿತ ವ್ಯಕ್ತಿಗಳಿಗೂ ಕೊಡಿಯಡಿಯೊಳಗೆ ಪ್ರವೇಶ ನಿಷೇಧವಿದೆ.

## ಭೂತಾರಾಧನೆಯಲ್ಲಿ ಕೋಳಿ ಅಂಕ

ಕೋಳಿ ಅಂಕ ತುಳುನಾಡಿನ ಪ್ರಸಿದ್ಧ ಜನಪದ ಕ್ರೀಡೆಯೂ ಆಗಿದೆ. ಈ ಕೋಳಿಅಂಕವನ್ನು ಭಾರತದಲ್ಲಿ ಮಾತ್ರವಲ್ಲ, ದೇಶದ ಹಲವಾರು ಕಡೆಗಳಲ್ಲಿ ಸ್ಪರ್ಧೆಗಾಗಿ, ಮನರಂಜನೆಗಾಗಿ ನಡೆಸುತ್ತಾರೆ. ಅಮೇರಿಕ, ಜರ್ಮನ್, ರಷ್ಯಾದಂತಹ ರಾಷ್ಟ್ರಗಳಲ್ಲಿ ಜೂಜಿಗಾಗಿ (ಬೆಟ್ಟಿಂಗ್) ಈ ಕೋಳಿಅಂಕವನ್ನು ನಡೆಸಿದರೆ, ತುಳುನಾಡಿನ ಕರಾವಳಿ ಪ್ರದೇಶದಲ್ಲಿ ಭೂತಾರಾಧನೆಯ ಒಂದು ಭಾಗವಾಗಿ ಕೋಳಿಅಂಕವನ್ನು ನಡೆಸುತ್ತಾರೆ. ನೇಮೋತ್ಸವ, ನಡಾವಳಿ, ಕೋಲಗಳ ಸಂದರ್ಭದಲ್ಲಿ ನಡೆಸುವ ಒಂದು ಮನರಂಜನೆ ಆಟವೇ ಕೋಳಿ ಅಂಕ. ಈ ಆಟ 3 ರಿಂದ 5 ದಿನಗಳವರೆಗೆ ನಡೆಯುವುದು. ಅದಕ್ಕಾಗಿ ವಿಶಾಲವಾದ ಗದ್ದೆ ಬಯಲನ್ನು ಉಪಯೋಗಿಸುವರು. ಕೋಳಿ ಅಂಕಕ್ಕೆ ತುಳುವಿನಲ್ಲಿ 'ಕೋರಿದ ಕಟ್ಟ' ಎಂಬ ಹೆಸರಿದೆ. ಇದಕ್ಕೆ ಹುಂಜಗಳನ್ನು ಮಾತ್ರ ಬಳಸುತ್ತಾರೆ. ಅವುಗಳ ಬಣ್ಣಗಳಿಗೆ ಪ್ರಾಶಸ್ತ್ಯ ನೀಡುತ್ತಾರೆ. ಕೋಳಿ ಅಂಕಕ್ಕಾಗಿಯೇ ಕೋಳಿಗಳಿಗೆ ಪೌಷ್ಟಿಕ ಆಹಾರ ನೀಡಿ ಬೆಳೆಸುತ್ತಾರೆ. ಕೋಳಿಅಂಕದಲ್ಲಿ ಎರಡು ಹುಂಜಗಳನ್ನು ಕೆರಳಿಸಿ ಒಂದರ ಮೇಲೆ ಇನ್ನೊಂದನ್ನು ಬಿಡಲಾಗುವುದು. ಕೋಳಿ ಅಂಕದಲ್ಲಿ ಕಾಳಗ ಮಾಡಲು ಕೋಳಿಯ ಕಾಲುಗಳಿಗೆ ಹರಿತವಾದ ಎರಡಿಂಚಿನ ಚಾಕು ಕಟ್ಟುತ್ತಾರೆ. ಇದಕ್ಕೆ 'ಬಾಲು' ಎಂದು ಹೆಸರು. ಈ ಬಾಲುವಿನಿಂದಲೇ ಕೋಳಿಗಳು ಎದುರುಗಡೆಯ ಕೋಳಿಯ ಮೇಲೆ ದಾಳಿ ಮಾಡುವುದು. ಅದರಲ್ಲಿ ಕೋಳಿ ಗಾಯಗೊಂಡರೆ ಪುನ: ಶುಶ್ರೂಷೆ ಮಾಡಿ ಕಾಳಗಕ್ಕೆ ಅಣಿಗೊಳಿಸುತ್ತಾರೆ. ಹಿಂದೆ ಕೋಳಿಗಳ ಕಾಲಿಗೆ ಬೆಳ್ಳಿಯ ಬಾಲು ಕಟ್ಟುವ ಪದ್ಧತಿ ಇತ್ತೆಂಬ ಉಲ್ಲೇಖಗಳಿವೆ. ಕೋಳಿಗಳನ್ನು ಕಾಳಗಕ್ಕೆ ಬಿಡುವ ಮುನ್ನ ಪಂಚಾಂಗ ನೋಡುತ್ತಾರೆ. ಇದೇ 'ಕುಕ್ಕುಟ ಪಾಂಚಾಂಗ', ಯಾವ ಬಣ್ಣದ ಕೋಳಿಯನ್ನು ಯಾವ ದಿನ ಕಾಳಗಕ್ಕೆ ಬಿಟ್ಟರೆ ಗೆಲ್ಲಬಹುದೆಂಬುದನ್ನು ಪಂಚಾಂಗ ನೋಡಿ ಹೇಳಲಾಗುತ್ತದೆ. ಕೋಳಿ ಅಂಕದಲ್ಲಿ 'ಪಂಥ' ಕಟ್ಟುವುದುಂಟು. ಕೋಳಿ ಅಂಕ ಒಂದು ಜೂಜು. ಆದರೂ ಇದೊಂದು ಮನರಂಜನೆಯ ಅಂಗವಾಗಿ ಭೂತಾರಾಧನೆಯಲ್ಲಿ ಸೇರ್ಪಡೆಗೊಂಡಿದೆ.



## ಪಾಡ್ದನಗಳು:

'ಪಾಡ್ದನ' ಭೂತಾರಾಧನೆಯ ಒಂದು ಅಂಗ. ಇದು ಭೂತಗಳ ಕಥನ ಕವನಗಳಾಗಿವೆ. ತುಳು ಸಾಹಿತ್ಯದ ಸಿರಿವಂತ ಕಣಜವಿದು. ಇದರಲ್ಲಿ ಭೂತದ ಚರಿತ್ರೆ ಮತ್ತು ಸಾಹಸಗಳನ್ನು ಬಣ್ಣಿಸಿರುವ ಕಾವ್ಯ ರಚನೆಗಳಿವೆ. ಇಬ್ಬರು ಜೊತೆಯಾಗಿ ಈ ಪಾಡ್ದನ ಹಾಡುತ್ತಾರೆ. ಜೊತೆಗೆ ತೆಂಬೆರೆ ವಾದ್ಯವನ್ನು ಬಾರಿಸುವರು. 'ತೆಂಬೆರೆ' ಒಂದು ಚರ್ಮ ವಾದ್ಯ, ಪುಟ್ಟ ಡೋಲು ಕೋಲದ ಸಂದರ್ಭ ಭೂತಕ್ಕೆ ಆವೇಶ ಬರಲು ಪಾಡ್ದನ ಹಾಡುತ್ತಾರೆ. ಬ್ರಾಹ್ಮಣರು ಪಾಡ್ದನ ಹಾಡುವುದಿಲ್ಲ. ಪಾಡ್ದನಗಳು ವೀರಗಾಥೆಗಳಾದರೆ, ಉಳಿದವು ದುರಂತ ಕಥಾನಕಗಳಾಗಿವೆ. ಡಾ. ಶಿವರಾಮ

ಕಾರಂತರು ಜಾನಪದ ಗೀತೆಗಳ ಬಗ್ಗೆ 'ಇಂತಹ ರಚನೆಗಳಲ್ಲಿ ಒಂದು ಸಮುದಾಯದಲ್ಲಿ ರೂಢಿಯಾಗಿ ಹರಿದು ಬಂದ ದಂತಕಥೆ, ಪುರಾಣ, ನಂಬಿಕೆಗಳು ಧಾರಾಳವಾಗಿ ಸೇರಿಕೊಂಡಿದೆ' ಎನ್ನುತ್ತಾರೆ. "ಸ್ಥಳೀಯ ವಿಶಿಷ್ಟ್ಯ ನಂಬಿಕೆಗಳ ಜೊತೆಗೆ, ದೇವರುಗಳ ಜೊತೆಗೆ ಹೊರಗಿನಿಂದ ಬಂದ ಅನಂತರ ಸೇರಿಕೊಂಡ ನಂಬಿಕೆಗಳು, ದೇವರುಗಳು ಸೇರಿಕೊಂಡಿರುವುದನ್ನು ಕಾಣಬಹುದು. ಒಂದು ವರ್ಗದ ಮೇಲೆ, ಇಲ್ಲವೇ ಗುಂಪಿನ ಮನಸ್ಸಿನ ಮೇಲೆ ಏನೆಲ್ಲ ಪ್ರಶ್ನಾವಳಿಗಳು ಉಂಟಾಗಿವೆ? ಎಂದು ತಿಳಿಯಲು ಇಂತಹ ಹಾಡುಗಳು ಸಹಾಯ ಮಾಡುತ್ತವೆ" ಎಂದು ಡಾ. ಬಿ.ಎ. ವಿವೇಕ ರೈ ಅವರು ತುಳುವ ಅಧ್ಯಯನದಲ್ಲಿ ಪಾಡ್ದನಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅತಿಮಾನುಷತೆ ವಿಶೇಷವಾಗಿ ಉಳ್ಳ ದೀರ್ಘ ಪಾಡ್ದನಗಳನ್ನು 'ಜನಪದ ಮಹಾಕಾವ್ಯ' ಎಂದು ಕರೆಯುತ್ತಾರೆ.

ಭೂತಗಳ ಪಾಡ್ದನಗಳು ವಸ್ತುವಿನ ದೃಷ್ಠಿಯಿಂದ ಮುಖ್ಯವಾಗಿ ಮೂರು ವಿಭಾಗಗಳಾಗಿ ವಿಂಗಡಿಸಬಹುದು.

1. ಭೂತದ ಹುಟ್ಟು ಮತ್ತು ಉಗಮ
2. ಭೂತದ ಮಹಾತ್ಮೆ ಸಾಹಸ
3. ಪ್ರಾದೇಶಿಕವಾಗಿ ಭೂತದ ಪ್ರಸರಣ

ಇದರಲ್ಲಿ ಭೂತದ ಮಹಾತ್ಮೆ, ಸಾಹಸ, ಅದರ ಪಸರಣದ ಬಗ್ಗೆ ವಿವರಣೆ ಸಿಗುವುದು. ಆದ ಕಾರಣ ಪಾಡ್ದನಗಳೆಂದರೆ ಒಟ್ಟಾರೆಯಾಗಿ ಭೂತದ ಉಗಮ ಮತ್ತು ಪಸರಣದ ಕಥಾನಕಗಳು ಎನ್ನಬಹುದು.

# ಅಧ್ಯಾಯ 6

## ದೈವರಾಜ ಶ್ರೀ ಬಬ್ಬುಸ್ವಾಮಿಯ ಐತಿಹ್ಯ ಮತ್ತು ಇತರ ವಿಚಾರಗಳು

- ದೈವರಾಜ ಶ್ರೀ ಬಬ್ಬುಸ್ವಾಮಿಯ ಇತಿಹಾಸ
- ಬಬ್ಬುಸ್ವಾಮಿಯನ್ನು ಆರಾಧನೆ ಮಾಡುವ ಜನಾಂಗದ ಉದಯ ಹಾಗೂ ಪಥ ನಿಷ್ಪತ್ತಿ
- 'ಕೊಡಂಗೆತ್ತಾಯ' ದೈವವಾಗಿ ಬಬ್ಬುಸ್ವಾಮಿ
- ಸಿರಿಗಿಂಡೆ ಹಾಗೂ ಬಬ್ಬುಸ್ವಾಮಿಯ ಸಂಬಂಧ
- ಇತರ ದೈವಗೊಂದಿಗೆ ಬಬ್ಬುವಿನ ಸಂಬಂಧ
- ದೈವರಾಜ ಕೋಟೆ ಶ್ರೀ ಬಬ್ಬುಸ್ವಾಮಿಯ ಬಿರುದಾವಳಿಗಳು
- ಸಂದೇಶಕನಾಗಿ ಹಾಗೂ ಸಮಾಜೋದ್ಧಾರಕನಾಗಿ ಬಬ್ಬುಸ್ವಾಮಿ
- ಬಂಡಾಯದ ಪ್ರತಿನಿಧಿಯಾಗಿ ತನ್ನಿಮಾನಿಗ
- ನೇಮೋತ್ಸವದಲ್ಲಿ ಬಬ್ಬುವಿನ ಬದುಕಿನ 4 ಹಂತಗಳು ಹಾಗೂ ನುಡಿಗಟ್ಟುಗಳು
- ಬೈದ್ಯ ಮತ್ತು ವೈದ್ಯನಾಗಿ ಬಬ್ಬು
- 'ಬಬ್ಬು ಕಾರ್ಣಿಕ'ದ ಜ್ವಲಂತ ಉದಾಹರಣೆಗಳ ಒಂದು ಇಣುಕು ನೋಟ.
- ಬಬ್ಬುಸ್ವಾಮಿ ಆರಾಧನೆಗೊಳ್ಳುತ್ತಿರುವ ಪ್ರದೇಶಗಳು ಮತ್ತು ಪ್ರಸರಣ

# ಅಧ್ಯಾಯ 6

## ಭಗವಾನ್ ಶ್ರೀ ಬಬ್ಬುಸ್ವಾಮಿ ಸಾಂಸ್ಕೃತಿಕ ಆಚರಣೆ

ಚತುಷ್ ಯುಗವಾದ ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗದಲ್ಲಿ ಮಹಾಪುರುಷರ ಜನನ ಲೋಕಕಲ್ಯಾಣಾರ್ಥಕ್ಕಾಗಿ ನಡೆದಿರುತ್ತದೆ. ಶ್ರೀಕೃಷ್ಣ, ಏಶುಕ್ರಿಸ್ತರ ಜನನವು ಕ್ರಮವಾಗಿ ಕಂಸನ ಕಾರಾಗೃಹ, ದನದ ಹಟ್ಟಿಯಲ್ಲಿ ಆದಂತೆ, ಭಗವಾನ್ ಶ್ರೀ ಬಬ್ಬುಸ್ವಾಮಿಯ ಜನನವು ಸ್ವತಂತ್ರತೆಯನ್ನು ಕಳೆದುಕೊಂಡು ಎಲ್ಲಾ ಸ್ಥರದಲ್ಲಿ ದುರ್ಬಲರಾಗಿದ್ದು, ದಾಸ್ಯದ ಜೀವನ ನಡೆಸುತ್ತಿದ್ದ 'ಉಪ್ಪಾರ"ಯಾನೆ' ಮುಂಡಾಳ ಜನಾಂಗದ ಕುಟುಂಬವೊಂದರಲ್ಲಿ ಆಯಿತು. ಕಲಿಯುಗದ 'ಕಲ್ಕಿ'ಯ ಜನನದಂತೆ ಬಬ್ಬುಸ್ವಾಮಿಯ ಜನನವೂ ಕೂಡಾ. ದಲಿತ ಜನಾಂಗವನ್ನು ಶೋಷಣೆಗೊಳಪಡಿಸಿ ಮೆರೆಯುತ್ತಿದ್ದ ಉನ್ನತ ವರ್ಗದ ಜನರಿಗೆ ತನ್ನ ಮಾಂತ್ರಿಕ ವಿದ್ಯೆಯಿಂದ, ಧನ್ವಂತರಿ ವಿದ್ಯೆಯಿಂದ, ಪವಾಡಗಳಿಂದ ತನ್ನ ಶಕ್ತಿಯನ್ನು ತೋರಿಸಿದ ದೈವ 'ಬಬ್ಬುಸ್ವಾಮಿ'. ಈ ಸ್ವಾಮಿಯ ಆರಾಧನೆಯ ಮೂಲಕ ದಲಿತ, ದಲಿತೇತರ ಜನಾಂಗಗಳು ಅಭಿವೃದ್ಧಿಯನ್ನು ಕಂಡಿವೆ.

### ದೈವರಾಜ ಶ್ರೀ ಬಬ್ಬುಸ್ವಾಮಿಯ ಐತಿಹ್ಯ:

ಉಡುಪಿ ತಾಲೂಕಿನಲ್ಲಿ 'ತುಳುನಾಡಿನ ಹಂಪೆ' ಎಂದು ಪ್ರಸಿದ್ಧಿ ಪಡೆದ 'ಬಾರ್ಕೂರ್' ಎಂಬ ಊರಿದೆ. ತುಳುನಾಡಿನ ರಾಜಧಾನಿ ಬಾರ್ಕೂರಿನ ಸಮೀಪದ ಪುಟ್ಟ ಹಳ್ಳಿಯೇ 'ಕಚ್ಚೂರು'. ಆ ಊರಿನ ಬಹುದೊಡ್ಡ ಗುತ್ತು (ಬಂಟರ ಮನೆ) ಕಚ್ಚೂರ ಗುತ್ತು. ಈ ಗುತ್ತಿನಲ್ಲಿ ಕೋಲದನ್ನಾಯ ಗೋತ್ರದ ಉಪ್ಪೂರು ಮಾಯಿಲ ಮತ್ತು ಆತನ ಪತ್ನಿ ಪದಕಣ್ಣಾಯ ಗೋತ್ರದ ವಸನಂತ ಮುದ್ದು ಈ ಮೂಲದ ಆಳಾಗಿ ದುಡಿಯುತ್ತಿದ್ದರು. ಈ ದಂಪತಿಗಳಿಗೆ ರೂಪವತಿಯೂ, ದೈವಭಕ್ತಳೂ, ಶೀಲವತಿಯೂ ಆದ ಒಬ್ಬಳು ಮಗಳಿದ್ದಳು. ಈಕೆಯೇ ಮಾಲತಿ (ಮಾಲ್ದಿ). ಇತ್ತ ಕಾಡೂರುಗುತ್ತಿನ ಮೂಲದ ಆಳಾಗಿ ಕಂಡರದನ್ನಾಯ ಗೋತ್ರದ ಕಲ್ಲು ಮತ್ತು ಕೋಲದನ್ನಾಯ ಗೋತ್ರದ ಮಾಣಿಗ ಎಂಬ ದಂಪತಿಗಳಿಗೆ ರೂಪವಂತನೂ, ಗುಣಶಾಲಿಯೂ, ಧನ್ವಂತರಿ ಪಂಡಿತನೂ, ಮಂತ್ರ ವಿದ್ಯಾನಿಪುಣನೂ, ಕೃಷಿಯಲ್ಲಿ ನಿಪುಣನೂ ಆದ 'ಬೊಮ್ಮು' ಎಂಬ ಮಗನಿದ್ದನು.

ವಸನಂತ ಮುದ್ದು ಮತ್ತು ಬಾಡು (ಮಾಯಿಲ) ದಂಪತಿಗಳಿಗೆ ನಾಗಬ್ರಹ್ಮ ಆಶೀರ್ವಾದದಿಂದ ಜನಿಸಿದ ಮಗುವನ್ನು ಮಕ್ಕಳಿರದ ಗುತ್ತಿನ ಮನೆಯ ಅಣ್ಣ ತಂಗಿಯರಾದ ಕಾಂತಣ್ಣ ಬಳ್ಳಾಲ, ಮೈರಕ್ಕೆ (ಮಯೂರಕ್ಕೆ) ಪ್ರೀತಿಯಿಂದ ಸಲಹುತ್ತಾರೆ. ಮಂಗಳವಾರ ಜನಿಸಿದ ಈ ಮಗುವಿಗೆ 'ಮಾಲ್ದಿ' ಎಂದು ನಾಮಕರಣ ಮಾಡುತ್ತಾರೆ. ಮುಂದೆ ಬೆಳೆದು ದೊಡ್ಡವಳಾದ ಬಳಿಕ ಮದುವೆಗಾಗಿ ವರಾನ್ವೇಷಣೆ ಪ್ರಾರಂಭವಾಗುತ್ತದೆ. ಕಾಡೂರ ಬೊಮ್ಮುವನ್ನು ಊರಿಗೆ ಊರೇ ಕೊಂಡಾಡುತ್ತಿದ್ದು, ಮಾಲತಿಗೆ ಈತನೇ ಸರಿಯಾದ ವರನೆಂದು ತೀರ್ಮಾನಿಸಿ ಎರಡೂ ಕುಟುಂಬದ ಹಿರಿಯರು ಮಾಲ್ದಿ ಮತ್ತು ಬೊಮ್ಮುವಿಗೆ ವಿವಾಹ ನೆರವೇರಿಸುತ್ತಾರೆ.

ಉಡುಪಿ ತಾಲೂಕಿನ ಕೆಮ್ಮಣ್ಣು ಎಂಬ ಊರಿನಲ್ಲಿರುವ ದೊಡ್ಡ ಗುತ್ತಿಗೆ 'ಕೋಡಿಕಂಡಾಲಗುತ್ತು' ಎಂದು ಹೆಸರು. ಇದರ ಗುರಿಕಾರ ಕೊಡಂಗೆ ಬನ್ನಾರರು. ಇವರ ಪತ್ನಿ ಜೋವು ಮೈರಕ್ಕೆ ಕಚ್ಚೂರಿನ ಗುತ್ತಿನವರು. ಈ ದಂಪತಿಗಳಿಗೆ ಸಂತಾನಭಾಗ್ಯವಿರಲಿಲ್ಲ. ಮಾವನ ಮನೆಗೆ ಬಂದು ಹೋಗುತ್ತಿದ್ದ ಕೊಡಂಗೆ ಬನ್ನಾರರಿಗೆ ಮಾಲ್ದಿಯ ಗುಣ, ನಡತೆ ಮೆಚ್ಚುಗೆಯಾಗಿ, ಆಕೆಯ ಸುಂದರವಾದ ಕಿವಿಗೆ ಕಿವಿಯೋಲೆ (ಕೊಡಂಗೆ) ಮಾಡಿಸಿದರು. ಕಚ್ಚೂರಿನ ಅರಸರು ಬೊಮ್ಮುವನ್ನು ಆ ಊರಲ್ಲೇ ಇರಲು ಕೇಳಿಕೊಂಡರೂ, ಬೊಮ್ಮುವಿನ ದನಿಗಳು ಒಪ್ಪದ ಕಾರಣ ಆತ ಕಾಡೂರಲ್ಲೇ ಇರಬೇಕಾಯಿತು. ಮೈನೆರೆಯದ ಮಾಲ್ದಿ ಕಚ್ಚೂರಲ್ಲೇ ಉಳಿಯಬೇಕಾಯ್ತು.

ಕಾಲಾನಂತರ ಒಂದು ಒಳ್ಳೆಯ ದಿವಸದಲ್ಲಿ ಮಾಲ್ದಿ ಮೈನೆರೆದಳು. ನಾಚಿಕೆಯೇ ಮೈವೆತ್ತಂತಿದ್ದ ಮಾಲ್ದಿ ಈ ಘಟನೆಯಿಂದ ಭಯಭೀತಳಾದಳು. ಅದನ್ನು ಆಕೆಯ ಮುಖದಿಂದ ಗುರುತಿಸಿದ ಮೈರಕ್ಕೆ "ಹೆದರಬೇಡ ಮಗಳೇ, ಇದು ಹೆಣ್ಣು ಜನ್ಮಕ್ಕೆ ಸಲ್ಲುವ ಕಾರ್ಯ" ವೆಂದು ಸಮಾಧಾನಪಡಿಸಿ, ಆಕೆಗೆ ಧೈರ್ಯ ತುಂಬಿದರು. ಮಾತ್ರವಲ್ಲ ನಿತ್ಯ ಸ್ನಾನದಂತೆ ಸ್ನಾನದ ಗೃಹಕ್ಕೆ ಹೋಗಗೊಡದೆ, ಮಾಲ್ದಿಯನ್ನು ಶುದ್ಧ ನೀರು (ಕಳಸ ನೀರು) ಎರೆಯಲು ಸ್ನಾನಕ್ಕೆ ಕರೆದೊಯ್ದರು. ದಂಪತಿಗಳಾದ ಕೊಡಂಗೆ ಬನ್ನಾರರು ಹಾಗೂ ಮೈರಕ್ಕೆ ಮಾಲ್ದಿಯನ್ನು ಸ್ನಾನಕ್ಕಾಗಿ ಬ್ರಹ್ಮರ ಕೆರೆಗೆ ಕರೆದೊಯ್ದರು. ಮಾಲ್ದಿ ಸ್ನಾನ ಮುಗಿಸಿ ಮೇಲಕ್ಕೆ ಬಂದಾಗ ನೀರಿನಲ್ಲಿ ನಾಗಬ್ರಹ್ಮನ ಛಾಯೆ ತೋರಿತು. ಆಗ ಮಾಲ್ದಿಯು ಮೈರಕ್ಕೆಯಲ್ಲಿ "ಯಜಮಾನಿಯೇ, ನೀರಿನಲ್ಲಿ ನನಗೊಂದು ವಿಚಿತ್ರ ಕಾಣಿಸುತ್ತಿದೆ" ಎಂದಳು. ಇತ್ತ ಶಿವಪಾರ್ವತಿಯರು ಆ ದಿನ ಶಿವರಾತ್ರಿಯಾದ ಕಾರಣ ಭೂಲೋಕದ ಭಕ್ತರ ಸೇವೆಗಳನ್ನು ನೋಡಿ ಮೂಕವಿಸ್ಮಿತರಾಗುತ್ತಾರೆ. ಶಿವನ ಗಮನ ಕೆರೆಯಲ್ಲಿ ಸ್ನಾನ ಮಾಡುತ್ತಿದ್ದ ಮಾಲ್ದಿಯತ್ತ ಸಾಗುತ್ತದೆ. ಸುಂದರಿಯಾದ ಆಕೆಯ ಬಗ್ಗೆ ಪಾರ್ವತಿಯಲ್ಲಿ ಕೇಳಿದಾಗ, ಹಿಂದೆ ಶಿವನ ಮಕ್ಕಳಾದ (ಭಕ್ತರು) ಲಿಂಗಾಯಿತರು, ಕೊರಳಲ್ಲಿದ್ದ ಲಿಂಗವನ್ನು ಕೆರೆಗೆ ಅರ್ಪಣೆ ಮಾಡಿದ ವಿಚಾರ, ಆ ಸಂದರ್ಭ ಅವರ ತಪ್ಪನ್ನು ಕ್ಷಮಿಸಿ ಅವರಿಂದಲೇ ಮುಂದೆ ಪೂಜೆ ಮಾಡಿಸಿಕೊಳ್ಳುವೆನೆಂದು ಶಿವ ನೀಡಿದ ವರ, ಇವೆಲ್ಲವನ್ನು ಪಾರ್ವತಿ ಶಿವನಿಗೆ ಜ್ಞಾಪಿಸುತ್ತಾಳೆ. ಇದೀಗ ಸಮಯ ಕೂಡಿ ಬಂದಿದೆ, ತಾವು ಕೂಡಲೇ ಕಾರ್ಯಪ್ರವೃತ್ತರಾಗಬೇಕೆಂದು ಭಾವಿಸಿ, ಶಿವ–ಪಾರ್ವತಿಯರು ತೀರ್ಮಾನಿಸುತ್ತಾರೆ. ಅವರಿಬ್ಬರ ದಿವ್ಯ ಹಸ್ತದಿಂದ ಹೊರಟ, ಭವ್ಯ ಜ್ಯೋತಿಯು ಸ್ನಾನ ನಿರತಳಾದ ಮಾಲ್ದಿಯ ಗರ್ಭವನ್ನು ಸೇರುತ್ತದೆ. ನಾಗಬ್ರಹ್ಮನ ಮಾಯೆಯಿಂದ, ಶಿವ–ಪಾರ್ವತಿಯರ ಅನುಗ್ರಹದಿಂದ ಕೆರೆಯಿಂದ ಮೇಲೆ ಬಂದಾಗ, ಮಾಲ್ದಿದೇವಿ ಗರ್ಭವತಿಯಾಗಿರುತ್ತಾಳೆ. ಆಕೆಯ ಗರ್ಭಕ್ಕೆ ಎರಡು ತಿಂಗಳು ತುಂಬಿದಾಗ, ಮಾಲ್ದಿ ಲೋಕಾಪವಾದಕ್ಕೆ ಗುರಿಯಾಗುತ್ತಾಳೆ. ಮಾಲ್ದಿಯ ಗರ್ಭಕ್ಕೆ ಕೊಡಂಗೆ ಬನ್ನಾರರೇ ಕಾರಣವೆಂದು ಜನ ಆಡತೊಡಗುತ್ತಾರೆ.

ಇತ್ತ ವಿಷಯ ಗೊತ್ತಾದ ಬೊಮ್ಮು, ಕಚ್ಚೂರಿಗೆ ಬಂದಿಳಿದಾಗ, ಮಾಲ್ದಿ ನಡೆದ ಸಂಗತಿಯನ್ನೆಲ್ಲಾ ತನ್ನ ಗಂಡನಿಗೆ ವಿವರಿಸುತ್ತಾಳೆ. ಬೊಮ್ಮು ಸಂತಸಪಟ್ಟರೂ, ಊರಿನ ಸಮಸ್ತ

ಜನರು ಮಾಲ್ದಿಯ ಶೀಲವನ್ನು ಶಂಕಿಸುತ್ತಾರೆ, ಆಕೆ ಒಳ್ಳೆಯ ನಡತೆಯ ಹೆಣ್ಣಲ್ಲವೆಂದು ದೂರುತ್ತಾರೆ. ಜನ ಕೊಡಂಗೆ ಬನ್ನಾರರನ್ನು ಸಂಶಯಿಸುತ್ತಾರೆ.

ಕಾಡೂರು ಗುತ್ತುವಿನ ಜನ ಕೊಡಂಗೆ ಬನ್ನಾರರಿಗೆ ಒದಗಿ ಬಂದ ಅಪವಾದವನ್ನು ಎತ್ತಿಹಿಡಿಯುತ್ತಾರೆ. ಬೊಮ್ಮು ತನ್ನ ಗುತ್ತಿಗೆಯ ಧನಿಯ ಮೇಲೆಯೇ ಬ್ರಹ್ಮಾವರದ ಹತ್ತೇರಿಕಟ್ಟೆಯಲ್ಲಿ ನ್ಯಾಯ ಹೂಡುತ್ತಾನೆ. ಆಗ ಮಾಲತಿ, ಬನ್ನಾರರನ್ನು ಉದ್ದೇಶಿಸಿ, 'ಸರ್ವ ಬಿರುದಾವಳಿಗಳಿಂದ ನಿಮ್ಮನ್ನು ಸಂತೋಷದಿಂದ ಗುತ್ತಿಗೆಗೆ ಮತ್ತೆ ಹಿಂತಿರುಗಿಸುವೆ' ಎಂದು ಸಮಾಧಾನಿಸುತ್ತಾಳೆ. ಬ್ರಹ್ಮಾವರದ ಹತ್ತೇರಿಕಟ್ಟೆ ನ್ಯಾಯಾಲಯದಲ್ಲಿ ನ್ಯಾಯ ವಿಚಾರಿಸಿ, ಆಕೆಯನ್ನು ಸತ್ಯ ಪರೀಕ್ಷೆಗೆ ಈಡು ಮಾಡುತ್ತಾರೆ. ಒಂದನೆಯ ಪರೀಕ್ಷೆ, ಏಳು ಕೊಪ್ಪರಿಗೆಯ ಕುದಿಯುವ ಎಣ್ಣೆಯಲ್ಲಿ ಮುಳುಗಿ ಬರಬೇಕು. ಎರಡನೆಯದು, ಬೆಂಕಿಯಲ್ಲಿ ಕೆಂಡವಾಗಿ ಕಾದ ಉಕ್ಕಿನ ಗುಂಡನ್ನು ಕೈಯಲ್ಲಿ ಹಿಡಿಯಬೇಕು. ಮೂರನೆಯದು, ಕಾಳಿಂಗ ಮತ್ತು ನಾಗರಹಾವು ಇರುವ ಪೆಟ್ಟಿಗೆಯೊಳಗೆ ಕಾಲು ಹಾಕಿ ಎಡೆಯಲ್ಲಿರಿಸಿದ ನಿಂಬೆ ಹಣ್ಣನ್ನು ಕೈಯಲ್ಲಿ ತೆಗೆದು ತೋರಿಸಬೇಕು. ಮಾಲ್ದಿ ತನ್ನ ಸತ್ಯದಿಂದ ನ್ಯಾಯಾಧೀಶರು ಆಕೆಗೆ ಒಡ್ಡಿದ ಎಲ್ಲಾ ಪರೀಕ್ಷೆಗಳನ್ನು ಗೆಲ್ಲುತ್ತಾಳೆ. ಆಕೆಯ ದೇಹಕ್ಕೆ ಏನೂ ಹಾನಿಯಾಗುವುದಿಲ್ಲ. ಸತ್ಯವೇ ಜಯಿಸುತ್ತದೆ. ಊರಿನ ಹತ್ತು ಸಮಸ್ತರು ಮಾಲ್ದಿಗೆ ಈ ಮೂಲಕ ನ್ಯಾಯ ಒದಗಿಸುತ್ತಾರೆ.

ಮುಂದೆ ಮಾಲ್ದಿಯ ಗರ್ಭಕ್ಕೆ ಏಳು ತಿಂಗಳು ತುಂಬಿದಾಗ ಕೋಡಿಕೊಂಡಾಲ ಗುತ್ತಿನ ಒಡೆಯ, ಒಡತಿಯರು ಸೀಮಂತ ಮಾಡಬೇಕೆಂದು ನಿರ್ಧರಿಸುತ್ತಾರೆ. ಮಾಲ್ದಿ ಮತ್ತು ಬೊಮ್ಮು ಕೋಡಿಕಂಡಾಲದ ಗುಡಿಸಲಲ್ಲಿ ವಾಸ ಮಾಡುವಂತೆ ಮೋನು ಬನ್ನಾರರು ಹಾಗೂ ಅವರ ಪತ್ನಿ ಸೀತಕ್ಕೆ ಉಳ್ಳಾಲ್ತಿ ಹೇಳುತ್ತಾರೆ. ಕೊಡಂಗೆ ಬನ್ನಾರರು ಹಾಗೂ ಅವರ ತಂಗಿಯಾದ ಸಿರಿಗಿಂಡೆಯ ಅಕ್ಕರೆಯಲ್ಲಿ ಒಕ್ಕಲು ಮನೆಯಲ್ಲಿ ಮಾಲ್ದಿ ಹಾಗೂ ಬೊಮ್ಮು ಸಂತೋಷದಿಂದ ದಿನ ಕಳೆಯುತ್ತಿರಲು, ಆಕೆಯ ಗರ್ಭಕ್ಕೆ 7 ತಿಂಗಳು ತುಂಬಲು ಕಾತರಿಸುತ್ತಿದ್ದ ಗುತ್ತಿನ ಒಡೆಯ, ಒಡತಿಯರು ವಿಜೃಂಭಣೆಯಿಂದ ಮಾಲ್ದಿಗೆ ಸೀಮಂತನ ಮಾಡುತ್ತಾರೆ. ಮುಂದೆ ಆಕೆಯ ಗರ್ಭಕ್ಕೆ ನವಮಾಸ, ನವದಿನಗಳು ತುಂಬುತ್ತದೆ. ಅದರಂತೆ ಒಂದು ಭಾನುವಾರ ಸೂರ್ಯ ಪಶ್ಚಿಮ ದಿಕ್ಕಿನಲ್ಲಿ ಮುಳುಗುತ್ತಾನೆ. ರಾತ್ರಿಯ ಚಂದ್ರನು ಉದಯಿಸುತ್ತಾನೆ. ಮಾಲ್ದಿ ದಂಪತಿಗಳು ವಿಶಿಷ್ಟ ರೀತಿಯ ಭಕ್ಷ್ಯಗಳನ್ನು ಉಣ್ಣುತ್ತಾರೆ. ಮರುಗಳಿಗೆಯೇ ಮಾಲ್ದಿಗೆ ಪ್ರಸವ ವೇದನೆ ಕಾಣಿಸಿಕೊಳ್ಳುತ್ತದೆ. ಮಾಲ್ದಿ, ಬೊಮ್ಮುವಿನಲ್ಲಿ ತನ್ನ ನೋವನ್ನು ನಿವೇದಿಸುತ್ತಾಳೆ. ಆಗ ದಂಪತಿಗಳಿಗೆ ಈ ಹಿಂದಿನ ಅಶರೀರವಾಣಿಯ ಮಾತುಗಳು ನೆನಪಾಗುತ್ತದೆ. "ರವಿವಾರ ಅಮಾವಾಸ್ಯೆ ಸರಿದು ಹುಣ್ಣಿಮೆಯ ನಂತರ ಸೋಮವಾರ ದಿನ 16 ಘಳಿಗೆ (ಮಂಗಳವಾರ), ಮೂಲ ನಕ್ಷತ್ರ ಸಿಂಹರಾಶಿಯಲ್ಲಿ ಜನನಕ್ಕೆ ಬರುವೆ" ಎಂಬ ಮಾತಿನಂತೆ ಪ್ರಕಾಶಮಾನವಾದ ಬೆಳದಿಂಗಳ ಹುಣ್ಣಿಮೆಯ ದಿನದಂದು ಕಲಿಯುಗದ ಪವಾಡಪುರುಷ, ಮಹಾವೀರನ ಜನನವಾಗುತ್ತದೆ.

ಮಾಲ್ದಿ ತನ್ನ ಗಂಡನಲ್ಲಿ ಮಗುವಿನ ಶಕುನವನ್ನು ಬಲ್ಯಾಯರಿಂದ ಕೇಳಿ ಬರಲು ತಿಳಿಸುತ್ತಾಳೆ. ತನ್ನ ಜಾತಿ ಜನರನ್ನು ಸೇರಿಸಿಕೊಂಡು, ಬೊಮ್ಮು ಸೋಂಗೆ ಬಲ್ಯಾಯನಲ್ಲಿಗೆ ತೆರಳುತ್ತಾನೆ. ಬಲ್ಯಾಯರು ಕರಿಯ ಕಟ್ಟಿನ ನಿಮಿತ್ತದ ಮಣೆ, ಬೆಳ್ಳಿಯ ಸರಿಗೆ, ಬಂಗಾರದ ಹರಳನ್ನು ಹಿಡಿಹಿಡಿಯಾಗಿ ಎತ್ತಿ ಮಣೆಯ ಮೇಲೆ ಹನ್ನೆರಡು ರಾಶಿಗಳನ್ನಿಟ್ಟು ಕಾಣಿಕೆ ಇಡುವಂತೆ ಬೊಮ್ಮುವಿಗೆ ತಿಳಿಸುತ್ತಾರೆ. ಬೊಮ್ಮುವು ಕಾಣಿಕೆಯನ್ನು ಇಟ್ಟೊಡನೆ ಸೋಂಗೆ ಬಲ್ಯಾಯರು ಭವಿಷ್ಯ ನುಡಿಯುತ್ತಾರೆ. "ಮಂಗಳವಾರ ದಿನ ಸಿಂಹರಾಶಿ (ಸಿಂಗಾರ ರಾಶಿ), ಸೂರ್ಯೋದಯದ ಶುಭ ಗಳಿಗೆಯಲ್ಲಿ ಬಿಳಿಯ ಹುಣ್ಣಿಮೆಯ ದಿನದಂದು ಮಗುವಿನ ಜನನವಾಗಿದೆ. ಈ ಮಗು ದೈವಾಂಶ ಸಂಭೂತನಾಗಿ ಈ ಭೂಮಿಗೆ ಜನ್ಮವೆತ್ತಿ ಬಂದಿದ್ದಾನೆ. ಮುಂದೆ ಈತ ಕಾರ್ನಿಕ ಪುರುಷನಾಗಿ ಬೆಳೆಯುವ ಎಲ್ಲಾ ಲಕ್ಷಣಗಳು ಕಾಣುತ್ತಿದೆ. ಆದ್ದರಿಂದ ಈ ಮಗುವಿಗೆ 'ಶಂಭು' ಎಂದು ಹೆಸರನ್ನಿಡಿ. ಪ್ರಥಮ ರಾಶಿಯಲ್ಲೇ 'ಶಂಭು' ಎಂಬ ಹೆಸರನ್ನು ಸೂಚಿಸಿದ ಬಲ್ಯಾಯನ ಮಾತುಗಳಿಗೆ, ಬೊಮ್ಮುವಿನ ಜನ ಮುಖ ಮುಖ ನೋಡಿಕೊಳ್ಳುತ್ತಾರೆ. ಚಿಕ್ಕ ಅಕ್ಷರದ ಹೆಸರು ಹುಡುಕಿ ಕೊಡಿರೆಂದು ಬೊಮ್ಮು ಬಲ್ಯಾಯನಲ್ಲಿ ಹೇಳಿದಾಗ ಪುನ: ರಾಶಿಫಲ ಇಟ್ಟಾಗ ಬಲ್ಯಾಯನಿಗೆ 'ಬ' ಮತ್ತು 'ಬು' ಎಂಬ ಎರಡಕ್ಷರ ಗೋಚರಿಸಿದ್ದರಿಂದ ಬಲ್ಯಾಯ ಬ್ರಹ್ಮನ ಮೊದ ಅಕ್ಷರವನ್ನು, ಶಂಭುವಿನ ಕೊನೆಯ ಅಕ್ಷರವನ್ನೂ ಸೇರಿಸಿ 'ಬಬ್ಬು' ಎಂಬ ಹೆಸರನ್ನಿಡಲು ಸಲಹೆ ನೀಡುತ್ತಾರೆ. ಜೊತೆಗೆ 'ಮಗು ಮುಂದೆ ಜಗತ್ಪ್ರಸಿದ್ಧನಾಗುತ್ತಾನೆ, ಆದರೆ ಈ ಮಗುವಿನಿಂದ ಮುಂದೆ ಆತನ ತಂದೆ–ತಾಯಿಗಳಿಗೆ ಮರಣ ಸಂಭವಿಸುವುದು' ಎಂಬುದಾಗಿ ಬಲ್ಯಾಯ ಜ್ಯೋತಿಷ್ಯವನ್ನು ನುಡಿಯುತ್ತಾನೆ.

ನಡೆದ ವಿಚಾರವನ್ನು ಪತ್ನಿಗೆ ತಿಳಿಸಿದಾಗ 'ನಾವು ಸತ್ತರೂ ಪರವಾಗಿಲ್ಲ, ಮಗನಿಗೆ ಒಳ್ಳೆಯದಾಗಲಿ' ಎಂದು ಹರಸಿ, ಬಾಣಂತಿ ಔಷಧಿ ತರಲು ಹೊರಟ ಬೊಮ್ಮುವಿನೊಡನೆ ತಾನೂ ಬರುವುದಾಗಿ ಹಠ ಹಿಡಿಯುತ್ತಾಳೆ. ತನ್ನ ಮಾಯಾ ಶಕ್ತಿಯಿಂದ ಮಾಲ್ದಿಯ ಹಠದ ಕಾರಣ ತಿಳಿದ ಬೊಮ್ಮು ಆಕೆಯನ್ನು ನಿರಾಸೆಪಡಿಸುವುದಿಲ್ಲ.

ಮುಂದೆ ಜುಮಾದಿ ದೈವಗಳಿಂದ ಅವರಿಬ್ಬರು ಮಾಯದ ಬೀಜವನ್ನು ಪಡೆದು ಮನೆಗೆ ಬಂದು ಮಗುವನ್ನು ಮುದ್ದಾಡಿ 'ಕಾಯ' ಬಿಟ್ಟು 'ಕೈಲಾಸ' ಸೇರುತ್ತಾರೆ. ಇತ್ತ ಕಡೆ ಕೊಡಂಗೆ ಬನ್ನಾರರು ನಿದ್ರೆ ಬಾರದೆ, ಚಡಪಡಿಸಿ ನಿದ್ರೆಯಿಂದ ಎಚ್ಚೆತ್ತುಕೊಳ್ಳುತ್ತಾರೆ. ಅವರಿಗೆ ಯಾವುದೋ ಅಪೂರ್ವ ಘಟನೆ ನಡೆದಂತೆ ಭಾಸವಾಗುತ್ತದೆ. ಏನೂ ತೋಚದೆ ತನ್ನ ಹೊಲದ ಕಡೆ ಅಡ್ಡಾಡಿದಾಗ, ಆಗಷ್ಟೇ ಜನಿಸಿದ ಮಗುವಿನ ಅಳುವಿನ ಧ್ವನಿ ಕೇಳಿ ಬಂತು. ಬನ್ನಾರರು, ಮಾಲ್ದಿ ದಂಪತಿಗಳ ಮನೆಗೆ ತೆರಳಿ ನೋಡಿದಾಗ ಅವರಿಗೆ ಸಂತೋಷ, ದು:ಖ ಒಮ್ಮೆಲೇ ಉಕ್ಕುತ್ತದೆ. ಆಗ ಬನ್ನಾರರಿಗೆ ಬ್ರಹ್ಮಾವರ ಪಂಚಾಯತ್ ಕಟ್ಟೆಯಲ್ಲಿ ನಡೆದ ಸತ್ಯ ಘಟನೆ ಹಾಗೂ ಅಶರೀರವಾಣಿಯಲ್ಲಿ ತಿಳಿಸಿದಂತೆ "ಮುಂದಾಗುವ ಈ ಪವಾಡ ಪುರುಷನ ಜನನವು ಅವನ ಮಾತಾಪಿತೃಗಳ ಮರಣಕ್ಕೆ ಕಾರಣವಾಗುವುದು" ಎಂಬ ಮಾತು ನೆನಪಾಗುತ್ತದೆ. ದು:ಖವನ್ನು ಬದಿಗಿಟ್ಟು ಮುಂದಿನ ಕಾರ್ಯಕ್ಕೆ ಪ್ರವೃತ್ತರಾದ ಬನ್ನಾರರು ತಬ್ಬಲಿಯಾದ ನವಜಾತ ಶಿಶುವನ್ನು ಎತ್ತಿಕೊಳ್ಳುತ್ತಾರೆ. ಸತ್ಯದ ಮಗುವಾದ ಬಬ್ಬು ಮಾಸಡಿಗೆ (ಕಚ್ಚೂರಿಗೆ) ಬಂದು ಸೇರುತ್ತಾನೆ. ಬನ್ನಾರರು ಆ ಮಗುವನ್ನು ಎದೆಗವಚಿ 'ನೀನು

ನನ್ನ ಮೂಲದ ಮಗುವಾಗು' ಎಂದು ಹರಸಿ, ಮಕ್ಕಳಿಲ್ಲದ ತನ್ನ ತಂಗಿ ಸಿರಿಗಿಂಡೆಗೆ ಆ ಮಗುವನ್ನಿತ್ತರು. ಆ ಸಂದರ್ಭದಲ್ಲಿ ಸಿರಿಗಿಂಡೆಗೆ ಸಂನ್ಯಾಸಿಯೊಬ್ಬನು "ಇದು ಮಕ್ಕಳಿಲ್ಲದ ಗುತ್ತು, ಆದರೂ ಈ ಮಹಾತಾಯಿಗೆ ಒಬ್ಬ ಮಹಾಪುರುಷನಿಗೆ ತಾಯಿಯಾಗುವ ಭಾಗ್ಯ ಒದಗುವುದು" ಎಂದಿದ್ದ ಆ ಮಾತು ನೆನಪಾಗುತ್ತದೆ.

ಸಿರಿಗಿಂಡೆ ಕಚ್ಚೂರ ಗುತ್ತುವಿನ ಮನೆಯ ಚಾವಡಿಯಲ್ಲಿ ಮಗುವಿಗೆ ತೊಟ್ಟಿಲು ಕಟ್ಟಿ, ಹಾಲಿಲ್ಲದ ತನ್ನ ಮೊಲೆಯೂಡಿಸುತ್ತಾಳೆ. ಬಬ್ಬುವನ್ನು ಪ್ರೀತಿಯಿಂದ 'ಬಬ್ಬುಬಾರಗ' ನೆಂದು ಕರೆದು ಮುದ್ದಾಡುತ್ತಾಳೆ. ಬಬ್ಬು ತನ್ನ ಮಾಂತ್ರಿಕ ಶಕ್ತಿಯಿಂದ ಹಾಲಿಲ್ಲದ ಸಿರಿಗಿಂಡೆಯ ಮೊಲೆಯಲ್ಲಿ ಹಾಲು ಉತ್ಪಾದಿಸಿ, ಅಕೆಯ ಎದೆಹಾಲನ್ನುಂಡು ಬೆಳೆದು ದೊಡ್ಡವನಾಗುತ್ತಾನೆ.

ಆದ್ದರಿಂದ ಇಂದಿಗೂ ಕೋರ್ದಬ್ಬು ಕೋಲ/ನೇಮ ನಡೆವ ಸಂದರ್ಭದಲ್ಲಿ ಕೋಟೆದ ಬಬ್ಬುಸ್ವಾಮಿ ಮುಂಜಾವಿನ ಹೊತ್ತು ಗುತ್ತು (ಬಂಟರು/ಶೆಟ್ರು)ವಿನ ಮನೆಗೆ ಹೋಗಿ ಒಂದು ಗಿಂಡೆ (ಲೋಟ) ಹಾಲು ಕುಡಿದು ಬರುವ ಪದ್ಧತಿ ಇದೆ. ಮುಂದೆ ಬನ್ನಾರರು ಬಬ್ಬುವನ್ನು ಕೋಡಿಕಂಡಾಲಕ್ಕೆ ಕರೆದೊಯ್ದು, ಅಂಗಳದ ಭತ್ತ ಕಾಯಲು ಬಬ್ಬು ಬಾರಗನಿಗೆ ತಿಳಿಸುತ್ತಾರೆ. ಆ ಹೊತ್ತಿಗೆ ಸಿರಿಗಿಂಡೆಯೂ ತನ್ನ ಪತಿಯ ಊರಾದ ಕಚ್ಚೂರನ್ನು ತ್ಯಜಿಸಿ ತನ್ನ ತವರು ಮನೆ ಕೋಡಿಕಂಡಾಲಕ್ಕೆ ಬಂದಿರುತ್ತಾಳೆ. ಬಬ್ಬು ತೆಂಗಿನ ಸೋಗೆಯ ಕಡ್ಡಿಯಿಂದ ಬಿಲ್ಲು ಬಾಣ ತಯಾರಿಸಿ, ಭತ್ತ ತಿನ್ನಲು ಬಂದ ಕೋಳಿ, ಕಾಗೆಗಳನ್ನು ಸಾಯಿಸುತ್ತಾನೆ. ಬನ್ನಾರರ ಅಭಯದ ಮೇರೆಗೆ, ತನ್ನ ಮಂತ್ರ ಶಕ್ತಿಯಿಂದ ಮತ್ತೆ ಅವುಗಳಿಗೆ ಜೀವನ ದಾನ ಮಾಡುತ್ತಾನೆ. ಮುಂದೆ ಬಬ್ಬುಬಾರಗ ಅನೇಕ ಪವಾಡಗಳನ್ನು ಮಾಡಿ ಜಗತ್ಪ್ರಸಿದ್ಧನಾಗುತ್ತಾನೆ.

ತನ್ನ ಸ್ವಂತ ಪರಿಶ್ರಮದಿಂದ ಉನ್ನತವಾದ ಬೇಟೆಗಾರನೂ, ತನ್ನ ವಿಶೇಷ ಕಾರ್ಯಗಳಿಂದ ಪವಾಡ ಪುರುಷನೂ, ಧನ್ವಂತರಿ ವೈದ್ಯನೂ ಆಗಿ ತಬ್ಬಲಿ ಬಬ್ಬು ಬಾರಗ ಉನ್ನತ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡು ಬೆಳೆಯುತ್ತಾನೆ. ಉತ್ತರೋತ್ತರ ಅಭಿವೃದ್ಧಿಯನ್ನು ಪಡೆಯುತ್ತಾನೆ. ಮುಂದೆ ಇವನ ಶ್ರೇಯಸ್ಸನ್ನು ಸಹಿಸದ ಕುತಂತ್ರಿಗಳ ಮೋಸಕ್ಕೆ ಬಲಿಯಾಗಿ ಬಬ್ಬುಬಾರಗ 'ಜೋಗ' ಬಿಟ್ಟು 'ಮಾಯ'ಕ್ಕೆ ಸೇರುತ್ತಾನೆ. ಮಾಯಕದಲ್ಲಿ ತನ್ನ ಜನರಿಗೆ ಕಾರಣಿಕಗಳನ್ನು ಪ್ರದರ್ಶಿಸಿ, ಅವರನ್ನು ರಕ್ಷಿಸುತ್ತಾ, ಅವರಿಂದ ಪೂಜೆಗೊಳಪಟ್ಟು ಕೋರ್ದಬ್ಬು, ತನ್ನಿಮಾನಿಗ ಎಂಬ ಅವಳಿ ದೈವಗಳಾಗಿ ಕೀರ್ತಿ ಪಡೆಯುತ್ತಾನೆ.

## ಬಬ್ಬುಸ್ವಾಮಿಯನ್ನು ಆರಾಧನೆ ಮಾಡುವ ಜನಾಂಗದ ಉದಯ ಹಾಗೂ ಪದ ನಿಷ್ಪತ್ತಿ:

ಸುಮಾರು ಹನ್ನೆರಡು ಶತಮಾನದ ಆರಂಭದಲ್ಲಿ ಜೈನಧರ್ಮ ಮತ್ತು ವೀರಶೈವ ಧರ್ಮಗಳೊಳಗೆ ಕಲಹಗಳಿದ್ದವು. ಜೈನಧರ್ಮದ ಪ್ರಾಬಲ್ಯಕ್ಕೆ ಒಳಗಾಗಿ ಈ ವೀರಶೈವ ಮತ ಕ್ಷೀಣಿಸಿತು. ವೀರಶೈವ ಮತ (ಲಿಂಗಾಯಿತ) ಗೌಡ ಕುಲಕ್ಕೆ ಗುರುವಾಗಿರುವ ಭಾರಂಗಿ ಕೂಡ್ಲಿಮಠದ

ಸ್ವಾಮಿಗಳ ಶಾಪಕ್ಕೆ ಒಳಗಾದ ಉತ್ತುಂಗ ಸ್ಥಾನದಲ್ಲಿದ್ದ (ಲಿಂಗಯಿತ) ವೀರಶೈವ ಗೌಡಕುಲ ಉಳಿಗಾಲವಿಲ್ಲದೆ ಕಂಗೆಡುವಂತಾಯಿತು. ಉತ್ತರ ಭಾಗದಲ್ಲಿದ್ದ ಲಿಂಗಾಯತ ಗೌಡ ಕುಲದ ಕೋಟಿ ಸಂಖ್ಯೆಯ ಜನ ಕುಲಗುರುವಿನ ಶಾಪದಿಂದ ಪಡಬಾರದ ಕಷ್ಟಗಳನ್ನು ಅನುಭವಿಸಿದರು. ಈ ಪರಿಸ್ಥಿತಿಯಲ್ಲಿ ತಮ್ಮ ಕುಲದ ಆಚಾರ–ವಿಚಾರ, ಪದ್ಧತಿಗಳನ್ನು ಕಳೆದುಕೊಂಡು, ತಿನ್ನಲು ಅನ್ನವಿಲ್ಲದೆ ಒಂದನ್ನೊಂದು ಕೊಂದು ತಿನ್ನುವ ಪ್ರಾಣಿಗಳಂತೆ ಬದುಕಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಆಗ ಈ ಜನರು ಕೋಟೇಶ್ವರದ ಕೋಟಿಲಿಂಗ ಮಹಾರುದ್ರಸ್ವಾಮಿಯ ಸನ್ನಿಧಿಗೆ ಬಂದು ತಾವು ಧರಿಸಿರುವ ಇಷ್ಟ ಲಿಂಗಗಳನ್ನು ನಾಗರಾಜನ ಜೊತೆಗೆ ಸಮಾಲೋಚಿಸಿ ಕೋಟೇಶ್ವರದ ಕೆರೆಗೆ ಅರ್ಪಿಸಿದರು. ಇದರಂದ ಇತ್ತ ಕೈಲಾಸದಲ್ಲಿ ಶೃಂಗಾರ ನೃತ್ಯದಲ್ಲಿ ತೊಡಗಿ ಆನಂದದಲ್ಲಿ ಮೈಮರೆತ ಶಿವ–ಪಾರ್ವತಿಯರ ಸಂತೋಷಕ್ಕೆ ಧಕ್ಕೆ ಉಂಟಾಗುತ್ತದೆ. ಶಿವ ಕೋಪಿಷ್ಠನಾಗಿ ಭೂಲೋಕದಲ್ಲಿ ಅಲ್ಲೋಲ ಕಲ್ಲೋಲವನ್ನು ಸೃಷ್ಟಿಸುತ್ತಾನೆ. ಆಗ ಭಯಭೀತರಾದ ಲಿಂಗಾಯಿತರಿಗೆ ಜ್ಞಾನೋದಯವಾಗಿ ತಮ್ಮ ತಪ್ಪಿನ ಅರಿವಾಗಿ ಕೆರೆಗೆಸೆದ ಲಿಂಗವನ್ನು ಮತ್ತೆ ಮೇಲಕ್ಕೆತ್ತಲು ಪ್ರಯತ್ನಿಸುತ್ತಾರೆ. ಆ ಸಂದರ್ಭದಲ್ಲಿ ಅಶರೀರವಾಣಿಯಾಗುತ್ತದೆ. "ನಿಲ್ಲಿ! ಒಮ್ಮೆ ಕೆರೆಗೆ ಅರ್ಪಿಸಿದ ಲಿಂಗವನ್ನು ಪುನ: ಆಯ್ದು ಕೊರಳಿಗೆ ಧರಿಸಲು ಪ್ರಯತ್ನಿಸಿದರೆ ನಿಮ್ಮ ವಂಶ ನಿರ್ವಂಶವಾಗುವುದು'. ಈ ವಾಣಿಯನ್ನು ಕೇಳಿದಾಕ್ಷಣ ಭಕ್ತಿಯಿಂದ ಲಿಂಗಾಯತ ಸಮೂಹ ಶಿವನಲ್ಲಿ ಕ್ಷಮೆಯಾಚಿಸುತ್ತಾರೆ. ಆಗ ಶಿವನು ಅವರ ತಪ್ಪನ್ನು ಕ್ಷಮಿಸಿ ಆ ಕುಲಕ್ಕೆ ಸಂದೇಶವನ್ನು ನೀಡುತ್ತಾನೆ. 'ಕೃಷಿಯನ್ನು ಆಧರಿಸಿ ಮುಂದಾಳತ್ವದಿಂದ ಮುನ್ನಡೆಯುವಲ್ಲಿ ನಿಮ್ಮ ಶ್ರೇಯಸ್ಸಿದೆ. ಮುಂದೆ ನಿಮ್ಮ ಕೈಯಿಂದಲೇ ಪೂಜೆಯನ್ನು ಪಡೆದುಕೊಳ್ಳುವೆ' ಎಂದು ನುಡಿಯಿತ್ತು, ಹರಸುತ್ತದೆ ಆ ಅಶರೀರವಾಣಿ.

ಹೀಗೆ ಈ ಜನಾಂಗ ಉತ್ತರ, ದಕ್ಷಿಣಗಳಿಗೆ ವಲಸೆ ಹೋಗುತ್ತದೆ. ಈ ಜನಾಂಗದ ಕೆಲವರು ಉತ್ತರಕ್ಕೆ ವಲಸೆ ಹೋಗಿ ಉಪ್ಪಿನ ವೃತ್ತಿಯನ್ನು ಕೈಗೊಂಡ ಕಾರಣ 'ಉಪ್ಪಾರ'ರಾದರು. ಪೂರ್ವ ದಿಕ್ಕಿನಲ್ಲಿ ದೊಡ್ಡವರ ಮನೆಯಲ್ಲಿ ಮಕ್ಕಳನ್ನು ನೋಡಿಕೊಳ್ಳುವ ಕಾಯಕ ಕೈಗೊಂಡವರು 'ಕೂಸಾಲ' ರಾದರು, ದಕ್ಷಿಣ ದಿಕ್ಕಿನಲ್ಲಿ ಕೃಷಿ ಕಾಯಕ ಕೈಗೊಂಡವರು 'ಮುಂದಾಳ'ರಾದರು. ವರ್ಷ ಕಳೆದಂತೆ ಈ ಮುಂದಾಲು ಜನಾಂಗವೇ ಮುಂದಾಳಾಗಿ, ಮುಂಡಾಳವಾಯ್ತು.

ಮುಂದಾಲು > ಮುಂದಾಳು . ಮುಂಡಾಲ (ಮುಂಡಾಳ)

## 'ಕೊಡಂಗೆತ್ತಾಯ' ದೈವವಾಗಿ ಬಬ್ಬುಸ್ವಾಮಿ:

ಕಾಸರಗೋಡು ಜಿಲ್ಲೆಯ ಕೋಳ್ಯೂರಿನಲ್ಲಿ ಕೋಟೆದ ಬಬ್ಬುಸ್ವಾಮಿಯನ್ನು 'ಕೊಡಂಗೆತ್ತಾಯ' ನೆಂದು ಕರೆಯುತ್ತಾರೆ. ಇದಕ್ಕೆ ಸಮರ್ಥನೀಯವಾದ ಕಾರಣವೂ ಇದೆ. ಬಬ್ಬುಸ್ವಾಮಿ ಕೊಡಂಗೆ ಬನ್ನಾರರ ಸಾಕು ಮಗ ಮಾತ್ರವಲ್ಲ, ಮುಂದೆ ದೈವವಾಗಿ ನೆಲೆಗೊಂಡದ್ದು ಕೂಡಾ 'ಕೊಡಂಗೆ' ಎಂಬ ಸ್ಥಳದಲ್ಲಿ. 'ಕೊಡಂಗೆ' ಎಂಬುದು ಕೋಳ್ಯೂರಿಗಿರುವ ಮತ್ತೊಂದು ಹೆಸರೂ ಹೌದು. ಈ ಸ್ಥಳಕ್ಕೆ ಈ ಹೆಸರು ಕೇವಲ ಮೌಖಿಕವಾಗಿ ಬಂದದ್ದಲ್ಲ. ಉಲ್ಲೇಖಗಳ ಪ್ರಕಾರ ಸರಿಸುಮಾರು 90–

95 ವರ್ಷಗಳ ಹಿಂದಿನ ಐತಿಹ್ಯ ಈ ಕೊಡಂಗೆತ್ತಾಯನಿಗೂ, ಈ ಸ್ಥಳಕ್ಕೂ ಇದೆ ಎಂಬ ಪ್ರಸ್ತಾಪಗಳಿವೆ.

ಬಬ್ಬುಸ್ವಾಮಿಯ ಅನನ್ಯ ಭಕ್ತರು ಕೊಡಂಗೆ ದೊಡ್ಡ ಪಟೇಲರು, ಬಬ್ಬುವಿನ ಅಪ್ಪಣೆಯಾಗದ ಹೊರತು ತಮ್ಮ ಯಾವ ಕಾರ್ಯಗಳನ್ನು ಮಾಡುವವರಲ್ಲ. ಹುಟ್ಟು-ಸಾವು, ಅಳಿವು-ಉಳಿವುಗಳಿಗೆ ಕಾರಣೀಭೂತ ಕೊಡಂಗೆತ್ತಾಯ ಎಂದು ಅಪಾರವಾಗಿ ನಂಬಿರುವ ಪರಮ ಭಕ್ತರಿವರು. ಹಾಗಾಗಿ ಮಳೆಗಾಲದ ಒಂದು ಸಂದರ್ಭದಲ್ಲಿ ಧಾರಾಕಾರವಾಗಿ ಸುರಿಯುತ್ತಿರುವ ಮಳೆಗೆ ದೊಡ್ಡ ಪಟೇಲರ ಬಿರುಕು ಬಿಟ್ಟ ಮನೆಯ ಹಳೆಯ ಗೋಡೆ ಕುಸಿದು ಬೀಳುವ ಸಾಧ್ಯತೆಗಳಿತ್ತು. ಪಟೇಲರನ್ನು ಹಿತೈಷಿಗಳು, ಬಂಧುಗಳು ಮನೆ ಬಿಟ್ಟು ಹೊರಗೆ ಬರಲು ಎಷ್ಟೇ ಒತ್ತಾಯಿಸಿದರೂ 'ಮನೆ ಕುಸಿದು ಬೀಳುವುದಾದರೆ ನನಗೆ ಕೊಡಂಗೆತ್ತಾಯ ಹೇಳಬಹುದೆಂದು' ತಿಳಿಸಿ ಅವರನ್ನು ಸಮಾಧಾನಿಸುತ್ತಾರೆ. ಇತ್ತ ಜನರು ಅಂದಾಜಿಸಿದಂತೆ ರಾತ್ರಿ ಧಾರಾಕಾರವಾಗಿ ಮಳೆ ಸುರಿಯಿತು, ಇತ್ತ ಪಟೇಲರು ಕೊಡಂಗೆತ್ತಾಯನನ್ನು ದೃಢವಾಗಿ ನಂಬಿ ಅದೇ ಮನೆಯೊಳಗೆ ರಾತ್ರಿ ನಿದ್ರಿಸಿದರು. 'ತಡರಾತ್ರಿಯಲ್ಲಿ ಮನೆಯ ಹೊರಗಿನಿಂದ ಮನೆ ಜರಿಯುತ್ತಿದೆ ಮನೆಯಿಂದ ಹೊರಗೆ ಬನ್ನಿ' ಎಂಬ ಅಶರೀರವಾಣಿ ಕೇಳಿ ಬರುತ್ತದೆ. ಮನೆಯ ಕಿಟಕಿಯ ಹತ್ತಿರ ಧ್ವನಿಯನ್ನು ಆಲಿಸಲು ಬಂದ ಪಟೇಲರ ಮಗಳಿಗೆ ವ್ಯಕ್ತಿ ಕಾಣಿಸಲಿಲ್ಲ. ಆದರೆ ಮನೆ ಕುಸಿಯುತ್ತಿರುವುದು ಗಮನಕ್ಕೆ ಬರುತ್ತದೆ. ತಕ್ಷಣ ಮನೆಯಿಂದ ಹೊರಗಡೆ ಓಡಿ ತನ್ನ ಪ್ರಾಣವನ್ನು ಉಳಿಸಿಕೊಳ್ಳುತ್ತಾಳೆ. ಮಳೆಯ ಆರ್ಭಟದ ಶಬ್ದಕ್ಕೆ 'ಅಶರೀರವಾಣಿಯ ಧ್ವನಿ' ದೊಡ್ಡ ಪಟೇಲರಿಗೆ, ಅವರ ಮಗನಿಗೆ ಹಾಗೂ ಪಟೇಲರ ತಂದೆಗೆ ಕೇಳಿಸದೆ ದುರಂತಕ್ಕೀಡಾಗಿ ಅವರು ಸಾವನ್ನಪ್ಪುತ್ತಾರೆ. 'ತಾನೊಂದು ನೆನೆದರೆ ದೈವವೊಂದು ನೆನೆವುದು', ಆಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ, ಇದು ದಿಟ. ದೊಡ್ಡ ಪಟೇಲರ ಸಂದರ್ಭದಲ್ಲೂ ಇದು ನಿಜವಾಯಿತು. ಕುಲದ ವಂಶೋದ್ಧಾರಕ್ಕಾಗಿ ಪಟೇಲರ ಮಗಳನ್ನು ಕೊಡಂಗೆತ್ತಾಯ ರಕ್ಷಿಸಿ ಆತನಲ್ಲಿ ಜನರಿಟ್ಟ ನಂಬಿಕೆಯನ್ನು ಉಳಿಸಿಕೊಂಡಿತು.

### ಕಾಸರಗೋಡಿನ 'ಕೊಡಂಗೆತಾಯ'ನ ಬಗೆಗಿನ ಕೆಲವು ಚಿಂತನೆಗಳು:-

ಕಚ್ಚೂರಮಾಲ್ದಿ ದೊಡ್ಡವಳಾದಾಗ ಅವಳ ಜಾತಿಕಟ್ಟಿನಂತೆ ಮಂಡಲ ಬರೆದು ಕಲಶವನ್ನಿಟ್ಟು ಶುದ್ಧೀಕರಿಸುತ್ತಾರೆ. ಬಳಿಕ ಸಿರಿಗೊಂಡೆ ಉಳ್ಳಾಲ್ತಿ ಮುಟ್ಟಾಗುತ್ತಾಳೆ. ನಾಲ್ಕನೇ ದಿನಕ್ಕೆ ಶುದ್ಧಕಾರ್ಯಕ್ಕೆ ಮಡಿವಾಳ್ತಿಯಲ್ಲಿ ಹೋಗಿ, ಮೈಲಿಗೆ ಕರಿಯ ಹಾಗೂ ಶುದ್ಧಕರಿಯದಲ್ಲಿ ಸ್ನಾನ ಮಾಡಿ ಮೈಲಿಗೆ ಕಳೆಯುತ್ತಾರೆ. ಉಳ್ಳಾಲ್ತಿ ಕೂದಲನ್ನು ಕೊಡವಿದಾಗ ಒಂದು ಹನಿ ನೀರು ಕಚ್ಚೂರ ಮಾಲ್ದಿಯ ಬಲ ಅಳ್ಳೆಗೆ ಬೀಳುತ್ತದೆ. ಇದು ಮಾಲ್ದಿಯ ಸತ್ಯದ ಬಸಿರಿಗೆ ಕಾರಣವಾಗುತ್ತದೆ.ಮುಂದೆ ಬಬ್ಬುವಿಗೆ ಮಾಲ್ದಿದೇವಿ ಜನ್ಮನೀಡಿ ಮಾಯಕಳಾಗುತ್ತಾಳೆ.

ಮಕ್ಕಳಿಲ್ಲದ ಕೊಡಂಗೆ ಬನ್ನಾರರು ಬಬ್ಬುವನ್ನು ದತ್ತು ಪುತ್ರನನ್ನಾಗಿ ಸ್ವೀಕರಿಸುತ್ತಾರೆ. ಹೆಣ್ಣು, ಹೊನ್ನು, ಮಣ್ಣಿಗಾಗಿ ಆಸೆಪಟ್ಟು ಹೊಡೆದಾಡಿ ಬಲಿಯಾದ, ಕತೆಗಳು, ಇತಿಹಾಸಗಳು ಈ

ಪ್ರಪಂಚದಲ್ಲಿ ಸಾಕಷ್ಟಿದೆ. ಬಬ್ಬು ಬೆಳೆಯುತ್ತಾ ಅನೇಕ ಪವಾಡಗಳನ್ನು ಮಾಡಿ ಪವಾಡ ಪುರುಷನಾಗುತ್ತಾನೆ. ಬನ್ನಾರರ ಆಸ್ತಿಯನ್ನು ವಂಚನೆಯಿಂದ ಕಬಳಿಸುವ ದುರ್ಮನಸ್ಸುಗಳು ಷಡ್ಯಂತ್ರ ನಡೆಸಿ ಬಬ್ಬುವನ್ನು ಮುಗಿಸಲು ಯೋಜನೆಯನ್ನು ರೂಪಿಸುತ್ತವೆ.ಬಬ್ಬುವಿನ ಸಾವನ್ನೇ ಬಯಸುವ ಈ ವ್ಯಕ್ತಿಗಳು ನೀರದಂಡನ್ನು ಬಿಡಿಸುವ ನೆಪದಲ್ಲಿ ಬಾವಿಗೆ ಬಬ್ಬುವನ್ನು ಇಳಿಸಿ ಸಾವಿನ ಬಾಯಿಗೆ ಆಹಾರವಾಗಿ ಕೊಟ್ಟಿರುವ ಸಾಧ್ಯತೆಗಳಿವೆ, ಅಥವಾ ನೀರದಂಡನ್ನು ಬಿಡಿಸುವ ಕಾರಣದಿಂದ ಬಬ್ಬುವನ್ನು ಬಾವಿಗೆ ದೂಡಿ ಬಬ್ಬುವನ್ನು ಕೊಂದಿರಲೂಬಹುದು. ಇವೆಲ್ಲವುಗಳಿಗಿಂತ ಬಲಿಷ್ಠವಾದ ಕಾರಣವೊಂದಿದೆ. ಭಾರತ ಜಾತ್ಯಾತೀತ ರಾಷ್ಟ್ರವೆಂದು ಮೇಲ್ನೋಟಕ್ಕೆ ಕಂಡರೂ, ಜಾತಿಪದ್ಧತಿಯ ಶ್ರೇಣಿ ವ್ಯವಸ್ಥೆಯ ಒಳಗಡೆಯೇ ಈ ಭಾರತೀಯರು ಆಗಿನಿಂದ ಈ ವರೆಗೂ ಜೀವಿಸುತ್ತಿದ್ದಾರೆ. ಆಧುನಿಕತೆಯ ಕಾರಣದಿಂದ ವಿದ್ಯಾಭ್ಯಾಸ ದೊರೆತದ್ದಕ್ಕೋ ಏನೋ? ಶಿಕ್ಷಿತ ವರ್ಗದಲ್ಲಿ ಜಾತಿಪದ್ಧತಿಯ ಬಗ್ಗೆ ವಿಶಾಲವಾದ ಮನೋಧರ್ಮ ನೆಲೆಯೂರಿದೆ. ಹಾಗಂತ ಜಾತಿ ಬೇಧ ನಿರ್ಮೂಲನ ಖಂಡಿತವಾಗಿಯೂ ಆಗಿಲ್ಲ. ಪರಿಸ್ಥಿತಿ ಈಗಲೇ ಹೀಗಿರಬೇಕಿದ್ದರೆ, ಪುರಾತನ ಕಾಲಮಾನದಲ್ಲಿ ಈ ಪದ್ಧತಿಯ ಬಗ್ಗೆ ನಂಬಿಕೆಗಳು ಅಚರಣೆಗಳು ಭೀಕರವಾಗಿರುವ ಸಾಧ್ಯತೆಗಳೇ ಹೆಚ್ಚು. ವೈದ್ಯನಾಗಿ, ಮಾಂತ್ರಿಕನಾಗಿ, ಶೌರಿಯಾಗಿ, ಮೇಧಾವಿಯಾಗಿ, ನ್ಯಾಯವಾದಿಯಾಗಿ ಎಲ್ಲಾ ವರ್ಗವನ್ನು ತನ್ನ ವಾಕ್‌ಚಾತುರ್ಯ, ನಡಾವಳಿ ಅದಕ್ಕಿಂತಲೂ ಪ್ರಮುಖವಾಗಿ ಜನಾಂಗೋದ್ಧಾರಕನಾಗಿ ಮೈದಳೆದ ಬಬ್ಬುವಿನ ಪ್ರತಾಪಗಳನ್ನು ಸಹಿಸದೆ ಮೇಲ್ವರ್ಗ ವಸಾಹತುಶಾಹಿಗಳು ಬಬ್ಬುವನ್ನು ಕೊಲೆ ಮಾಡುವ ಷಡ್ಯಂತ್ರವನ್ನು ರಚಿಸಿ 'ಮಾಯಕ'ದ ಬಣ್ಣ ಬಳಿದಿರಬಹುದು.

ಹುಟ್ಟಿದ ಪ್ರತಿಯೊಂದು ವ್ಯಕ್ತಿಯೂ ಕರ್ಮ ಕಾಯಕನಾಗಿರುತ್ತಾನೆ. ದುಷ್ಕೃತ್ಯವೆಸಗಿದ ದಲಿತೇತರ ಜನ ಕಾಲಾನುಕ್ರಮದಲ್ಲಿ ತಾವು ಮಾಡಿದ ಕಾರ್ಯಕ್ಕಾಗಿ ಪರಿತಪಿಸಿ ಭಯಭೀತರಾಗಿ ನಂತರ ಬಬ್ಬುವನ್ನು ಆರಾಧಿಸಿರಬಹುದು. ಬಾವಿ ನೀರಿನ ಕಲ್ಯಾಣಕ್ಕಾಗಿ ಪರೋಕ್ಷವಾಗಿ ಬಬ್ಬುವನ್ನು ಬಾವಿಗೆ ದೂಡಿ ಬಲಿ ಕೊಟ್ಟದ್ದಕ್ಕೆ ಪರಿತಪಿಸಿ, ಬಬ್ಬುವಿನ ಬಗ್ಗೆ ಅನುಕಂಪಕ್ಕೋ, ಆತನ ಪರಾಕ್ರಮದ ಬಗೆಗಿನ ಭಯದಿಂದಲೋ, ಅಭಿಮಾನಕ್ಕೋ, ಕಾಲಾನಂತರ ಬಬ್ಬುವನ್ನು ಆರಾಧಿಸಿರಬಹುದು. ಅವೆಲ್ಲಕ್ಕಿಂತಲೂ ಮಿಗಿಲಾಗಿ ಮುಂದೆ ಎಲ್ಲಿ ಬಬ್ಬು ತಮಗೆ ಕಾಟ ಕೊಟ್ಟು ದಂಡಿಸುವನೋ? ಉಪದ್ರ ಕೊಟ್ಟು ತಮ್ಮ ಬಂಡವಾಳವನ್ನು ಬಯಲಿಗೆಳೆಯುವನೋ? ಎಂಬ ಭಯದಿಂದ ಬಬ್ಬುವನ್ನು ಶಾಂತಗೊಳಿಸುವ ಕಾರಣದಿಂದ ದೈವದ ರೂಪದಲ್ಲಿ ಕೋಟೆ ಬಬ್ಬುಸ್ವಾಮಿಯನ್ನು ಆರಾಧನೆಗೆ ಒಳಪಡಿಸಿರಲೂಬಹುದು.

## ಸಿರಿಗಿಂಡೆ ಹಾಗೂ ಬಬ್ಬುವಿನ ಸಂಬಂಧ:

ಸಿರಿಗಿಂಡೆಗೆ ಮಕ್ಕಳಿಲ್ಲದ ಕೊರಗನ್ನು ನೀಗಿಸಿದ ಮಗು ಬಬ್ಬುಸ್ವಾಮಿ. ಸಿರಿಗಿಂಡೆ ಮತ್ತು ಬಬ್ಬುವಿನ ಸಂಬಂಧ ತಾಯಿ–ಮಗನ ಸಂಬಂಧವಾಗಿದೆ. 'ಹಸಿವು' ಎಂದು ಬಬ್ಬು ಕೋಡಿಕೊಂಡಾಲಕ್ಕೆ ಬಂದಾಗಲೆಲ್ಲ ಕಂಚಿನ ಲೋಟದ ಪೂರ್ತಿ ಮನೆಯ ದನ ಕಪಿಲೆಯಿಂದ ಕರೆದ ಗಟ್ಟಿ ಹಾಲನ್ನು ಹೊಟ್ಟೆ ತುಂಬಾ ಕೊಡುತ್ತಿದ್ದರು. ಸಿರಿಗೊಂಡೆಯನ್ನು ತನ್ನ 'ಉಳ್ಳಾಲ್ತಿ' ಎಂದೇ

ಬಬ್ಬು ಸಂಬೋಧಿಸುತ್ತಿದ್ದುದು, ಸಿರಿಗಿಂಡೆಗೆ ಬಬ್ಬು ನೀಡಿರುವ ಸ್ಥಾನಮಾನವನ್ನು ತಿಳಿಸುತ್ತದೆ. ಬಬ್ಬು ಸಿರಿಗೊಂಡೆಯನ್ನು ಬಾಲ್ಯದಲ್ಲೇ ತನ್ನ ತಾಯಿಯನ್ನಾಗಿ ಸ್ವೀಕರಿಸಿರುತ್ತಾನೆ.

ಒಮ್ಮೆ ಬಬ್ಬು ಹಸಿವೆ ಎಂದು ಕೋಡಿಕೊಂಡಾಲಕ್ಕೆ ಬರುವಾಗ ಒಲೆಯಲ್ಲಿ ಅನ್ನ ಬೇಯುತ್ತಿತ್ತು. ಮಗು ಬಬ್ಬು ಹಸಿವೆಂದು ಹಠಮಾಡಿದಾಗ ಆತನಿಗೆ ಕೊಡಲು ಅಲ್ಲಿ ಏನೂ ಇರುವುದಿಲ್ಲ. ತಕ್ಷಣ ಬಬ್ಬು ಸಿರಿಗೊಂಡೆಯಲ್ಲಿ 'ನಿಮ್ಮ ಎದೆಹಾಲು ನೀಡಿ' ಎನ್ನುತ್ತಾನೆ. ಆಗ ಸಿರಿಗೊಂಡೆ ಸಂತಾನ ಇಲ್ಲದ ನಾನು ಹೇಗೆ ಎದೆ ಹಾಲು ನೀಡಲಿ? ಎಂದು ಬಬ್ಬುವನ್ನೇ ಪ್ರಶ್ನಿಸುತ್ತಾಳೆ. ಬಬ್ಬುವಿನ ಹಠ ಜಾಸ್ತಿಯಾದಾಗ ತನ್ನ ಎದೆಹಾಲನ್ನು ನೀಡುತ್ತಾಳೆ. ಬಬ್ಬುಸ್ವಾಮಿ ತನ್ನ ಕಾರ್ಣಿಕ ಶಕ್ತಿಯಿಂದ ಬಂಜೆಯಾದ ಸಿರಿಗಿಂಡೆಯ ಎದೆಹಾಲನ್ನು ಸ್ವೀಕಾರ ಮಾಡುತ್ತಾನೆ. 'ಮಕ್ಕಳಿಲ್ಲದೆಯೇ ಎದೆ ಹಾಲನ್ನು ನೀಡಿದೆ' ಎಂದು ಸಂತೋಷಪಟ್ಟ ಸಿರಿಗಿಂಡೆ, ತನ್ನ ಬಂಜೆತನವನ್ನು ನೀಗಿಸಿದ ಬಬ್ಬುವನ್ನು ಎದೆಗಪ್ಪಿ ಮಗನೆಂದೇ ಮುದ್ದಿಸುತ್ತಾಳೆ. "ನೀನು ಮುಂಡಾಳರ ಮಗುವಾದರೂ ನಾನು ನಿನಗೆ ಎದೆಹಾಲು ಉಣಿಸಿರುವುದರಿಂದ ನೀನು ಇಂದಿನಿಂದ ನನ್ನ ಮಗ" ಎಂಬುದಾಗಿ ಸಿರಿಗಿಂಡೆ ಬಬ್ಬುವನ್ನು ಆಲಂಗಿಸಿ ಮಗನೆಂದು ಸ್ವೀಕರಿಸುತ್ತಾಳೆ, ಬಬ್ಬುವೂ ಸಿರಿಗಿಂಡೆಯನ್ನು ಮನಪೂರ್ವಕವಾಗಿ ತಾಯಿಯೆಂದು ಸ್ವೀಕರಿಸುತ್ತಾನೆ.

ಇನ್ನೊಂದೆಡೆ ಬಾವಿಯ ಸೆಲೆ ತೋರಿಸುವ ಸಂದರ್ಭದಲ್ಲಿ ಸಿರಿಗಿಂಡೆಗೆ ಹಾಲು ನೀಡಿ ಬೆಳೆಸಿದ ಮಗು ಬಬ್ಬುವನ್ನು ಬಿಟ್ಟುಕೊಡುವ ಸಮಯ ಒದಗುವುದು.'ಸಿರಿಗಿಂಡೆ ಹಾಗೂ ಕೊಡಂಗೆ ಬನ್ನಾರರು ಸವರ್ಣೀಯರ ಈ ಪಂಥವನ್ನು ಒಪ್ಪಿಕೊಳ್ಳಬೇಡ, ಇಲ್ಲೇನೋ ಷಡ್ಯಂತ್ರವಿದೆ' ಎಂದು ಎಷ್ಟು ಬಾರಿ ಬಬ್ಬುವಿಗೆ ಹೇಳಿದರೂ, ಬಬ್ಬು ಕೇಳುವುದಿಲ್ಲ. ಬಬ್ಬುವಿಗೆ ತನ್ನ ಮಹಿಮೆಯನ್ನು ಆ ಜನಕ್ಕೆ ತೋರಿಸಿಕೊಡುವುದು ಹಾಗೂ ತಾನು ಮಾನ-ಮರ್ಯಾದೆಗೆ ಬೆಲೆ ಕೊಡುವವ ಎಂಬುದನ್ನು ಸಾಬೀತುಪಡಿಸುವುದು ಈ ಪಂಥ ಉದ್ದೇಶವಾಗಿರುತ್ತದೆ. ಯಾಕೆಂದರೆ ಬಬ್ಬುಸ್ವಾಮಿ ಇತರರ ವಸ್ತುಗಳಿಗೆ ಆಸೆ ಪಡುವ ದೈವವೂ ಅಲ್ಲ, ಅಹಂಕಾರಿ ದೈವವೂ ಅಲ್ಲ. ಗೌರವ ಕೊಟ್ಟು ಗೌರವವನ್ನು ಪಡೆಯುವ ದೈವವಾಗಿದೆ. ತನ್ನ ಉಳ್ಳಾಯ ಹಾಗೂ ಉಳ್ಳಾಲ್ತಿಯನ್ನು ಬಬ್ಬು ನೋಡಿದ ರೀತಿನೀತಿಗಳೇ ಇದಕ್ಕೆ ಸಾಕ್ಷಿಯಾಗಿದೆ. ಇವತ್ತಿಗೂ ಕೋಲದ ಸಂದರ್ಭದಲ್ಲಿ ಬೂಳ್ಯ ಹಿಡಿಯುವ ಭಕ್ತನನ್ನು, ಬಬ್ಬು ಸಂಭೋದಿಸುವುದು 'ಎನ್ನ ಉಳ್ಳಾಯ', 'ಎನ್ನ ಉಳ್ಳಾಲ್ತಿ' ಎಂಬ ಪದಗಳಿಂದ ಎಂಬುದನ್ನು ನಾವಿಲ್ಲಿ ಮರೆಯುವಂತಿಲ್ಲ.

ಇಲ್ಲಿ ತಾವು ಸಲಹಿದ ಮಗುವನ್ನು ಸಾವಿನ ದವಡೆಗೆ ದೂಡುವ ಸಮಯ. ಸಿರಿಗಿಂಡೆ ಹಾಗೂ ಕೊಡಂಗೆ ಬನ್ನಾರರಿಗೆ ಬರುವುದು ಅವರಿಗೆ ಬಹಳ ನೋವಿನ ವಿಷಯ. ಬುದ್ಧಿವಾದ ಹೇಳಿದರೂ ಕೇಳದ ಬಬ್ಬುವನ್ನು ಕಂಡು ಭಯಭೀತರಾಗಿ, ಇನ್ನೆಲ್ಲಿ ತಮ್ಮಿಂದ ಶಾಶ್ವತವಾಗಿ ದೂರವಾಗುತ್ತಾನೋ ಎಂದು ಚಿಂತಿಸಿ ಸಿರಿಗಿಂಡೆ ಮತ್ತು ಬನ್ನಾರರು ಜೋರಾಗಿ ಕಣ್ಣೀರು ಸುರಿಸುತ್ತಾರೆ. ತಾನು ಕೋಡಿಕೊಂಡಾಲಕ್ಕೆ ಬೆನ್ನು ಹಾಕಿ ಹೋದರೆ ವಾಪಸ್ಸು ಬರುವುದಿಲ್ಲವೆಂಬುದೂ ಮಾಯಕಾರ ಬಬ್ಬುವಿಗೆ ತಿಳಿದಿದೆ. ತಕ್ಷಣ ಕಾರ್ಯಪ್ರವೃತ್ತನಾದ ಬಬ್ಬು

ಅವರಿಬ್ಬರನ್ನು ಎಡಬಲಕ್ಕೆ ನಿಲ್ಲಿಸಿ ಅವರ ಕೈಯಿಂದ ಹಾಲು ಸೇವಿಸುತ್ತಾನೆ. ದು:ಖತೃಪ್ತರಾದ ಅವರಿಗೆ ಸಾಂತ್ವಾನಿಸುತ್ತಾ 'ನಾನು ತಿರುಗಿ ಬಂದ್ರೆ ಹಾಲು ನೀಡಿ, ಬಾರದಿದ್ರೆ ನನಗೆ ಒಂದು ಗಿಂಡೆ (ತಂಬಿಗೆ) ನೀರಿಟ್ಟು ಕಾಡು ಹೂವನ್ನು (ಕಾಟು) ಇಡಿ. ನಿಮ್ಮ ಮನೆಯನ್ನು ಬೆಳಗಿಸುವೆನು' (ನನದುಂಬುಗು ಯಾನ್ ಪಿರ ಬತ್ತ್‌ಂಡ ಎಂಕ್ ಪೇರ್ ಕೊರ್ಲೆ, ಬತ್ತಿಜ್ಜಂಡ ಒಂಜಿ ಗಿಂಡೆ ನೀರ್ ದೀದ್ ಕಾಟ್ ಪೂ ದೀಲೆ, ನಿಕ್ಲೆನ ಚಾವಡಿನ್ ಬೆಳಗಾವೆ) ಎಂದು ಕೊಂಡಾಲಕ್ಕೆ ಬೆನ್ನು ಹಾಕಿ ಹೊರಡುತ್ತಾನೆ.

ಬಬ್ಬುವನ್ನು ಹೆತ್ತಾಗಲೇ ಆತನ ತಂದೆ–ತಾಯಿ ಮಾಯಕರಾಗುತ್ತಾರೆ. ಕೋಡಿಕೊಂಡಾಲದ ಕೊಡಂಗೆ ಬನ್ನಾರರು ಸಮಾಜವನ್ನು ಎದುರು ಹಾಕಿಕೊಂಡು ಆ ಮಗುವನ್ನು ಸಲಹುತ್ತಾರೆ. ಮಗುವಿಗೆ ಒಂದು ವರ್ಷ ತುಂಬುವಾಗ ಬಬ್ಬುವಿನ ಎರಡೂ ಕಿವಿಗಳಿಗೂ ಬಂಗಾರದ ಆಭರಣ (ಕೊಡಂಗೆ) ವನ್ನು ಹಾಕುತ್ತಾರೆ. ಮುಂದೆ ಬೆಳೆಯುತ್ತಾ ಬಬ್ಬು ತನ್ನನ್ನು ಪ್ರೀತಿಯಿಂದ ಸಾಕಿರುವ ತಂದೆಯ ಸ್ಥಾನದಲ್ಲಿರುವ ಕೊಡಂಗೆ ಬನ್ನಾರರಿಗೆ ಒಂದು ಹೊಸ ಹೆಸರನ್ನೇ ನೀಡುತ್ತಾನೆ. **ಕೊಡಂಗೆ ಬನ್ನಾರರ** ಮೂಲ ಹೆಸರು **ಮೋಹನ ಶೆಟ್ಟಿ.** ಮಗು ಬಬ್ಬು ತನ್ನ ಎರಡೂ ಕಿವಿಗೆ ಕೊಡಂಗೆ (ಕಿವಿಯೋಲೆ) ಹಾಕಿ ಗೌರವಿಸಿದ್ದಕ್ಕೆ ಬನ್ನಾರರಿಗೆ **'ಬಂಗಾರ್'** ಎಂಬುದಾಗಿ ಕರೆದ ('ಕೊಡಂಗೆ' ಪಾಡಿನ 'ಬಂಗಾರ್' ಪನ್ಪೆ). ತನ್ನ ಉಳ್ಳಾಯನನ್ನು 'ಕೊಡಂಗೆ ಬಂಗಾರ್' ಎಂದು ಕರೆದು ಅವರನ್ನು 'ಬಂಗಾರದ ಮನುಷ್ಯ', ದೇವತಾ ಮನುಷ್ಯನೆಂಬುದಾಗಿ ಬಬ್ಬು ಗೌರವಿಸುತ್ತಾನೆ. ಕಾಲಕ್ರಮೇಣ ಮೌಖಿಕ ಪರಂಪರೆಯೊಳಗೆ **'ಕೊಡಂಗೆ ಬಂಗಾರ್'**, ಮಾಯವಾಗಿ **'ಕೊಡಂಗೆ ಬನ್ನಾರ್'** ಎಂದಾಯಿತು. ತನ್ನನ್ನು ಸಲಹಿದ ತಾಯಿ **ಸಿರಿಗಿಂಡೆಯ** ಮೂಲ ಹೆಸರು **'ಸೀತಮ್ಮ'**. ಕಂಚಿನ ಗಿಂಡೆ (ಲೋಟ)ದಲ್ಲಿ ಕಪಿಲೆ ದನದ ಹಾಲನ್ನು ಸದಾ ನೀಡಿ ಬಬ್ಬುವಿನ ಹಸಿವನ್ನು ನೀಗಿಸಿರುವ ಆ ಮಹಾತಾಯಿಯನ್ನು ಬಾಲಕ ಬಬ್ಬು **ಸೀತಮ್ಮ** ಎಂದು ಕರೆಯದೆ, **'ಸಿರಿಗಿಂಡೆ' ಉಳ್ಳಾಲ್ತಿ** ಎಂದು ಕರೆದು ಗೌರವಿಸಿದನು. 'ಸಿರಿ' ಎಂದರೆ ಕಂಚು 'ಸಂಪತ್ತು' ಮುಂತಾದ ಅರ್ಥಗಳಿವೆ. 'ಸಿರಿಗಿಂಡೆ' ಎಂದರೆ ಕಂಚಿನ ಲೋಟದಲ್ಲಿ ಹಾಲು ನೀಡುತ್ತಿದ್ದ ಉಳ್ಳಾಲ್ತಿ ಎಂದರ್ಥ. ಅಂದಿನಿಂದ 'ಸೀತಮ್ಮ' ಮಾಯವಾಗಿ **'ಸಿರಿಗಿಂಡೆ'** ಎಂಬ ಹೆಸರಿನಿಂದಲೇ ಆಕೆ ಹೆಸರುವಾಸಿಯಾದರು. ಕೊಡಂಗೆ ಬನ್ನಾರರು ಬಬ್ಬುವಿಗೆ ಬಂಗಾರು ಆಗಿ, ಯಜಮಾನನೂ ಆಗಿ, ತಂದೆಯೂ ಆಗಿ ಕಂಡರು. ಸಿರಿಗಿಂಡೆ ಬಬ್ಬುವಿಗೆ ಸಿರಿಯೂ (ಗುಣಗಳ ಸಿರಿವಂತಿಕೆಯಗಣಿಯಾಗಿ) ಆಗಿ, ಯಜಮಾನ್ತಿಯೂ ಆಗಿ, ತಾಯಿಯೂ ಆದರು.

ಮುಂಡಾಳ ಜನಾಂಗದ ದೈವರಾಜ ಬಬ್ಬುವಿಗೂ, ಪುರಾಣದ ಶ್ರೀಕೃಷ್ಣನಿಗೂ ಬಹಳಷ್ಟು ಹೋಲಿಕೆಗಳಿವೆ. ಬಬ್ಬುವಿನ ಜನನ **ಕಚ್ಚೂರು,** ಬೆಳೆದದ್ದು **ಕೋಡಿಕೊಂಡಾಲ.** ಬಬ್ಬುವಿನ ಹೆತ್ತಬ್ಬೆ **ಕಚ್ಚೂರ ಮಾಲ್ದಿದೇವಿ,** ಸಾಕಿ ಸಲಹಿದ್ದು **ಸಿರಿಗಿಂಡೆ.** ಕೃಷ್ಣನ ಜನನ **ಮಧುರಾ (ಕಂಸನ ಕಾರಾಗ್ರಹ),** ಬೆಳೆದದ್ದು **ದ್ವಾರಕದ ನಂದಗೋಕುಲದಲ್ಲಿ.** ಕೃಷ್ಣನ ಹೆತ್ತ ತಾಯಿ **ದೇವಕಿ,** ಸಾಕುತಾಯಿ **ಯಶೋಧೆ.** ಅಂದರೆ ಮುಂಡಾಳ ಜನಾಂಗದ ಉದ್ದಾರಕ್ಕಾಗಿ ಜನ್ಮ ತಳೆದ ಬಬ್ಬು ಆದಿಶೇಷ, ಕೃಷ್ಣ, ವಿಷ್ಣು, ಶಿವನ ಅವತಾರವಾಗಿದ್ದಾನೆ. ಏಕೆಂದರೆ ಬಬ್ಬು ಮೂಲದಲ್ಲಿ ಮುಂಡಾಳರಿಗೆ ಒಲಿದದ್ದು ಕಂಬೆರ್ಲು

(ನಾಗದೇವ) ರೂಪದಲ್ಲಿ. ಈಗಲೂ ಸುರತ್ಕಲ್‌ನಿಂದ ಆಚೆಗಿರುವ ಬಬ್ಬುಸ್ವಾಮಿ ದೈವಸ್ಥಾನ **'ಕಂಬೆರ್ಲು'** ಆಗಿಯೇ ಬಬ್ಬು ಪ್ರಸಿದ್ಧಿ ಪಡೆದಿದ್ದಾನೆ.

ಬಬ್ಬು ದಲಿತರ ದೈವವಾಗಿರುವ ಕಾರಣ ದಲಿತೇತರ ದೈವ ಬಬ್ಬರ್ಯ, ಬಬ್ಬುವನ್ನು ಶೋಷಿಸಿ, ಅವನು ತನ್ನ ನಿಜರೂಪ ತೋರಿದಾಗ ಶರಣಾಗತವಾಯಿತು. ಬಬ್ಬು ಮುಂಡಾಳರ ದೈವವಾಗಿ ಬರಲು ಇದೂ ಒಂದು ಕಾರಣವಾಗಿರಬಹುದು. ಲಿಂಗಾಯಿತರು ಕೋಟಿಲಿಂಗದಲ್ಲಿ ಮೀನು ಮಾಂಸ ತಿಂದು ಅಶುದ್ಧರಾದಾಗ, ಮುಂದೆ ಇವರನ್ನು ಸವರ್ಣೀಯರು ಶೋಷಿಸುತ್ತಾರೆ ಎಂಬ ವಿಚಾರ ಬಬ್ಬುವಿಗೆ ಮಾಯಶಕ್ತಿಯಿಂದ ತಿಳಿದಿರುವುದರಿಂದ ಶೋಷಣೆ ನೀಡುವ ಈ ಜನಾಂಗವನ್ನು ಶರಣಾಗತಗೊಳಿಸಿ, ನೇಮೋತ್ಸವದ ಸಂದರ್ಭ ಮುಂಡಾಳರಿಂದಲೇ ತಲೆತಗ್ಗಿಸಿ ಭಯಭಕ್ತಿಯಿಂದ ಪ್ರಸಾದ ಸ್ವೀಕರಿಸಬೇಕೆಂಬ ಉದ್ದೇಶವೂ ಬಬ್ಬುವಿನ ಜನನಕ್ಕೆ ಕಾರಣವಾಗಿರಬಹುದು. ಬಬ್ಬರ್ಯನ ಸಂದರ್ಭದಲ್ಲಂತೂ ಇದು ಸಾಬೀತಾಗಿದೆ.

ಸವರ್ಣೀಯರು ದಲಿತರನ್ನು ಹೇಗೆ ತಮ್ಮ ಕಾರ್ಯಕ್ಕೆ ಬಳಸಿಕೊಳ್ಳುತ್ತಿದ್ದರೆಂಬುದಕ್ಕೆ ನಿದರ್ಶನ ಬಬ್ಬರ್ಯನಿಂದ ತೀಟೆಗೊಳಪಟ್ಟ ರಾಜನ್ ದೈವಗಳು ಸಾಕ್ಷಿ. ಅವರು ಬಬ್ಬುವಿಗೆ ನೀಡುವ ಕಾಣಿಕೆಗಳನ್ನೇ ಗಮನಿಸಿ. ಒಳ್ಳೆಯ ಬೆಲೆ ಬಾಳುವಂತದ್ದೆಲ್ಲ ಸವರ್ಣೀಯರಿಗೆ, ಬೇಡವೆಂದು ಬಿಸಾಡುವ ವಸ್ತುಗಳೆಲ್ಲ, ಬೆಲೆ ಇಲ್ಲದ ವಸ್ತುಗಳೆಲ್ಲ ದಲಿತರಿಗೆ. ಮುಂದೆ ವಚನ ಭ್ರಷ್ಟರಾಗುತ್ತಾರೆ ಈ ರಾಜನ್ ದೈವಗಳು.

## ಇತರ ದೈವಗಳ ಜೊತೆಗೆ ಬಬ್ಬುವಿನ ಸಂಬಂಧ:

ಬಬ್ಬುಬಾರಗ ಮಾನವ ಜನ್ಮವನ್ನು ಕಳೆದು ದೈವಸ್ವರೂಪ ಪಡೆದದ್ದು **'ದೊಡ್ಡಗುಡ್ಡೆ'** ಯಲ್ಲಿ. ಇಲ್ಲಿಯ ಜೋಡುಕಟ್ಟೆಯಲ್ಲಿ ಪವಿತ್ರವಾದ ಪವಾಡಗಳನ್ನು ಬಬ್ಬುಸ್ವಾಮಿ ತೋರಿಸಿ ತನ್ನ ಜನರಿಂದ ಪೂಜೆಗೊಳಗಾಗುತ್ತಾನೆ. ಇದು ಪವಿತ್ರ ಸ್ಥಳ. ಮುಂದೆ ಮುಂಡಾಳ ಜನಾಂಗದವರಿಂದ ತಮ್ಮ 367 ಗ್ರಾಮದ ಮುಖಂಡರನ್ನು ಸಭೆ ಸೇರಿಸಿ, ನ್ಯಾಯ ತೀರ್ಮಾನ ಮಾಡಿಸಿ, ಜಾತಿಯ ನೀತಿ ಕಾಪಾಡುವ ಪುಣ್ಯಕ್ಷೇತ್ರವೆಂಬ ಹೆಗ್ಗಳಿಕೆ ಪಡೆದಿದೆ ಈ ಸ್ಥಳ.

- **ಬಬ್ಬುಸ್ವಾಮಿ ಮತ್ತು ಜುಮಾದಿ (ಧೂಮಾವತಿ) ದೈವಗಳ ಸಂಬಂಧ** ಅನ್ಯೋನ್ಯವಾದದ್ದು. ಬಬ್ಬುಸ್ವಾಮಿ ಸೌಮ್ಯಮೂರ್ತಿಯಾದರೆ, ಜುಮಾದಿ ಅತಿ ಭಯಂಕರ ಸ್ವಭಾವದ್ದು. ವೈಕುಂಠದಲ್ಲಿಯ ನಾರಾಯಣ ದೇವರ ಸೃಷ್ಟಿ ಜುಮಾದಿ. ಅಲ್ಲಿ ನಾರಾಯಣ ಸ್ವಾಮಿ ಆಕೆಯ ಹಸಿವನ್ನು ನೀಗಿಸಲಾರದೆ, ಭೂಲೋಕಕ್ಕೆ ಹೋಗುವಂತೆ ಆಜ್ಞಾಪಿಸುತ್ತಾರೆ. ಕಾರಣ ನಾರಾಯಣ ದೇವರೇ ನಿರ್ಮಿಸಲ್ಪಟ್ಟ ಏಳು ಕೆರೆಯ ನೀರನ್ನು ಒಂದು ಚೂರೂ ಬಿಡದೆ ಈಂಟಿ ಕುಡಿದು ಬರಿದುಗೊಳಿಸಿದ್ದಳು ಜುಮಾದಿ. ಇತ್ತ ಜೋಡುಕಟ್ಟೆಯಲ್ಲಿ ದನ ಮೇಯಿಸುವಾಗ ಸೀಯಾಳ, ತೆಂಗಿನಕಾಯಿ, ಕಾಸರಕ್ಕ ಮರದ ಚೆಕ್ಕೆಯಿಂದ ತುತ್ತೂರಿಯನ್ನು ತಯಾರಿಸಿ, ಏಳು ಜನ ಬಾರಿಸುವ ಸಪ್ತ ಸ್ವರಗಳನ್ನು ಬಬ್ಬು ಒಬ್ಬನೇ ಮೀಟುತ್ತಾನೆ. ಆ

ಸಪ್ತಸ್ವರದ ಮೋಹಕ್ಕೊಳಪಟ್ಟ ಜುಮಾದಿ ವೈಕುಂಠದಿಂದ ಬಬ್ಬುಸ್ವಾಮಿ ಇರುವಲ್ಲಿಗೆ ಓಡೋಡಿ ಬಂದು ಮಂತ್ರಮುಗ್ಧಳಾಗಿ ಬಬ್ಬುಸ್ವಾಮಿಯನ್ನು ವೀಕ್ಷಿಸುತ್ತಾ ಮೈಮರೆಯುತ್ತಾಳೆ. ಮುಂದೆ ಇವರಿಬ್ಬರಲ್ಲಿ ಪಂಥ ನಡೆದು, ಬಬ್ಬುಸ್ವಾಮಿ ಒಂದು ಎಳನೀರಲ್ಲಿ ಜುಮಾದಿಯನ್ನು ಸೋಲಿಸಿ, ತನ್ನ ಬಲಗೈ ಬಂಟನನ್ನಾಗಿಸುತ್ತಾನೆ. ಮುಂದೆ ಕೋಲ/ನೇಮಗಳ ಸಂದರ್ಭದಲ್ಲಿ ತಾನುಟ್ಟ ಸಿರಿಯನ್ನೇ ಅವನ್ನುಟ್ಟುಕೊಳ್ಳುವಂತೆ ಆಜ್ಞಾಪಿಸಿ, ಜುಮಾದಿ ಸೋತ ದ್ಯೋತಕವಾಗಿ 'ಬದಿಕರ' ದಲ್ಲಿ ಒಂದು ತೆಂಗಿನಕಾಯಿ ಇಡಲೇಬೇಕೆಂದು ಭಕ್ತರಿಗೆ ಸಂದೇಶಿಸುತ್ತಾನೆ. ಉತ್ತರದ ಬಾರ್ಕೂರಿನಿಂದ ದಕ್ಷಿಣದ ನೀಲೇಶ್ವರದವರೆಗೆ ಸ್ಥಾಪಿತವಾಗಿ ಆರಾಧನೆಗೊಳಪಡುವ ಹೆಚ್ಚಿನ ಬಬ್ಬುಸ್ವಾಮಿ ದೈವಸ್ಥಾನಗಳಲ್ಲಿ ಜುಮಾದಿಯನ್ನು ಬಬ್ಬುಸ್ವಾಮಿಯ ಎಡಭಾಗದಲ್ಲಿ ಕಲ್ಲು ಹಾಕಿ ಭಕ್ತರು ನಂಬುವುದನ್ನು ಕಾಣುತ್ತೇವೆ.

- **ಕೋಟೆ ಶ್ರೀ ಬಬ್ಬುಸ್ವಾಮಿಯ ನಂಟು ಬಬ್ಬರ್ಯನೊಂದಿಗೂ ಇದೆ.** ಅಬ್ಬರದ ಬಬ್ಬರ್ಯನ ಅಹಂಕಾರವನ್ನಿಳಿಸಿದವ ಬಬ್ಬುಸ್ವಾಮಿ ಪವಿತ್ರ ಗಂಗೆ ತೀರ್ಥಸ್ನಾನ ಮುಗಿಸಿಕೊಂಡು ಸಾವಿರದೊಂದು ದೈವಗಳು ಘಟ್ಟ ಹತ್ತಿ ಇಳಿದು ಬರುವಾಗ, ದುರ್ಗಕೋಟೆಯ ಸಮೀಪ ಬಬ್ಬರಿಯ ತನ್ನ ಒಂದು ಕಾಲನ್ನು ಘಟ್ಟಕ್ಕೂ, ಇನ್ನೊಂದು ಕಾಲನ್ನು ಸಮುದ್ರಕ್ಕೂ ಊರಿರುತ್ತಾ, ಜಾರಂದಾಯ, ಮೈಸಂದಾಯ, ಒಡಿಲ್ತ್ತಾಯ, ಸಾವಿರಾರು ಜುಮಾದಿ, ಪಂಜುರ್ಲಿ, ಕೋಟಿ ಚೆನ್ನಯ ದೈವಗಳಿಗೆ ಮುಂದೆ ಹೋಗಲು ದಾರಿ ಕೊಡದೆ ಅವರನ್ನು ಹಿಂಸಿಸುತ್ತಾನೆ. ಆಗ ದೈವಗಳೆಲ್ಲ ಸೌಮ್ಯ ಮೂರ್ತಿ ಕೋಟೆದ ಬಬ್ಬುಸ್ವಾಮಿಯಲ್ಲಿ 'ತಮ್ಮನ್ನು ಉಭಯಸಂಕಟದಿಂದ ಪಾರು ಮಾಡಬೇಕೆಂದು' ಬೇಡುತ್ತಾರೆ.

ಆಗ ಶ್ರೀ ಬಬ್ಬುಸ್ವಾಮಿ ಬಬ್ಬರ್ಯನನ್ನು ಭೇಟಿಯಾಗಿ ಸಮಾಧಾನವಾಗಿ, ತಾಳ್ಮೆಯಿಂದ ಮೂರು ಬಾರಿ ದಾರಿ ಬಿಟ್ಟುಕೊಡಲು ವಿಜ್ಞಾಪಿಸುತ್ತಾನೆ. ಅಹಂಕಾರವೇ ಮೈವೆತ್ತ ಬಬ್ಬರ್ಯ, ಬಬ್ಬುಸ್ವಾಮಿಯನ್ನು ತುಚ್ಛ ಮಾತುಗಳಿಂದ ಹೀಯಾಳಿಸುತ್ತಾನೆ. ಆಗ ಬಬ್ಬುಸ್ವಾಮಿ ತನ್ನ ವಿಶ್ವರೂಪವಾದ ಜಟರಾಯ, ಕಾಳಭೈರವ ಕೊನೆಗೆ ಘೋರ ರೂಪವಾದ ಕೆಂಚರಾಯನಾಗಿ ಬಬ್ಬರ್ಯನ ಮುಂದೆ ಕಾಣಿಸಿಕೊಳ್ಳುತ್ತಾನೆ. ಒಂದು ಕೈಯಲ್ಲಿರುವ ತನ್ನ ಗುಬ್ಬಿನ ಅಡ್ಡಾಣದಿಂದ ಬಬ್ಬರ್ಯನ ಒಂದು ಕಾಲನ್ನು ಹಿಡಿದು, ಇನ್ನೊಂದು ಕೈಯಲ್ಲಿ ವಜ್ರಾಯುಧವನ್ನು ಝಳಪಿಸುತ್ತಾ ಬಂದು ಬಬ್ಬರ್ಯನ ಇನ್ನೊಂದು ಕಾಲನ್ನು ತುಂಡರಿಸಿ, ಆತನನ್ನು ನೆಲಕ್ಕುರುಳಿಸುತ್ತಾನೆ. ಘೋರ ರೂಪ ತಾಳಿದ ಬಬ್ಬುಸ್ವಾಮಿಯನ್ನು ಉಳಿದ ದೈವಗಳು ಶಾಂತಪಡಿಸುತ್ತವೆ. ನೆಲಕ್ಕುರುಳಿದ ಬಬ್ಬರ್ಯ ಬಬ್ಬುಸ್ವಾಮಿಯಲ್ಲಿ ಕ್ಷಮೆ ಯಾಚಿಸಿ, ಪರಿಹಾರ ಕೇಳಿದಾಗ "ಮುಲ್ಕಿ ಮುನ್ನೂರು ಒಕ್ಕಲಿನ ಮರಕಾಲ ಗುರಿಕಾರ ಏಳು ರಾತ್ರಿ, ಎಂಟು ಹಗಲು ಬಲೆ (ಅಸರೆ) ಎಣೆಯಲೆತ್ನಿಸಿ ಚಿಂತಾಕ್ರಾಂತನಾಗಿದ್ದಾನೆ. ನೀನು ಆತನಲ್ಲಿ ಹೋಗಿ, ಆತನನ್ನು ಮೂರು ಬಾರಿ ಕರೆದು, "ಅಡ್ಡ ನೂಲನ್ನು ಬಬ್ಬುವಿನ ಹೆಸರಿನಲ್ಲೂ, ಉದ್ದನೂಲ (ನೀಟ)ನ್ನು ಬಬ್ಬರಿಯ ಹೆಸರಿನಲ್ಲೂ ಹಾಕಲು ತಿಳಿಸು. ಬಲೆ ಕಟ್ಟುವ ಕಾರ್ಯ ಕೈಗೂಡಿ ಬಂದರೆ, ಕದಿಕೆ ಸಾವಿರ ಮನೆಯವರನ್ನು ಒಟ್ಟು ಸೇರಿಸಿ ನಿನ್ನನ್ನು

ನಂಬಬೇಕೆಂದು ಹೇಳು. ಅವರಿಂದ ಸೇವೆಗೈಯಲ್ಪಡುವ ನೀನು 'ಮರಕಾಲ ಬಬ್ಬರಿ'ಎಂಬ ಹೆಸರಿನಿಂದ ಪ್ರಖ್ಯಾತನಾಗು" ಎಂದು ಹರಸಿ, ಬಬ್ಬರ್ಯನಿಗೆ ವರವನ್ನೀಡುತ್ತಾನೆ. ಹೀಗೆ ಬಬ್ಬು ಬಬ್ಬರ್ಯನಲ್ಲಿ ಸೋದರ ಸಂಬಂಧವನ್ನು ಬೆಳೆಸುತ್ತಾನೆ.

- ಕೊಡಂಗೆ ಬನ್ನಾರರು 'ಅರ್ಕಲ್ಲಗುಡ್ಡೆ ಬೊರ್ಗಲ್ಲ ಪದವಿ'ಗೆ ದನ ಮೇಯಿಸಲು ಬಬ್ಬುವಿಗೆ ಅಪ್ಪಣೆ ಕೊಟ್ಟಾಗ ಬಬ್ಬು ಕಪ್ಪು ಬಣ್ಣದ ದನಗಳಿಗೆ ಬಿಳಿ ಬೊಟ್ಟನ್ನಿಡುತ್ತಾನೆ. ಬಿಳಿ ಬಣ್ಣದ ದನಗಳಿಗೆ ಕಪ್ಪು ಬಣ್ಣವನ್ನಿಡುತ್ತಾನೆ. ಹಾಲು ಕರೆಯುವ ಕಪಿಲೆ ಮತ್ತು ಕಪಿಲೆಯ ಕರು ಬನ್ನಾರರಿಗೆ, ಸಿರಿಗಿಂಡೆಗೆ, ಬಬ್ಬುವಿಗೆ ಬಲು ಪ್ರಿಯವಾದ ದನ. ಬಾರಗದ ಮಕ್ಕಳ ಮೋಸದಿಂದ ಕಪಿಲೆಯ ಕರುವನ್ನು ಮೊಸಳೆಯ ಬಾಯಿಗೆ ನೀಡಿಬಲಿ ಕೊಡುತ್ತಾರೆ. ಬಬ್ಬು ಮುಂದೆ ಕರುವನ್ನು ರಕ್ಷಿಸಿ ಮೊಸಳೆ ರೂಪದಲ್ಲಿರುವ ಯಕ್ಷನಿಗೆ ಮೋಕ್ಷ ನೀಡಿ ಆತ **ಕುಕ್ಕುಡೆ**ಯಲ್ಲಿ 'ಸಿರಿ'ಯಾಗಿ ನೆಲೆ ನಿಲ್ಲಲು ಅಪ್ಪಣೆ ನೀಡುತ್ತಾನೆ. ಬಬ್ಬು **ಯಕ್ಷನಿಗೆ** ಮೋಕ್ಷ ನೀಡಿ ಗುರುವೆನಿಸಿಕೊಳ್ಳುತ್ತಾನೆ.
- ಕಂಚಿನಡ್ಕದಲ್ಲಿ ವೈರಿ ವಿಕ್ರಂದರನು ಹಾಗೂ ಬುದ್ದ್ಯಂತ ಮಂತ್ರಿಗಳ ಕುತಂತ್ರಕ್ಕೆ ಸಿಲುಕಿ ಸಾವಿನ ದವಡೆಯಲ್ಲಿರುವ ಬಬ್ಬುವನ್ನು ರಕ್ಷಿಸಿದ **ತನ್ನಿಮಾನಿಗಳಿಗೆ** ಬಬ್ಬುಸ್ವಾಮಿ ಸಹೋದರನಾಗುತ್ತಾನೆ.
- ರಾಜನ್ ದೈವಗಳಾದ ಕೊಡಮಣಿತ್ತಾಯ, ಜಾರಂದಾಯ, ಜುಮಾದಿ-ಬಂಟ, ಕುಕ್ಕಿನತ್ತಾಯ ದೈವಗಳನ್ನು ಬಬ್ಬು 'ಮೋಸವನ್ನು ಮೋಸದಿಂದಲೇ ಸೋಲಿಸಿ' ಕಡೆಂಬಿ ಸ್ಥಾನವನ್ನು ವಶಪಡಿಸಿ, ರಾಜನ್‌ದೈವಗಳಿಗೆ ಸಾರಬಳಿಯಲ್ಲಿ ನೆಲೆ ನಿಲ್ಲಲು ಅಪ್ಪಣೆ ಕೊಡುತ್ತಾನೆ. ಬಬ್ಬುವಿಗೆ **ರಾಜನ್‌ದೈವಗಳ ಜೊತೆ ಸಹೋರತ್ವದ** ಗೆಳೆತನವಿದೆ.
- ಸನ್ಯಾಸಿ ಕಟ್ಟೆಯಲ್ಲಿ ಜಾತಿ ನಿಂದನೆ ಮಾಡಿದ್ದಕ್ಕೆ 1001 ತಪೋನಿರತ **ಸನ್ಯಾಸಿಗಳಿಗೆ** ಶಿಕ್ಷೆಯ ಬದಲಿಗೆ ಮೋಕ್ಷ ಕರುಣಿಸಿ, ಗುರುವಿಗೇ ಗುರುಮಂತ್ರ ಬೋಧಿಸಿದ ಬಬ್ಬುಸ್ವಾಮಿ ಈ ಮೂಲಕ **ಗುರು-ಶಿಷ್ಯರ ಸಂಬಂಧ** ಬೆಳೆಸಿದನು.
- ಪಡುಬಿದ್ರೆಯಲ್ಲಿ ಢಕ್ಕೆ ಬಲಿ ಉತ್ಸವದ ಸೇವೆಯಲ್ಲಿ ಮೈಮರೆತ್ತಿದ್ದ **ಶ್ರೀ ಬ್ರಹ್ಮರು** ಬಬ್ಬುವನ್ನು ಗಮನಿಸದೇ ಇದ್ದಾಗ, ಬ್ರಹ್ಮರ ಗುಡಿಯ ಮಾಡಿನ ಮೇಲೆ ತನ್ನ ಬಲಗಾಲನ್ನು ಇಟ್ಟು ಬೀಳಿಸುತ್ತಾನೆ. ಅತಿಥಿ ಸತ್ಕಾರದಂತಹ ಮಾನವೀಯ ಮೌಲ್ಯಗಳ ಬೆಲೆಯನ್ನು ಶ್ರೀ ಬ್ರಹ್ಮರಿಗೆ ತೋರಿಸಿಕೊಟ್ಟ ಮಾಯಾವೀ ಶಕ್ತಿ ಶ್ರೀ ಬಬ್ಬುಸ್ವಾಮಿ. ಈ ಮೂಲಕ ಶ್ರೀ ಹೆಜಮಾಡಿ ಕಲದಲ್ಲಿ ಶ್ರೀ ಬ್ರಹ್ಮರ ಕಲ್ಲಿನ ಜೊತೆಯಲ್ಲೇ **ಬಂಧುವಂತೆ ತಾನೂ** ಆರಾಧಿಸಲ್ಪಡುತ್ತಾನೆ.

ಹೀಗೆ ಸಾಮಾನ್ಯ ಸ್ವರೂಪಿ ಶ್ರೀ ಭಗವಾನ್ ಬಬ್ಬುಸ್ವಾಮಿ ಹಲವಾರು ದೈವಗಳ ಜೊತೆ ಹಿರಿಯನಾಗಿ, ಮೋಕ್ಷದ ಗುರುವಾಗಿ, ದೂತನಾಗಿ, ಸಹೋದರನಾಗಿ, ಬಂಧುವಾಗಿ ಹೀಗೆ ಹತ್ತು ಹಲವು ರೀತಿಯ ಬಾಂಧವ್ಯವನ್ನು ಬೆಸೆದುಕೊಂಡು, ದೈವಗಳಿಗೆಲ್ಲ ರಾಜನಾಗಿ ದೈವರಾಜ ಕೋಟೆದ ಬಬ್ಬು ಎಂಬ ಹೆಗ್ಗಳಿಕೆಗೆ ಪಾತ್ರನಾದನು. ಮುಂಡಾಳ ಜನಾಂಗದ ತನ್ನ ಜಾತಿ ಬಾಂಧವರಲ್ಲಿ ಈ ಎಲ್ಲಾ ಗುಣಗಳನ್ನು ಬೆಳೆಸಿಕೊಳ್ಳಲು ಪ್ರೇರಣೆ ನೀಡಿದ್ದು ಮಾತ್ರವಲ್ಲ, ಅವರಿಗೆ ಮಾರ್ಗದರ್ಶಕನಾಗಿದ್ದಾನೆ.

## ಭಗವಾನ್ ಶ್ರೀ ಬಬ್ಬುಸ್ವಾಮಿಯ ಬಿರುದಾವಳಿಗಳು:

- ಕೋಡಿಕೊಂಡಾಳದಲ್ಲಿ ಅಂಗಳದಲ್ಲಿ ಚದುರಿಸಿರುವ ಭತ್ತದ ಕಾಳನ್ನು ಕಾಯುತ್ತಾ ಕುಳಿತಿರಬೇಕಾದರೆ ಕಾಗೆ, ಕೋಳಿಗಳು ಹಿಂಡು ಹಿಂಡಾಗಿ ಬಂದು ಹತ್ತದ ಕಾಳುಗಳನ್ನು ತಿನ್ನುತ್ತಿದ್ದವು. ಕೋಪಗೊಂಡ ಮಗು ಬಬ್ಬು ಹಿಡಿಸೂಡಿ ಕಡ್ಡಿಯಿಂದ ಬಿಲ್ಲು ಬಾಣ ತಯಾರಿಸಿ, ಅವುಗಳ ಮೇಲೆ ಪ್ರಯೋಗಿಸಿ ಕೊಲ್ಲುತ್ತಾನೆ. ಹೊರಗಡೆ ಬಂದು ತಾಯಿ ಸಿರಿಗಿಂಡೆ ನೋಡಿ ದಿಗ್ಭ್ರಮೆಗೊಂಡಾಗ, ತಾನೇ ಗೆರಟೆಯಿಂದ ನಿರ್ಮಿಸಿದ ಬಾವಿಯಿಂದ ನೀರನ್ನು ತೆಗೆದು ಮಂತ್ರಿಸಿ ಆ ನೀರನ್ನು ಸತ್ತ ಕಾಗೆ–ಕೋಳಿಗಳ ಮೇಲೆ ಸಿಂಪಡಿಸುತ್ತಾನೆ. ಮಲಗಿ ಎದ್ದಂತೆ ಆ ಪಕ್ಷಿಗಳು ನೆಟ್ಟಗೆ ನಿಲ್ಲುತ್ತದೆ. ಇದನ್ನು ಕಂಡ ಸಿರಿಗಿಂಡೆ ಉಳ್ಳಾಲ್ತಿಗೆ, ನೆರೆದ ಜನರಿಗೆ ಆಶ್ಚರ್ಯವಾಗುತ್ತದೆ. ಅಂದಿನಿಂದ ಬಬ್ಬುಸ್ವಾಮಿ ಕೋಡಿಕೊಂಡಾಳದಲ್ಲಿ **"ಕೋರ್ದಬ್ಬು"** ಎಂಬ ಹೆಸರಿನಿಂದ ಪ್ರಸಿದ್ಧನಾಗುತ್ತಾನೆ.
- ಬಾರಗರ ಮಕ್ಕಳು ಬಬ್ಬುವಿನ ಅನುಪಸ್ಥಿತಿಯಲ್ಲಿ ಹರಿಬ್ರಹ್ಮ ಕೆರೆಗೆ ಕಪಿಲೆಯ ಕರುವನ್ನು ಮೊಸಳೆಯ ಬಾಯಿಗೆ ದೂಡಿದ್ದು ಮಾತ್ರವಲ್ಲ, 12 ಜನ ಬಾರಗರ ಮಕ್ಕಳು ಬಬ್ಬುವಿನ ಕೊಲೆಗೆ ಹುನ್ನಾರು ನಡೆಸುತ್ತಿದ್ದರು. ಬಾರಗದ ಮಕ್ಕಳು ಕಂಗಿನ ಸಲಾಕೆಯಿಂದ ಚೂಪಾದ ಶೂಲಗಳನ್ನು ತಯಾರಿಸಿ ಅದನ್ನು ಹರಿಬ್ರಹ್ಮರ ಕೆರೆಯಲ್ಲಿ ಹೂತು ಬಿಡುತ್ತಾರೆ. ಬಳಿಕ "ಓ ಗೆಳೆಯ ಬಬ್ಬೋ, ನಾವೆಲ್ಲರೂ ಹರಿಬ್ರಹ್ಮ ಕೆರೆಗೆ ಹಾರಿ ಬಿಕ್ಕೆ ತೆಗೆಯೋಣ" ಎನ್ನುತ್ತಾರೆ. ತನ್ನ ಮಾಯಾ ಶಕ್ತಿಯಿಂದ ಇವೆಲ್ಲವನ್ನು ತಿಳಿದುಕೊಂಡ ಬಬ್ಬು "ಪರವಾಗಿಲ್ಲ ನಾವೆಲ್ಲರೂ ಕೈ ಕೈ ಹಿಡಿದುಕೊಂಡು ಜೊತೆಯಾಗಿ ಕೆರೆಗೆ ಹಾರೋಣ" ಎನ್ನುತ್ತಾನೆ. ತಕ್ಷಣ ಆ ಬಾರಗದ ಮಕ್ಕಳ ದೇಹ ಶೂಲಕ್ಕೆ ಸಿಲುಕಿ, ದೇಹ ಗಾಯಗೊಂಡು ರಕ್ತ ಸುರಿಯುತ್ತಿರಲು, ಅವರು ಬಬ್ಬುವಿನಲ್ಲಿ ಪ್ರಾಣ ಭಿಕ್ಷೆ ಕೇಳುತ್ತಾರೆ. ವೈರಿಗಳನ್ನು ಕ್ಷಮಿಸುವ ಕ್ಷಮಾಗುಣಿ ಭಗವಾನ್ ಬಬ್ಬುಸ್ವಾಮಿ, ನಂತರ ಅವರೆಲ್ಲರ ನೋವು, ಗಾಯಗಳನ್ನು ಬಬ್ಬುಸ್ವಾಮಿ ತನ್ನ ಮಂತ್ರ ಶಕ್ತಿಯಿಂದ ಪರಿಹರಿಸುತ್ತಾನೆ. ದ್ವೇಷ, ವೈರತ್ವವನ್ನು ಮರೆತು ಬಾರಗರ ಮಕ್ಕಳು ಅಂದಿನಿಂದ ಬಬ್ಬುವನ್ನು **"ಬಬ್ಬು ಬಾರಗ"** ನೆಂದು ಕರೆದು ಗೌರವಿಸುತ್ತಾರೆ. ಬಾರಗದ ಮಕ್ಕಳನ್ನು ರಕ್ಷಿಸಿ ರಕ್ಷಿಸಿದ ಕಾರಣ ಬಬ್ಬುಸ್ವಾಮಿ 'ಬಾರಗೇಶ್ವರ' ನೆಂಬ ಬಿರುದಿನಿಂದ ಪ್ರಖ್ಯಾತಿಯನ್ನು ಪಡೆದುಕೊಳ್ಳುತ್ತಾನೆ.
- ಕೋಡಿಕೊಂಡಾಳ ಗುತ್ತಿಗೆ ಸಂಬಂಧಿಕರು ಬಂದಾಗ ಶ್ಯಾವಿಗೆ ಒತ್ತುವ ಮಣೆ ಮುರಿದ ಕಾರಣ ತೋಟಿಂಗ ಬ್ರಾಹ್ಮಣರ ಮನೆಯಿಂದ ಮಣೆ ತರುವಂತೆ ಸಿರಿಗಿಂಡೆ ಬಬ್ಬುವಿಗೆ ಹೇಳುತ್ತಾರೆ. ತೋಟಿಂಗ ಬ್ರಾಹ್ಮಣ ಬಬ್ಬುವನ್ನು ಜಾತಿಯ ಹೆಸರಿಂದ ನಿಂದನೆ ಮಾಡುತ್ತಾನೆ. ಕೋಪಗೊಂಡ ಬಬ್ಬು ದರ್ಶನದಲ್ಲೇ ಶ್ಯಾವಿಗೆ ಒತ್ತುವ ಮಣೆಯನ್ನು ತೋಟಿಂಗ ಬ್ರಾಹ್ಮಣನ ಮೂಲಕ ಕೋಡಿಕೊಂಡಾಲಕ್ಕೆ ತನ್ನ ಪವಾಡ ಶಕ್ತಿಯಿಂದ ತರಿಸಿಕೊಳ್ಳುತ್ತಾನೆ. ವಿಷಯ ತಿಳಿದ ಸಿರಿಗಿಂಡೆ ಬಬ್ಬುವನ್ನು ಗದರಿದಾಗ, ತನ್ನ ಮಂತ್ರ ಶಕ್ತಿಯಿಂದ ಮಂತ್ರಿಸಿದ ನೀರನ್ನು ತೋಟಿಂಗ ಬ್ರಾಹ್ಮಣನಿಗೂ, ಹೊಟ್ಟೆ ನೋವಿನಿಂದ ಬಳಲುತ್ತಿರುವ ಆತನ ಪತ್ನಿಗೂ ಸಿಂಪಡಿಸಿ ಅವರ ಸಮಸ್ಯೆಯನ್ನು ಬಗೆಹರಿಸುತ್ತಾನೆ. ಆಗ ಜನ ಬಬ್ಬುವನ್ನು **'ವೈದ್ಯನಾಥ'**

ನೆಂಬ ನಾಮಕರಣದಿಂದ ಕೊಂಡಾಡುತ್ತಾರೆ. ಬಬ್ಬು ತನ್ನ ಬದುಕಿನಲ್ಲಿ ಮಾಡಿದ ಅಸಾಧಾರಣ ಕಾರ್ಯ ಸಾಧನೆಯಿಂದ **'ವೈದ್ಯರಾಜ'** ನೆಂದು ಪ್ರಸಿದ್ಧಿ ಪಡೆದುಕೊಳ್ಳುತ್ತಾನೆ.

- ಸುಮ್ಮನೆ ತಿರುಗಾಡಿ ಕಾಲಕಳೆಯುತ್ತಿದ್ದ ಬಬ್ಬುಸ್ವಾಮಿಗೆ ಸಿರಿಗಿಂಡೆ ಹರಿತವಿಲ್ಲದ ಕೊಡಲಿಯನ್ನಿತ್ತು ಹುಣಸೆ ಮರವನ್ನು ಕಡಿಯಲು ಹೇಳುತ್ತಾರೆ. ಹರಿತವಿಲ್ಲದ ಕೊಡಲಿಯಿಂದ ಗಟ್ಟಿಯಾದ ಹುಣಸೆ ಮರ ಕಡಿಯಲಸಾಧ್ಯ. ಜೀವನವೂ ಈ ಹುಣಸೇ ಮರದಂತೆ ಕಷ್ಟವಾದದ್ದು. ನಾನು ಬಾಳಲ್ಲಿ ತಿಳಿಯಬೇಕಾದುದು ಬಹಳವಿದೆ ಎಂಬುದನ್ನು ತಿಳಿದುಕೊಂಡ ಬಬ್ಬುಸ್ವಾಮಿ ಕೋಡಿ ಕೊಂಡಾಳಕ್ಕೆ ಬೆನ್ನು ಹಾಕಿ ಕಾಯಕಕ್ಕೆ ತೊಡಗುತ್ತಾನೆ. ಬದುಕಿನ ಮರ್ಮವನ್ನು ಮಾತೆ ಸಿರಿಗಿಂಡೆ ಬಬ್ಬುವಿಗೆ ಪರೋಕ್ಷವಾಗಿ ತೋರಿಸಿಕೊಡುತ್ತಾಳೆ. ಶಿಲ್ಪ ಕಲಾ ಚತುರನಾದ ಬಬ್ಬು ಅದ್ಭುತ ಕಲಾಕಾರನಾಗುತ್ತಾನೆ. ಈತನ ಪರಿಸ್ಥಿತಿಯನ್ನು ತಿಳಿದ ಬಾರ್ಕೂರಿನ ಅರಸರು ಬಬ್ಬುವನ್ನು ಕರೆದು ಬಾರ್ಕೂರಿನಲ್ಲಿ ಕೋಟೆ ನಿರ್ಮಿಸಲು ತಿಳಿಸುತ್ತಾರೆ. ಕೇವಲ 22 ದಿನಗಳಲ್ಲಿ ಸುಂದರವಾದ, ಕಲಾತ್ಮಕವಾದ ಕೋಟೆ ತಯಾರಾಗುತ್ತದೆ. ಈ ಮೂಲಕ ಬಬ್ಬು **"ಕೋಟೆದ ಬಬ್ಬು" "ಕೋಡ್ದಬ್ಬು"** ಎಂಬ ಬಿರುದಾವಳಿಗಳನ್ನು ಪಡೆದು ಪ್ರಸಿದ್ಧಿ ಪಡೆಯುತ್ತಾನೆ.
- ಬಬ್ಬುಸ್ವಾಮಿ ಬಾರ್ಕೂರಿನಲ್ಲಿ **'ಬಾಸು ಕುಮಾರ'** (ಬಾಚುಕುಮಾರ) ನೆಂಬ ಹೆಸರಿನಿಂದ ಕರೆಯಲ್ಪಡುತ್ತಾನೆ. ಇದರರ್ಥ 'ಬಡಗು ದಿಕ್ಕಿನಲ್ಲಿರುವ ಹೊಳೆಯುತ್ತಿರುವ ನಕ್ಷತ್ರ' ಎಂದಾಗಿದೆ.
- ನೀಲೇಶ್ವರದಲ್ಲಿ ಬ್ರಾಹ್ಮಣರಿಂದ ನಿತ್ಯ ಪೂಜೆಯನ್ನೂ, ಜೈನರಿಂದ ನಿತ್ಯ ಜಪವನ್ನೂ ಸ್ವೀಕರಿಸಿದ ಬಬ್ಬು **'ನೀಲಕಂಠ'** ದೇವರೆಂದು ಪೂಜಿಸಲ್ಪಡುತ್ತಾನೆ.
- ಕೇರಳದಲ್ಲಿ **'ಮುತ್ತಪ್ಪಸ್ವಾಮಿ'** ಎಂದು ಕರೆಯಿಸಿಕೊಂಡ ಬಬ್ಬು ಅಲ್ಲಿಯೂ ತನ್ನ ಕಾರ್ಣಿಕವನ್ನು ಮೆರೆಯುತ್ತಾನೆ.
- ಶಿರಾಡಿ ಘಾಟಿಯಲ್ಲಿ ಬಬ್ಬು **'ಶಿರಾಡಿ ದೈವ'** ವೆಂದು ಕರೆಯಿಸಿಕೊಳ್ಳುತ್ತಾನೆ.
- ಮೂಡಬಿದ್ರೆಯ ಮಹಮ್ಮಾಯಿ ದೇವಿಯ ಸನ್ನಿದಾನದಲ್ಲಿ 7 ರಾತ್ರಿ, 8 ಹಗಲು ನಡಾವಳಿ ಉತ್ಸವ ನಡೆಯುತ್ತದೆ. ನಡಾವಳಿ ಉತ್ಸವದಲ್ಲಿ ನಿರತಳಾದ ಮಾರಿಯಮ್ಮ ಬಬ್ಬುವನ್ನು ಗಮನಿಸುವುದಿಲ್ಲ. ತಾನು ಬಂದಿರುವ ಸುಳಿವನ್ನು ದೇವಿಗೆ ತಿಳಿಸಬೇಕೆಂದು ರಥೋತ್ಸವದ ಬಲಿ ಸ್ವೀಕರಿಸುತ್ತಿದ್ದ ಮಹಾಮ್ಮಾಯಿಯ ರಥವನ್ನು ಭೂಮಿಯಲ್ಲಿ ಹೂತು ಹೋಗುವಂತೆ ಬಬ್ಬುಸ್ವಾಮಿ ಮಾಡುತ್ತಾನೆ. ಚಿಂತೆಯಲ್ಲಿ ತಲೆತಗ್ಗಿಸಿ ಕುಳಿತ ಮಹಾಮ್ಮಯಿಯ ಎದುರು ಬಂದು ಬಬ್ಬು ನಿಲ್ಲುತ್ತಾನೆ. ಆಗ ದೇವಿಯು 'ನನ್ನ ಹೂವಿನ ದಂಡಿಗೆ ತಲೆ ಕೊಡುವ ನನ್ನ ಪ್ರೀತಿಯ ದೂತನಾದ ಬಬ್ಬು... ನೀನು ಬಂದೆಯಾ?' ಎಂದು ಸಂತೋಷದಿಂದ ಬಬುವನ್ನು ವಿಚಾರಿಸುತ್ತಾಳೆ. ಆಗ ಬಬ್ಬು ಮಹಾಮ್ಮಾಯಿಯ ಹೂವಿನ ದಂಡಿಗೆಯನ್ನು ಮೇಲಕ್ಕೆತ್ತಿ, ತಲೆಕೊಟ್ಟು ಆಡಿಸುತ್ತಾನೆ. ಮಾರಿ ಬಂಡಿಗೆ ಎದೆಕೊಟ್ಟು ಆಡಿಸುತ್ತಾನೆ. ಹೀಗೆ ಬಬ್ಬು **ಮಹಮ್ಮಾಯಿಗೆ ದೂತ**ನಾಗುತ್ತಾನೆ.

- ಮಹಾಮ್ಮಾಯಿ ಬಬ್ಬುವಿಗೆ ಒಂದು ಗಿಂಡೆ ನೀರು, 6 ಮುಡಿ ಕರಿಯ ಕುಡು ಬೀಜಗಳನ್ನು ಕೊಡುತ್ತಾಳೆ. ಬಬ್ಬು ಬೀಜವನ್ನು ಬಯಲಲ್ಲಿ ಬಿತ್ತುತ್ತಾನೆ. ಮಹಾಮ್ಮಾಯಿ 'ಬೊಲ್ಯಕುಡು' ತೆಗೆದು ಕೆಸರಿದ್ದ ಜಾಗದಲ್ಲಿ ಬಿತ್ತುತ್ತಾಳೆ. ಕರಿಯ ಕುಡು ಬೇಗ ಮೊಳಕೆಯೊಡೆಯುತ್ತದೆ. ದೇವಿ ತನ್ನಲ್ಲಿದ್ದ ಗಿಂಡೆಯಲ್ಲಿದ್ದ ನೀರನ್ನು ಚಿಮುಕಿಸಿ ಮೊಳಕೆಯೊಡೆದ ಬೀಜವನ್ನು ನಾಶಪಡಿಸಲು ಪ್ರಯತ್ನಿಸುತ್ತಾಳೆ. ಅದು ಸಾಧ್ಯವಾಗುವುದಿಲ್ಲ, ಆಗ ಬಬ್ಬುವಿನಲ್ಲಿ, 'ಇನ್ನು ಮುಂದೆ ಮಾರಿ ರೋಗವನ್ನು ಬಿತ್ತುವ ಅಧಿಕಾರ ಮಾತ್ರ ನನ್ನದು, ಅದನ್ನು ಗುಣಪಡಿಸುವ ಅಧಿಕಾರ ನಿನ್ನದು' ಎಂದು ವರಕೊಡುತ್ತಾಳೆ ದೇವಿ. ಹೀಗೆ **'ಮಾರಿಗೆ ದೂತನಾಗಿ, ಊರಿಗೆ ದಾತ'ನಾಗುತ್ತಾನೆ. ಗುರು ವೈದ್ಯನಾಥನೆಂಬ'** ಬಿರುದು ಪಡೆದು ಪ್ರಸಿದ್ಧನಾಗುತ್ತಾನೆ.
- ಬಬ್ಬರ್ಯನ ಅಹಂಕಾರವನ್ನು ಮುರಿದು ಕೊಡಮಣಿತ್ತಾಯ, ಜಾರಂದಾಯ, ಮೈಸಂದಾಯ, ಜುಮಾದಿ–ಬಂಟ, ಕುಕ್ಕಿನಂತ್ತಾಯ ಮೊದಲಾದ ರಾಜನ್ ದೈವಗಳಿಗೆ ಗಂಗೆಸ್ನಾನ ಮಾಡಲು ಅನುವು ಮಾಡಿಕೊಟ್ಟು **"ದೈವರಾಜ ಕೋಟೆದ ಬಬ್ಬು"** ಎಂಬ ಹೆಗ್ಗಳಿಕೆಗೆ ಪಾತ್ರನಾಗುತ್ತಾನೆ, ಬಬ್ಬುಸ್ವಾಮಿ.
- ಚಾರ್ಮಾಡಿ ಘಾಟಿ ಸಮೀಪದ ಕಡ್ತಿಕಲ್ಲು ಘಾಟಿಗೆ ಬಬ್ಬುಸ್ವಾಮಿ ಬಂದಾಗ, ಘಾಟಿಯನ್ನು ಹತ್ತಿ ಇಳಿಯಲು ಮೆಟ್ಟಿಲುಗಳಿರಲಿಲ್ಲ, ಘಾಟಿಯಿಂದ ಕೆಳಗಿಳಿಯುವಾಗ ಬಂಡೆ ಕಲ್ಲುಗಳನ್ನು ಕಡಿದು ಮೆಟ್ಟಿಲುಗಳನ್ನು ನಿರ್ಮಿಸಿದ ಬಬ್ಬುಸ್ವಾಮಿ, **'ಕಾಳ ಬೈರವ'** ನೆಂಬ ಹೆಸರಿನಿಂದ ಹೆಸರುವಾಸಿಯಾಗುತ್ತಾನೆ.
- ಬಬ್ಬು ಘಟ್ಟದ ಮೇಲೆ ಕಾಲಭೈರವ ಮತ್ತು ವೀರಭದ್ರ ದೇವರನ್ನು ಭೇಟಿ ಮಾಡಿ, ಅವರ ಅನುಗ್ರಹದಿಂದ **'ಕೇಸರಾಯ–ಕೆಂಚರಾಯ'** ಎಂಬ ಕೀರ್ತಿ ಪಡೆಯುತ್ತಾನೆ.
- ಮುಂದೆ ತೆಂಕಣ ನೀಲೇಶ್ವರಕ್ಕೆ ಬಬ್ಬುಸ್ವಾಮಿ ಪಾದ ಬೆಳಿಸಿ ಅಲ್ಲಿ **ನೀಲಕಂಠೇಶ್ವರ**ನಾಗಿ ಆರಾಧಿಸಲ್ಪಡುತ್ತಾನೆ.
- ಬಟ್ಟೆ ಖರೀದಿಸುವ ನೆಪದಲ್ಲಿ ಬಂಗಾಡಿಯ ಜನರನ್ನು ಪರೀಕ್ಷಿಸಲು, ಬಬ್ಬುಸ್ವಾಮಿ ಬಂಗಾಡಿಗೆ ಬರುತ್ತಾನೆ. ಒಂದು ಜವುಳಿ ಅಂಗಡಿಯ ಮುಂದೆ ನಿಂತು ಅಂಗಡಿಯಾತನಲ್ಲಿ ಈ ಬಟ್ಟೆಯ ಬೆಲೆ ಎಷ್ಟು? ಎಂದು ಬಬ್ಬುಸ್ವಾಮಿ ಕೇಳಿದಾಗ, ಅಂಗಡಿಯಾತ ಬಬ್ಬುವನ್ನು ಹೀನಾಯಮಾನವಾಗಿ ನಿಂದಿಸುತ್ತಾನೆ. ಕೋಪಗೊಂಡ ಬಬ್ಬು ಇಡೀ ಬಂಗಾಡಿಯನ್ನು ಸುಟ್ಟು ಹಾಕಿ, ತಾನು ಯಾರೆಂದು ಬಂಗಾಡಿಯ ಜನತೆಗೆ ತೋರಿಸಿಕೊಡುತ್ತಾನೆ. ನಂತರ ಬಂಗಾಡಿಯ ಜನ ಜ್ಯೋತಿಷಿಯಲ್ಲಿ ಕೇಳಲು, ಆ ಜ್ಯೋತಿಷ್ಯ ನಿಜ ನುಡಿಯುತ್ತಾನೆ. ಬಳಿಕ ಬಂಗಾಡಿಯ ಜನರು ಬಬ್ಬುವಿನಲ್ಲಿ ಕ್ಷಮೆ ಯಾಚಿಸುತ್ತಾರೆ. ಬಂಗಾಡಿ ಬೆಡಿಗುತ್ತಿನಲ್ಲಿ **'ಗುತ್ತಿನ ದೈವ, ಪಟ್ಟದ ದೈವ'**ಎಂಬ ಘನತೆಯನ್ನು ಬಬ್ಬು ಪಡೆದುಕೊಳ್ಳುತ್ತಾನೆ.
- ಕೋಡಿ ಕೊಂಡಾಳ ಕೊಡಂಗೆ ಬನ್ನಾರರ ಚಾವಡಿಯಲ್ಲಿ ಬೆಳೆದ ಕಾರಣ **'ಕೋಡಿದ ಬಬ್ಬು'** ವಾಗುತ್ತಾನೆ.

- ಕಾಸರಗೋಡು ಜಿಲ್ಲೆಯ ಕೋಳ್ಯೂರಿನಲ್ಲಿ ದೊಡ್ಡ ಪಟೇಲರ ಭಕ್ತಿಯಿಂದ **'ಕೊಡಂಗೆತ್ತಾಯ'** ನೆಂದು ಕೀರ್ತಿಯನ್ನು ಪಡೆಯುತ್ತಾನೆ.

ಹೀಗೆ ಹತ್ತು ಹಲವು ಅವತಾರಗಳಲ್ಲಿ ಬಂದು ಮನುಷ್ಯನ ಅಹಂಕಾರಕ್ಕೆ ಔಷಧ ನೀಡಿ ದಾನವರಾಗಿರುವ ಆ ಮನುಜರನ್ನು ಮಾನವರಾಗಿಸಿದ ಕೀರ್ತಿ ಭಗವಾನ್ ಶ್ರೀ ಬಬ್ಬುಸ್ವಾಮಿಗೆ ಸಲ್ಲುತ್ತದೆ. ಈ ಕಾರಣದಿಂದ ಕೇವಲ ಅಹಂಕಾರವನ್ನು ಮುರಿದುದ್ದಲ್ಲದೆ ಮಾನವತೆಯ ದೀಪದಾರಿ ತೋರಿಸಿದ, ಮತಾಂಧತೆಯನ್ನು ನಿವಾರಿಸಿದ ಬಬ್ಬು 'ಏಕತೆಯಲ್ಲಿ ಸಮಷ್ಟಿಯ ಮೌಲ್ಯ ಅಡಗಿದೆ' ಎಂಬುದನ್ನು ಇಡೀ ಲೋಕಕ್ಕೆ ಸಾರಿದ ಮಹಾನ್ ಕಾರಣಿಕದ ದೈವ, ದೈವರಾಜ ಶ್ರೀ ಭಗವಾನ್ ಬಬ್ಬುಸ್ವಾಮಿ. ಹೀಗೆ ಬಡಗ ರಾಜ್ಯದಲ್ಲಿ ಬಬ್ಬುಸ್ವಾಮಿ ನಿಜರೂಪ ತೋರಿಸುತ್ತಾನೆ. ತೆಂಕು ದಿಕ್ಕಿನಲ್ಲಿ ಮಾಯದ ರೂಪವನ್ನು ಧರಿಸುತ್ತಾನೆ. ತನ್ನ ಜನಾಂಗದ ಜನರಿಗೆ ತಂದೆಯಾಗಿ, ಹಿತೈಷಿಯಾಗಿ, ದೈವವಾಗಿ ಸದಾ ಕಾಪಾಡಿದ ರಕ್ಷಕನಾಗಿದ್ದಾನೆ ಭಗವಾನ್ ಶ್ರೀ ಬಬ್ಬುಸ್ವಾಮಿ.

## ಸಂದೇಶಕನಾಗಿ ಭಗವಾನ್ ಶ್ರೀ ಬಬ್ಬುಸ್ವಾಮಿ:

ಬಾಲ್ಯದಲ್ಲಿ ಬಬ್ಬು ತೋರಿಸಿದ ಪವಾಡಗಳು ಎಲ್ಲಿ ಸವರ್ಣೀಯರ ಈರ್ಷೆಗೆ ಒಳಗಾಗುತ್ತದೋ? ಎಲ್ಲಿ ತಮ್ಮ ಪ್ರೀತಿಯ ಮಗು ಬಬ್ಬು ಅವರ ಕುತಂತ್ರಕ್ಕೆ ಬಲಿಯಾಗುತ್ತಾನೋ? ಎಂಬ ಭಯದಿಂದ ಸಿರಿಗಿಂಡೆ ಬಬ್ಬುವಿಗೆ ಲೋಕ ಜ್ಞಾನವನ್ನು ನೀಡಲು ಪ್ರಾರಂಭಿಸುತ್ತಾಳೆ.

ಬದುಕಿನ ಪಾಠವನ್ನು ಬಬ್ಬುವಿಗೆ ಕಲಿಸಿ ಕೊಟ್ಟ ಸಿರಿಗಿಂಡೆ, ಬಬ್ಬುವಿನಲ್ಲಿರುವ ಭಂಡತನ, ಕೋಪಗಳನ್ನು ನಿವಾರಿಸುತ್ತಾಳೆ. ಬದುಕಿನ ಸತ್ಯಾಸತ್ಯತೆಗಳನ್ನು ಬಬ್ಬುವಿಗೆ ಮನವರಿಕೆ ಮಾಡಿಕೊಡುತ್ತಾಳೆ. ಅಂದಿನಿಂದ ಬಬ್ಬು 'ಕಾಯವೇ ಕೈಲಾಸ'ವೆಂದು ಭಾವಿಸಿ, ದುಡಿದು ತಿನ್ನುವ ಛಲದಿಂದ ಕೋಡಿಕೊಂಡಾಳದಿಂದ ಹೊರಟು ಕುಂದಾಪುರದ ಪಂಚ ಗಂಗಾವಳಿ (ಗಂಗೊಳ್ಳಿ) ಯ ನದಿ ಮಧ್ಯದಲ್ಲಿರುವ **ಕುದುರು** ಎಂಬ ಸ್ಥಳಕ್ಕೆ ಬರುತ್ತಾನೆ. ಗಾಳ ಹಾಕಿ ಮೀನು ಹಿಡಿಯಲು ಕುಳಿತ್ತಿರುವ ಬಬ್ಬುವಿನ ಗಾಳಕ್ಕೆ ದೊಡ್ಡ ಗಾತ್ರದ ಮುರು ಮೀನೊಂದು ಸಿಕ್ಕಿ ಹಾಕಿಕೊಳ್ಳುತ್ತದೆ. ಅದು ವಿಲವಿಲ ಒದ್ದಾಡುವುದನ್ನು ಕಂಡ ಬಬ್ಬು, ಮನಸ್ಸಿನಲ್ಲಿ ಬೇಸರಪಟ್ಟು ಕೊಡಂಗೆ ಬನ್ನಾರರು ತನಗೆ ಹಾಕಿದ ಒಂದು ಕಿವಿಯ ಕೊಡಂಗೆಯನ್ನು ಆ ಮುರು ಮೀನಿಗೆ ತೊಡಿಸಿ,"ನನ್ನ ತಂದೆಯ ಮೂಲದೇವರ ದೊಡ್ಡ ಮೀನಾಗಿ ಬೆಳೆಯಬೇಕು. ನನಗೆ ಸಮುದ್ರದಲ್ಲಿ ವಿಪತ್ತು ಉಂಟಾದಾಗ ನನ್ನ ಸಹಾಯಕ್ಕೆ ಕೂಡಲೇ ಬರಬೇಕು" ಎಂದು ಹೇಳಿ ಮತ್ತೆ ನೀರಿಗೆ ಹಾಕುತ್ತಾರೆ. ಸ್ವಲ್ಪ ಸಮಯದ ಬಳಿಕ ಇನ್ನೊಂದು ಮುರು ಮೀನು ಬಬ್ಬುವಿನ ಗಾಳಕ್ಕೆ ಸಿಲುಕಿ ವಿಲವಿಲನೆ ಒದ್ದಾಡುತ್ತದೆ. ಸಂಕಟಪಟ್ಟ ಬಬ್ಬು ತನ್ನ ಇನ್ನೊಂದು ಕಿವಿಯ ಕೊಡಂಗೆಯನ್ನು ಆ ಮೀನಿಗೆ ತೊಡಿಸಿ, "ನನ್ನ ತಾಯಿಯ ಮೂಲದೇವರ ದೊಡ್ಡ ಮೀನಾಗಿ ಬೆಳೆಯಬೇಕು. ನನಗೆ ಸಮುದ್ರದಲ್ಲಿ ವಿಪತ್ತು ಉಂಟಾದಾಗ ನನ್ನ ಸಹಾಯಕ್ಕೆ ಕೂಡಲೇ ಬರಬೇಕು" ಎಂದು ಹರಿಸಿ ಮತ್ತೆ ನೀರಿಗೆ ಬಿಡುತ್ತಾನೆ.

ಮುಂದೆ ಒಳಲಂಕೆ ಮುಲ್ಕಿಯ **ಬಪ್ಪ ಬ್ಯಾರಿಯ** ಹಡಗನ್ನು ತನ್ನ ಮಾಂತ್ರಿಕ ಶಕ್ತಿಯಿಂದ ನೀರಿಗಿಳಿಯುವಂತೆ ಮಾಡಲು ತನ್ನ ಕಿರುಬೆರಳ ರಕ್ತ ತರ್ಪಣವನ್ನೇ ನೀಡುತ್ತಾನೆ, ಬಬ್ಬುಸ್ವಾಮಿ,

ಭಾಷೆ ಕೊಟ್ಟಂತೆ ಹಡಗಿನಲ್ಲಿ ಬಪ್ಪಬ್ಯಾರಿಯು ಬಬ್ಬುವಿಗೆ ನೌಕರಿಯನ್ನು ಕೊಡುತ್ತಾನೆ, ಇದನ್ನೆಲ್ಲ ಸಹಿಸಲಸಾಧ್ಯವಾದ ಮೇಲ್ವರ್ಗದ ಜನ ಬಬ್ಬುವನ್ನು ಕೊಲೆ ಮಾಡಲೆತ್ನಿಸುತ್ತಾರೆ. ಕಡಲುಗಳ್ಳರ ವ್ಯವಹಾರವನ್ನು ತಿಳಿದುಕೊಳ್ಳಲು ಹಡಗಿನ ಕೊಂಬಿನಮರ (ಕೂವೆಮರ) ಏರಿದಾಗ, ಇತರ ನೌಕರರು ಬಬ್ಬು ಆಧಾರಕ್ಕಾಗಿ ಹಿಡಿದ ಹಗ್ಗವನ್ನು ತುಂಡರಿಸಿ, ಆತ ಸಮುದ್ರ ಪಾಲಾಗುವಂತೆ ಮಾಡುತ್ತಾರೆ. ಆ ಹೊತ್ತಿನಲ್ಲಿ ಬಬ್ಬು ಕೊಡಂಗೆ ಹಾಕಿ ಮರು ಜೀವ ನೀಡಿದ ಎರಡೂ **ಮುರು ಮೀನುಗಳು** ಓಡೋಡಿ ಬಬ್ಬುವಿನ ಬಳಿ ಬರಲು ಬಬ್ಬು ಅದರ ಬೆನ್ನು ಹತ್ತಿ ಕುಳಿತುಕೊಳ್ಳುತ್ತಾನೆ. ಆಗ ಅವುಗಳು ಬಬ್ಬುವನ್ನು ಬಾರ್ಕೂರಿನ ಅಳಿವೆಯಲ್ಲಿ ದಡ ಸೇರಿಸಿ ತಮ್ಮ ಸ್ವಾಮಿ ಭಕ್ತಿಯ ಋಣವನ್ನು ತೀರಿಸಿಕೊಳ್ಳುತ್ತವೆ.

ಬಬ್ಬುಸ್ವಾಮಿ ನೇಜಾರುಪದವಿಗೆ ಗೋವುಗಳನ್ನು ಮೇಯಿಸಲು ಹೋಗುವ ಸಂದರ್ಭದಲ್ಲಿ **ಮೊಯ್ದಿನ್ ಬ್ಯಾರಿ** ಪದವಿನ ಬಾಗಿಲನ್ನು ತೆರೆಯದಿದ್ದಾಗ, ಬಬ್ಬು ಮೊಯ್ದಿನ್ ಬ್ಯಾರಿಯ ಪತ್ನಿ ಸಕೀನಾಬಿಗೆ, 'ಪದವಿನ ಬಾಗಿಲು ತೆಗೆಯಲು ನಿಮ್ಮ ಗಂಡನಿಗೆ ಬುದ್ಧಿ ಹೇಳಿ' ಎಂದು ಆಕೆಯನ್ನು ವಿನಂತಿಸಿಕೊಳ್ಳುತ್ತಾನೆ. ಮುಂದುವರಿದು ಬಬ್ಬು 'ನಾನಾಗಿಯೇ ಯಾರಿಗೂ ಕೇಡನ್ನು ಬಯಸೆನು. ನನಗೆ ಕೇಡು ಬಗೆದವರನ್ನು ಎಂದಿಗೂ ಬಿಡೆನು' ಎಂದು ಹೇಳುತ್ತಾನೆ. ಆದರೆ ಬದಲಾಗದ ಬ್ಯಾರಿ ತನ್ನ ಜಿಡ್ಡುತನವನ್ನು ತೋರಿಸುತ್ತಾನೆ. ಆಗ ಬಬ್ಬುಸ್ವಾಮಿ 'ಈ ಕಬ್ಬಿಣದ ಕಂಬಿಗಳು ತುಂಡಾಗಿ ಅದು ಬ್ಯಾರಿಯ ಕುತ್ತಿಗೆಯನ್ನು ಸೀಳುವ ಶೂಲವಾಗಿ ಪರಿಣಮಿಸಲಿ' ಎಂದು ಹೇಳಿ, ಬಬ್ಬು ಸುಂಕದ ಬಾಗಿಲಿಗೆ ಬಲವಾಗಿ ತುಳಿಯುತ್ತಾನೆ. ಹಾಗೆಯೇ ನಡೆಯುತ್ತದೆ ಕೂಡಾ. ಪತಿಯ ಮರಣದಿಂದ ದು:ಖತಪ್ತಳಾದ ಸಕೀನಾಬಿಗೆ, 'ಅಮ್ಮ ಸಕೀನಾಬಿ, ನೀವು ಶೋಕಿಸದಿರಿ. ಇನ್ನು ಮುಂದೆ ನನ್ನ ಗೋವುಗಳು ಹೋಗುವಾಗ ಬರುವಾಗ ದೂರದಿಂದಲೇ ನೋಡಿ ಬಾಗಿಲು ತೆರೆಯಲು ನಿಮ್ಮ ಪತಿಗೆ ತಿಳಿಸಿ. ಧರ್ಮ ಬಾಹಿರರ ಗತಿ ಹೀಗೆಯೇ ಕೊನೆಗೊಳ್ಳುವುದು ಇದನ್ನು ತಿಳಿದುಕೊಳ್ಳಿ' ಎಂದು ಹೇಳಿ ಬಬ್ಬು ಬ್ಯಾರಿಯನ್ನು ಬದುಕಿಸುತ್ತಾನೆ. ಬಳಿಕ ಇಬ್ಬರು ಬಬ್ಬುವಿನಲ್ಲಿ ಕ್ಷಮೆ ಯಾಚಿಸುತ್ತಾರೆ. ಇಲ್ಲಿ ಎರಡು ಅಂಶಗಳು ಗಮನಾರ್ಹವಾದುದು. ಒಂದು, ಗಂಡು ತಪ್ಪಿ ನಡೆವಾಗ ಹೆಣ್ಣು ಬುದ್ಧಿ ಹೇಳಿ ಸರಿ ದಾರಿಗೆ ತರಬೇಕು. ಆ ಕಾರ್ಯಕ್ಕಾಗಿಯೇ ಭಗವಂತ ಮಾತೃ ಸ್ವರೂಪಿಣಿಯಾದ ಹೆಣ್ಣನ್ನು ಸೃಷ್ಟಿಸಿರುವುದು. ಎರಡನೆಯದು ಧರ್ಮಬಾಹಿರರನ್ನು ಧರ್ಮವೂ ರಕ್ಷಿಸದು. 'ಧರ್ಮವನ್ನು ರಕ್ಷಿಸದವರನ್ನು ಮಾತ್ರ ಧರ್ಮವು ರಕ್ಷಿಸುವುದು' ಎಂಬ ನೀತಿಯನ್ನು ಈ ಮೂಲಕ ಬಬ್ಬುಸ್ವಾಮಿ ಲೋಕಕ್ಕೆ ಸಾರುತ್ತಾನೆ.

ಹೀಗೆ ಬಬ್ಬು ಮುಂಡಾಳ ಜನಾಂಗಕ್ಕೆ ಅನೇಕ ಸಂದೇಶಗಳನ್ನು ಸಾರಿದ್ದಾನೆ. ಬಬ್ಬು ನಡೆದ ದಾರಿ ಮುಂಡಾಳ ಜನಾಂಗಕ್ಕೆ ದಾರಿದೀಪ. ತನ್ನ ಸ್ವಾರ್ಥಕ್ಕಾಗಿ ಮನುಷ್ಯ ಯಾವಜೀವಿಯನ್ನು ಕೊಲ್ಲಬಾರದು. ಏಕೆಂದರೆ ಈ ಭೂಮಿತಾಯಿ ಬದುಕಲು ಮಾನವನಿಗೆಷ್ಟು ಅಧಿಕಾರವನ್ನು ನೀಡಿದ್ದಾಳೋ, ಅಷ್ಟೇ ಅಧಿಕಾರವನ್ನು ಈ ಭೂಮಿಯಲ್ಲಿರುವ ಸಕಲ ಜೀವಿಗಳಿಗೂ ನೀಡಿದ್ದಾಳೆ. ಯಾವುದನ್ನೂ ಕೊಲ್ಲುವ, ಕಸಿಯುವ ಹಕ್ಕು ದೇವರನ್ನು ಹೊರತಾಗಿ ಯಾವ ಜೀವಿಗೂ ಇಲ್ಲ ಎನ್ನುವ ಸಂದೇಶವನ್ನು ಬಬ್ಬು ಈ ಮೂಲಕ ಸಾರಿದ್ದಾನೆ.

ಮುಂಡಾಳ ಜನಾಂಗದವರು ಮೂಲತ: ಸಸ್ಯಾಹಾರಿಗಳು, ಕಾರಣ ನಿಮಿತ್ತ ಮಾಂಸಾಹಾರಿಗಳಾದರು. ಬಬ್ಬುಸ್ವಾಮಿ ಮುಂಡಾಳ ಜನಾಂಗಕ್ಕೆ ಮೀನು, ಮಾಂಸ, ಶೇಂದಿ, ಶರಾಬು ಕುಡಿಯಬಾರದೆಂಬ ಆಜ್ಞೆಯನ್ನೂ ಈ ಮೂಲಕ ಸಂದೇಶವನ್ನೂ ನೀಡಿದ್ದಾರೆ. ಆದ್ದರಿಂದ ಮುಂಡಾಳ ಜನಾಂಗಕ್ಕೆ ಮುರು ಮೀನು ಪೂಜ್ಯನೀಯವಾಗಿದೆ.

**ಮುಂಡಾಳ ಜನಾಂಗದ ಉದ್ಧಾರಕನಾಗಿ,ಸಮಾಜೋದ್ಧಾರಕನಾಗಿ ಬಬ್ಬುಸ್ವಾಮಿ:**

- ❖ ಸರ್ವಧರ್ಮ ಸಮನ್ವಯ ದೇಶ ಈ ಭಾರತ. ತುಳುನಾಡಿನ ಬಜಪೆಯಲ್ಲಿ ಬಬ್ಬು ಸರ್ವಧರ್ಮೀಯರೊಂದಿಗೆ ಬೆರೆತು ವೀಳ್ಯದೆಲೆ ಸವಿದು, ಅವರಿಗೆ ಮಾನವೀಯ ಮೌಲ್ಯಗಳನ್ನು ಬೋಧಿಸಿ, ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಪಣ ತೊಡುತ್ತಾನೆ, ಅವರಲ್ಲಿ ಸೌಹಾರ್ಧತೆಯ ಬೀಜ ಬಿತ್ತುತ್ತಾನೆ.
- ❖ ಕೇವಲ ಒಂದು ಬಿಂದಿಗೆ ನೀರು ಹಾಗೂ ಕಾಡು ಹೂವನ್ನಿಟ್ಟು ಆರಾಧಿಸಿದ ಮುಂಡಾಳ ಜನಾಂಗವನ್ನು ಉದ್ಧರಿಸುತ್ತಾ, 'ಜಾತಿ ಎರಡು (ಗಂಡು, ಹೆಣ್ಣು) ನೀತಿ ಒಂದು' ಎಂಬುದನ್ನು ಸಾರಿದ ದೈವ ಬಬ್ಬುಸ್ವಾಮಿ.
- ❖ ದುರ್ಬಲರಾದ, ಅಸಂಘಟಿತರಾದ ತನ್ನ ಕುಲ ಬಾಂಧವರಾದ ಮುಂಡಾಳ ಜನಾಂಗದವರನ್ನು ಸಬಲರನ್ನಾಗಿ, ಸಂಘಟಿತರನ್ನಾಗಿಸಿ ಕೀರ್ತಿ ತಂದ ದೈವ ಬಬ್ಬುಸ್ವಾಮಿ.
- ❖ "ನಿಮಗೆ ಜೋಗದಗುರು ಇಲ್ಲದಿದ್ದರೂ ಮಾಯದ ಗುರುವಾಗಿ ನಾನಿದ್ದೇನೆ" (ಜಾತಿಯ ಕಾರಣದಿಂದ ಮುಂಡಾಳ ಜನರು ಶಿಕ್ಷಣದಿಂದ ವಂಚಿತರಾದ ಸಂದರ್ಭದಲ್ಲಿ) ಎಂಬ ಅಭಯವನ್ನಿತ್ತು ಅವರಲ್ಲಿ 'ಆತ್ಮಸ್ಥೈರ್ಯ' ವನ್ನು ಬಬ್ಬುಸ್ವಾಮಿ ತುಂಬಿದ್ದಾನೆ.
- ❖ ಮಹಾನ್ ಶಿಲ್ಪಿಯಾಗಿದ್ದು ಅದ್ಭುತ ಕೋಟೆಗಳನ್ನು ನಿರ್ಮಿಸಿದ ಬಬ್ಬುಸ್ವಾಮಿಯ ಅನುಗ್ರಹದಿಂದ ಮುಂಡಾಳ ಜನಾಂಗದಲ್ಲಿ ಶಿಲ್ಪಿಗಳು, ಗಾರೆ ಕೆಲಸಗಾರರು, ಕಲಾವಿದರು, ಕಲಾಕಾರರು ಹುಟ್ಟಲು ಬಬ್ಬು ಪ್ರೇರಕನಾಗಿದ್ದಾನೆ.
- ❖ ಕೋಟಿ ವಿದ್ಯೆ, ಮೇಟಿ ವಿದ್ಯೆಗಳಲ್ಲಿ ಸೈ ಎಣಿಸಿಕೊಂಡ ಬಬ್ಬುಸ್ವಾಮಿ, ತನ್ನ ಜಾತಿ ಬಾಂಧವರಾದ ಮುಂಡಾಳರೂ ಕೂಡಾ ಮಂತ್ರ–ತಂತ್ರ ವಿದ್ಯೆ, ನಿಮಿತ್ತ ನುಡಿಯುವುದರಲ್ಲಿ, ಗಿಡಮೂಲಿಕಾ ಔಷಧಿ ನೀಡುವಲ್ಲಿ ನಿಣಪುರಾಗುವಂತೆ ಪ್ರೇರಣೆ ನೀಡಿದ್ದಾನೆ.
- ❖ ದೊಡ್ಡ ಗುಡ್ಡೆಯಲ್ಲಿ ಸಪ್ತ ಮೇಳಗಳನ್ನು ಒಂದೇ ಬಾರಿ ನುಡಿಸುವ ಮೂಲಕ ಜುಮಾದಿ (ಶ್ರೀ ಧೂಮಾವತಿ) ಪಂಥಕ್ಕೆ ಪ್ರತ್ಯುತ್ತರ ನೀಡಿ, ಆಕೆಯ ಬಾಯಾರಿಕೆ, ಹಸಿವನ್ನು ತಣಿಸಿದ. ಹಾಗೆಯೇ ಬಬ್ಬುಸ್ವಾಮಿಯ ಕುಲಬಾಂಧವರಾದ ಮುಂಡಾಳರಲ್ಲಿ ಅನೇಕರು ಇಂದು ವಾದ್ಯ ಮೇಳಗಳನ್ನು ನುಡಿಸಿ ಬಾರಿಸುವುದರಲ್ಲಿ ನಿಸ್ಸೀಮರಾಗಿದ್ದಾರೆ. ಕಾಯಕ ಕರ್ಮಿಗಳಾಗಿದ್ದಾರೆ.
- ❖ ಬಬ್ಬರ್ಯನ ಅಬ್ಬರ ಇಳಿಸಲು ಕಾಳಬೈರವನ ಅವತಾರ ಎತ್ತಿದ ಬಬ್ಬು ತಾಲೀಮು, ಗರಡಿ ವಿದ್ಯೆಗಳ ಗುರು. ಮುಂಡಾಳರು ಇದನ್ನು ಅನುಸರಿಸಿದ್ದಾರೆ.

ಹೀಗೆ ದಲಿತ ಹಾಗೂ ದಲಿತೇರರಲ್ಲಿ **"ಜಾತಿ ಬಾಂಧವ್ಯಕ್ಕಿಂತ ನೀತಿ ಬಾಂಧವ್ಯ ಮುಖ್ಯ"** ಎಂದು ಸಾರಿ, ಸಮಾಜದ ಉದ್ಧಾರಕ್ಕಾಗಿ ತನ್ನ ಕಾರಣಿಕಗಳನ್ನು ತೋರಿಸಿ, ಈ ಲೋಕದಲ್ಲಿ ಬಬ್ಬುಸ್ವಾಮಿ **'ದೈವರಾಜ'**ನೆಂದೇ ಖ್ಯಾತಿ ಪಡೆದು ಮುಂಡಾಳರ ಗ್ರಾಮದೈವವಾಗಿ ತುಳುನಾಡಿನಲ್ಲಿ ನೆಲೆಯೂರಿದ್ದಾನೆ.

## ಬಂಡಾಯದ ಪ್ರತಿನಿಧಿಯಾಗಿ ತನ್ನಿಮಾನಿಗ:

ತೆಂಕು ದಿಕ್ಕಿನ ಬಡಗು ಭಾಗದಲ್ಲಿ 'ದಾರಂಬಾಡಿಗುತ್ತು' ಎಂಬ ಹೆಸರಾಂತ ಗುತ್ತಿನ ಮನೆಯಿತ್ತು. ಆ ಗುತ್ತಿನ ಮನೆಯ ಮೂಲದ ಆಳುಗಳಾಗಿ ಕೆಲಸ ಮಾಡುತ್ತಿದ್ದ ಬಲವನ್ನ ಓಡಿ ಮತ್ತು ಮುದ್ದು ಮುಗ್ಗೇರ್ತಿ ದಂಪತಿಗಳ ಮಕ್ಕಳೇ ಮುದ್ದು, ಕಳಲ ಹಾಗೂ ತನ್ನಿಮಾನಿಗ. ಇವರು ಮುಂದೆ 'ಎಣ್ಮೂರ ದೈವ' ಗಳೆಂದು ಖ್ಯಾತಿ ಪಡೆಯುತ್ತಾರೆ. ಬಾಲ್ಯದಲ್ಲಿ ಹಾಲು, ಅನ್ನ ತಿನ್ನುವ ಸಮಯದಲ್ಲಿ ಮಾತಾಪಿತೃಗಳನ್ನು ಕಳೆದುಕೊಳ್ಳುತ್ತಾರೆ. ಮುಂದೆ ತಮ್ಮ ಮೂಲಸ್ಥಾನ ಕೆಮ್ಮಲೆಗೆ ಬಂದಾಗ ರಾಜ ಗುತ್ತಿನ ಸೋಯಿಬೈದೆದಿಯನ್ನು ಭೇಟಿಯಾಗುತ್ತಾರೆ. ಕೋಟಿ-ಚೆನ್ನಯರಿಗೆ ಜನ್ಮವಿತ್ತ ಈಕೆ ಈ ಮೂವರು ಅನಾಥ ಮಕ್ಕಳನ್ನೂ ತನ್ನ ಮಕ್ಕಳ ಜೊತೆಗೆ ಸಲಹುತ್ತಾಳೆ. ಮುದ್ದು, ಕಳಲ, ತನ್ನಿಮಾನಿಗರ ತಂದೆಯ ಸೋದರಳಿಯನಾದ 'ಕೆಲತ್ತ ಪೆರ್ನೆ'ಯೊಂದಿಗೆ ತನ್ನಿಮಾನಿಗಳ ಮದುವೆಯೂ ನಡೆಯುತ್ತದೆ. ಮುದ್ದು ಕಳಲ, ಕೆಳತ್ತ ಪೆರ್ನೆ, ತನ್ನಿಮಾನಿಗ ಮುಂದೆ ಆ ಜನಾಂಗದಲ್ಲಿ ಆರಾಧನೆಗೊಳಪಡುತ್ತಾರೆ. ಕಾಲಾನಂತರ ಜೀವನ್ಮರಣದ ಜೊತೆ ಹೋರಾಟ ನಡೆಸುವ ಸ್ಥಿತಿಯೊಂದು ಸಮಾಜದಲ್ಲಿಯ ದಲಿತ ಹುಡುಗನಾದ ಬಬ್ಬುವಿಗೆ ಎದುರಾಗುತ್ತದೆ. ಕೋಡ್ದಬ್ಬುವನ್ನು ಮುಗಿಸಲು ವಿಟ್ಲದ ಅರಸ ಹಾಗೂ ಮಂಗಳೂರಿನ ಅರಸರು ಹೆಣೆದ ಷಡ್ಯಂತ್ರಕ್ಕೆ ಬಬ್ಬು ಬಲಿಯಾಗುತ್ತಾನೆ. ಪಡುಬಿದ್ರೆಯ ಕಂಚಿನಡ್ಕ (ಈಗಿನ ಬಬ್ಬುಕಟ್ಟೆ) ದಲ್ಲಿ ನೀರಿನ ದಂಡು ಪರೀಕ್ಷಿಸಲು ಬಬ್ಬುವನ್ನು ಬಾವಿಗಿಳಿಸಿದಾಗ 7ದಿನ ನೀರೊಳಗಿದ್ದ ಬಬ್ಬುವನ್ನು ತನ್ನಿಮಾನಿಗ ರಕ್ಷಿಸುತ್ತಾಳೆ. ಹಾಗಾಗಿ ಇಂದಿಗೂ ಬಬ್ಬುವಿನ ನೇಮೋತ್ಸವದಲ್ಲಿ ಮೊದಲ ವೀಳ್ಯ ಯಾವತ್ತೂ ತನ್ನಿಮಾನಿಗಳಿಗೇ ಮೀಸಲು. ತುಳುನಾಡಿನಲ್ಲಿ ಭೂತಾಳ ಪಾಂಡ್ಯನ ಅಳಿಯಕಟ್ಟು ಪ್ರಚಲಿತದಲ್ಲಿದ್ದರೂ, ಮಾತೃ ಮೂಲೀಯ ವ್ಯವಸ್ಥೆಯಡಿ ಪುರುಷರು ಸ್ತ್ರೀಯರಿಗೆ ವಿಶೇಷವಾದ ಗೌರವವನ್ನು ನೀಡಿದ್ದಾರೆ. ಇದಕ್ಕೆ ಬಬ್ಬುಸ್ವಾಮಿಯೇ ಜ್ವಲಂತ ಉದಾಹರಣೆ. ದಲಿತ ಹುಡುಗನನ್ನು ತನ್ನಿಮಾನಿಗ ರಕ್ಷಿಸಿರುವುದು ವಿಭಿನ್ನ ಜಾತಿಯ, ಕೂಡು ಕಟ್ಟಿನ ಇವರಿಬ್ಬರ ವಿಚಾರ ಸ್ವತ: ಆಕೆಯ ಅಣ್ಣಂದಿರಿಗೆ ಸಹಿಸಲಾಗುವುದಿಲ್ಲ. ತನ್ನಿಮಾನಿಗಳನ್ನು 'ಜತ್ತಿ ಪೋತಿನಾಲ್' (ಇಳಿದು ಹೋದವಳು) ಜಾತಿ ಬಿಟ್ಟವಳೆಂದು ದೂಷಿಸುತ್ತಾರೆ. ಮಾತ್ರವಲ್ಲ ಆಕೆಯನ್ನೆ ತಮ್ಮ ಜನಾಂಗದಿಂದಲೇ ದೂರವಿಡುತ್ತಾರೆ. ಇಲ್ಲಿನ ವಿಶೇಷತೆ ಎಂದರೆ ಮುಂಡಾಳರು ನೇಮೋತ್ಸವದಲ್ಲಿ, ತಮ್ಮ ಆರಾಧನೆಯ ಸಂದರ್ಭದಲ್ಲಿ ತನ್ನಿಮಾನಿಗಳನ್ನು ವಿಶೇಷ ಗೌರವಾದಾರದಿಂದ ಪೂಜಿಸುತ್ತಾರೆ. ಬಹಳ ವರ್ಷಗಳ ಹಿಂದೆ ಮುಗೇರ ಜನಾಂಗದವರು ಇದೇ ತನ್ನಿಮಾನಿಗಳನ್ನು ಆರಾಧನೆಯಿಂದಲೂ ಹೊರಗಿಟ್ಟಿದ್ದರು. ಮುಂಡಾಳ ಜನಾಂಗದವರು ಕೋರ್ದಬ್ಬು, ತನ್ನಿಮಾನಿಗರನ್ನು ಜೊತೆಯಾಗಿಯೇ ಆರಾಧಿಸುತ್ತಾರೆ. ಆದರೆ ಮುಗೇರ ಜನಾಂಗದವರು ಇವತ್ತಿಗೂ ಕೇವಲ ತನ್ನಿಮಾನಿಗಳನ್ನು ಮಾತ್ರಾ ಆರಾಧಿಸುತ್ತಾರೆ. ಕೋರ್ದಬ್ಬುವಿನೊಂದಿಗೆ ಸಂಯುಕ್ತ ಆರಾಧನೆ

ಮುಗೇರರಲ್ಲಿ ಇಲ್ಲ. ಬಬ್ಬುವನ್ನು ಬಾವಿಯಿಂದ ರಕ್ಷಿಸಿದ್ದಕ್ಕೆ ತನ್ನಿಮಾನಿಗಳನ್ನು ತುಳು ಮೂಲ ನಿವಾಸಿಗಳು (ತುಳು ಆದಿವಾಸಿಗಳು) **'ಲೆಕ್ಕೆಸಿರಿ'** ಎಂಬ ನಾಮದಿಂದ ಮನಸಾರೆ ಪೂಜಿಸುತ್ತಾರೆ.

ತನ್ನಿಮಾನಿಗ, ಬಬ್ಬುವನ್ನು ಬಾವಿಯಿಂದ ರಕ್ಷಿಸಿ 'ಲೆಕ್ಕೆಸಿರಿ'ಯಾದಳು. ಬಬ್ಬುವಿಗೆ ತಪ್ಪಿಗೆ ಶಿಕ್ಷೆ ರೂಪದಲ್ಲಿ ರಕ್ತತರ್ಪಣ ಕೇಳಿಸಿ **'ರಕ್ತೇಶ್ವರಿ'**ಯಾದಳು. ಮುಂಡಾಳ ಜನಾಂಗದ ಜನರು ಅಂದರೆ ಆ ಗ್ರಾಮದ ಮುಂಡಾಳ ಜನಾಂಗದ ಹೆಂಗಸರು ಕೋಟೆದ ಬಬ್ಬುಸ್ವಾಮಿಯ ನೇಮೋತ್ಸವದಂದು ತನ್ನಿಮಾನಿಗಳಿಗೆ ಹೂ, ಬಳೆ, ಕುಂಕುಮ, ಸೀರೆ, ಕುಪ್ಪಸ, ಅನುಕೂಲವಾದರೆ ಬೆಳ್ಳಿಯ ಒಡ್ಯಾಣ ಅಥವಾ ಬೆಳ್ಳಿಯ ಗುರಾಣಿ ಇತ್ಯಾದಿಗಳನ್ನು ವಂತಿಗೆ ಮಾಡಿದ ಹಣದಿಂದಲೇ ಖರೀದಿಸಿ, ಸೇವೆಗೆ ನೀಡುತ್ತಾರೆ. ಇದು ಬಬ್ಬುವಿನ ಜಾತಿ ಬಾಂಧವರು ಅನ್ಯ ಜಾತಿಯ ಸ್ತ್ರೀ ತನ್ನಿಮಾನಿಗಳನ್ನು ಮನಸಾರೆ ಒಪ್ಪಿಕೊಂಡಿರುವುದಕ್ಕೆ ಸಾಕ್ಷಿಯಾಗಿದೆ. ಆದರೆ ಮುಗೇರರಲ್ಲಿ ಬಬ್ಬುವಿಗೆ ಪ್ರಾಧಾನ್ಯತೆ ಇಲ್ಲವೇ ಇಲ್ಲ. ಮುಂಡಾಳರ ಧಾರ್ಮಿಕ ಆಚರಣೆಯಲ್ಲಿ ತನ್ನಿಮಾನಿಗಳಂತೆ **ಸುಬ್ಬಿಯಮ್ಮನ** ಆರಾಧನೆಯೂ ಇದೆ.



## ದೈವರಾಜ ಬಬ್ಬುಸ್ವಾಮಿಯ ನೇಮೋತ್ಸವದ ಸಂದರ್ಭವನ್ನು ಬಬ್ಬುವಿನ ಬದುಕಿನ 4 ನೆಲೆಗಳಲ್ಲಿ ಗುರುತಿಸಬಹುದು:

**1)ಗಗ್ಗರದೆಚ್ಚಿ :**

ಬಾಲ್ಯದ ಬಬ್ಬುವಿನ ಬಾಲಲೀಲೆಗಳು ಇಲ್ಲಿವೆ, ಇಲ್ಲಿ ದೈವ ಯಾವ ಕಾರಣಕ್ಕೂ ಮಾತನಾಡುವುದಿಲ್ಲ. ತನ್ನಲ್ಲಿರುವ ಅನುಮಾನಗಳನ್ನು, ಕೋಪ–ಸಂತೋಷದ ಸ್ಥಿತಿ–ಗತಿಗಳನ್ನು ಕೈಸನ್ನೆ, ಮುಖದ ಹಾವಭಾವಗಳ, ಮೂಲಕ ಸೂಚಿಸುತ್ತದೆ.



**2) ಪತಿ ಮಾನಿಚ್ಚಿಕಟಿ ನೇಮ:**

ದರ್ಶನ, ನುಡಿ, ಅಂಜನ, ಇದು ಬಬ್ಬುವಿನ ಯೌವ್ವನದ ಹಂತ.ಆಯುಧ ಹಸ್ತಾಂತರಿಸಿ ಅಣಿ ಏರುವುದು.ಇದು ಬಬ್ಬುವಿನ ಯೌವ್ವನದ ಹಂತ.

**3) ಮುಗವೇರಿದ ನಂತರ ಹಿರಿಯರಲಿ 'ಬಾಂಬಿನು' ನುಡಿ ಹೇಳುವುದು.:**

ಬಬ್ಬುವಿನ ವೃದ್ಧಾಪ್ಯದ ಹಂತವನ್ನು ವಿವರಿಸುತ್ತದೆ.

**4)ನೇಮೋತ್ಸವ ಮುಗಿದಹಂತ 'ಕೋಲ ಬಿರಿಯುನಿ':**

ಇದು ಬೆಳಗ್ಗಿನ ಸಂದರ್ಭದ ಆಚರಣೆಗಳಾದ ಗಡುವಾರು ಭೇಟಿ, ಗುತ್ತಿಗೆ ಮನೆಗೆ ಹಾಲು ಕುಡಿಯಲು ತೆರಳುವುದು, ಬೂಲ್ಯ ನೀಡುವುದು – ಇದು ಬಬ್ಬು ಜೋಗ ಬಿಟ್ಟು ಮಾಯಕ್ಕೆ ಸಲ್ಲುವ ಸಂದರ್ಭದ ಕೆಲವು ಹಂತಗಳಾಗಿವೆ.

**ಈ ಸಂದರ್ಭದ ಕೆಲವು ನುಡಿಗಟ್ಟುಗಳು:**

ದೈವ ಅರದಲ ಹಚ್ಚಿ, ಸಿರಿ ಧರಿಸಿ ಶೃಂಗಾರಗೊಂಡು ಗಗ್ಗರದೆಚ್ಚಿ ಆಗುವ ಮೊದಲು ಬಬ್ಬುಸ್ವಾಮಿಯನ್ನು ಪಾತ್ರಿಯ ಮೈಮೇಲೆ ಬರಮಾಡಿಕೊಳ್ಳುವ ಸಂದರ್ಭದಲ್ಲಿ ನೆರೆದ ಜನಸಮ್ಮುಖದಲ್ಲಿ ಗ್ರಾಮದ ಹಿರಿಯರು ಹೀಗೆ ನುಡಿಯುತ್ತಾರೆ;

"ನಾವು ಸಾಮಾನ್ಯ ಮಾನವರು, ನೀನು ಅತಿ ದೊಡ್ಡ ಸತ್ಯ ಹತ್ತು ಜನ ಸೇರಿದ ಕೂಟದಲ್ಲಿ ಮುತ್ತು ಇದೆ ಎಂದು ಬಲ್ಲವರು ಹೇಳುತ್ತಾರೆ. ಹಿರಿಯರು ಮಾಡಿದ ಕಟ್ಟುಕಟ್ಟಳೆ, ದೊಡ್ಡವರು ತೋರಿಸಿದ ನ್ಯಾಯದ ಮಾರ್ಗದಲ್ಲಿ ಪರ್ವ ಕಾಲಗಳು ಕಳೆದು ವಾರ್ಷಿಕ ಉತ್ಸವದ ಕಾಲ ಬಂದಾಗ ಸೀಮೆಯ ಹತ್ತು ಸಮಸ್ತರು ಕೂಡಿದ ಈ ಕಳದಲ್ಲಿ ಎಲ್ಲರೂ ಒಟ್ಟಾಗಿ ಒಂದೇ ಮನಸ್ಸಿನಿಂದ ಪ್ರತಿ ವರ್ಷವೂ ನಿಯಮಾನುಸಾರವಾಗಿ ಭೋಗ ಕೊಡುವುದು ಸಂಪ್ರದಾಯ. ಅದಕ್ಕಾಗಿ ಇವತ್ತು ದಿನ ನಿಶ್ಚಯಿಸಲಾಗಿದೆ. ಗುಡಿಯ ಬಾಗಿಲು ತೆಗೆಸಲಾಗಿದೆ. ಶುದ್ಧೀಕರಣ ಮಾಡಿಸಲಾಗಿದೆ, ನಂದಾದೀಪ ಬೆಳಗಿಸಲಾಗಿದೆ. ಗಜಕಂಬ ಹಾಕಿಸಲಾಗಿದೆ. ಚಪ್ಪರ ಏರಿಸಲಾಗಿದೆ, ಮಂಡಲ ಬರೆಸಲಾಗಿದೆ ಸ್ವಸ್ತಿಕೆ ಇಡಿಸಲಾಗಿದೆ, ಮತ್ತರ್ಣೆ ಎಂಬ ಪೀಠವನ್ನು ಪ್ರತಿಷ್ಠಾಪಿಸಲಾಗಿದೆ, ಕಿರುದಾಲು ಎನ್ನುವ ಆಯುಧವನ್ನು ನೀಟಕ್ಕೆ ಜೋಡಿಸಲಾಗಿದೆ. ಧ್ವಜ ಏರಿಸಲಾಗಿದೆ, ನೈವೇದ್ಯ ಬಡಿಸಲಾಗಿದೆ, ಎಳನೀರು ಕೆತ್ತಿಸಿ ಇಡಲಾಗಿದೆ, ಹೂಮಾಲೆ ಜೋಡಿಸಲಾಗಿದೆ. ಬಲೋಲಿಯ ಅಲಂಕಾರ ಮಾಡಿಸಲಾಗಿದೆ, ಇಂದು ನೀಡಲಾದ ಬಲಿಯಲ್ಲಿ ಸಾವಿರಾರು ತಪ್ಪುಗಳು, ಲೋಪಗಳು ಇರಬಹುದು, ಅವುಗಳನ್ನೆಲ್ಲ ಬಗೆಹರಿಸಿ ಕೊಟ್ಟು, ಕಂಚಿನ ಕೋಟೆ, ಕಬ್ಬಿಣದ ಬೇಲಿಯ ಹಾಗೆ ನಮಗೆ ರಕ್ಷಣೆ ಕೊಟ್ಟು, ಕಷ್ಟ ನಷ್ಟ, ಬೇನೆ–ಬೇಸರಿಕೆ, ದೋಷ ಪಾಪಗಳನ್ನು ಈ ರಾಜ್ಯದ ಗಡಿಯಿಂದಾಚೆ ಹಾರಿಸಿ ನಂಬಿದವರಿಗೆ ರಕ್ಷಣೆ ಕೊಡಬೇಕು" ಎಂದು ಪ್ರಾರ್ಥಿಸುತ್ತಾರೆ. (ಎಂಕು ನರಮಾನಿ ಸಂಸಾರ, ಈ ಮಾಮಲ್ಲ ಸತ್ಯ. ಪತ್ತ್ ಜನ ಕೂಡುದಿನ ಕಲೊಟು ಮುತ್ತು ಉಂಡೂಂದ್ ಪನ್ಪೆರ್, ಇರಿಯಕ್ಲ್ ಮಲ್ತಿ ಕಟ್ಟ್. ಮಲ್ಲಕ್ಲ್ ಮಲ್ತಿ ನ್ಯಾಯೊಡು ಕಾಲಾದಿ ಪೋದು ವರ್ಸಾದಿ ಬನ್ನಗ, ವರ್ಸಾದಿ ಪೋದು ಕಾಲಾದಿ ಬನ್ನಗ, ಸೀಮೆ ಕೊರೀ ಕಳಟ್ ಪತ್ತ್ ಸಮಸ್ತೆರ್ ಒಂಜಿ ಬದ್ದಿಡ್ ವರ್ಷಂಪ್ರತಿ ನಡಬುಡ್ಪೀ ಪ್ರಕಾರ ಕೊರ್ಪಿಂಚೀ ಬೋಗ ಇನಿಕ್ ತೂಪಾದ್ಂಡ್ ದಿನ, ಜಪುಡಾದ್ಂಡ್ ಬಾರೆಲ್, ಮಲ್ಪಾದ್ಂಡ್ ಸುದ್ಧ, ಪೊತ್ತಾದ್ಂಡ್ ನಂದಲ, ಪಾಡಾದ್ಂಡ್ ಗಜಗಮ್ಮ, ಏರ್ದಾಂಡ್ದೊಂಪ, ಬರೆಪಾದ್ಂಡ್

ಮಂಡಲ, ದೀಪಾದ್‌ಂಡ್ ಸುತ್ಯೆ, ಕುತ್ತಾದ್‌ಂಡ್ ಮತ್ತರ್ಣೆ, ಕೇರ್ಪಾದ್‌ಂಡ್ ಕಿರ್‌ವಾಲ್, ಒಯ್ಪಾದ್‌ಂಡ್ ಕೊಡಿ, ಬಲಸಾದ್‌ಂಡ್ ಪನಿಯಾರ, ಕೊಡಪಾದ್‌ಂಡ್ ಬೊಂಡ, ದೀಪಾದ್‌ಂಡ್ ಪುರ್ಪ, ಕಟ್ಟಾದ್‌ಂಡ್ ಬಲೊಲಿ, ಒತ್ತಾದ್‌ಂಡ್ ಮುದ್ರೆ, ಕೊರ್ಪಾಂಲಿಂಚಿ ಬಲಿಟ್ ಅನೇಕ ಬಗೆತ ತಪ್ಪುಪ್ಪು. ಅವೆನ್ ಮಾತಾ ದೂರ ಮಲ್ತ್‌ಕೊರ್ದ್, ಕಂಚಿದಕೋಟೆ, ಕರ್ಬದ ಬೇಲಿಯಾದ್, ಕಷ್ಟ–ನಷ್ಟ ಕೋರೆ–ಕೋಡ್ಲೆ, ಬೇನೆ–ಬೇಸರ, ದೋಸ ಪಾಪೊಲೆನ್ ಕಡಪ ರಾಜ್ಯೋಗು ತಟ್ಟ್ ಪಾರಾದ್ ನಂಬುನಕುಲೆಗ್ ಇಂಬು ಕೊರೊಡು".)[1]

**ದೈವ ಗಗ್ಗರದೆಚ್ಚಿಯಾದ ಬಳಿಕ ತನ್ನ ಯೌವ್ವನದ ಹಂತದಲ್ಲಿ ಮಾತನಾಡುತ್ತದೆ. ಸಿರಿದುತ್ತೈತ ಆದಾಗ, ಗ್ರಾಮಸ್ಥರನ್ನು ಊರ ಜನರನ್ನು ಉದ್ದೇಶಿಸಿ ದೈವ ಹೀಗೆ ನುಡಿಯುತ್ತದೆ;**

"ಅಸ್ರಣ್ಣರೇ, ತಂತ್ರಿಗಳೇ, ಗುತ್ತಿನವರೇ, ನಾಲ್ಕು ಪಕ್ಕಗಳಲ್ಲಿ ನೆರೆದವರು, ಏಳು ದಿಕ್ಕುಗಳಿಂದ ಬಂದು ಸೇರಿದವರು ಎಲ್ಲರೂ ಇದ್ದೀರಿ, ಇವತ್ತಿನ ದಿನ ಒಬ್ಬರನ್ನು ಕರೆದೆ, ಇನ್ನೊಬ್ಬರನ್ನು ಕರೆಯಲಿಲ್ಲ ಎನ್ನುವ ಅಪವಾದ ನನಗೆ ಬರಬಾರದು" ("ನಾಲ್ ಪಕ್ಕೊಡು ನಿರೆಯಿನಕುಲು, ಏಲ್ ಪಕ್ಕೊಡು ಕೈ ಸೇರಿನಕುಲು, ಇನಿಕಾನಗ ಒರಿಯನ್ ಲೆತ್ತೆ ಒರಿಯನ್ ಲೆತ್ತಿಜಿ ಪನ್ಪಿ ಅಪವಾದ ಬಲ್ಲಿ").[2]

(ಈ ನುಡಿಯನ್ನು ಭೂತ ಆವೇಶಗೊಂಡ ನಂತರ ಊರಿನ ಗಣ್ಯ ವ್ಯಕ್ತಿಗಳಿಗೆ ಹೇಳಬೇಕು)

**ದೈವ ಹಾಗೂ ಜನರಿಗೆ ಮಧ್ಯದಲ್ಲಿದ್ದು ವ್ಯವಹರಿಸುವವನೇ 'ಮಧ್ಯಸ್ಥ' ಈತ ದೈವದ ಭಾಷೆ ಗೊತ್ತಿರುವವನು. ದೈವ ನುಡಿದ ಈ ನುಡಿಗೆ ಮಧ್ಯಸ್ಥ ಹೀಗೆ ದೈವದೊಂದಿಗೆ ಅರಿಕೆ ಮಾಡಿಕೊಳ್ಳುತ್ತಾನೆ;**

"ಕೋಡ್ದಬ್ಬು ದೈವವೇ, ಈ ರಾಜ್ಯದ, ಮಾಗಣೆಗಳ ಪ್ರತಿನಿಧಿಗಳಾದ ನಾವು ಹೇಳುವುದೇನೆಂದರೆ ನೀನು ಆದಿಶಕ್ತಿ, ವಜ್ರಮೂರ್ತಿ ಎಂದರೆ ತಪ್ಪಾಗಲಾರದು. ನಾವು ಸಾಮಾನ್ಯ ಜನರು, ನಮಗೆ ಒಂದು ತಿಳಿದರೆ ಹತ್ತು ತಿಳಿಯುವುದಿಲ್ಲ. ಒಂದು ಸಂದರ್ಭದಲ್ಲಿ ನೀನು ಪಾತ್ರಿಯಲ್ಲಿ ಆವೇಶಗೊಂಡು ಬಂದೆ, ಎರಡನೆಯ ಸಲ ಗಗ್ಗರದ ಸೇವೆಯ ಸಂದರ್ಭದಲ್ಲಿ ಇನ್ನೊಂದು ರೂಪದಲ್ಲಿ ಬಂದೆ, ಮೂರನೆಯ ಅವತಾರದಲ್ಲಿ ಮಾಂಕಾಳಿಯಾಗಿ ತೋರಿಸಿಕೊಳ್ಳುವ ಮುಹೂರ್ತ ಈಗ ಒದಗಿ ಬಂದಿದೆ. 4 ಕೈಗಳಲ್ಲಿ 48 ಆಯುಧಗಳನ್ನು ಹಿಡಿದುಕೊಂಡು, ಈಗ ನಿನ್ನ ಅಧಿಕಾರದ ಗಡಿಯಲ್ಲಿ ದಿಗ್ಬಂಧನ ಮಾಡಿಕೊಂಡು ಇಳಿಯುವ ವೇಳೆ ನಿನ್ನದು. ಮುಖವಾಡ ಧರಿಸಿಕೊಂಡವನಾಗಿ ವಿಷ, ಅಮೃತ, ಜಯ, ಅಪಜಯ, ಸೋಲು, ಗೆಲುವು ಏನಿದ್ದರೂ ಅವುಗಳನ್ನು ಸರಿಪಡಿಸಿಕೊಂಡು ನಮಗೆ ಅನುಕೂಲವಾಗುವಂತೆ ಅಭಯ ಕೊಡಬೇಕು", ಎನ್ನುತ್ತಾನೆ. ("ಕೋಡ್ದಬ್ಬುಡಾ, ಎಂಕುಲು ಪತ್ತ್ ಸಮಸ್ತೆರ್ ಪಣ್ಪುನಿ ದಾನೆ ಪಂಡ, ಈ ಆದಿಶಕ್ತಿ, ವಜ್ರಮಾಲೆ ಪಂಡ ತಪ್ಪಾವಂದ್. ಎಂಕುಲು ನರಮಾನಿ ಸಂಸಾರ. ಎಂಕ್ಲೆಗ್ ಒಂಜಿ ತೆರಿಂಡ ಪತ್ತ್ ತೆರಿಯಂದ್. ಒಂಜಿ ರೂಪೊಡು ಈ ಪತಿಮಾನಿ ಎಚ್ಚಿಡ್ ಬತ್ತ, ರಡ್ಡನೇ ರೂಪೊಡ್ ಗಗ್ಗರದೆಚ್ಚಿದ್ ಆಯ, ಮೂಜನೇ ಅಬತಾರೊಡ್ ಮಾಂಕಾಳಿ ಆದ್ ಬರ್ಪಿಂಚೀ ಮೂರ್ತ ನಿನ್ನ. ನಾಲ್ ಕೈ ನಲ್ಪತ್ತೆಣ್ಮ ಆಯುಧ ಪತ್ತೊಂದು ಇತ್ತೆ ಗಡುಪಾಡ್ದ್ ಜಪ್ಪೀ ಮೂರ್ತ. ಏರಿಂಚಿತ್ತಿ ರುಂಡೊಡು, ಇಸ–ಅಮುರ್ತ ಇತ್ತ್‌ಂಡ, ಜಯನಾ ಅಪಜಯನಾ, ಸೋಲಾ ಗೇಲಾ ಮಾತ ಸರ್ಕ ಮಲ್ತೊಂದು ಎಂಕುಲೆಗೆ ಅಭಯ ಕೊರೊಡುಂದ್ ಪನ್ಪೆರ್").[3]

## ಮುಗವೇರಿದ ಸಂದರ್ಭದಲ್ಲಿ ಗ್ರಾಮಸ್ಥರನ್ನು ಉದ್ದೇಶಿಸಿ ದೈವದ ನುಡಿ:

"ಒಂದು ಯುಗ ಬಿಟ್ಟೆ, ಮತ್ತೊಂದು ಯುಗದಲ್ಲಿ ಅವತರಿಸಿದೆ, ಒಮ್ಮೆ ದರ್ಶನ ಪಾತ್ರಿಯಲ್ಲಿ ಆವೇಶಗೊಂಡೆ. ಮೇಲಿನ ಸ್ವಾಮಿ ನಾರಾಯಣ ದೇವರ ಅಪ್ಪಣೆಯನ್ನು, ಕೆಳಗೆ ಭೂಮಿತಾಯಿಯ ವರವನ್ನು ಪಡೆದುಕೊಂಡು ಅದರೊಂದಿಗೆ ಗ್ರಾಮ ದೈವದ ಅನುಗ್ರಹವನ್ನು ಬೇಡಿಕೊಂಡೆ. ಸತ್ಯ ಹೀಗಿರುವಾಗ ನೋಡಿ, ಊರವರ ಸದಾಶಯದಿಂದ ಮಾಯದಲ್ಲಿ ಅವತರಿಸಿದೆ. ಮಾಂಕಾಳಿ ಅವತಾರ ತಾಳಿದೆ. ರುಂಡದ ಸೇವೆಗೆ ರುಂಡ, ಶಿರಸ್ಸಿನ ಸೇವೆಗೆ ಶಿರಸ್ಸು ಧರಿಸಿ ಮುಂದೆ ಬಂದೆ. ನಾನು ರಾಜ್ಯ ಮಾಗಣೆಗಳ ಪ್ರಮುಖ ಸದಸ್ಯರುಗಳ ಹತ್ತಿರ ಒಂದು ಮಾತನ್ನು ಕೇಳಿಕೊಳ್ಳುತ್ತೇನೆ. ಬಾರ್ಕೂರಿನಿಂದ ಮಂಗಳೂರು ತನಕ, ಮಂಗಳೂರಿನಿಂದ ಬಾರ್ಕೂರ ತನಕ ಹತ್ತು ಮಂದಿ ತಾಯಂದಿರು ಹಡೆದ ಹತ್ತು ಮಕ್ಕಳ ಹತ್ತಿರ ಕೇಳಿಕೊಳ್ಳುತ್ತೇನೆ. ಈಗ ಧರಿಸಿಕೊಂಡ ಮುಖವಾಡದಲ್ಲಿ ವಿಷ, ಅಮೃತ ಮುಂತಾದ ದಶದೋಷಗಳ ಫಲ ಏನೆಂಬುದು ನಿಮಗೆ ಗೊತ್ತೇ?" ("ಒಂಜಿಯುಗ ಬುಡಿಯೆ ಒಂಜಿ ಯುಗೊಟು ಆವೊಂಡೆ, ಪ್ರತಿ ಮಾನಿಚ್ಚಿಡ್ ಮಿತ್ತ್ ನಾರಾಯಣ ದೇವರ ಅಪ್ಪಣೆ, ತಿರ್ತ್ ಭೂಮಿ ಅಪ್ಪೆನ ವರರ್ಡ್ ಗ್ರಾಮ ದೇವೆರೆ ಅನುಲಾ ಕೇನೊಂಡೆ. ಸತ್ಯ ಅಂಚಾದುಪ್ಪುನಗ ಕೇನ್‌ಲೆ, ರಾಜ್ಯದ ಮದಿಪುದ ಎಡ್ಡೆಡ್, ಮಾಯೊಡು ಏರೊಂಡೆ, ಮಾಂಕಾಳಿ ಅವತಾರ ತಾಳೊಂಡೆ, ರುಂಡದ ಎಚ್ಚಿಡ್ ರುಂಡ, ತರೆತ ಎಚ್ಚಿಡ್ ತರೆ ದೀವೊಂದು ದುಂಬು ಬತ್ತೊಂಡೆ. ಯಾನೊಂಜಿ ರಾಜ ಮಾಗಣೆಡ ಕೇನುವೆ, ಬಾರ್ಕೂರ್ಡ್ದ ಪತ್ತಿನ ಮಂಗ್ಲೂರು ಮುಟ್ಟ, ಮಂಗ್ಲೂರ್‌ರ್ಡ್ದ ಪತ್ತಿನ ಬಾರ್ಕೂರು ಮುಟ್ಟ ಪತ್ತಪ್ಪೆ ಪೆತ್ತಿನ ಪತ್ತ್ ಬಾಲೆಲೆಡ ಕೇನುವೆ. ಇನಿ ಏರಿಂಚಿನ ಮುಗೊಟು ಇಸ ಅಮುರ್ತ, ದಸ ದೋಸೊದ ಪಲ ಯಾನ್ ಕೇಣುವೆ. ರಾಜ್ಯೊಡು ದಾಲ ತೆರಿದ್ ಬರುವಾ?").[4]

ಹೀಗೆ ಹತ್ತು ಹಲವು ಬಾರಿ ಇಂತಹ ನುಡಿಗಟ್ಟುಗಳೊಂದಿಗೆ ದೈವ ಹಾಗೂ ಭಕ್ತರ ಸಮಾಲೋಚನೆಗಳು ನಡೆಯುತ್ತಿರುತ್ತದೆ. ಭೂತದ ಅವೇಶ ಬಂದಾಗ ಭೂತ ನರ್ತಕರೂ, ದರ್ಶನ ಪಾತ್ರಿಗಳು, ಭೂತದ ಸಂದೇಶವನ್ನು ವರ್ಗಾಯಿಸುವ ಮಧ್ಯಸ್ಥರ ನುಡಿಗಳಿಗೆ 'ನುಡಿಗಟ್ಟು' ಎನ್ನುವರು. ಭಕ್ತರ ಪರವಾಗಿ, ಯಜಮಾನರ ಪರವಾಗಿ, ಯಜಮಾನರ ಪರವಾಗಿ ಮಾಡಿಕೊಳ್ಳುವ ನಿವೇದನೆ ಇದಾಗಿದೆ. ಇದನ್ನು 'ಮದಿಪು"ಮಧು' ಎಂಬುದಾಗಿಯೂ ಕರೆಯುತ್ತಾರೆ. ಆಶ್ಚರ್ಯಕರವಾದ ವಿಷಯವೆಂದರೆ ಈ ನುಡಿಗಟ್ಟನ್ನು ಹೇಳುವವರು ಅನಕ್ಷರಸ್ಥರು. ಆದರೂ ಆ ನುಡಿಗಟ್ಟಿನಲ್ಲಿರುವ ಸಾಹಿತ್ಯಗುಣ, ಅಲಂಕಾರ ಸೌಂದರ್ಯ, ಕಲ್ಪನಾ ಕ್ರಿಯೆಗಳು ಅತ್ಯಾದ್ಭುತವಾದುದು.

**(ಡಾ. ಸುಶೀಲಾ ಪಿ. ಉಪಾಧ್ಯಾಯ –"ದಕ್ಷಿಣ ಭಾರತದ ಜಾನಪದ" ಪು.ಸಂ.116**).

## ಬೈದ್ಯನಾಗಿ ವೈದ್ಯನಾಗಿ ಬಬ್ಬು:

ಕೊಡ್ಲಿ ಮಠದ 'ಕಾರಬನ್ನ' ಗುರುವಿನ ಧರ್ಮವನ್ನು ಹಾಗೂ 'ರಕ್ಕಸಬೈದ' ಗುರುವಿನ ಅಹಂಕಾರವನ್ನು ಪಡೆದು ಬಂದವರು 'ಮುಂಡಾಳ' ಜನಾಂಗದವರು. ಇಲ್ಲಿ ಪ್ರಯೋಗವಾದ 'ಕಾರಬನ್ನ' ಹಾಗೂ 'ರಕ್ಕಸಬೈದ' ಎಂಬ ಪದಗಳಿಗೆ ಶ್ರೀ ಕೂಡ್ಲಿಭಾರಂಗಿ ಮಠದ ಕಿರಿಯ

ಸ್ವಾಮಿಗಳಾದ ಶ್ರೀ ಸಿದ್ಧವೀರ ಮಹಾಸ್ವಾಮಿಗಳು ನೀಡುವ ತರ್ಕ ಭಿನ್ನವಾದದ್ದು. ಜನಪದ ಪಾಡ್ದನಗಳಲ್ಲಿ 'ಹರಬಣ್ಣಗುರು' ಎಂಬ ಶಬ್ದವು ಪ್ರಯೋಗದಲ್ಲಿದೆ. ಈ 'ಹರಬಣ್ಣಗುರು'ವೇ ಮುಂದೆ 'ಕಾರಬನ್ನ' ಆಗಿರಬಹುದು. ಹಾಗೂ ಗುರುಗಳು ಸದಾ ರಕ್ಷಕರು ವಿನ: ರಾಕ್ಷಸರಲ್ಲ. ಹಾಗಾಗಿ 'ರಕ್ಷಿಪಗುರು' ಎಂಬ ಪದ ಮೌಖಿಕ ಪರಂಪರೆಯೊಳಗೆ 'ರಕ್ಕಸಬೈದಗುರು' ಆಗಿರಬಹುದು ಎನ್ನುತ್ತಾರೆ. ಇಲ್ಲಿ ಪ್ರಯೋಗವಾಗುವ ಶಬ್ದ 'ಬೈದ'>'ವೈದ್ಯ' ಎಂಬ ಅರ್ಥದಲ್ಲೂ ಪ್ರಯೋಗವಾಗಿರಬಹುದು ಅಥವಾ ಸದಾ 'ಬೈಯುವ' ಗುರು ಎಂಬ ಅರ್ಥದಲ್ಲೂ ಪ್ರಯೋಗ ಆಗಿರಬಹುದೆಂಬುದು ನನ್ನ ಅಭಿಪ್ರಾಯವಾಗಿದೆ. ಶಿಕ್ಷಣ ನೀಡುವ ಸಂದರ್ಭದಲ್ಲಿ ಶಿಷ್ಯ ತಪ್ಪಿದಾಗ, ಗುರು ಬೈದು ಅವನನ್ನು ಸರಿದಾರಿಗೆ ತರುತ್ತಾನೆ. ಈ ಪದ ಪ್ರಯೋಗಕ್ಕೆ ಹೀಗೂ ಒಂದು ಸಾಕ್ಷಿಯನ್ನು ನೀಡಬಹುದಾಗಿದೆ.

ಶ್ರೀ ಭಾರಂಗಿ ಕೊಡ್ಲಿಮಠ ಮಹಾಸಂಸ್ಥಾನವು ಮುಂಡಾಳ, ಉಪ್ಪಾರ, ಮಡಿವಾಳ ಜನಾಂಗದವರ ಗುರುಮಠವಾಗಿದೆ. ಶ್ರೀ ಬಬ್ಬುಸ್ವಾಮಿ ಬೆಳ್ಳಿಯ ಮದ್ದಲೆ, ಬಂಗಾರದ ಕೋಲನ್ನು ಹಿಡಿದು 67 ಕೋಟಿ ಬೈದವನ್ನು (ವೇದ ಮಿಗಿಲಾದ ವಿದ್ಯೆಯನ್ನು) ಕಲಿತರು. ತನ್ನ ಈ ಬೈದವನ್ನು ಇಕ್ಕೇರಿ ಕೋಟೆ ನಿರ್ಮಿಸಿದ ಸಂದರ್ಭದಲ್ಲಿ ಅಲ್ಲೇ ವಾಸವಾಗಿದ್ದ ಕಂಚಿಯ ಮದ್ದಲೆ, ಕಬ್ಬಿಣದ ಕೋಲನ್ನು ಹಿಡಿದ ರಕ್ಕಸ ಗುರುವಿಗೆ ಬೋಧಿಸಿದರು. ಈ ಬೈದಕ್ಕೆ, ಕೋಟಿ ಸಮಸ್ಯೆಗಳನ್ನು ನಿವಾರಿಸುವ ಅದ್ಭುತ ಶಕ್ತಿ ಇದೆ. ಶ್ರೀ ಬಬ್ಬುಸ್ವಾಮಿಯಿಂದ ಅನುಗ್ರಹಿಸಲ್ಪಟ್ಟ ಈ ಬೈದವನ್ನು ದಿನಾ ಪಠಿಸುತ್ತಾ, ಮುಂಡಾಳರಿಗೆ ಬೋಧಿಸುತ್ತಾ, ಆರಕ್ಷಿಪ ಗುರು (ರಕ್ಕಸ ಗುರು) ಮುಂಡಾಳ ಜನಾಂಗದ ಬೈದಗುರುವಾದರು.

## 'ಬಬ್ಬು ಕಾರ್ಣಿಕ'ದ ಜ್ವಲಂತ ಉದಾಹರಣೆಗಳ ಒಂದು ಇಣುಕು ನೋಟ:

- ಪಡುಬಿದ್ರೆಯ 77 ವರ್ಷ **ರಾಜುಪಾನಾರ,** 'ಅಣಿ ಅರದಲ ಸಿರಿಸಿಂಗಾರ'ದಲ್ಲಿನ ಸಂದರ್ಶನದಲ್ಲಿ, 'ದೈವದ ಬೆಲೆ ದೈವ ಕಟ್ಟಿದವನಿಗೆ ಮಾತ್ರ ತಿಳಿಯುವುದು' ಎಂದು ಹೇಳುತ್ತಾರೆ. ದೈವಾರಾಧನೆಯ ಬಗ್ಗೆ ಮಾತನಾಡುತ್ತಾ, ತಾನು ಬಹುವಾಗಿ ಮೆಚ್ಚಿಕೊಂಡ ದೈವ ಕೋರ್ದಬ್ಬು ಎನ್ನುತ್ತಾರೆ. ಅದಕ್ಕೊಂದು ದೃಷ್ಟಾಂತವನ್ನು ಕೂಡಾ ನೀಡುತ್ತಾರೆ. ಕಾಂತಾವರದಲ್ಲೊಮ್ಮೆ ಕಬ್ಬಿಣದ ಆಯುಧವನ್ನು ನೆಲಕ್ಕೆ ಊರಿ (ಅಲವುದ ಕಡ್ತಲೆ ಪೂರ್ದು) ನುಡಿದ ಮಾತು (ನುಡಿ) ಮೂರು ದಿನಗಳಲ್ಲಿ ಫಲಿಸಿತಂತೆ. ಅನ್ಯಾಯ ಮಾಡಿದವರಿಗೆ ತಕ್ಕ ಶಾಸ್ತಿಯಾಯಿತು. ಹೀಗೆ ದೈವವು ನಮ್ಮನ್ನು ನುಡಿಸುತ್ತದೆ. ಹೀಗಾದಾಗ ಜನರಿಗೆ ನನ್ನ ಊರಿನ ದೇವರು ಹಾಗೂ ನೆಲದ ಸತ್ಯದ ಮೇಲಿನ ನಂಬಿಕೆ ಹೆಚ್ಚಾಗುತ್ತದೆ. ನಂಬಿಕೆ ಧೈರ್ಯವಾಗುತ್ತದೆ. (ಅಣಿ ಅರದಲ ಸಿರಿಸಿಂಗಾರ–ಎಚ್.ಬಿ.ಎಲ್. ರಾವ್, ಪು.14).

- ಅವರಾಲು ಮಟ್ಟು ಕೋಟೆ ಶ್ರೀ ಬಬ್ಬುಸ್ವಾಮಿ ಕ್ಷೇತ್ರದಲ್ಲಿ ಶ್ರೀ ಬಬ್ಬುಸ್ವಾಮಿಯ ದರ್ಶನ ಸೇವೆಗೆ, ಬಬ್ಬುಸ್ವಾಮಿಯ ಪ್ರಸಿದ್ಧ ಪಾತ್ರಿಯಾಗಿದ್ದ **ದಿ| ಶ್ರೀ ಭದ್ರಪಾತ್ರಿ ಕೊಂಕಣಡ್ಪು ಕೆರಮೆ** ನಿಂತಿರುವ ವೇಳೆಯ ಅತ್ಯಾದ್ಭುತ ಘಟನೆಯೊಂದು ಜರಗುತ್ತದೆ. ಊರಿನ ಮಾರಿಯನ್ನು ಓಡಿಸಲು ಗಡುವಾರಿಗೆ ದರ್ಶನದಲ್ಲಿ ಶ್ರೀ ಬಬ್ಬುಸ್ವಾಮಿ ಬರುವುದು ನಿಯಮ. ಆದರೆ ಆ ಒಂದು ದಿನ ಬಬ್ಬುಸ್ವಾಮಿ ಗಡುವಾರು ಗಡಿಯಿಂದ ದರ್ಶನದಲ್ಲಿ ಬಬ್ಬುಸ್ವಾಮಿ ಬರುವಾಗ ತಡವಾದದ್ದಕ್ಕೆ ಊರಿನ ಜನ "ಬಬ್ಬು ಬರುವಾಗ ತುಂಬಾ ವಿಳಂಬವಾಗುತ್ತದೆ. ನಾವಿನ್ನು ಕಾಯುವುದು ಬೇಡ. ಮಾರಿಯ ದಂಡಿಗೆಯನ್ನು ಎಬ್ಬಿಸಿ" ಎಂದು ಹೇಳಿ ಜಮಾದಿಯ ಅಪ್ಪಣೆಯಂತೆ ಮುನ್ನಡೆಯುತ್ತಾರೆ. ತಕ್ಷಣ ಮಾಯಾರೂಪದಲ್ಲಿ ಕತ್ತಲೆಯಲ್ಲಿ ಬಂದ ಬಬ್ಬು ತನ್ನ ಅಡ್ಡಣವನ್ನು ಬೀಸಿ ಮೂರು ಬಾರಿ ಆರ್ಭಟಿಸುತ್ತಾನೆ. ನಿಜಸ್ಥಿತಿ ತಿಳಿದ ಜನ ಬಬ್ಬು ಬರುವ ತನಕ ಕತ್ತಲೆಯಲ್ಲಿ ಕಾದು, ಬಂದ ಬಳಿಕ ಕ್ಷಮೆ ಯಾಚಿಸುತ್ತಾರೆ. ಆಗ ನಂದಿ ಹೋದ ದೊಂದಿ ಹಾಗೂ ಮಾರಿಗೆ ಹಿಡಿದ ಸೂಟೆ ಹೊತ್ತಿ ಉರಿದು ಪ್ರಜ್ವಲಿಸುತ್ತದೆ. (ಶ್ರೀ ಬಬ್ಬುಸ್ವಾಮಿ ಹಾಗೂ ಶ್ರೀ ತನ್ನಿಮಾನಿಗ – ನವೀನ್ ಸುವರ್ಣಪಡ್ರೆ – ಪುಟ 84, 85).
- ಎರ್ಮಾಳು ಅಂಬೋಡಿಯ ಕೊಳಲಗಿರಿ ಶ್ರೀ ಬಬ್ಬುಸ್ವಾಮಿ ದೈವಸ್ಥಾನದ ಪ್ರಖ್ಯಾತ ಅರ್ಚಕ ದಿ. **ಶ್ರೀ ಸೂರ್ಯ ಪಾತ್ರಿ ತೋಕೋಳಿ, ಮೂಡುಬೆಳ್ಳೆ.** ಈ ಕ್ಷೇತ್ರದಲ್ಲಿ ಬಬ್ಬುವಿನ ದರ್ಶನ ಸೇವೆ ನಡೆವ ವೇಳೆ ಅನ್ಯ ಧರ್ಮಿಯರಿಂದ ಉಪದ್ರಗಳು ನಡೆಯುತ್ತಿತ್ತು. ಇದರಿಂದ ಬೇಸರಗೊಂಡ ಆ ಊರಿನ ಜನ ದರ್ಶನದಲ್ಲಿರುವ ಬಬ್ಬುವಿನಲ್ಲಿ ದೂರಿತ್ತು "ನೀನು ಈ ಕ್ಷೇತ್ರದಲ್ಲಿ ಇದ್ದೀಯಾ... ಅಥವಾ... ಇಲ್ಲವಾ? ಎಂಬುದನ್ನು ತಿಳಿಸಿಕೊಡಬೇಕು" ಎಂದಾಗ ದರ್ಶನ ಪಾತ್ರಿಯು, "ನಾನು ಈ ಜಾಗದಲ್ಲಿ ಇದ್ದೇನಾ.. ಇಲ್ಲವಾ?... ಎಂಬುದನ್ನು ನನ್ನ ಮೇಲ್ಕಾಲದ ನೇಮೋತ್ಸವಕ್ಕಿಂತ ಮೊದಲು, ಇಲ್ಲಿರುವ ಮಾವಿನ ಮರದಲ್ಲಿ ಸೊರಗೆಯ ಹೂವನ್ನು ಸೃಷ್ಟಿಸುವ ಮೂಲಕ ತೋರಿಸಿಕೊಡುತ್ತೇನೆ". ಎಂದು ನುಡಿಯುತ್ತದೆ. ಅದರಂತೆ ಮುಂದಿನ ನೇಮೋತ್ಸವಕ್ಕೆ ಮುನ್ನ ಮಾವಿನ ಮರದಲ್ಲಿ ಸೊರಗೆಯ ಹೂ ಅರಳಿಸುವ ಮೂಲಕ ತುಳುನಾಡಿನಲ್ಲಿ ತನ್ನ ಜಾತಿ ಬಾಂಧವರ ಜೊತೆ ತಾನಿರುವುದನ್ನು ಬಬ್ಬುಸ್ವಾಮಿಯು ಸಾಬೀತುಪಡಿಸುತ್ತಾನೆ.

ಇವೆಲ್ಲಾ ನಿದರ್ಶನಗಳು ಈ ಕಲಿಯುಗದಲ್ಲೂ ಭಗವಾನ್ ಶ್ರೀ ಬಬ್ಬುಸ್ವಾಮಿಯು ಈ ತುಳುನಾಡಿನ ತನ್ನ ಜಾತಿ ಬಾಂಧವರಾದ ಮುಂಡಾಳರ ಜೊತೆಗಿರುವುದಕ್ಕೆ ಸಾಕ್ಷಿಗಳಾಗಿವೆ.

## ದ.ಕ. ಜಿಲ್ಲೆಯಲ್ಲಿ ವಿಶೇಷವಾಗಿ ಆರಾಧನೆಗೊಳ್ಳುವ ಪ್ರದೇಶಗಳು ಮತ್ತು ಪ್ರಸರಣ:

ಕೋಟೆದ ಬಬ್ಬುಸ್ವಾಮಿಯನ್ನು ದೈವಾರಾಧನೆಯ ರೂಪದಲ್ಲಿ ತುಳುನಾಡಿನ ಜನ ಆರಾಧಿಸುತ್ತಾರೆ. ಸಾಂಸ್ಕೃತಿಕ ವೀರರು ಮಾಯಕದ ಮೂಲಕ ಜನರನ್ನು ರಕ್ಷಿಸುವರೆಂಬ ನಂಬಿಕೆ ತುಳುನಾಡ ಜನಪದರದ್ದಾಗಿದೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಬಾರ್ಕೂರು ಈಗ ಉಡುಪಿ ಜಿಲ್ಲೆಗೆ ಸೇರಿದೆ. ಸಾಂಸ್ಕೃತಿಕ ಮತ್ತು ಆರಾಧನಾತ್ಮಕ (ಧಾರ್ಮಿಕ) ಹಿನ್ನೆಲೆಯ ದೃಷ್ಟಿಯಲ್ಲಿ ದ.ಕ. ಮತ್ತು ಉಡುಪಿ ಜಿಲ್ಲೆಗಳು ಒಂದೇ ಸಮನ್ವಯತೆಯಿಂದ ಕೂಡಿದೆ. ಉಡುಪಿ ಪ್ರತ್ಯೇಕ ಜಿಲ್ಲೆಯಾಗುವುದಕ್ಕಿಂತಲೂ ಹಿಂದೆ ಮತ್ತು ಭಾಷಿಕವಾಗಿ 'ತುಳುನಾಡು' ಎಂದು ಗುರುತಿಸಲ್ಪಡುವ ಮೊದಲು, ತುಳುನಾಡಿನ ವ್ಯಾಪ್ತಿಯನ್ನು ಉತ್ತರದಲ್ಲಿ ಬಾರ್ಕೂರಿನಿಂದ, ದಕ್ಷಿಣದಲ್ಲಿ ನೀಲೇಶ್ವರದ ತನಕ ಎಂದು ಗುರುತಿಸುವ ಪರಂಪರೆ ನಮ್ಮಲ್ಲಿದೆ. ನೀಲೇಶ್ವರ ಕೇರಳ ರಾಜ್ಯಕ್ಕೆ ಸೇರಿದ ಜಿಲ್ಲೆ. ಈ ಎಲ್ಲಾ ಪ್ರದೇಶಗಳಲ್ಲಿ ಜಾತಿ ಭೇದ ತೊರೆದು ಎಲ್ಲ ಜನಾಂಗವೂ ಆರಾಧಿಸುವ ದೈವವಾಗಿ, ದೈವಗಳಿಗೇ ರಾಜನಾಗಿ ದೈವರಾಜನೆಂಬ ಬಿರುದಿನಿಂದ ಮೆರೆಯುವ ದೈವ ಭಗವಾನ್ ಶ್ರೀ ಕೋಟೆದ ಬಬ್ಬುಸ್ವಾಮಿ.

**ಭಗವಾನ್ ಶ್ರೀ ಬಬ್ಬುಸ್ವಾಮಿಯ ಕ್ಷೇತ್ರ ಪ್ರಸರಣಾ ವಿವರಗಳು:**

- **ಭಾರಂಗಿ ಕೂಡ್ಲಿ ಮಹಾಸಂಸ್ಥಾನ:–** ಕಚ್ಚೂರು ಮಾಲ್ತಿ ದೇವಿಯ ಪವಿತ್ರ ಗರ್ಭದಲ್ಲಿ ಜನ್ಮ ತಾಳಿ ಭಗವಾನ್ ಬಬ್ಬುಸ್ವಾಮಿ ಬಾಲ್ಯದ ಕಾರಣೀಕ ಲೀಲೆಗಳನ್ನು ಮೆರೆದು ಮಾಯಕವಾದ ಬಳಿಕ ತನ್ನ ತಂಗಿ ತನ್ನಿಮಾನಿಗಳನ್ನು ಕೂಡಿಕೊಂಡು **ಶ್ರೀ ಭಾರಂಗಿ ಕೂಡ್ಲಿ ಮಹಾಸಂಸ್ಥಾನ**ದ ಮಹಾಸ್ವಾಮಿಗಳಿಂದ ಆಶೀರ್ವಾದ ಪಡೆದು, ಧನ್ಯರಾದ ಸ್ಥಳವಿದು. ಇದಕ್ಕೆ 12ನೇ ಶತಮಾನದಷ್ಟು ಹಿಂದಿನ ಇತಿಹಾಸವಿದೆ. ಅಂದರೆ 850 ವರ್ಷಗಳ ಹಿಂದಿನದ್ದು. ಬಡತನದ ಕಾರಣ ಲಿಂಗಾಯಿತರ ಒಂದು ಕೂಟ ಇಷ್ಟಲಿಂಗವನ್ನು ಕೆರೆಗೆ ಎಸೆದ ಕಾರಣ ಮುಂಡಾಳ ಜನಾಂಗದ ನಿರ್ಮಾಣವಾಯಿತು.



ಶ್ರೀ ಕೂಡ್ಲಿ ಚನ್ನಬಸವೇಶ್ವರ ಸ್ವಾಮಿ



**ನವೀಕೃತ ಮಠ**

- **ಶ್ರೀ ಕೋಟಿ ಲಿಂಗೇಶ್ವರ ದೇವಸ್ಥಾನ:–** ಕೋಟೇಶ್ವರದಲ್ಲಿ ಬಡತನದ ತೀವ್ರತೆ, ಹಸಿವೆಯ ಕಾರಣ ತಮ್ಮ ಇಷ್ಟಲಿಂಗವನ್ನು **ಕೋಟೇಶ್ವರ ಕೆರೆಗೆ** ಲಿಂಗಾಯಿತರು ಬಿಸಾಡುವಂತೆ ಮಾಡಿ 'ಮುಂಡಾಳ' ಜನಾಂಗದ ಸೃಷ್ಟಿಗೆ ಬಬ್ಬುಸ್ವಾಮಿಯೇ ಕಾರಣವಾದ ಸ್ಥಳ ಇದಾಗಿದೆ. ಕುಂದಾಪುರದಿಂದ ದಕ್ಷಿಣಕ್ಕೆ 3 ಕಿ.ಮೀ. ದೂರದಲ್ಲಿ ಈ ಪುಣ್ಯಕ್ಷೇತ್ರವಿದೆ.





**ಶ್ರೀ ಕೋಟಿ ಲಿಂಗೇಶ್ವರ ದೇವಸ್ಥಾನ** **ಕೋಟೇಶ್ವರ ಕೆರೆ** **ಕೋಟೇಶ್ವರ ದೇವರು**

- **ಕಚ್ಚೂರು–ಬಾರ್ಕೂರು:–** ತುಳುನಾಡಿನ ಹಂಪೆ ಎಂದೇ ಹೆಸರಾದುದು ಬಾರ್ಕೂರು. ಇದು ಕಚ್ಚೂರು ಶ್ರೀಮಾಲ್ತಿ ದೇವಿಯ ದೈವಸ್ಥಾನ ಹಾಗೂ ಭಗವಾನ್ ಶ್ರೀ ಬಬ್ಬುಸ್ವಾಮಿಯ ಮೂಲ ಕ್ಷೇತ್ರವಿರುವ ಸ್ಥಳ. ಮಾಲ್ತಿದೇವಿ ಗರ್ಭಧರಿಸಿದ ಸಂದರ್ಭ ಉಪ್ಪೂರು ಮೂಲಸ್ಥಾನದಿಂದ ಕಚ್ಚೂರಿಗೆ ಬರುವಾಗ ತಡವಾಗುತ್ತದೆ. ದಡ ದಾಟಿಸಲು ಅಂಬಿಗ ನಿರಾಕರಿಸಿದಾಗ ಗರ್ಭದಲ್ಲಿರುವ ಶಿಶುವೇ ತಾಯಿಯನ್ನು ನದಿ ದಾಟಿಸುತ್ತದೆ. ಬರುವಾಗ ಮುಸ್ಲಿಂ ವ್ಯಕ್ತಿ ಮಾಲ್ತಿ ಸೌಂದರ್ಯಕ್ಕೆ ಮನಸೋತು ಹಿಂಬಾಲಿಸಿದಾಗ, ಅಪಾಯವನ್ನರಿತ ಮಾಲ್ತಿದೇವಿ ಚೂರಿ ಮುಳ್ಳಿನ ಪೊದೆಯಲ್ಲಿ ನಾಗಬ್ರಹ್ಮರ ರೂಪವನ್ನು ಧರಿಸುತ್ತಾಳೆ. ಆ ಸ್ಥಳವೇ ಶ್ರೀಕ್ಷೇತ್ರದಲ್ಲಿರುವ **'ಶ್ರೀ ಮಾಲ್ತಿ ಕಟ್ಟೆ'.**






**ಶ್ರೀಕ್ಷೇತ್ರ ಕಚ್ಚೂರು** **ಬೈಲಕೆರೆ** **ನವೀಕೃತ ಬೈಲಕೆರೆ** **ಶ್ರೀ ಮಾಲ್ತಿಕಟ್ಟೆ**

- **ಇಕ್ಕೇರಿ ಕೋಟೆ:–** ಜೈನ ಕುಲದ ಸಾಮಂತ ಅರಸುಗಳು, ತಂತ್ರಮೂರ್ತಿ ಧೂಮ ಭಗವತಿಯ ಷಡ್ಯಂತ್ರದಿಂದ ಬಹಳ ಅಂತ: ಕಲಹಗಳಾಗುತ್ತಿದ್ದ ಸ್ಥಳ. ಎಷ್ಟೋ ಬಾರಿ ಇಲ್ಲಿ ಅನರ್ಥಗಳೂ ನಡೆಯುತ್ತಿದ್ದವು. ದುಷ್ಟ ಶಿಕ್ಷಕ ಶಿಷ್ಟ ರಕ್ಷಕನಾಗಿ ಈ ಇಕ್ಕೇರಿ ಕೋಟೆಯಲ್ಲಿ ಶ್ರೀ ವಿರೂಪಾಕ್ಷ ಸ್ವಾಮಿಯ ನಾಮಧೇಯವನ್ನು ಹೊತ್ತು, ಶ್ರೀ ಭಗವಾನ್ ಬಬ್ಬುಸ್ವಾಮಿಯು ಅವತರಿಸಿದ ಸ್ಥಳವಿದು.

- ಕಚ್ಚೂರು **ಶ್ರೀ ಮಾಲತಿ ದೇವಿಯ ಉದ್ಭವ ಲಿಂಗ**– ಕಚ್ಚೂರು ಶ್ರೀ ಮಾಲ್ದಿದೇವಿಯನ್ನು ಪರೀಕ್ಷೆಗೆ ಒಡ್ಡಿದ ಸ್ಥಳವಿದಾಗಿದೆ. ಎರ್ಮಾಳು ಶ್ರೀ ಜನಾರ್ಧನ ದೇವಸ್ಥಾನದ ಬಲಭಾಗದಲ್ಲಿದ್ದ ತಾಳೆ ಮರದಡಿ ಮಾಲ್ದಿದೇವಿ ಜೋಗ ಬಿಟ್ಟು ಮಾಯಕ್ಕೆ ಸಂದ ಸ್ಥಳವಿದೆ. ಕಚ್ಚೂರಿನ ಒಡೆಯ ಶ್ರೀ ಕಾಂತಣ್ಣ ಬಲ್ಲಾಳ ಬಾರ್ಕೂರು ಪೇಟೆಯಲ್ಲಿ ನಿದ್ರಿಸಿದ ಶಿಲ್ಪ ಕೆತ್ತನೆಯ **'ಕಲ್ಲು ಚಪ್ಪರ'**

ಕಚ್ಚೂರಲ್ಲಿದೆ. ಶ್ರೀ ಬಬ್ಬುಸ್ವಾಮಿ ಬಾಲಲೀಲೆಗಳನ್ನಾಡಿ ಬೆಳೆದ **ಶ್ರೀಕ್ಷೇತ್ರ ಕೋಡಿಕೊಂಡಾಳ,** ಉಡುಪಿ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಂತೆಕಟ್ಟೆಯಲ್ಲಿ ಪಶ್ಚಿಮ ಭಾಗಕ್ಕೆ, ಸುಮಾರು ಏಳು ಕಿಲೋ ಮೀಟರ್ ದೂರದಲ್ಲಿ ಕೆಮ್ಮಣ್ಣು ಎಂಬ ಸ್ಥಳದಲ್ಲಿ ಈ ಪುಣ್ಯ ಕ್ಷೇತ್ರವಿದೆ.

ಬಬ್ಬು ಬಾಲಕನಿದ್ದಾಗ ಆವರ್ಸೆ ಕಂಬಳಕ್ಕೆ ಹೋದ ಸಂದರ್ಭ ತನ್ನನ್ನು ನಿಂದಿಸಿದಕ್ಕೆ ಕೋಪಗೊಂಡು ಕಂಬಳದ ಕೋಣವನ್ನು ಮಾಯ ಮಾಡಿ, ಕಲ್ಲಾಗೆಂದು ಶಾಪವಿತ್ತ ಜಾಗವಿದು. ಕೋಡಿಕೊಂಡಾಳ ಕ್ಷೇತ್ರ ಬಲಭಾಗದ ಕಾಡಿನಲ್ಲಿ ಈ ಕಲ್ಲುಗಳಿವೆ.

ಶ್ರೀ ಭಗವಾನ್ ಬಬ್ಬುಸ್ವಾಮಿ ಬಾಲ್ಯದಲ್ಲಿ ದನಕರುಗಳನ್ನು ತೊಳೆಯುತ್ತಿದ್ದ ಅವುಗಳಿಗೆ ನೀರು ಕುಡಿಸುತ್ತಿದ್ದ **'ದೇವರ ಕೆರೆ'**ಯೂ ಈ ಕ್ಷೇತ್ರದಲ್ಲಿದೆ.



**ಉದ್ಭವಲಿಂಗ ಕ್ಷೇತ್ರ**



**ಕಲ್ಲು ಚಪ್ಪರ**



**ಕೋಣಗಳನ್ನು ಮಾಯ ಮಾಡಿದ ಕಲ್ಲು**



**ದೇವರ ಕೆರೆ**

- ಶ್ರೀ ಬಬ್ಬುಸ್ವಾಮಿ ಯಕ್ಷನಿಗೆ ಶಾಪದಿಂದ ಮುಕ್ತಿ ನೀಡಿದ ಹರಿಬ್ರಹ್ಮರ ಕೆರೆ. **ಹರಿಬ್ರಹ್ಮರ ಕೆರೆ** ಉಡುಪಿ ರಾಷ್ಟ್ರೀಯ ಹೆದ್ದಾರಿ ಸಂತೆಕಟ್ಟೆಯಿಂದ ಪಶ್ಚಿಮಕ್ಕೆ ಸುಮಾರು 4 ಕಿ.ಮೀ. ದೂರದಲ್ಲಿದೆ. ಈ ಕೆರೆಗೆ ಐತಿಹಾಸಿಕ ಹಿನ್ನೆಲೆ ಇದೆ.

ಕೌಂಡಿನ್ಯ ಮುನಿಯ ಪತ್ನಿಯು ಸ್ನಾನ ಮಾಡುವಾಗ ಯಕ್ಷ, ಮೊಸಳೆಯ ರೂಪ ತಾಳಿ ಆಕೆಯ ದೇಹ ಸೌಂದರ್ಯವನ್ನು ಸವಿಯುತ್ತಾನೆ. ಇದನ್ನರಿತ ಕೌಂಡಿನ್ಯ ಮುನಿಯು, 'ನೀನು ಇನ್ನು ಮುಂದಕ್ಕೆ ಇದೇ ರೂಪವನ್ನು ತಾಳು' ಎಂದು ಯಕ್ಷನಿಗೆ ಶಾಪ ಕೊಡುತ್ತಾನೆ. ಆಗ ಯಕ್ಷ ತನ್ನ ತಪ್ಪಿಗೆ ಕ್ಷಮೆ ಯಾಚಿಸುತ್ತಾನೆ. ಆಗ ಕೌಂಡಿನ್ಯ ಮುನಿಯು 'ಮುಂದೊಂದು ಸಂದರ್ಭದಲ್ಲಿ ಶಿವನ ಅಂಶ ಪಡೆದು ಮಹಾಶಕ್ತಿವಂತನೊಬ್ಬ ಜನಿಸುತ್ತಾನೆ. ಆತನ ಪಾದ ಸ್ಪರ್ಶದಿಂದ ನಿನಗೆ ಶಾಪ ವಿಮೋಚನೆಯಾಗುವುದು' ಎಂಬುದಾಗಿ ಪರಿಹಾರವನ್ನು ಸೂಚಿಸುತ್ತಾನೆ. ಅದು ನಿಮಿತ್ತವು ಬಾರಗರ ಮಕ್ಕಳ ಕುತಂತ್ರದಿಂದ ಕಪಿಲೆಯ ಕರುವು ಮೊಸಳೆಯ ಬಾಯಿಗೆ ತುತ್ತಾಗುತ್ತದೆ. ಮುಂದೆ ಬಾರಗರ ಮಕ್ಕಳ ಕಾರಣದಿಂದ ಹರಿಬ್ರಹ್ಮರ ಕೆರೆಯಲ್ಲಿ ಬಬ್ಬು ತನ್ನ ಪ್ರೀತಿಯ ಕಪಿಲೆಯ ಕರುವನ್ನು ಮೊಸಳೆಯ ಬಾಯಿಂದ ರಕ್ಷಿಸುತ್ತಾನೆ. ಹೀಗೆ ಯಕ್ಷನಿಗೆ ಮೊಸಳೆ ಜನ್ಮದಿಂದ ಮುಕ್ತಿ ಸಿಗುತ್ತದೆ. ಬಬ್ಬುವಿಗೆ ಮಂತ್ರಶಕ್ತಿಯೊಂದು ಒದಗಿ ಬರುತ್ತದೆ. ತನ್ನ ಸ್ಥಿತಿ ಮುಂದೇನು ಎಂದು ಯಕ್ಷ ಬಬ್ಬುವಿನಲ್ಲಿ ನಿವೇದಿಸಿದಾಗ, ಬಬ್ಬು**'ಕುಕ್ಕುಡೆ'** ಎಂಬ ಸ್ಥಳದಲ್ಲಿ ಸಿರಿಯಾಗಿ ನೆಲೆಸುವಂತೆ ಯಕ್ಷನಿಗೆ, ಅಭಯವನ್ನಿತ್ತು ಆತನಿಗೊಂದು ನೆಲೆಯನ್ನು ನೀಡುತ್ತಾನೆ.

ಮೂವರು ಮುಗೇರರು, ತನ್ನಿಮಾನಿಗ ಮುಳುಗಿ ಮಾಯವಾದ **'ಶ್ರೀ ಬ್ರಹ್ಮರ ಗುಡಿ'**ಯೂ ಬಬ್ಬುಸ್ವಾಮಿ ದನಗಳನ್ನು ಮೇಯಿಸುತ್ತಿದ್ದ **'ಅರ್ಕಲ್ಲಗುಡ್ಡೆ ಬೊರ್ಗಲ್ಲ ಪದವು'** ಈ ಕ್ಷೇತ್ರದಲ್ಲಿದೆ. ಕಲ್ಲಿನ ಮೇಲೆ ಬಬ್ಬುಸ್ವಾಮಿ ಕುಳಿತುಕೊಳ್ಳುತ್ತಿದ್ದರಂತೆ, ಈ ಸ್ಥಳವನ್ನು ಹೊರತುಪಡಿಸಿ, ಈಗ ಇಲ್ಲಿರುವ ಸುತ್ತಲಿನ ಜಾಗಗಳೆಲ್ಲಾ ಆಟದ ಮೈದಾನವಾಗಿ ಪರಿವರ್ತಿತಗೊಂಡಿದೆ.



**ಹರಿಬ್ರಹ್ಮರ ಕೆರೆ**



**ಯಕ್ಷನಿಗೆ ಮೋಕ್ಷ ನೀಡಿದ್ದು**



**ಶ್ರೀ ಬ್ರಹ್ಮರ ಗುಡಿ**

- ಶ್ರೀ ಬಬುಸ್ವಾಮಿ ನಿರ್ಮಿಸಿದ ಸುಂದರವಾದ ಕಲಾತ್ಮಕ ಕೋಟೆಯ ಕುರುಹುಗಳಿರುವ, ವೀರಭದ್ರ ಸ್ವಾಮಿಯ ವಿಗ್ರಹವಿರುವ ಹಾಗೂ ಬಬ್ಬುಸ್ವಾಮಿಯ ಪುಣ್ಯಪಾದದ ಹೆಜ್ಜೆಯ ಗುರುತಿರುವ ಪುಣ್ಯಕ್ಷೇತ್ರ ಈ **ಬಾರ್ಕೂರು ಕೋಟೆ**. ಬಾರ್ಕೂರಿನಿಂದ ಮಂದಾರ್ತಿಗೆ ಹೋಗುವ ರಸ್ತೆಯಲ್ಲಿ ಪೂರ್ವ ಭಾಗಕ್ಕೆ ಸುಮಾರು 1.5 ಕಿ.ಮೀಟರ್ ದೂರದಲ್ಲಿ ಈ ಸ್ಥಳವಿದೆ.



**ಕೋಟೆಯ ಕುರುಹು**



**ವೀರಭದ್ರ ಸ್ವಾಮಿ**



**ಬಬ್ಬುಸ್ವಾಮಿ ಹೆಜ್ಜೆ ಗುರುತು**



**ಶ್ರೀ ಬಬ್ಬುಸ್ವಾಮಿಯ ಪಾದ**

- ಗಂಗೊಳ್ಳಿಯ **ಬಬ್ಬು ಕುದುರು,** ಶ್ರೀ ಬಬ್ಬುಸ್ವಾಮಿ ಮೀನು ಹಿಡಿಯುತ್ತಿದ್ದ ಸ್ಥಳ ಇದಾಗಿದೆ. ಈ ಸ್ಥಳ ಮುರು ಮೀನುಗಳ ಜೊತೆ ಬಬ್ಬುವಿಗಿದ್ದ ಭಕ್ತಿಗೆ ಸಾಕ್ಷಿಯಾಗಿದೆ. ಮುಂಡಾಳರಿಗೆ ಈ ಮೂಲಕ ಸಂದೇಶ ನೀಡಿದ ಸ್ಥಳ. ಕುಂದಾಪುರ ಬಸ್ ನಿಲ್ದಾಣದಿಂದ ಸುಮಾರು 1 ಕಿ.ಮೀ. ದೂರದಲ್ಲಿ ಪಂಚ ನದಿಗಳು ಸಂಗಮಿಸುವ ಪಂಚ ಗಂಗಾವಳಿ ನದಿಯ ಮಧ್ಯಭಾಗದಲ್ಲಿ **'ಬಬ್ಬು ಕುದುರು'** ಕಂಗೊಳಿಸುತ್ತಿವೆ.
- **ದೊಡ್ಡಣ್ಣ ಗುಡ್ಡೆ ಕ್ಷೇತ್ರ,** ಶ್ರೀ ಧೂಮಾವತಿಯೊಂದಿಗೆ ಶ್ರೀ ಬಬ್ಬುಸ್ವಾಮಿ ಪಂಥವನ್ನು ಆಹ್ವಾನಿಸಿದ ಸ್ಥಳ. ಉಡುಪಿ ರಾಷ್ಟ್ರೀಯ ಹೆದ್ದಾರಿ ಕರಾವಳಿ ಬೈಪಾಸಿನಿಂದ್ 2.5 ಕಿ.ಮೀ. ದೂರದಲ್ಲಿ ಈ ಕ್ಷೇತ್ರವಿದೆ.



**ಪಂಥ ನಡೆಸಿದ ಸ್ಥಳ**



**ಸಪ್ತಮೇಳಗಳು**



**ಶ್ರೀ ಬಬ್ಬುಸ್ವಾಮಿ ಕ್ಷೇತ್ರ**

- ಶ್ರೀ ಬಬ್ಬುಸ್ವಾಮಿ ಮತ್ತು ಶ್ರೀ ತನ್ನಿಮಾನಿಗ ಅಣ್ಣತಂಗಿಯರಾಗಿ ಒಗ್ಗೂಡಿದ ಕ್ಷೇತ್ರ ಇದಾಗಿದೆ. **ಕಂಚಿನಡ್ಕದ** ಮಿಂಚಿನ ಬಾವಿಗೆ ಇಳಿಸಿ ಜೀವಂತ ಸಮಾಧಿಗೊಳಿಸಿದ ಸಂದರ್ಭದಲ್ಲಿ ಶ್ರೀ ಭಗವಾನ್ ಬಬ್ಬುಸ್ವಾಮಿ ಪಾತಾಳಲೋಕಕ್ಕೆ ಇಳಿಯುತ್ತಾರೆ. ಅಲ್ಲಿ ಮಹಾಶೇಷನೊಂದಿಗೆ ಏಳು ರಾತ್ರಿ, ಎಂಟು ಹಗಲು ಕಾಳಗ ನಡೆಸಿ, ಅವನ ಎಡೆಯ ಮಣಿಯನ್ನೆ ಕರಿಗಂಧವನ್ನಾಗಿಸಿದ ಬಾವಿ ಈ ಕ್ಷೇತ್ರದಲ್ಲಿದೆ. ಈ ಬಾವಿ ಇಂದು **'ತೀರ್ಥಬಾವಿ'** ಎಂದು ಪ್ರಸಿದ್ಧಿ ಪಡೆದಿದೆ. ನಾಡಿನ ಬೇರೆ ಬೇರೆ ಸ್ಥಳಗಳಿಂದ ಮುಂಡಾಳ ಜನಾಂಗ, ಮುಂಡಾಳೇತರರು ಬಂದು ಈ ಬಾವಿಯ ನೀರನ್ನು ತೆಗೆದುಕೊಂಡು ಹೋಗುತ್ತಾರೆ. ಕೆಲವರು ಅಲ್ಲೇ ತಲೆಗೆ ನೀರನ್ನು ಎರೆದುಕೊಂಡಾಗ ರೋಗ ರುಜಿನಗಳು, ಸೋಂಕು, ಮಾಟ, ಮಂತ್ರಗಳ ದೋಷ ನಿವಾರಣೆಯಾಗುತ್ತದೆ. ಈ ತೀರ್ಥಬಾವಿಯಲ್ಲಿರುವ ಜಲ ಕದ್ರಿ, ಸುಬ್ರಹ್ಮಣ್ಯ ತೀರ್ಥದಷ್ಟೇ ಪವಿತ್ರವಾದುದು. ಶ್ರೀ ಬಬ್ಬುಸ್ವಾಮಿ ತಪ್ಪು ಮಾಡಿದ್ದಕ್ಕೆ ತನ್ನ ಹಣೆಯನ್ನು ಕಲ್ಲಿನಿಂದ ಜಜ್ಜಿ ಭೂಮಿತಾಯಿಗೆ ರಕ್ತತರ್ಪಣ ಮಾಡಿದ ಪುಣ್ಯ ಭೂಮಿ ಈ **ಕಂಚಿನಡ್ಕ.**



**ಗೆರಟೆಯಿಂದ ಬಬ್ಬು ನಿರ್ಮಿಸಿದ ಬಾವಿ**



**ನವೀಕೃತಗೊಂಡ ತೀರ್ಥಬಾವಿ**

- ಕುಂಞಿಪೂಜಾರ್ತಿಗೆ ದಿವ್ಯ ದರುಶನ ನೀಡಿದ **ಶ್ರೀ ಕ್ಷೇತ್ರ ಕೊಡಂಕೂರು**– ಉಡುಪಿಯ ರಾಷ್ಟ್ರೀಯ ಹೆದ್ದಾರಿ ಕರಾವಳಿ ಬೈಪಾಸಿನಿಂದ ಪಶ್ಚಿಮಕ್ಕೆ ಸುಮಾರು 3 ಕಿಮೀ. ದೂರದಲ್ಲಿದೆ. ಬಬ್ಬು ಕೊಡಂದೂರು ಕ್ಷೇತ್ರದಲ್ಲಿ ಕೋಟೆ ನಿರ್ಮಿಸುವ ಸಂದರ್ಭದಲ್ಲಿ ಬೆಲ್ಲ ನೀರು ಕೊಟ್ಟು ಸಲಹಿದ ತಾಯಿ ಕುಂಞಿಪೂಜಾರ್ತಿ. ಶ್ರೀ ಬಬ್ಬುಸ್ವಾಮಿ ಮತ್ತು ಶ್ರೀ ತನ್ನಿಮಾನಿಗದೇವಿಯು ಕೊಡಂಕೂರಿಗೆ ಕುಂಞಿಪೂಜಾರ್ತಿಯ ಮನೆಗೆ ಬರುತ್ತಾರೆ. ತ್ರೇತಾಯುಗದಲ್ಲಿ ಶಬರಿ ಶ್ರೀರಾಮಚಂದ್ರನಿಗಾಗಿ ಕಾದು ಕುಳಿತು ತನ್ನ ಜೀವನವನ್ನು ಸಾರ್ಥಕಗೊಳಿಸುವಂತೆ, ಕೊಡಂಕೂರು ಕುಂಞಿ ಪೂಜಾರ್ತಿ ಶರಾಬು, ಶೇಂದಿ, ಕರಿದ ಮೀನನ್ನು ಹಿಡಿದುಕೊಂಡು ಭಗವಾನ್ ಶ್ರೀ ಬಬ್ಬುಸ್ವಾಮಿಗಾಗಿ ಕಾದು ಕುಳಿತ್ತಿರುತ್ತಾಳೆ. ಮಾಯೆಯಿಂದ ಈ ವಿಚಾರ ತಿಳಿದ ಬಬ್ಬುಸ್ವಾಮಿ ತಂಗಿ ತನ್ನಿಮಾನಿಗಳೊಂದಿಗೆ ಕೊಡಂಕೂರಿಗೆ ಬಂದು ಕುಂಞಿ ಪೂಜಾರ್ತಿಯನ್ನು ಭೇಟಿ ಮಾಡಿ, ಆಕೆಯ ಭಕ್ತಿಗೆ ಮೆಚ್ಚಿ ಮಾಯವಾಗಿ ಅಲ್ಲೇ ಲಿಂಗವಾಗಿ ಉದ್ಭವಿಸುತ್ತಾರೆ. ಇಂದಿಗೂ ಕುಂಞಿ ಪೂಜಾರ್ತಿಯ ಮನೆಯ

ಹಿಂದೆ **'ಉಧ್ಭವಲಿಂಗ'** ಕೋರ್ದಬ್ಬು ದೈವಸ್ಥಾನವಿದೆ. (ಬಬ್ಬುಸ್ವಾಮಿ ಮದ್ಯಪಾನೀಯ ಸ್ವೀಕರಿಸುವುದಿಲ್ಲ, ನೇಮೋತ್ಸವದಲ್ಲಿ ಕೆಲವು ಕಡೆ ಈ ಪದ್ಧತಿಯನ್ನು ಅನುಸರಿಸಿದ್ದಾರೆ)



**ಶ್ರೀ ಬಬ್ಬುಸ್ವಾಮಿ, ತನ್ನಿಮಾನಿಗ ಉದ್ಬವಲಿಂಗ**



**ಕುಂಞ ಪೂರ್ಜಾರ್ತಿ ಮನೆ**

- ಬಬ್ಬರ್ಯನ ಅಹಂನ್ನು ನಿವಾರಿಸಿ ಮಣಿಸಿದ ದೈವ ಶ್ರೀ ಬಬ್ಬುಸ್ವಾಮಿ. ಇಲ್ಲಿ **ಬಬ್ಬರ್ಯನ ಪಾದೆ** ಇದೆ. ಮಂಜೇಶ್ವರದಿಂದ ಪಶ್ಚಿಮಕ್ಕೆ ಸುಮಾರು 2.5 ಕಿ.ಮೀ. ದೂರದಲ್ಲಿ ಸಮುದ್ರದ ಕಿನಾರೆ ಇದೆ. ಬಬ್ಬರ್ಯ ತನ್ನ ಒಂದು ಕಾಲನ್ನು ಆಗುಂಬೆ ಘಾಟಿಯಲ್ಲೂ, ಇನ್ನೊಂದು ಕಾಲನ್ನು ಮಂಜೇಶ್ವರದ ಕಡಲ ಕಿನಾರೆಯಲ್ಲಿರುವ ಬಂಡೆಗಲ್ಲಿನ ಮೇಲು ಇಟ್ಟು ಗಂಗೆಸ್ನಾನಕ್ಕೆ ಹೋಗುವ ರಾಜನ್ ದೈವಗಳನ್ನು ಅವಮಾನಗೊಳಿಸಿದ ಸ್ಥಳ, ಮುಂದೆ ಬಬ್ಬುಸ್ವಾಮಿ ತನ್ನ ಅವತಾರಗಳನ್ನು ತೋರಿ ಬಬ್ಬರ್ಯನ ಎರಡೂ ಕಾಲುಗಳನ್ನು ತುಂಡರಿಸಿ – ಮೋಕ್ಷ ಕಲ್ಪಿಸಿಕೊಟ್ಟ ಸ್ಥಳ ಇದಾಗಿದೆ.



**ಬಬ್ಬರ್ಯನ ಪಾದೆ**



**ಶ್ರೀ ಬಬ್ಬುಸ್ವಾಮಿ ಕ್ಷೇತ್ರ, ಮಂಜೇಶ್ವರ**

- ಅತ್ರಾಡಿಕಲದಲ್ಲಿ ಶ್ರೀ ಬಬ್ಬುಸ್ವಾಮಿಯ ಬರುವಿಕೆಗಾಗಿ **'ಕಹಿಮಾವು ಸಿಹಿಕಾಯರ್'** ಬುಡದಲ್ಲಿ ಕಾದು ಕುಳಿತಿರುತ್ತಾರೆ ಶ್ರೀ ಕಂಬೆರ್ಲು ದೇವರು ಶ್ರೀ ಬಬ್ಬುಸ್ವಾಮಿಯ ಆಗಮನದಿಂದ. ಸೂರ್ಯಚಂದ್ರರು ಒಂದಾದಂತೆ, ಕಂಬೆರ್ಲು ಹಾಗೂ ಶ್ರೀ ಬಬ್ಬುಸ್ವಾಮಿ ಒಂದಾಗುತ್ತಾರೆ. ಈ ಪುಣ್ಯಕ್ಷೇತ್ರವೇ ಆತ್ರಾಡಿಕಲ. ಈ **ಕಂಬೆರ್ಲು ಕ್ಷೇತ್ರ**ದಲ್ಲಿ ದುಡಿಯುವ ವರ್ಗದ ಬೆಲೆಯನ್ನು ಶ್ರೀ

ಬಬ್ಬುಸ್ವಾಮಿ ಮತ್ತು ಶ್ರೀ ಕಂಬೆರ್ಲು ತಮ್ಮ ಕಾರಣಿಕವನ್ನು ತೋರಿಸಿಕೊಟ್ಟು ಮೆರೆಯುತ್ತಾರೆ. ಇಂತಹ ಈ ಪುಣ್ಯ ಕ್ಷೇತ್ರವು ಮಣಿಪಾಲದಿಂದ ಪೂರ್ವಕ್ಕೆ ಸುಮಾರು ಮೂರು ಕಿ.ಮೀ. ದೂರದಲ್ಲಿದೆ.




**ಆತ್ರಾಡಿ ಕಲ**

- ಐತಿಹಾಸಿಕ ಛಾಪುವುಳ್ಳ **'ಮುದ್ದೊಟ್ಟು ಪಾದೆ'**. ತನ್ನ ಸಾಕು ತಾಯಿ ಶ್ರೀ ಸಿರಿಗೊಂಡೆಯನ್ನು ನೋಡಬೇಕೆಂಬ ಉತ್ಕಟ ಆಸೆಯುಂಟಾದ ಕಾರಣ ಮುದ್ದೊಟ್ಟು ಪಾದೆಯ ಬಳಿ ಬಂದು ತನ್ನ ಖಡ್ಗದಿಂದ 16 ಗೆರೆ ಹಾಕಿ, 16 ಮೆಟ್ಟಿಲುಗಳನ್ನು ನಿರ್ಮಿಸುತ್ತಾರೆ, ಬಬ್ಬುಸ್ವಾಮಿ. ಈ ಮೆಟ್ಟಿಲುಗಳನ್ನು ಏರಿ ಶ್ರೀ ಬ್ರಹ್ಮರ ಭೇಟಿ ಮಾಡಲೆಂದು ಮುಂದೆ ಹೆಜ್ಜೆ ಇಟ್ಟಾಗ ಬಬ್ಬುವಿನ ಪುಣ್ಯ ಪಾದವು ಬಂಡೆ ಕಲ್ಲಿನಲ್ಲಿ ಹೂತು ಹೋಗುತ್ತದೆ. ಬಬ್ಬುವಿನೊಂದಿದ್ದ ಕಪಿಲೆಯ ಹೆಜ್ಜೆಗಳು ಇಲ್ಲಿ ಹೂತುಬಿಡುತ್ತದೆ. ರಾಷ್ಟ್ರೀಯ ಹೆದ್ದಾರಿಕಾಪುವಿನಿಂದ ಪೂರ್ವಕ್ಕೆ ಮಂಚಕಲ್ಲು ರಸ್ತೆಯಾಗಿ ಸುಮಾರು 7 ಕಿ.ಮೀ. ದೂರದಲ್ಲಿ ಈ **"ಮುದ್ದೊಟ್ಟು ಪಾದೆ"** ಇದೆ. ಬಬ್ಬುವಿನಿಂದ ನಿರ್ಮಿತವಾದ ಈ 16 ಮೆಟ್ಟಿಲುಗಳು ಇಂದು ಕಾರಣಿಕದ ಮೆಟ್ಟಿಲುಗಳಾಗಿವೆ.





**ಸ್ವಾಮಿ ನಿರ್ಮಿಸಿದ 16 ಮೆಟ್ಟಿಲುಗಳು** | **ಕಪಿಲೆಯ ಹೆಜ್ಜೆ ಗುರುತಿರುವ ಕಲ್ಲು** | **ಶ್ರೀ ಬ್ರಹ್ಮರಗುಡಿ**

- ಉಚ್ಚಿಲದಿಂದ ಪೂರ್ವಕ್ಕೆ ಸುಮಾರು 5 ಕಿ.ಮೀ. ದೂರದಲ್ಲಿ **ಎಲ್ಲೂರು ಗುತ್ತಿ**ನ ಮನೆಯಿದೆ. ಎಲ್ಲೂರು ಮಹಾತೋಭಾರ ಶ್ರೀ ವಿಶ್ವನಾಥ ದೇವರಲ್ಲಿ ಬಬ್ಬುಸ್ವಾಮಿ ತನಗೆ ನೆಲೆಯೂರಲು ಅಂಗೈ ಅಗಲ ಸ್ಥಳ ಬೇಕು ಎಂದು ಕೇಳಿದಾಗ, **ವಿಶ್ವನಾಥ ದೇವರು** **'ಎಲ್ಲೂರು ಗುತ್ತಿಗೆ'** ಹೋಗಲು ಬಬ್ಬುಸ್ವಾಮಿಗೆ ಆದೇಶಿಸುತ್ತಾರೆ. ಅಲ್ಲಿ ಗಂಡು ಸಂತಾನವಿಲ್ಲದ ಶ್ರೀ ದಾರಮ್ಮ ಬಳ್ಳಾಲ್ದಿಯು ಕೊರಗುತ್ತಿರುವುದು ಬಬ್ಬುವಿಗೆ ತಿಳಿಯುತ್ತದೆ. ಬಬ್ಬು ತನ್ನ ಮಾಯಾವಿ ಶಕ್ತಿಯಿಂದ ಶ್ರೀ ದಾರಮ್ಮ ಬಳ್ಳಾಲ್ದಿಯ ಸಮಸ್ಯೆಯನ್ನು ಬಗೆಹರಿಸುತ್ತಾನೆ. ಆಗ ಬಬ್ಬುವನ್ನು ಸನ್ಯಾಸಿ ಕಟ್ಟೆಗೆ

ಹೋಗಲು ಶ್ರೀ ದಾರಮ್ಮ ಬಳ್ಳಾಲ್ದಿಯು ತಿಳಿಸಿದಾಗ, ಬಿಳಿಯ ಹುಂಜನ ರೂಪದಲ್ಲಿ ಭಗವಾನ್ ಶ್ರೀ ಬಬ್ಬುಸ್ವಾಮಿ ಹೋಗುತ್ತಾನೆ. ಇಂದಿಗೂ ಬಬ್ಬುಸ್ವಾಮಿ ಬಿಳಿಯ ಹುಂಜವಾಗಿ ಕುಳಿತ ಕಲ್ಲನ್ನು ನಾವು ಎಲ್ಲೂರುಗುತ್ತಿನಲ್ಲಿ ಕಾಣಬಹುದು.



**ಎಲ್ಲೂರುಗುತ್ತಿನ ಮನೆ**



**ಹುಂಜನಾಗಿ ಕುಳಿತ ಕಲ್ಲು**



**ಶ್ರೀ ವಿಶ್ವನಾಥ ದೇವಸ್ಥಾನ**

- ರಾಷ್ಟ್ರೀಯ ಹೆದ್ದಾರಿ ಎರ್ಮಾಳಿನಿಂದ, ಅದಮಾರು ಮಠದ ರಸ್ತೆಯಾಗಿ ಪೂರ್ವ ದಿಕ್ಕಿಗೆ ಸುಮಾರು 2.5 ಕಿ.ಮೀ. ದೂರದಲ್ಲಿರುವ ಸ್ಥಳವೇ **'ಸನ್ಯಾಸಿ ಕಟ್ಟೆ'**. ಮಾನವರೂಪದಲ್ಲಿ ಸಂಚರಿಸಿ, ಸನ್ಯಾಸಿಕಟ್ಟೆಯಲ್ಲಿ ತಪಸ್ಸನ್ನು ಮಾಡುತ್ತಿದ್ದ ಸಾವಿರದ ಒಂದು ಜನ ಸಂನ್ಯಾಸಿಗಳಲ್ಲಿ ತನಗೂ ನಿಮ್ಮೊಂದಿಗೆ ತಪಸ್ಸು ಮಾಡಲು ಸ್ಥಳ ಕೊಡಿ ಎಂದಾಗ, ಆ ಸನ್ಯಾಸಿಗಳು ಬಬ್ಬುವನ್ನು ಜಾತಿ ನಿಂದನೆ ಮಾಡಿ ಅವಮಾನಿಸುತ್ತಾರೆ. ಆ ಸಂದರ್ಭದಲ್ಲಿ ತಪೋನಿರತರಾದ ಸಾವಿರದೊಂದು ಸಂನ್ಯಾಸಿಗಳನ್ನು ಮಾಯ ಮಾಡಿ, ಒಬ್ಬ ಸನ್ಯಾಸಿ ತಾನೆಂದು ಶ್ರೀ ಬಬ್ಬುಸ್ವಾಮಿಯು ಸನ್ಯಾಸಿ ಕಟ್ಟೆಯ ಪುಣ್ಯ ಮಣ್ಣಿನಲ್ಲಿ ನೆಲೆಯಾಗುತ್ತಾರೆ.



**ಸನ್ಯಾಸಿಗಳನ್ನು ಮಾಯ ಮಾಡಿದ ಸ್ಥಳ**



**ಸನ್ಯಾಸಿಕಟ್ಟೆ ಶ್ರೀ ಬಬ್ಬುಸ್ವಾಮಿ ಕ್ಷೇತ್ರ**

- ರಾಷ್ಟ್ರೀಯ ಹೆದ್ದಾರಿ ಎರ್ಮಾಳಿನಿಂದ ಪಶ್ಚಿಮಕ್ಕೆ 2 ಕಿ.ಮೀ. ದೂರದಲ್ಲಿರುವ **ಅಳ್ವೆಕೋಡಿ**ಯಲ್ಲಿ ಹಡಗನ್ನು ಮಾಯ ಮಾಡಿ ಕಾರ್ಣಿಕ ಮೆರೆಯುತ್ತಾನೆ ಭಗವಾನ್ ಶ್ರೀ ಬಬ್ಬುಸ್ವಾಮಿ.
ಶ್ರೀ ಬಬ್ಬುಸ್ವಾಮಿಯು ಶ್ರೀ ಜನಾರ್ಧನ ದೇವಸ್ಥಾನದ ಅರ್ಚಕ ಹಾಗೂ ಮುಸ್ಲಿಂ ಧರ್ಮಗುರುವನ್ನೊಳಗೊಂಡು ಅಳ್ವೆಕೋಡಿಗೆ ಬರುತ್ತಾನೆ. ಆಗ ಮುಸ್ಲಿಂ ಧರ್ಮಗುರುಗಳು ತಮ್ಮ ತಲೆಯಲ್ಲಿದ್ದ ರುಮಾಲನ್ನು ಹರಿಯುವ ನೀರಿಗೆ ಹಾಕುತ್ತಾರೆ. ರುಮಾಲು ಚಲಿಸದೆ ಸ್ಥಿರವಾಗಿ ನೀರಲ್ಲಿ ನಿಲ್ಲುತ್ತದೆ. ಆಗ ದೊಡ್ಡ ಹಡಗೊಂದು ಅತ್ತ ಬರುತ್ತಿರಲು ಬಬ್ಬುಸ್ವಾಮಿ ತನ್ನ ಮಂತ್ರ

ಶಕ್ತಿಯಿಂದ ಹಡಗನ್ನು ಮಾಯಕ ಮಾಡುತ್ತಾನೆ. ಅದರ ಕೊಂಬಿನ ಮರ ಮಾತ್ರ ಈಗ ಕಾಣಸಿಗುತ್ತದೆ. ರುಮಾಲು ಸ್ಥಿರವಾಗಿ ನಿಂತ ಊರು ಕಾಲಕ್ರಮೇಣ **'ಎರ್ಮಾಳು'** ಎಂದಾಯಿತು.



**ಕೊಂಬಿಮರ**



**ಅಲಂಕೃತ ಕೊಂಬಿಮರ**

- ಪಡುಬಿದ್ರೆ ಸಾವಿರ ಸೀಮೆಯ ಬ್ರಹ್ಮಸ್ಥಾನದ ಶ್ರೀ ಬ್ರಹ್ಮರನ್ನು ಭೇಟಿ ಮಾಡಲು ಶ್ರೀ ಭಗವಾನ್ ಬಬ್ಬುಸ್ವಾಮಿ ಬರುವ ವೇಳೆ ಶ್ರೀ ಬ್ರಹ್ಮರು ಢಕ್ಕೆ ಬಲಿ ಉತ್ಸವ ವೈಭವದ ಸೇವೆಯಲ್ಲಿ ಮೈಮರೆತ್ತಿದ್ದರು. ಶ್ರೀ ಬ್ರಹ್ಮರು ತಾನು ಬಂದರೂ ತನ್ನನ್ನು ಬ್ರಹ್ಮರು ಗಮನಿಸದೇ ಇದ್ದಾಗ ಬಬ್ಬು ಕೋಪಗೊಂಡು ತನ್ನ ಬಲ ಕಾಲನ್ನು **ಬ್ರಹ್ಮರ ಗುಡಿಯ** ಮೇಲ್ಛಾವಣಿಗೆ ಇಡುತ್ತಾನೆ. ಮೇಲ್ಛಾವಣಿ ಬಿದ್ದು ಹೋಗುತ್ತದೆ. ಶ್ರೀ ಬ್ರಹ್ಮರು ಬಬ್ಬುವಿನ ಬಳಿ ಬಂದಾಗ ಬಬ್ಬು ನನಗೆ ನೆಲೆ ನಿಲ್ಲಲು ಅಂಗೈ ಅಗಲದ ಜಾಗ ಬೇಕೆಂದು ಕೇಳುತ್ತಾನೆ. 'ಇಲ್ಲಿ ನನಗೆ ಹೇಗೆ ಗುಡಿಗೋಪುರ ಇಲ್ಲದೆ ಹೋಯಿತೋ, ಹಾಗೆಯೇ ನಿನಗೂ ಇಲ್ಲಿ ಗುಡಿಗೋಪುರ ಇರಬಾರದೆಂದು' ಬ್ರಹ್ಮರು ಕೋಪದಿಂದ ನುಡಿಯುತ್ತಾರೆ. ಮುಂದೆ ಪಡುಮನೆಗೆ ಬಂದ ಬಬ್ಬುಸ್ವಾಮಿ ಸ್ವಜಾತಿಯವನಾದ ಕೆಮ್ಮಡೆ ಕರಿಯನಲ್ಲಿ ಕುಡಿಯಲು ನೀರು ಕೇಳಿತ್ತಾನೆ, ಕೆಮ್ಮಡೆ ಕರಿಯನು ಮಣ್ಣಿನ ಮಡಕೆಯಲ್ಲಿ ನೀರು ತರುತ್ತಾನೆ. ಒಳಹೋಗಿ ಹೊರ ಬಂದಾಗ ನೀರು ಕೇಳಿದ ಅಪರಿಚಿತ ವ್ಯಕ್ತಿ ಕಾಣುವುದಿಲ್ಲ. ಅವನ ಅಶರೀರವಾಣಿ ಕೇಳುತ್ತದೆ. 'ಜೋಡು ಕರ್ಮರಿನ ಮರದ ಬುಡದಲ್ಲಿ

ನೀರನ್ನಿಡಲು'ಬಬ್ಬು ಮಾಯದಲ್ಲಿ ಹೇಳುತ್ತಾನೆ. **ಕೆಮ್ಮಡೆ** ಅಲ್ಲಿ ನೀರಿಟ್ಟ ತಕ್ಷಣ ಕಲಶದ ನೀರು ಅಲ್ಲಿಯೇ ಸ್ಥಿರವಾಗಿ ಹೂತು ಬಿಡುತ್ತದೆ. ಜೋಡು ಮಾರ್ಗ ಮುಚ್ಚಿದ ಬಾಗಿಲು, ಕೆಮ್ಮಡೆ ಕರಿಯ ಗುಂಡಿಯ ಕಡವು, **ಶ್ರೀ ಕ್ಷೇತ್ರ ಹೆಜಮಾಡಿಕಲ**ದಲ್ಲಿ ಈ ರೀತಿಯಾಗಿ ಬಬ್ಬುಸ್ವಾಮಿ ನೆಲೆ ನಿಲ್ಲುತ್ತಾನೆ. ವಿಶೇಷವೆಂದರೆ ಇಲ್ಲಿ ಶ್ರೀ ಬ್ರಹ್ಮರಿಗೆ ಗುಡಿಗೋಪುರ ಗಳಿಲ್ಲ, ಬಬ್ಬುಸ್ವಾಮಿಗೂ ಗುಡಿಗೋಪುರಗಳಿಲ್ಲ. ಮುಲ್ಕಿಯಿಂದ ಉತ್ತರಕ್ಕೆ 2.5 ಕಿಮೀ. ದೂರದಲ್ಲಿ ಈ ಪುಣ್ಯ ನೆಲವಿದೆ.




**ಶ್ರೀ ಕ್ಷೇತ್ರ ಹೆಜಮಾಡಿಕಲ**

- ಒಂದು ಮುಸ್ಸಂಜೆ ಬಬ್ಬು **ಬೊಗ್ಗೊರಿಲಚ್ಚಿಲ್**ಗೆ ಬಂದು, ಬುಗರಿಮರದ ಕೆಳಗಡೆ ಗಾಢ ನಿದ್ರೆಗೆ ಜಾರಿದಾಗ ಶ್ರೀ ಬಬ್ಬುಸ್ವಾಮಿಯ ಕಣ್ಣಿಗೆ ದೊಡ್ಡ ಗಾತ್ರದ ಬುಗುರಿಯೊಂದು ಬೀಳುತ್ತದೆ. ನಿದ್ರಾಭಂಗವಾದದ್ದಕ್ಕೆ ಕೋಪಗೊಂಡ ಬಬ್ಬುಸ್ವಾಮಿ 'ನನ್ನ ನಿದ್ರಾಭಂಗವಾದ ಈ ಕ್ಷೇತ್ರದಲ್ಲಿ ನನ್ನ, ಹೋಮ–ನೇಮಗಳು ನಡೆಯುವಾಗ ಸ್ವಲ್ಪವಾದರೂ ಗಲಾಟೆ ಗದ್ದಲ ನಡೆಯುವಂತಾಗಲೆಂದು ಶಾಪ ನೀಡುತ್ತಾರೆ. ಮುಂದೊಮ್ಮೆ ಕಾಂತಬಾರೆ–ಬೂದಬಾರೆಯರು ಸೂರ್ಯೋದಯಕ್ಕೆ ಮುನ್ನ ಪಡುಬಿದ್ರೆಗೆ ಬಂದು ಕಂಬಳದ ದಳಿಗೂಟ (ದರಿಗುಂಟ)ವನ್ನು ಕಿತ್ತುಕೊಳ್ಳಲು ಪ್ರಯತ್ನಿಸುತ್ತಾರೆ. ಆಗ ಪಡುಬಿದ್ರೆಯ ಪಟ್ಟದ ದೈವ ಜೂಮಾದಿ ಸಾವಿರ ಸೂಟೆಯ ಬೆಳಕನ್ನು ಹೊಮ್ಮಿಸುತ್ತಾಳೆ. ಬಿಳಿ ಬುಗುರಿ ಮರದಲ್ಲಿ ಕೋಳಿಯಾಗಿ ಶ್ರೀ ಬಬ್ಬುಸ್ವಾಮಿ ಕಂಚಿನ ಕಂಠದಿಂದ ಕೂಗುತ್ತಾನೆ. **'**ಬೆಳಗಾಯ್ತು, ಬಂದ ಕೆಲಸವಾಗಲಿಲ್ಲ**'** ಎಂದು ಕೋಪಿಸಿದ ಆ ವೀರರು ಕಂಬಳದ ಗದ್ದೆಯ ಮಂಜೊಟ್ಟಿಗೆ ಒದ್ದು ಅಲ್ಲಿಂದ ಕಾಲ್ಗೀಳುತ್ತಾರೆ. ಇಂದಿಗೂ ಪಡುಬಿದ್ರೆ ಬೀಡಿನ ಕಂಬಳದ ಗದ್ದೆಯ ಮಂಜೊಟ್ಟಿ (ಕೋಣಗಳು ಮೇಲೆ ಬರುವ ಜಾಗ) ಓರೆಯಾಗಿದೆ. ರಾಷ್ಟ್ರೀಯ ಹೆದ್ದಾರಿ ಪಡುಬಿದ್ರೆಯಿಂದ ಪೂರ್ವ ದಿಕ್ಕಿಗೆ ಸುಮಾರು 3 ಕಿ.ಮೀ. ದೂರದಲ್ಲಿ ಸುಜ್ಲಾನ್ ಕಂಪನಿಯ ಹೊರ ವಲಯದಲ್ಲಿ ಈ ಪುಣ್ಯಕ್ಷೇತ್ರವಿದೆ.






**ಸ್ವಾಮಿ ನಿದ್ರಿಸಿದ ಸ್ಥಳಬೊಗ್ಗೊರಿಲಚ್ಚಿಲ್**

**ಶ್ರೀ ಬಬ್ಬುಸ್ವಾಮಿ ಕ್ಷೇತ್ರ**

- ಭಗವಾನ್ ಬಬ್ಬುಸ್ವಾಮಿ ಅವರಾಲು ಮಟ್ಟುಕೋಟೆಗೆ ಬರುವಾಗ ತಡರಾತ್ರಿಯಾಗುತ್ತದೆ. ತಾನು ಬಂದ ಕುರುಹಿಗೆ ತನ್ನ ಕೈಯಲ್ಲಿದ್ದ ಎರಡು ಆಯುಧಗಳನ್ನು **ಚಕ್ಕ್‌ಪಾದೆ**ಯ ಮೇಲಿಡುತ್ತಾರೆ. ಪದ್ಮಾಸನ ಹಾಕಿ ಚಕ್ಕ್‌ಪಾದೆಯ ಮೇಲೆ ಕುಳಿತಾಗ ಬಬ್ಬುಸ್ವಾಮಿಗೆ 'ಆಯೆರೆ ಮಟ್ಟು' ಕಾಣಿಸುತ್ತದೆ. ಬಬ್ಬು ಆಯೆರೆ ಮಟ್ಟಿಗೆ ಹೋಗಲು ದೋಣಿಯನ್ನು ನಡೆಸುವಂತೆ 'ಕುಂಞ ಸಪಲ್ಯ'ನಿಗೆ ಕೇಳಿಕೊಂಡಾಗ ಕುಂಞ ಸಪಲ್ಯ ನಿರಾಕರಿಸಿದ್ದು ಮಾತ್ರವಲ್ಲ ಮನಬಂದಂತೆ ಬಬ್ಬುವಿಗೆ ಬಯ್ಯುತ್ತಾನೆ. ಆಗ ಬಬ್ಬು, ಕುಂಞ ಸಪಲ್ಯನ ಸಂತಾನಕ್ಕೆ ಶಾಪವಿಡುತ್ತಾನೆ. ಬಬ್ಬು ಬಳಿಕ ತನ್ನತ್ತ ನೋಡುತ್ತಾ, ಚಕ್ಕ್ ಪಾದೆಯ ಮೇಲೆ ನಿಂತಿರುವ ಕಾಳು, ಬೊಳ್ಳು, ತೌಡು ಎಂಬ ತನ್ನ ಪ್ರೀತಿಯ 3 ನಾಯಿಗಳನ್ನು ಮಾಯ ಮಾಡುತ್ತಾನೆ.

  ಶ್ರೀ ಬಬ್ಬು ಕೋಡಿಕೊಂಡಾಳದಲ್ಲಿ ಆಹಾರ ಸೇವನೆಗೆ ಮೊದಲು, ತನ್ನ ಆಹಾರವನ್ನು ಪ್ರೀತಿಯ ನಾಯಿಗಳಾದ ಕಾಳು, ಬೊಳ್ಳು, ತೌಡುವಿಗೆ ನೀಡುತ್ತಿದ್ದನು. ಈಗಲೂ ಕೋಡಿಕೊಂಡಾಲ ಶ್ರೀ ಬಬ್ಬುಸ್ವಾಮಿಯ ಕ್ಷೇತ್ರದಲ್ಲಿ ಸಂಕ್ರಮಣ, ನೇಮೋತ್ಸವ ಸಂದರ್ಭದಲ್ಲಿ ಒಂದು ಹಿಡಿ ಹೊದ್ದಿಲು, ಅವಲಕ್ಕಿಗಳನ್ನು ಈ ಮೂರು ನಾಯಿಗಳ ಹೆಸರು ಹೇಳಿ ಹೊರಗಡೆ ಹಾಕುತ್ತಿದ್ದಾರೆ. ಚಕ್ಕ್ ಪಾದೆ ಶ್ರೀಕ್ಷೇತ್ರವು ಪಡುಬಿದ್ರೆಯಿಂದ ಪೂರ್ವಕ್ಕೆ ಮೂರು ಕಿ.ಮೀ. ದೂರದಲ್ಲಿದೆ.



**ಆಯುಧ ಇಟ್ಟ ಚಕ್ಕ್‌ಪಾದೆ**



**ಬಂಡೆಗಲ್ಲುಗಳು**



**ನಾಯಿಗಳನ್ನು ಮಾಯ ಮಾಡಿದ ಸ್ಥಳ**



**ಬಬ್ಬುಸ್ವಾಮಿ ಕ್ಷೇತ್ರ, ಮಟ್ಟು**

- ಬಜಪೆಯ **ಆದ್ಯಪಾಡಿ** ಸ್ಥಳವು ಬಬ್ಬುಸ್ವಾಮಿ ಸೌಹಾರ್ದತೆಯನ್ನು ಸಾರಿದ ಸ್ಥಳವಾಗಿದೆ. ಮುಸ್ಲಿಂ ಬಂಧು ಶೇಖರ ಪಂಡಿತರ (ಶೇಖ್ ಪಂಡಿತರ), ಕ್ರೈಸ್ತ ಬಂಧು ಏಸು ಇವರೊಂದಿಗೆ ಸಹಮತದಿಂದ ವೀಳ್ಯದೆಲೆ ಸವಿದ ನೆಲವಿದು. ಬಬ್ಬುಸ್ವಾಮಿ ಮಾನವೀಯ ಮೌಲ್ಯದ ಬಗ್ಗೆ ಈ ತನ್ನ ಬಂಧುಗಳಿಗೆ ಉಪದೇಶ ನೀಡಿದ ಸ್ಥಳವಿದು. ಈ ಕ್ಷೇತ್ರದಲ್ಲಿ ಬಬ್ಬುಸ್ವಾಮಿಯ ನೇಮೋತ್ಸವ, ದರ್ಶನಗಳು ನಡೆದಾಗ, ಬಬ್ಬುಸ್ವಾಮಿ ಮೊದಲು ಶೇಖ್ ಪಂಡಿತರ ವಂಶಸ್ಥರನ್ನು ಕರೆದು ಹೊಗಳುವ ಕ್ರಮ ಈಗಲೂ ಈ ಕ್ಷೇತ್ರದಲ್ಲಿದೆ.



***ಚರ್ಚ್***



***ಕಚ್ಚೂರು ಕ್ಷೇತ್ರ***



***ಮಸೀದಿ***

- ಪೇಜಾವರದ ಪಡ್ಡೋಡಿ **ಕಡೆಂಬಿಸ್ಥಾನ**ದಲ್ಲಿ ಬಬ್ಬುಸ್ವಾಮಿ ನೆಲೆನಿಂತ ಕ್ಷೇತ್ರವಿದೆ. ಈ ಕ್ಷೇತ್ರವೇ ಕಡೆಂಬಿಸ್ಥಾನ. ಬಜಪೆಯಿಂದ ಪಶ್ಚಿಮಕ್ಕೆ ಸುಮಾರು 3 ಕಿ.ಮೀ. ದೂರದಲ್ಲಿದೆ. ಗಂಗೆಸ್ನಾನ ಮಾಡಲೆಂದು ಘಟ್ಟ ಇಳಿದು ಕಡಲಕಿನಾರೆಗೆ ಬರುವ ರಾಜನ್ ದೈವಗಳನ್ನು ಬಬ್ಬರ್ಯ ಅವಮಾನಿಸಿದಾಗ, ರಾಜನ್ ದೈವಗಳು ಶ್ರೀ ಭಗವಾನ್ ಬಬ್ಬುಸ್ವಾಮಿಗೆ ಅಹವಾಲನ್ನು ನೀಡುತ್ತದೆ. ಅಳವತ್ತುಕೊಂಡ ರಾಜನ್ ದೈವಗಳಿಗೆ ಬಬ್ಬುಸ್ವಾಮಿ ಕೆಂಚಿರಾಯನ ರೂಪದಲ್ಲಿ ಬಂದು ಬಬ್ಬರ್ಯನ ಕಾಲು ಮುರಿಯುವ ಮೂಲಕ ಗಂಗೆ ಮೀಯಲು ಅನುವು ಮಾಡಿಕೊಡುತ್ತಾನೆ. ವರ್ಷಗಳು ಉರುಳಿದರೂ ಶ್ರಿ ಬಬ್ಬುಸ್ವಾಮಿಗೆ ಕೊಟ್ಟ ಮಾತನ್ನು ಮರೆತ ರಾಜನ್ ದೈವಗಳಿಗೆ ಬುದ್ಧಿ ಕಲಿಸಲು ತಾನು ಹಾಗೂ ತಂಗಿ ತನ್ನಿಮಾನಿಗ ಕಡೆಂಬಿಸ್ಥಾನಕ್ಕೆ ಬರುತ್ತಾರೆ. "ಬಾಕಿಮಾರು ಗದ್ದೆಯಲ್ಲಿ ತಪ್ಪಂಗಾಯಿ ಆಟದ ಜೂಜು ನಡೆಯುತ್ತಿದೆ. ಅಲ್ಲಿ ಭಾರೀ ದೊಡ್ಡ ನ್ಯಾಯ ಪಂಚಾತಿಕೆಯೊಂದು ಎದುರಾಗಿದೆ. ನೀವು ಅಲ್ಲಿಗೆ ತೆರಳಿ ನ್ಯಾಯ ತೀರ್ಮಾನವನ್ನು ಮಾಡಿ ಬನ್ನಿ. ಅಷ್ಟರವರೆಗೆ ನಿಮ್ಮ ಈ ಕಡೆಂಬಿಸ್ಥಾನಕ್ಕೆ ನಾವು ಕಾವಲಾಗಿ ನಿಲ್ಲುತ್ತೇವೆ" ಎಂದು ಬಬ್ಬು ವಿಲಾಸದಲ್ಲಿ ಮೆರೆಯುತ್ತಿದ್ದ ಆ ದೈವಗಳಿಗೆ ನುಡಿಯುತ್ತಾನೆ.

ಸತ್ಯವೆಂದು ತಿಳಿದ ರಾಜನ್ ದೈವಗಳು ಅಲ್ಲಿ ಹೋಗಿ ನೋಡಿದಾಗ ಯಾವ ಕಲಹವೂ ಆಗಿರದ್ದನ್ನು ಕಂಡು ತಿರುಗಿ ಬಂದು ಬಬ್ಬು ತಮಗೆ ಮೋಸ ಮಾಡಿದನೆಂದು ಹೇಳುತ್ತವೆ. ಆಗ ಬಬ್ಬು ಅವರಿಗೆ ಹಿಂದಿನ ಘಟನೆಯನ್ನು ನೆನಪಿಸುತ್ತಾನೆ. "ನಾವು ದುಡಿದ ದುಡಿಮೆಗೆ ಸಂಬಳ ಕೊಡದೆ ನೀವು ಹೇಗೆ ನನ್ನನ್ನು ವಂಚಿಸಿದ್ದೀರೋ ಹಾಗೆಯೇ, ಗುತ್ತು ಮನೆತನದವರು ನನ್ನ ಜನಾಂಗದ ಮಕ್ಕಳನ್ನು ದುಡಿಸಿ ವಂಚಿಸಿದ್ದಾರೆ. ಈ ಲೋಕದಲ್ಲಿ ಶೋಷಣೆ ಮಾಡುವ ಜನರಿಗೆ ಕಡೆಂಬಿ ಸ್ಥಾನದಲ್ಲಿ ನಡೆದ ಈ ಘಟನೆ ಪಾಠವಾಗಬೇಕು. ನನ್ನ ಮುಂಡಾಳ ಜನಾಂಗದ ಮಕ್ಕಳನ್ನು ದುಡಿಸಿ ವಂಚಿಸಿದರೆ ಚೆನ್ನಾಗಿರುವುದಿಲ್ಲ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು. ವಂಚಕರನ್ನು ವಂಚನೆಯಿಂದಲೇ ಸದೆಬಡಿಯಬೇಕು. ನನ್ನ ಮುಂಡಾಳ ಜನಾಂಗದ ಜನರನ್ನು ದುಡಿಸಿ ವಂಚಿಸಿದರೆ, ಪರಿಣಾಮ ನೆಟ್ಟಗಿರದು, ಹಾಗೆಯೇ ಒಮ್ಮೆ ಏರಿ ಕುಳಿತ ಕಡೆಂಬಿ ಸ್ಥಾನದ ಪೀಠವನ್ನು ನಾವು ಬಿಟ್ಟು ಕೊಡಲಾರೆ" ವೆಂದು ಬಬ್ಬುಸ್ವಾಮಿ ಗುಡುಗುತ್ತಾನೆ. ರಾಜನ್‌ದೈವಗಳಿಗೆ ತಮ್ಮ ತಪ್ಪಿನ ಅರಿವಾಗಿ ತಾವು ನೆಲೆ ನಿಲ್ಲಲು ಜಾಗ ಬೇಡಿದಾಗ, ನದೀ ತೀರದಲ್ಲಿರುವ **ಸಾರ ಬಳಿ (ತಾರಬರಿಸಾನ)** ದೈವಸ್ಥಾನದಲ್ಲಿ ನೆಲೆ ನಿಲ್ಲಲು ಬಬ್ಬುಸ್ವಾಮಿ ಅವಕಾಶವನ್ನು ಮಾಡಿಕೊಡುತ್ತಾನೆ.



**ಕಡೆಂಬಿಸ್ಥಾನ ಶ್ರೀ ಬಬ್ಬುಸ್ವಾಮಿ ಕ್ಷೇತ್ರ**

# ಅಧ್ಯಾಯ 7

## ಮುಂಡಾಳ ಜನಾಂಗದಲ್ಲಿ ಶ್ರೀ ಬಬ್ಬುಸ್ವಾಮಿಯ ಆರಾಧನೆ – ಒಂದು ವಿಶ್ಲೇಷಣೆ

# ಅಧ್ಯಾಯ 7

# ಮುಂಡಾಳ ಜನಾಂಗದಲ್ಲಿ ದೈವರಾಜ ಕೋಟೆ ಶ್ರೀ ಬಬ್ಬುಸ್ವಾಮಿಯ ಆರಾಧನೆ– ಒಂದು ವಿಶ್ಲೇಷಣೆ

ಧರ್ಮ, ಸತ್ಯ ನಾಶ ಹೊಂದುವ ಸಂದರ್ಭದಲ್ಲಿ ಪ್ರತೀ ಯುಗದಲ್ಲೂ ಭೂಲೋಕದಲ್ಲಿ ಅವತಾರ ಪುರುಷರು ಜನ್ಮ ತಾಳುತ್ತಾರೆ. 'ದುಷ್ಟ ಸಂಹಾರ ಶಿಷ್ಟ ಪರಿಪಾಲನೆ' ಇವರ ಉದ್ದೇಶವಾಗಿದ್ದು, ಧರ್ಮದ ರಕ್ಷಣೆಯ ಹೊಣೆಯನ್ನು ಹೊರುವ ಕಾರ್ಯ ಇವರದ್ದಾಗಿದೆ. ಈ ಮಹಾಪುರುಷರು 'ಧರ್ಮೋ ರಕ್ಷತಿ ರಕ್ಷಿತ:' ಎಂಬ ವಾಕ್ಯ ಪರಿಪಾಲಕರಾಗುತ್ತಾರೆ. ಮಾನವ ರೂಪು ತಾಳುತ್ತಾ ತಮ್ಮ ಜನನದ ಪವಿತ್ರ ಉದ್ದೇಶಗಳನ್ನು ಈ ಮೂಲಕ ಈಡೇರಿಸುತ್ತಾರೆ.

ಬಬ್ಬುವಿನ ಜನನ ಕಾಲ ಸಂದಿಗ್ಧ ಕಾಲವದು. ಮುಂಡಾಳ ಜನಾಂಗಕ್ಕೆ ಸಿಂಹಸ್ವಪ್ನವಾದ ಸಮಯವದು. ಮುಂಡಾಳ ಜನಾಂಗದಲ್ಲಿ ಜನ್ಮ ತಾಳಿದ ಬಬ್ಬುಸ್ವಾಮಿ ತಂದೆ ತಾಯಿಗಳನ್ನು ಕಳೆದುಕೊಂಡು ಅನಾಥವಾದನು. ಈ ಅನಾಥ ಶಿಶುವಿನ ಆರೈಕೆಯನ್ನು ಮುಂಡಾಳ ಜನಾಂಗವೇ ಮಾಡಬಹುದಿತ್ತು, ಆದರೆ ಆ ಕಾಲದಲ್ಲಿ ಕೆಲವು ವಿಚಾರಗಳಿಗೆ ಪಟ್ಟಬದ್ಧ ಶಕ್ತಿಗಳು, ಕೆಲವು ಮನೆತನಗಳು ಅಡ್ಡಿಯಾಗಿತ್ತು. ಶೋಷಣೆಯ ಪರಮಾವಧಿಯ ಕಾಲವದು. ಆಗಿನ ಸಾಮಾಜಿಕ ಸಮಯ ಸಂದರ್ಭಗಳು ಹಾಗಿತ್ತು. ತುಳುನಾಡು ಜೈನ ಪ್ರಾಬಲ್ಯವಿದ್ದ, ಗುತ್ತಿನವರ ದಬ್ಬಾಳಿಕೆ ಇದ್ದ ಕಾಲವದು. 'ಬಬ್ಬು' ಕಾರ್ಣಿಕದ ಮಗುವಾಗಿದ್ದರೂ, ಲೋಕೋಪವಾದಕ್ಕೆ ಬಲಿಯಾದ ಶಿಶು ಎಂಬ ಮಾತಿದೆ. ಬಬ್ಬು ತಂದೆ, ತಾಯಿಯನ್ನು ಕಳೆದುಕೊಂಡು ಅನಾಥ ಶಿಶುವಾದಾಗ, ಮುಂಡಾಳ ಜನಾಂಗದವರೇ ಆ ಶಿಶುವಿನ ಆರೈಕೆ ಮಾಡಲಾಗದ್ದಕ್ಕೆ ಹಲವಾರು ಕಾರಣಗಳಿರಬಹುದು. ಮೊದಲನೆಯದಾಗಿ, ಮೂಲದಲ್ಲಿ ಈ ಭೂಮಿಯ ಅಧಿಪತ್ಯ ಜೈನರಿಗಿದ್ದುದ್ದು, ಜೈನರ ಅಧಿಪತ್ಯದ ಅಧ:ಪತನವಾದಾಗ ಬಲಿಷ್ಠರಾದ ಗುತ್ತು (ಶೆಟ್ಟಿ) ಮನೆತನ ಇಲ್ಲಿ ತನ್ನ ಪ್ರಾಬಲ್ಯವನ್ನು ಮೆರೆಯಿತು. ಶೋಷಿತ ವರ್ಗವಾದ ಮುಂಡಾಳರು ರಾಜಕೀಯವಾಗಿ, ಸಾಮಾಜಿಕವಾಗಿ ಪ್ರಬಲರಾಗದೇ ಇರುವುದರಿಂದ ಹಾಗೂ ಅಂತಹ ಅಧಿಕಾರಶಾಹಿಯೊಂದಿಗೆ ಕಾದಾಡುವ ಸಾಮರ್ಥ್ಯವನ್ನು ಕಳೆದುಕೊಂಡಿರುವುದರಿಂದ ಬಬ್ಬುವನ್ನು ಮುಂಡಾಳರು ಪೋಷಿಸಲು ಸಾಧ್ಯವಾಗದಿರಬಹುದು. ಎರಡನೆಯದಾಗಿ, ಮೂಲತ: ಮುಂಡಾಳರು ಲಿಂಗಾಯಿತರು, ಮಡಿವಂತಿಕೆ ಜಾಸ್ತಿ ಎಲ್ಲಿ ಈ ಮಗುವನ್ನು ಸ್ಪರ್ಶಿಸಿದರೆ 'ಸೂತಕ' ಕಾಡುವುದೋ ಎಂಬ ಭಯ ಕಾಡಿರುವುದೂ ಇದಕ್ಕೆ ಎರಡನೆಯ ಕಾರಣವಾಗಿರಬಹುದು. ಮೂರನೆಯದಾಗಿ, ಆ ಸಂದರ್ಭದಲ್ಲಿ ದಲಿತರಿಗೆ 'ಮಣ' ಎನ್ನುವ ಬಹಿಷ್ಕಾರ ಪದ್ಧತಿ ಜಾರಿಯಲ್ಲಿತ್ತು. ವಿವಾಹ ಪೂರ್ವದ ಗರ್ಭಧಾರಣೆ, ಹೆಣ್ಣು ಸಮಾಜದ ಕಣ್ಣು ತಪ್ಪಿಸಿ ಪರ ಪುರುಷನೊಂದಿಗೆ ಓಡಿ ಹೋಗುವುದು ಇಂತಹ ಅಹಿತಕರ ಘಟನೆಗಳು ಸಂಭವಿಸಿದಲ್ಲಿ, ಸಂಬಂಧಪಟ್ಟ ಇಡೀ ಕುಟುಂಬವೇ ಅದರ ಪರಿಣಾಮವನ್ನು ಎದುರಿಸಬೇಕಾಗಿತ್ತು. ಊರಿನಿಂದ ಇವರನ್ನು ಹೊರಗೆ ದಬ್ಬಿ ಬಹಿಷ್ಕಾರ ಹಾಕುತ್ತಿದ್ದರು. ಮುಂದೆ ಊರಿನ ಅಥವಾ ಕುಟುಂಬದ ಯಾವುದೇ ಕಾರ್ಯಕ್ರಮಗಳಲ್ಲಿ ಈ ಜನಾಂಗವು ಪಾಲ್ಗೊಳ್ಳುವ ಹಾಗಿರಲಿಲ್ಲ. ಇಂತಹ ಸಂಪ್ರದಾಯಗಳನ್ನು ಈ ಪಟ್ಟಭದ್ರ ಶಕ್ತಿಗಳು ಹೇರಿರುವ ಕರಣ, ಬಬ್ಬುವನ್ನು ಆರೈಕೆಗೆ

ಕೊಂಡೊಯ್ದರೆ ಎಲ್ಲಿ ತಮಗೆ ಬಹಿಷ್ಕಾರ ಹಾಕುವರೋ ಎಂಬ ಭಯ ಕಾಡಿರುವುದು ಮತ್ತೊಂದು ಕಾರಣವಾಗಿರಬಹುದು.

ಬೆಟ್ಟಕ್ಕೆ ಬೆಟ್ಟವೇ ಅಡ್ಡ. ಪ್ರಭಾವಿತ ವ್ಯಕ್ತಿಗಳನ್ನು ಸದೆಬಡಿಯಲು ಪ್ರಭಾವೀ ವ್ಯಕ್ತಿಗಳೇ ಬೇಕು. ಬಬ್ಬುವನ್ನು ಸಲಹುವ ಪ್ರಶ್ನೆ ಬಂದಾಗ ಮಕ್ಕಳಿಲ್ಲದ ಕೊಡಂಗೆ ಬನ್ನಾರರ ಕುಟುಂಬ ಈ ಕಾರ್ಯವನ್ನು ಸ್ವೀಕರಿಸಿತು. ಆಗ ಅವರು ಧರ್ಮಪ್ರಬಲರಾಗಿದ್ದ ಕಾರಣ ಬಬ್ಬುವನ್ನು ಸಲಹಲು ಬನ್ನಾರರಿಗೆ ಸಾಧ್ಯವಾಯಿತು. ಬಬ್ಬುಸ್ವಾಮಿ ತನ್ನ ಜೀವನವನ್ನು ಗುತ್ತಿನ ಮನೆಯಲ್ಲಿ ಕಳೆದ ಸ್ಮರಣೆಗೆ ಇವತ್ತಿಗೂ ಬಬ್ಬುಸ್ವಾಮಿಯ ನೇಮೋತ್ಸವದಂದು ಮುಂಡಾಳ ಜನಾಂಗವೂ ಒಪ್ಪಿದಂತೆ, ರಾಜಸ್ಥಳದ ಅಧಿಕಾರವನ್ನು ಗುತ್ತಿನವರಿಗೆ, ಜೈನರಿಗೆ, ಪೂಜಾರಿಯವರಿಗೆ ನೀಡಿದೆ.

ಬಬ್ಬುಸ್ವಾಮಿಯ ಜನನ ಮುಂಡಾಳ ಜನಾಂಗದ ಏಳಿಗೆಗಾಗಿ ಹಾಗೂ ಶ್ರೇಯೋಭಿವೃದ್ಧಿಗಾಗಿಯೇ ಆಗಿದೆ ಎಂದು ಹೇಳಿದರೂ ತಪ್ಪಾಗಲಾರದು. ಕೋಟೇಶ್ವರದ ಕೋಟಿಲಿಂಗದಲ್ಲಿ ಲಿಂಗಧಾರಣೆ ಮಾಡಿ ಜೀವಿಸುತ್ತಿದ್ದ ಕುಟುಂಬವೊಂದು ಬರಗಾಲ ಬಂದಾಗ, ತಿನ್ನಲು ಆಹಾರಕ್ಕಾಗಿ ಹಾಹಾಕಾರ ನಡೆಸುತ್ತಿದ್ದಾಗ ತಾವು ಧರಿಸಿರುವ ಲಿಂಗವನ್ನು ಹೊಳೆಗೆ ಬಿಸಾಡಿದ್ದು ಕೂಡಾ ದೈವ ಸಂಕಲ್ಪವೇ. ಮುಂದೆ ಹೊಳೆಯಲ್ಲಿ ದೈವೀಕ ಶಕ್ತಿಯೊಂದು ಪ್ರತ್ಯಕ್ಷವಾಗುತ್ತದೆ. ಆಗ ಈ ಜನ ಮಾಡಿದ ತಪ್ಪಿಗಾಗಿ ಕ್ಷಮೆ ಯಾಚಿಸಿ, ಲಿಂಗವನ್ನು ಎತ್ತಿಕೊಳ್ಳಲು ಈ ಜನಾಂಗದವರು ಪ್ರಯತ್ನಿಸುತ್ತಾರೆ. ಆಗ ಅವರನ್ನು ಜ್ಯೋತಿಯ ರೂಪದಲ್ಲಿದ್ದ ಶಿವನು ತಡೆದು, 'ಬಿಸಾಡಿದ ಲಿಂಗವನ್ನು ಮತ್ತೆ ಎತ್ತಬೇಡಿ. ಮುಂದೆ ನಿಮ್ಮಿಂದಲೇ ನಾನು ಸೇವೆ ತೆಗೆದುಕೊಳ್ಳುತ್ತೇನೆ' ಎಂಬುದಾಗಿ ವರ ನೀಡುತ್ತಾನೆ.

ಮುಂದೆ ಆಹಾರ ಸಿಗದೆ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿ ತಿಂದು ಅಪವಿತ್ರರಾದ ಲಿಂಗಾಯುತರ ಒಂದು ಪಂಗಡವನ್ನು ಅಲ್ಲಿಯ ಜನ ಶೋಷಣೆಗೊಳಪಡಿಸಿದ್ದು ಮಾತ್ರವಲ್ಲ, ಈ ಜನರನ್ನು ಅಲ್ಲಿಂದ ಓಡಿಸಿದರು. ಲಿಂಗಾಯತರ ಒಂದು ಕೂಟ ಘಟ್ಟ ಇಳಿದು ಕರಾವಳಿಗೆ ವಲಸೆ ಬಂದು ಇಲ್ಲಿಯೇ ನೆಲೆ ನಿಂತು 'ಮುಂಡಾಳ' ಎಂಬ ನಾಮಧೇಯದಿಂದ ಗುರುತಿಸಲ್ಪಟ್ಟರು. ಲಿಂಗವನ್ನು ಹೊಳೆಗೆ ಬಿಸಾಕಿದಾಗ ಶಿವ ಅವರಿಗೆ ಶಾಪ ಕೊಡುತ್ತಾನೆ. ಆಗ ಪಾರ್ವತಿ, "ಆ ಜನಾಂಗ ಪರಿಸ್ಥಿತಿಗೆ ಸಿಲುಕಿ ಮೀನು ಮಾಂಸ ತಿಂದರು. ನೀವು ಯಾಕಾಗಿ ಅವರಿಗೆ ಶಾಪ ನೀಡಿದಿರಿ?" ಎಂದು ಪ್ರಶ್ನಿಸಿದಾಗ, ಶಿವನು ನಗುತ್ತಾ "ಕಾರ್ಯನಿಮಿತ್ತ ನಾನು ಅವರಿಗೆ ಶಾಪ ನೀಡಿದೆ, ಮುಂದೆ ಆ ಜನಾಂಗದಲ್ಲಿ ನಾವು ಮರುಜನ್ಮ ಪಡೆಯಲಿದ್ದೇವೆ" ಎನ್ನುತ್ತಾನೆ.

ಭೂಲೋಕದಲ್ಲಿ ಕೃಷಿಗೆ ಪ್ರತಿಕೂಲ ಪರಿಸ್ಥಿತಿ ನಿರ್ಮಾಣ ಮಾಡಿರುವುದು, ಲಿಂಗಾಯಿತರು ಲಿಂಗವನ್ನು ಕೆರೆಗೆ ಸಮರ್ಪಿಸಿರುವುದು, ಲಿಂಗಾಯಿತರಲ್ಲಿ ಒಂದು ಕೂಟ ಮಧು ಮಾಂಸ ಸೇವಿಸಿದ್ದು, ಆ ಕೂಟ ದಕ್ಷಿಣಕ್ಕೆ ವಲಸೆ ಬಂದಿರುವುದು ಎಲ್ಲಾ ಒಂದು ವಿಧಿ ಲಿಖಿತವೇ ಸರಿ. ಬಬ್ಬುವಿನ ಜನನ ಕೋಡಿಕಂಡಾಲದಲ್ಲಿ ಆಗಬೇಕಿತ್ತು. ಲಿಂಗಾಯಿತರ ಒಂದು ಕೂಟ ದಕ್ಷಿಣ ಭಾಗಕ್ಕೆ

ಬಂದು ನೆಲೆಸಿ 'ಮುಂಡಾಳ'ರೆನಿಸಿಕೊಂಡದ್ದು, ಬಬ್ಬು ಈ ಜನಾಂಗದ ಮನೆ ಮಗನಾದದ್ದು, ಮುಂಡಾಳರ ಗ್ರಾಮದೈವವಾಗಿ, ದೈವರಾಜ ಬಬ್ಬುವಾಗಿ ಬಾರ್ಕೂರಿನಲ್ಲಿ ನೆಲೆ ನಿಂತಿರುವುದು ಎಲ್ಲವೂ ವಿಧಿಯಾಟ. "ತೇನ ವಿನ: ತೃಣ ಮಪಿ ನ ಚಲತಿ". ಆ ಭಗವಂತನ ಇಚ್ಛೆಯ ವಿನ: ಒಂದು ಹುಲ್ಲು ಕಡ್ಡಿಯೂ ಕದಲದು. ಹಾಗಾಗಿ ಮುಂಡಾಳ ಜನಾಂಗದ ಸೃಷ್ಟಿಗೆ ಬಬ್ಬುವು ಇಂತಹ ಹಲವಾರು 'ನಿಮಿತ್ತ'ಗಳನ್ನು ರೂಪಿಸಬೇಕಾಯಿತು.

ಇನ್ನೊಂದು ಬಗೆಯಲ್ಲಿ ತರ್ಕಿಸುವುದಾದರೆ, ದುರ್ಬಲರ ಮೇಲೆ ಸವರ್ಣೀಯರ ದಾಳಿ ಸದಾ ನಡೆಯುತ್ತಿತ್ತು. ದಲಿತ ಜನಾಂಗವನ್ನು ಧಮನ ಮಾಡಬೇಕೆಂಬ ಮೇಲ್ವರ್ಗದ ಹುನ್ನಾರಕ್ಕೆ ಬಬ್ಬುವಿನ ಜನನದಿಂದ ಉತ್ತರ ಲಭಿಸಿದೆ. ಇದಕ್ಕೆ ಸಾಕ್ಷಿ, ಈಗಲೂ ಮುಂಡಾಳರ ವಿನಹ ಸರ್ವರ್ಣೀಯರಿಗೆ ಬಬ್ಬುಸ್ವಾಮಿ ದೈವಸ್ಥಾನದ ಒಳಗಡೆ ಪ್ರವೇಶ ನಿಷಿದ್ದವಿದೆ. ಏನಿದ್ದರೂ ಗ್ರಾಮದ ಮುಕ್ಕಾಲ್ದಿ ಪ್ರಸಾದ (ಬೂಲ್ಯವನ್ನು) ಕೊಡುತ್ತಾನೆ. ಕನ್ನಡ ಸಾಹಿತ್ಯದಲ್ಲಿ 10ನೇ ಶತಮಾನದವರೆಗೆ ಇದ್ದ ಧಾರ್ಮಿಕ ವ್ಯವಸ್ಥೆಯನ್ನು ಪಲ್ಲಟ ಮಾಡಿದ ಕೀರ್ತಿ 12ನೇ ಶತಮಾನದ ಹರಿಕಾರ ಬಸವಣ್ಣನವರಿಗೆ ಸಲ್ಲುತ್ತದೆ. ವಚನ ಸಾಹಿತ್ಯ ಯುಗದಲ್ಲಿ ಕಾಯಕಕ್ಕೆ ಹೆಚ್ಚಿನ ಮಹತ್ವ ನೀಡಿ ಆವರೆಗೆ ಇದ್ದ ವೈದಿಕ ಪರಂಪರೆಯ ಧಾರ್ಮಿಕ ವಿಧಿವಿಧಾನಗಳನ್ನು ಬುಡಮೇಲು ಮಾಡಿ, ಧರ್ಮಕ್ಷೇತ್ರಗಳಲ್ಲಿ ಬಿರುಗಾಳಿಯನ್ನೇ ಎಬ್ಬಿಸಿ, ಸಮಾಜದ ಕೆಂಗಣ್ಣಿಗೆ ಗುರಿಯಾದವರು ಬಸವಣ್ಣನವರು. ಅಂತೆಯೇ ಶಿವಸಂಭೂತನಾದ ಬಬ್ಬು ತನ್ನ ಕಾರಣಿಕಗಳ ಮೂಲಕ ಜಾತಿ ವ್ಯವಸ್ಥೆಯ ಚೌಕಟ್ಟನ್ನು ಮುರಿದು, ಶೋಷಿತ ವರ್ಗದ ಜನಾಂಗದಿಂದಲೇ ಪೂಜೆಯನ್ನು ಪಡೆದ ದೈವ, ಶ್ರೀ ಬಬ್ಬುಸ್ವಾಮಿ. ಪುರೋಹಿತರಿಂದ ಮಾತ್ರ ಪೂಜೆಗಳು ನಡೆಯಬೇಕೆಂಬ ಪರಂಪರೆಯ ಬದಲಿಗೆ ಮುಂಡಾಳ ಜನಾಂಗದಿಂದಲೇ ಪೂಜೆ ಸೇವೆಗಳನ್ನು ಬಯಸಿ ಪಡೆದ ದೈವ, ಶ್ರೀ ಬಬ್ಬುಸ್ವಾಮಿ.

ಮುಂದೆ ದೈವ ನಿಮಿತ್ತ ಸನ್ನಿವೇಶಗಳ ಕಾರಣದಿಂದ ಪಾರ್ವತಿದೇವಿಯು ದೇವೀಸಂಭೂತಳಾಗಿ 'ತನ್ನಿಮಾನಿಗ' ಎಂಬ ನಾಮಧೇಯದಿಂದ ಬಬ್ಬುವಿನ ತಂಗಿಯಾಗಿ ಕಾಣಿಸಿಕೊಳ್ಳುತ್ತಾಳೆ. ಭಗವಾನ್ ಶ್ರೀ ಬಬ್ಬುಸ್ವಾಮಿಯನ್ನು ವಿಕ್ರಂದರಸು ಮಂಗಳೂರು ಬೀಡು ಬುದ್ಧಿವಂತ ಅರಸರು ಕುತಂತ್ರದಿಂದ ಕಂಚಿನಡ್ಕದ ಮಿಂಚಿನ ಬಾವಿಗೆ ಇಳಿಸಿ ಜೀವಂತ ಸಮಾಧಿಗೊಳಿಸಿದಾಗ ಬಬ್ಬಸ್ವಾಮಿ ನೇರವಾಗಿ ಪಾತಾಳ ಲೋಕಕ್ಕೆ ಹೋಗುತ್ತಾನೆ. ವಸಿಷ್ಠ ಮಾಡುವ ಯಾಗಕ್ಕೆ ತ್ರಿಶಂಕುವನ್ನು ಬಲಿದಾನ ನೀಡುವ ವಿಷಯ ತಿಳಿದಾಗ ತ್ರಿಶಂಕು ಓಡಿಹೋಗಿ ವಸಿಷ್ಠನ ಬಲಾಬಲಕ್ಕೆ ಸಮನಾದ ವಿಶ್ವಾಮಿತ್ರನನ್ನು ತನ್ನ ಜೀವದಾನಕ್ಕಾಗಿ ಬೇಡುತ್ತಾನೆ. ಅಲ್ಲಿ ತನ್ನ ತಪಸ್ಸಿನ ಶಕ್ತಿಯಿಂದ ವಿಶ್ವಾಮಿತ್ರ ತ್ರಿಶಂಕುವನ್ನು ಸ್ವರ್ಗಕ್ಕೆ ಕಳುಹಿಸಿಕೊಡುತ್ತಾನೆ. ಆಗ ಇಂದ್ರ ಸಿಟ್ಟುಗೊಂಡು ತನ್ನ ಸ್ಥಾನಕ್ಕೆ ಪೈಪೋಟಿಯಾಗಿ ಬಂದ ತ್ರಿಶಂಕುವನ್ನು ಭೂಮಿಗೆ ದೂಡುತ್ತಾನೆ. ಸ್ವರ್ಗಕ್ಕೆ ಹೋದ ತ್ರಿಶಂಕುವನ್ನು ಇಂದ್ರ ತಳ್ಳಿದಾಗ, ಆತ ಊರ್ದ್ವಮುಖವಾಗಿ ಕೆಳಗೆ ಬೀಳುತ್ತಾನೆ. ಕೊನೆಗೆ ಭೂಮಿಗೂ ಸಲ್ಲದೆ, ಸ್ವರ್ಗಕ್ಕೂ ಸಲ್ಲದೆ ತ್ರಿಶಂಕು ಸ್ಥಿತಿಯಲ್ಲೇ ಉಳಿಯುತ್ತಾನೆ. ಹಾಗೆಯೇ ನೇರವಾಗಿ ಪಾತಾಳ ಲೋಕಕ್ಕೆ ಬಂದ ಬಬ್ಬುಸ್ವಾಮಿಯನ್ನು ನಾಗರಾಜ ನಿರಾಕರಿಸುತ್ತಾನೆ. ಆಗ ಬಬ್ಬುಸ್ವಾಮಿ ತನ್ನ ನಿಜರೂಪವನ್ನು ಪಾತಾಳದ ನಾಗರಾಜನಿಗೆ ತೋರಿಸುತ್ತಾನೆ. ಲೌಕಿಕದಲ್ಲಿ ಮಾನವನಾಗಿ ಹುಟ್ಟಿ

ಅಸಮಾನತೆ, ಶೋಷಣೆಯ ವಿರುದ್ಧ ಹೋರಾಡಿ ಸತ್ತ ಬಳಿಕ ಪವಾಡ ಪುರುಷನಾಗಿ ಬಬ್ಬು ಕಾಣಿಸಿಕೊಳ್ಳುತ್ತಾನೆ. ಹಲವಾರು ಪ್ರಖ್ಯಾತರಾದ ವೀರ ಪುರುಷರಲ್ಲಿ ಕೋರ್ದಬ್ಬು / ಕೋಟೆದ ಬಬ್ಬು / ಕೋಡಿದ ಬಬ್ಬು, ಬಬ್ಬುಸ್ವಾಮಿಯೂ ಒಬ್ಬ. ಬ್ರಹ್ಮದೇವರ ಶಕ್ತಿ ಪಡೆದು, ನಾಗದೇವರ ವರ ಪಡೆದು ಈ ಭೂಮಿಯಲ್ಲಿ ಮುಂಡಾಳ ಜನಾಂಗದ ಉದ್ದಾರಕ್ಕಾಗಿಯೇ ಜನ್ಮ ತಳೆದ ಬಬ್ಬುಸ್ವಾಮಿ, ತನ್ನ ಪವಾಡಗಳಿಂದ ದೈವಿಕ ಶಕ್ತಿಯಿಂದ ಪರಾಕ್ರಮದಿಂದ ಮೆರೆದ ದೈವವಾಗಿದೆ.

'ಬಗ್ಗಿದವರಿಗೆ ಗುದ್ದು ಜಾಸ್ತಿ'ಎಂಬ ಗಾದೆಯಂತೆ ತುಳಿತಕ್ಕೆ ಒಗ್ಗಿಸಿಕೊಂಡರೆ ಮೇಲ್ವರ್ಗ ತುಳಿಯುತ್ತಲೇ ಇರುತ್ತದೆ. ಆದರೆ ಆ ತುಳಿತಕ್ಕೆ ಪ್ರತಿಭಟಿಸಿದರೆ ಎಂತಹವನು ಕೂಡಾ ಆಶ್ಚರ್ಯಪಡಲೇಬೇಕು, ಭಯಭೀತರಾಗಲೇಬೇಕು. ಅಂತೆಯೇ ಬಬ್ಬುವಿನ ನಿಜ ರೂಪ ನೋಡಿದ ಆದಿಶೇಷ ಬಬ್ಬುವನ್ನು ಕುರಿತು 'ನನಗಿಂತಲೂ ಶಕ್ತಿಶಾಲಿಯಾದ ಕಲಿಯುಗದ ಧರ್ಮೋದ್ಧಾರಕನಾದ ನಿನಗೆ ನಾನು ಏನನ್ನೂ ಕೊಡಲು ಸಿದ್ಧನಿದ್ದೇನೆ' ಎಂದಾಗ, ಬಬ್ಬು ಹಾಗಾದರೆ 'ನಿಮ್ಮ ಹೆಡೆಯಲ್ಲಿರುವ ಬಲಬದಿಯ ಮಾಣಿಕ್ಯ (ಜಾಲಿಕಟ್ಟ)ವನ್ನು ನನಗೆ ಕೊಡು ಎನ್ನುವನು. ಆದಾಗಲೇ ಆದಿಶೇಷ ಕಾರಿದ ವಿಷ ಬಾವಿಗೆ ನೀರಿಗೆ ಹರಡಿತ್ತು. ಈ ನೀರನ್ನು ಮಾನವರು ಸೇವಿಸಿದರೆ ಸಾಯುತ್ತಾರೆ. ಆದಿಶೇಷನಿಗೆ ಕುಡಿಸಿದರೆ ಅವನು ಸಾವನ್ನಪ್ಪುತ್ತಾನೆ. ತಕ್ಷಣ ಬಬ್ಬು ಅಗ್ನಿದೇವನ ಅಪ್ಪಣೆ ಪಡೆದು, ಅಗ್ನಿಯ ಶಕ್ತಿಯಿಂದ ಆ ವಿಷವನ್ನು ಸುಡುತ್ತಾನೆ. ಹೀಗೆ ನಾಗನ ಜಾಲಿಕಟ್ಟಿನಿಂದ ಕಾರಿದ ವಿಷವನ್ನು ಅಗ್ನಿ ದೇವನ ಸಹಾಯದಿಂದ ಸುಟ್ಟು ಭೂಮಿಗೆ ತರುತ್ತಾನೆ. ಅದೇ ಭಗವಾನ್ ಶ್ರೀ ಬಬ್ಬುಸ್ವಾಮಿಯ ದೈವಸ್ಥಾನದಲ್ಲಿ ನೀಡುವ ಕರಿಗಂಧ. ಹಾಗಾಗಿ ಇವತ್ತಿಗೂ ಬಬ್ಬುಸ್ವಾಮಿಯ ಗಂಧ ಕಪ್ಪಾಗಿದೆ. ಎಲ್ಲಾ ದೈವದೇವರ ಪ್ರಸಾದಕ್ಕಿಂತಲೂ ಇದು ಮಿಗಿಲಾದುದು. ಕಾರಣ ಕರಿಗಂಧವು ಯಾವ ಕಾರಣಕ್ಕೂ ಮಾಸುವುದಿಲ್ಲ. ಕರಿಗಂಧ ಉಳಿದ ಪ್ರಸಾದಗಳಂತೆ ನೋಡಲು ಬೆಳ್ಳಗಿಲ್ಲ, ಆದರೆ ಆದಿಶೇಷನ ಪ್ರಬಲ ಶಕ್ತಿಯು ಆ ಕರಿಗಂಧಕ್ಕೆ ಇದೆ. ಬಬ್ಬು ಯಾರನ್ನೂ ಕೇವಲವಾಗಿ ಪರಿಗಣಿಸಿದ ವ್ಯಕ್ತಿಯಲ್ಲ ಎನ್ನುವುದು ಇದಕ್ಕಿಂತ ಬೇರೆ ಉದಾಹರಣೆ ಬೇಕಾಗಿಲ್ಲ.

ಮುಂದೆ ಕೋಟಿಚೆನ್ನಯ್ಯ, ರಾಜನ್‌ದೈವಗಳು, ಬ್ರಹ್ಮ ಮುಗೇರರು ಬಾವಿಗೆ ಮುಚ್ಚಿರುವ ಹಾಸುಗಲ್ಲನ್ನು ಮೇಲಕ್ಕೆತ್ತಲು ಪ್ರಯತ್ನಿಸುತ್ತಾರೆ. ಯಾರಿಗೂ ಅದನ್ನೆತ್ತಲು ಸಾಧ್ಯವಾಗುವುದಿಲ್ಲ. ಅವರೊಂದಿಗಿದ್ದ ತಂಗಿ ತನ್ನಿಮಾನಿಗಳಿಗೆ ಮಾತ್ರ ಅದು ಸಾಧ್ಯವಾಗುತ್ತದೆ. ಇಲ್ಲಿ ಎಂತಹ ವೀರಶೂರರಿಂದಲೂ ಸಾಧ್ಯವಾಗದ ಈ ಕೆಲಸ ತನ್ನಿಮಾನಿಗಳಿಂದ ಮಾತ್ರ ಸಾಧ್ಯವಾಗುವುದು. ಒಂದು ದೈವಸಂಕಲ್ಪವೇ ಸರಿ. ಈಕೆ ಆದಿಶಕ್ತಿಯ, ಪಾರ್ವತಿಯ ಅಂಶವುಳ್ಳವಳು. ಮುಂಡಾಳ ಜನಾಂಗದ ಉದ್ಧಾರಕ್ಕಾಗಿ ಪಾರ್ವತಿ-ಪರಮೇಶ್ವರರು ಭೂಮಿಗಿಳಿದು ಬರಲೇಬೇಕಿತ್ತು. ಆದರೆ ವಿಶೇಷವೆಂದರೆ ಇಲ್ಲಿ ಶಿವ-ಪಾರ್ವತಿಯರು ಪತಿ-ಪತ್ನಿಯರಾಗಿ ಬಂದಿಲ್ಲ, ಸಹೋದರ-ಸಹೋದರಿಯರಾಗಿ ಜನ್ಮ ತಳೆಯುತ್ತಾರೆ, ಇದು ವಿಚಿತ್ರವಲ್ಲ. ಇಂತಹ ಅನೇಕ ದೈವಗಳ ಕಥೆಗಳಿವೆ. ಪಂಜುರ್ಲಿ ದೈವಗಳ ಕತೆಯಲ್ಲಿ ಪಂಜುರ್ಲಿಗಳು ಘಟ್ಟ ಇಳಿದು ದಕ್ಷಿಣಕ್ಕೆ ಬರುವಾಗ ಅಣ್ಣ-ತಂಗಿಯರಾಗಿದ್ದು, ಭೂಲೋಕಕ್ಕೆ ಬಂದ ನಂತರ ಪತಿ-ಪತ್ನಿಯರಾದ ಅನೇಕ ದೃಷ್ಟಾಂತಗಳು ನಮಗೆ ದೈವ ಪುರಾಣಗಳಲ್ಲಿ ಲಭಿಸುತ್ತದೆ.

ಇಲ್ಲಿ ವಿಚಾರ ಮಾಡಬೇಕಾದ ಇನ್ನೆರಡು ಅಂಶಗಳಿವೆ. ತನ್ನಿಮಾನಿಗ ತನ್ನ ಗೆಜ್ಜೆ ಕತ್ತಿಯಿಂದ 16 ಗೆರೆ ಹಾಕಿ ಆ ಹಾಸುಗಲ್ಲನ್ನು ಮೇಲೆತ್ತಿದಾಗ ಆ ಕಲ್ಲು ಹದಿನಾರು ಭಾಗವಾಗಿ ಹದಿನಾರು ದೈವಸ್ಥಾನಗಳಿಗೆ ಬೀಳುತ್ತದೆ. ಇಲ್ಲಿ ಬಬ್ಬು ಹಲವಾರು ಪ್ರಾಣಿ ಪಕ್ಷಿಗಳ ಶಬ್ದವನ್ನು ಮಾಡಲು ಅದನ್ನು ಕೇಳಿದ ತನ್ನಿಮಾನಿಗ ಬಬ್ಬುವನ್ನು ಬಾವಿಯಿಂದ ಮೇಲೆ ಎತ್ತಲು ಅರ್ವತ್ತು ಮಾರಿನ ಸೀರೆಯನ್ನು ಬಾವಿಗಿಳಿಸುವುದು, ಮೇಲಕ್ಕೆ ಬಂದಾಗ ತನ್ನಿಮಾನಿಗ ತನ್ನನ್ನು ತಲೆ ಎತ್ತ ನೋಡಬಾರದೆನ್ನುವುದು, ಮೇಲೆ ಬಂದಾಗ ಬಬ್ಬು ತನ್ನಿಮಾನಿಗಳನ್ನು ನೋಡಿದನ್ನು ಎನ್ನುವುದು ಇವೆಲ್ಲವೂ ಅಕ್ಷರಶ: ಸತ್ಯ. ಆದರೆ ದಲಿತೇರರು ಈ ಮಾತುಗಳಿಗೆ, ಈ ಘಟನೆಗಳಿಗೆ ಬೇರೆಯೇ ಬಣ್ಣ ಕಟ್ಟಿಕೊಡುತ್ತಾರೆ. ಮೂಲತ: ಬಬ್ಬುವಿಗೆ ಮೇಲೆ ಬರುವ ಮೊದಲೇ ಆಕೆ ಹೆಣ್ಣೆಂಬುದು ಆಕೆಯ ಧ್ವನಿ ಹಾಗೂ ತನ್ನಿಮಾನಿಗ ತನ್ನ ಒಂದು ಪಾದವನ್ನು ಬಾವಿಕಟ್ಟೆಗೆ ಆನಿಸಿ ಬಬ್ಬುವನ್ನು ಮೇಲಕ್ಕೆ ಎತ್ತಿದಾಗ ಕಂಡ ಉಂಗುಷ್ಟದಿಂದಲೇ ತಿಳಿದುಕೊಂಡಿದ್ದ. ಮೇಲೆ ಬಂದವನೇ ಆಕೆಯನ್ನು ತಲೆ ಎತ್ತಿ ನೋಡಿದ. ಈ ಘಟನೆಯನ್ನು ದಲಿತೇರರು 'ಬಬ್ಬು, ತನ್ನಿಮಾನಿಗಳನ್ನು ಕಾಮದ ದೃಷ್ಟಿಯಿಂದ ನೋಡಿದ' ಎಂದಿದೆ. ದಲಿತೇರರು ಇಂತಹ ಅಪವಾದವನ್ನು ಒಬ್ಬುವಿನ ಮೇಲೆ ಹಾಕಿರುವುದು, ಕಾಮಾಲೆ ಕಣ್ಣಿಗೆ ಊರಿಡೀ ಹಳದಿ ಕಂಡ ಹಾಗಿದೆ. ಈ ಸವರ್ಣೀಯರಿಗೆ ಸದಾ ದಲಿತರನ್ನು ಮಾನಸಿಕವಾಗಿ, ದೈಹಿಕವಾಗಿ ಹೇಗೆ ಶೋಷಣೆಗೆ ಒಳಪಡಿಸುವುದು ಎಂಬುದರ ಬಗ್ಗೆಯೇ ಚಿಂತೆಯಾಗುತ್ತಿತ್ತು. ಆದ್ದರಿಂದ ಈ ಅಪವಾದವನ್ನು ಕಾರ್ನಿಕದ ಬಬ್ಬುಸ್ವಾಮಿಗೂ ಆರೋಪಿಸಿದ್ದಾರೆ. ಇದು ಆ ವರ್ಗದ ಅಸ್ವಸ್ಥ ಮನಸ್ಸಿಗಿಡಿದ ಕನ್ನಡಿಯಾಗಿದೆ.

ಇಲ್ಲಿ ಕಾಮದ ದೃಷ್ಟಿಯಿಂದ ಬಬ್ಬುಸ್ವಾಮಿ ತನ್ನಿಮಾನಿಗಳನ್ನು ಕಂಡಿಲ್ಲ ಎನ್ನುವುದಕ್ಕೆ ಅನೇಕ ಸಾಕ್ಷಿಗಳು ಸಿಗುತ್ತದೆ. ನಾವು ಕಷ್ಟದಲ್ಲಿದ್ದಾಗ ನಮಗೆ ಸಹಾಯ ಮಾಡಿದವರನ್ನು ಪದೇ ಪದೇ ಸ್ಮರಿಸುವುದು ಮಾನವ ಸಹಜ ಧರ್ಮವಾಗಿದೆ. ನಮ್ಮ ಕಷ್ಟಕ್ಕೆ ಸ್ಪಂದಿಸಿದ ವ್ಯಕ್ತಿಯನ್ನು ಕಾಣಲು ತವಕಿಸುತ್ತೇವೆ. ಈ ಗುಣದಿಂದಲೇ ತನ್ನನ್ನು ರಕ್ಷಿಸಿದವರಾರೆಂದು ಬಬ್ಬುಸ್ವಾಮಿ ತನ್ನಿಮಾನಿಗಳನ್ನು ನೋಡಿದ್ದನೇ ವಿನ: ಕಾಮದ ದೃಷ್ಟಿಯಿಂದಲ್ಲ ಎಂಬುದು ನನ್ನ ಅನಿಸಿಕೆ. ಅದಕ್ಕೆ ಬಬ್ಬುಸ್ವಾಮಿ ಶಿಕ್ಷೆಯನ್ನು ಕೂಡಾ ಪಡೆದುಕೊಳ್ಳುತ್ತಾನೆ. ಅಲ್ಲಿರುವ ಕಲ್ಲಿನಿಂದ ನೆತ್ತಿಯನ್ನು ಜಜ್ಜಿ ಒಂದು ಹನಿ ರಕ್ತವನ್ನು ಭೂಮಿಗೆ ತರ್ಪಣ ಮಾಡುತ್ತಾನೆ. ಇದೇ ಮನಸ್ಥಿತಿಯನ್ನು ನೇಮೋತ್ಸವದಲ್ಲೂ ಕಾಣುತ್ತೇವೆ. ಬಬ್ಬು 16 ಗಡಿಗೆ ರಕ್ತ ತರ್ಪಣ ಮಾಡುವ ಕ್ರಿಯೆ ಆಚರಣೆಯಲ್ಲಿದೆ. ಬಬ್ಬು ಸವರ್ಣೀಯರ ದೈವವಾಗಿದ್ದರೆ ಇಂತಹ ಅಪವಾದವನ್ನು ದಲಿತೇತರರು ಬಬ್ಬುವಿನ ಮೇಲೆ ಹಾಕುತ್ತಿರಲಿಲ್ಲವೇನೋ? ಬಬ್ಬು ಮುಂಡಾಳ ಜನಾಂಗದ ದಲಿತ ದೈವವಾಗಿರುವುದಕ್ಕೆ ಸವರ್ಣೀಯರಿಂದ ಈ ಅಪವಾದ ಬಂದಿರುವಂತದ್ದು ಸತ್ಯ. ಶೋಷಣೆಯ ವಿಚಾರ ಬಂದಾಗ ಸವರ್ಣೀಯರು ಜನರು ಮಾತ್ರವಲ್ಲ ದೈವಗಳನ್ನು ಬಿಟ್ಟಿಲ್ಲ ಎಂಬುದಕ್ಕೂ ಇದೊಂದು ನಿದರ್ಶನವಾಗಿದೆ. ಮುಂದೆ ಈ ಸಹೋದರ–ಸಹೋದರಿಯರು ಶ್ರೀಕ್ಷೇತ್ರ ಕಂಚಿನಡ್ಕದಲ್ಲಿ ನೆಲೆಯಾಗುತ್ತಾರೆ.

ಕಂಚಿನಡ್ಕದ ಈ ಘಟನೆಯು ಸವರ್ಣೀಯರ ಒಂದು ಷಡ್ಯಂತ್ರವಾಗಿದೆ. ಮಾಯಕಾರನ 'ಮಾಯಾಲೋಕ' ದಲ್ಲಿ ಮನುಷ್ಯರು ಕೇವಲ ನಿಮಿತ್ತವಷ್ಟೇ. ಈ ಪ್ರಸಂಗದಲ್ಲಿ ಹಲವಾರು ವಿಚಾರಗಳ ಮಂಥನವಿದೆ.

- ಕಾರ್ನಿಕದ ಬಬ್ಬು ಸವರ್ಣೀಯರ ಷಡ್ಯಂತ್ರ ತಿಳಿಯದೆ ಬಾವಿಗಿಳಿದದ್ದಲ್ಲ, ತಾನು ಯಾರೆಂದು ಲೋಕಕ್ಕೆ ಸಾರುವ ಸಲುವಾಗಿ ಬಬ್ಬುಸ್ವಾಮಿ ಈ ಪಂಥವನ್ನು ಒಪ್ಪಿಕೊಳ್ಳುತ್ತಾನೆ.
- ಇಲ್ಲಿ ಬಬ್ಬು, ಸವರ್ಣೀಯರಿಗೆ ಒಂದು ಆಯುಧ ಮಾತ್ರ, ಅವರ ಮೂಲ ಉದ್ದೇಶ ಕೊಡಂಗೆ ಬನ್ನಾರರನ್ನು ಸದೆ ಬಡಿಯುವುದಾಗಿದೆ.
- ಮುಂಡಾಳ ಹುಡುಗನೊಬ್ಬ ಕೋಡಿಕೊಂಡಾಲ ಗುತ್ತನ್ನು ಬೆಳೆಸುವುದನ್ನು ಕಂಡು ಮತ್ಸರ ಪಟ್ಟ ಸವರ್ಣೀಯರು ಬಬ್ಬುವನ್ನು ಕೊಲ್ಲಲು ಪ್ರಯತ್ನಿಸಿರುವುದು.
- ಮುಂದೆ ಭೂಲೋಕದಲ್ಲಿ ತನ್ನ ನೇಮೋತ್ಸವ ನಡೆಯುವ ಸಂದರ್ಭದಲ್ಲಿ ಹಾಲನ್ನು ಗುತ್ತಿನ ಮನೆಯಲ್ಲಿ ಸ್ವೀಕರಿಸುತ್ತಾನೆ. ಇದು ಬಬ್ಬು ಸ್ವಾಮಿಗೆ ಕೊಡಂಗೆ ಬನ್ನಾರರು ಹಾಗೂ ಸಿರಿಗಿಂಡೆಗೆ ನೀಡುವ ಮರ್ಯಾದೆಯ ದ್ಯೋತಕವಾಗಿದೆ.

ಬಬ್ಬುವಿಗೆ ಹುಟ್ಟಿನಿಂದಲೇ ಪ್ರಾಪ್ತವಾದ ದೈವಶಕ್ತಿ ಇದೆ ಹಾಗೂ ಇತ್ತು ಎಂಬುದಕ್ಕೆ ಕೆಲವೆಡೆ ಕೊಡಂಗೆ ಬನ್ನಾರರು ನೀಡುವ ಮಾತುಗಳೇ ಸಾಕ್ಷಿ 'ಹಸಿವು' ಎಂದು ಕೋಡಿಕೊಂಡಾಲ ಮನೆಗೆ ಬಬ್ಬು ಬರುವಾಗ ಸಿರಿಗಿಂಡೆ ಬೆಳ್ಳಿಲೋಟದಲ್ಲಿ ಬಬ್ಬುವಿಗೆ ಹಾಲು ಕೊಡುತ್ತಾಳೆ. ಆಗ ಕೊಡಂಗೆಬನ್ನಾರರು 'ಈ ಮಗುವಿಗೆ ತಿಂದ ಅನ್ನ, ಬಿಸಾಡುವ ಅನ್ನ ಕೊಡದಿರಿ' (ಈ ಬಾಲೆಗ್ ಮಡೆ-ಮೈಲಿಗೆ ಕೊರಡೆ) ಎನ್ನುತ್ತಾರೆ. ಯಾಕಂದ್ರೆ ಅನಾಥ ಮಗುವನ್ನು ಕೋಡಿಕೊಂಡಾಲದಿಂದ ತರುವ ಒಂದು ರಾತ್ರಿ ಬನ್ನಾರರಿಗೆ ನಾಗದೇವರು ಕನಸಿನಲ್ಲಿ ಬಂದು 'ನೀವೊಂದು ಮಗು ತಂದಿದ್ದೀರಿ, ಆ ಮಗು ಗತಿ-ಗೋತ್ರವಿಲ್ಲದ ಮಗುವಲ್ಲ, ಸಾಮಾನ್ಯ ಮಗುವಲ್ಲ, ಮಹಾಶಕ್ತಿಯನ್ನು ಅವಧಾರಣೆ ಮಾಡಿಕೊಂಡವ, ಈಶ್ವರ ದೇವರ ಅಂಶ ಪಡೆದು ಹುಟ್ಟಿದ ಶಕ್ತಿಯದು, ನಾಗದೇವರ ವರ ಪಡೆದು ಬಂದ ಶಕ್ತಿ. ಇದಕ್ಕೆ ಮಡಿ ಮೈಲಿಗೆ ನೀಡದೆ ಅಂದಂದಿನ ಆಹಾರ ನೀಡಿ' ಎಂದಿತು. ಅದರಂತೆ ಕೋಡಿಕೊಂಡಾಲದ ಮನೆಯಲ್ಲಿ ಬೇಯಿಸಿದ ತಕ್ಷಣ ಮಗು ಬಬ್ಬುವಿಗೆ ನೀಡಬೇಕೆಂಬ ಕಟ್ಟೆಚ್ಚರಕೆಯನ್ನೂ ಮನೆ ಮಂದಿಗೆಲ್ಲ ಕೊಡಂಗೆ ಬನ್ನಾರರು ನೀಡಿರುತ್ತಾರೆ.

ಬಬ್ಬುವಿಗೆ ಸವರ್ಣೀಯರಿಂದ ಬಂದ ಅಪವಾದ ಒಂದಲ್ಲ ಎರಡಲ್ಲ. ಗಂಗೆಸ್ಥಾನ ಮಾಡಲು ದೈವಗಳೆಲ್ಲ ಸೋಮೇಶ್ವರ ಕಡಲಿಗೆ ಬರುವ ಸಮಯದಲ್ಲಿ, ಸವರ್ಣೀಯರ ದೈವ ಬಬ್ಬರ್ಯ ತನ್ನ ಒಂದು ಪಾದವನ್ನು ಆಗುಂಬೆ ಘಟ್ಟಕ್ಕೂ ಇನ್ನೊಂದು ಪಾದವನ್ನು ಮಂಗಳೂರಿನ ಸಮುದ್ರಕ್ಕೂ ಇಟ್ಟು ಆ ದೈವಗಳಿಗೆ ತನ್ನ ಕಾಲಡಿ (ದೆಕ್ಕೆದುಲಯಿರ್ದ್) ಯಿಂದ ಹೋಗಿ ಎನ್ನುತ್ತಾನೆ. ದೈವಗಳು ಬಬ್ಬರ್ಯನನ್ನು ಕಾಲು ತೆಗೆಯಲು ಎಷ್ಟು ಬೇಡಿದರೂ ಆತ ಅದಕ್ಕೆ ಒಪ್ಪಿಕೊಳ್ಳುವುದಿಲ್ಲ. ಆಗ ದೈವಗಳೆಲ್ಲ ಬಬ್ಬರ್ಯನ ಪೆಟ್ಟು ತಿಂದು ಅವಮಾನಕ್ಕೊಳಗಾಗಿ ಬಬ್ಬುವಿಗೆ ದೂರು ನೀಡುತ್ತಾರೆ. ರಾಜನ್ ದೈವಗಳ ಒಂದು ಕರೆಗೆ ಮೂರು ಬಾರಿ ಓಗೊಡುತ್ತಾ ಬಂದ ಭಗವಾನ್ ಬಬ್ಬುಸ್ವಾಮಿ

“ಬಬ್ಬರ್ಯನ ಕಾಲನ್ನು ತೆಗೆದು ನಿಮಗೆ ಗಂಗೆ ಸ್ನಾನ ಮಾಡಿಸಿದರೆ ನನಗೇನು ಕೊಡುತ್ತೀರಿ” ಎಂದು ಕೇಳಿದಾಗ, “ಹಾರಿಸಲು ಬೆಳ್ಗೊಡೆ, ಕಂಚಿನಮೊಗಮೂರ್ತಿ, ಅಡ್ಡ ಅಣಿ, ಕೋಲುಗಗ್ಗರವನ್ನು ನಿನಗೆ ಕೊಡಿಸುತ್ತೇವೆ. ಮಾತ್ರವಲ್ಲ ನಾವು ನೆಲೆ ನಿಂತ ‘ಕಡೆಂಬಿಸ್ಥಾನ’ವನ್ನು ನಿನಗೆ ಬಿಟ್ಟು ಕೊಡುತ್ತೇವೆ” ಎಂದು ವಚನ ನೀಡುತ್ತವೆ. (ಎಂಕುಲ್ ಬೊಲ್ಲಿ ಬಂಗಾರ್ದ್ ಮೆರೆಯೆಡ, ನಿಕ್ಕ್ ಕಂಚಿ, ಪಿತ್ತಾಳೆ ಕೊರ್ಪ. ಎಂಕುಲ್ ಬಂಡಿಡ್ ಮೆರೆಯೆಡ, ನಿಕ್ಕ್ ಕೋಲುಗುದ್ದರ ಪಾರ್ದ್ ಕೊಡಿ ಚಪ್ಪರೊಡುಕೊರ್ಪ ಮಾತ್ರವತ್ತ್ ಎಂಕುಲ್, ಉಲ್ಲಾಯಿನ ‘ಕಡೆಂಬಿ ಸ್ಥಾನೊನೇ’ ಬುರ್ದುಕೊರ್ಪ” ಪನ್ಪೆರ್ ರಾಜನ್ ದೈವೊಲಾಯಿನ ಕೊಡಮಣಿತ್ತಾಯ, ಜಾರಂದಾಯ, ಜುಮಾದಿ–ಬಂಟ, ಕುಕ್ಕಿನಂತಾಯ ದೈವೊಲು) ಬಳಿಕ ಸಾವಧಾನವಾಗಿ ಬಬ್ಬು ಬಬ್ಬರ್ಯನಲ್ಲಿ ಕಾಲು ತೆಗೆಯಲು ವಿನಂತಿಸುತ್ತಾನೆ. ಎಷ್ಟು ಪರಿಪರಿಯಾಗಿ ಬೇಡಿಕೊಂಡರೂ ಕಿವಿಗೆ ಹಾಕಿಕೊಳ್ಳದ ಬಬ್ಬರ್ಯನಿಗೆ ಬಬ್ಬು ತನ್ನ ವಿಶ್ವರೂಪವನ್ನು ತೋರಿಸುತ್ತಾನೆ. ಜಟರಾಯನಾಗಿ, ಕಾಳಬೈರವನಾಗಿ ಕೊನೆಗೆ ಕೆಂಚರಾಯನಾಗಿ ತನ್ನ ದರ್ಶನವನ್ನೀಡುತ್ತಾನೆ. ಕೆಂಚರಾಯನಾಗಿ ಬಂದಾಗ ಒಂದು ಕೈಯಲ್ಲಿ ಖಡ್ಗ, ಇನ್ನೊಂದು ಕೈಯಲ್ಲಿ ಅಡ್ಡಲೆ ಹಿಡಿದು ವೀರಾವೇಶದಿಂದ ಕೋಪಗೊಂಡು ಬಬ್ಬು ಬರುತ್ತಾನೆ. ಇಲ್ಲಿ ತಪ್ಪು ಕಲ್ಪನೆಯೊಂದು ಮೂಡಿದಂತಿದೆ. ಅದೇನೆಂದರೆ ಕೆಂಚರಾಯನ ರೂಪ ತಳೆದ ಬಬ್ಬು ಕೋಪೋದ್ರೇಕನಾಗಿ ಖಡ್ಗ ಬೀಸಿದಾಗ ಅದರ ರಭಸಕ್ಕೆ ಬಬ್ಬರ್ಯನ ಕಾಲು ಮುರಿಯಿತು. ಬಬ್ಬರ್ಯನ ಕಾಲು ಮುರಿಯುತ್ತದೆ. ಉದ್ದೇಶ ಬಬ್ಬುವಿಗಿದ್ದ ಹಾಗಿಲ್ಲ. ಏಕೆಂದರೆ ಹೇಳಿಕೇಳಿ ಭಗವಾನ್ ಬಬ್ಬುಸ್ವಾಮಿ ಶಾಂತರೂಪಿ. ಈ ಶಾಂತರೂಪಿ ಉಗ್ರರೂಪ ತಾಳಿದರೂ ಅಂಗಾಂಗಹೀನಪಡಿಸುವ ಕಾರ್ಯವನ್ನಂತೂ ಮಾಡಲಾರ. ಈ ಅಪವಾದವನ್ನು ಬಬ್ಬುವಿನ ಮೇಲೆ ಹಾಕುವುದಕ್ಕಾಗಿಯೇ ಮಾಡಿದ ಹುನ್ನಾರವೂ ಆಗಿದ್ದಿರಬಹುದು. ಕೋಪದಿಂದ ಕೈ ಬೀಸಿದಾಗ ಅನಿರೀಕ್ಷಿತವಾಗಿ ಖಡ್ಗದ ಸ್ಪರ್ಶದಿಂದ ಬಬ್ಬರ್ಯ ಕಾಲು ಮುರಿದು ಬೀಳುತ್ತಾನೆ. ಕೆಟ್ಟ ಮೇಲೆಯೇ ಬುದ್ಧಿ ಬರುವುದಂತೆ, ಇಲ್ಲಿ ಬಬ್ಬರ್ಯನಿಗೂ ತನ್ನ ತಪ್ಪಿನ ಅರಿವಾಗಿ ಬಬ್ಬುವಿನಲ್ಲಿ ಕ್ಷಮೆ ಬೇಡಿದಾಗ, ಶಾಂತ ರೂಪ ತಾಳಿದ ಬಬ್ಬುಸ್ವಾಮಿ ಬಬ್ಬರ್ಯನಿಗೆ ವರ ನೀಡುತ್ತಾನೆ. “ನೀನು ಹೋಗು, ಕಡಲಲ್ಲಿ ದುಡಿಯುವ ಮಂದಿಗೆ ರಕ್ಷಣೆ ನೀಡು, ನನ್ನ ಹೆಸರಿನಲ್ಲಿ ಅಡ್ಡನೂಲು, ನಿನ್ನ ಹೆಸರಿನಲ್ಲಿ ಉದ್ದ ನೂಲನ್ನು ಹೆಣೆದು ಆ ಮರಕಾಲ ಜನಾಂಗ ಬಲೆ ನೆಯ್ದು ದುಡಿಮೆಗೆ ಹೊರಟಾಗ ಅವರನ್ನು ರಕ್ಷಿಸು ಹೊಣೆಯನ್ನು ಹೊರು, ನಿನಗೆ ಮಂಗಳವಾಗಲಿ” ಎಂದು ಹರಸುತ್ತಾನೆ. ನಂತರ ಬಬ್ಬರ್ಯ ಕಡಲ ಕಿನಾರೆಯಲ್ಲೇ ಮರಕಾಲರಿಂದ ಗುಡಿ ಕಟ್ಟಿಸಿ ಅವರ ರಕ್ಷಕ ದೈವವಾಗಿ ನೆಲೆ ನಿಲ್ಲುತ್ತಾನೆ.

ಇಲ್ಲಿ ಬಬ್ಬು ದಲಿತರ ದೈವವಾಗಿರುವ ಕಾರಣ ದಲಿತೇತರ ಬಬ್ಬರ್ಯದೈವವು ಬಬ್ಬುವನ್ನು ಶೋಷಿಸುತ್ತದೆ. ಶ್ರೀ ಬಬ್ಬು ಸ್ವಾಮಿ ತನ್ನ ನಿಜರೂಪ ತೋರಿದಾಗ ಬಬ್ಬರ್ಯ ಶರಣಾಗತನಾಗುತ್ತಾನೆ. ಲಿಂಗಾಯಿತರು ಕೋಟಿಲಿಂಗದಲ್ಲಿ ಮೀನು ಮಾಂಸ ತಿಂದು ಅಶುದ್ಧರಾದಾಗ, ಮುಂದೆ ಇವರನ್ನು ಸವರ್ಣೀಯರು ಶೋಷಿಸುತ್ತಾರೆ ಎಂಬ ವಿಚಾರ ಬಬ್ಬುವಿಗೆ ಮಾಯಶಕ್ತಿಯಿಂದ ತಿಳಿದಿರುವುದರಿಂದಲೇ ಬಬ್ಬು ಮುಂಡಾಳರ ದೈವವಾಗಿ ಬರಲು ಕಾರಣವಾಗಿರಬಹುದು.

ಸವರ್ಣೀಯರು ದಲಿತರನ್ನು ಹೇಗೆ ತಮ್ಮ ಕಾರ್ಯಕ್ಕೆ ಬಳಸಿಕೊಳ್ಳುತ್ತಿದ್ದರೆಂಬುದಕ್ಕೆ ನಿದರ್ಶನ ಬಬ್ಬರ್ಯನಿಂದ ತೀಟೆಗೊಳಪಟ್ಟ ರಾಜನ್ ದೈವಗಳೇ ಸಾಕ್ಷಿ. ಅವರು ಬಬ್ಬುವಿಗೆ ನೀಡುವ ಕಾಣಿಕೆಗಳನ್ನೇ ಗಮನಿಸಿ, ಒಳ್ಳೆಯ ಬೆಲೆ ಬಾಳುವಂತದ್ದೆಲ್ಲ ಸವರ್ಣೀಯರಿಗೆ, ಬೇಡವೆಂದು ಬಿಸಾಡುವ ವಸ್ತುಗಳೆಲ್ಲ, ಬೆಲೆ ಇಲ್ಲದ ವಸ್ತುಗಳೆಲ್ಲ ದಲಿತರಿಗೆ. ಮುಂದೆ ಈ ರಾಜನ್ ದೈವಗಳು ವಚನ ಭ್ರಷ್ಠರಾಗುವುದನ್ನು ನಾವು ಕಾಣುತ್ತೇವೆ.

ಒಟ್ಟಾರೆಯಾಗಿ ತುಳುನಾಡಿನ ಜನಪದ ಪರಂಪರೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿಗಳು ತುಳುವರ ಮೇಲಿದೆ. ಜನಪದ ಸಂಸ್ಕೃತಿಯನ್ನು ಮಗ್ಗುಲಿನಿಂದ ಮಗ್ಗುಲಿಗೆ ಹಸ್ತಾಂತರಗೊಳಿಸುವ ಕಾರ್ಯಗಳನ್ನು ಜನಪದರು ಮಾಡಬೇಕಾಗಿದೆ. ಇಂದು ಜಾಗತೀಕರಣ, ಆಧುನೀಕರಣಗಳಿಗೆ ಜನಪದರ ಬದುಕು ಸಂಪ್ರದಾಯಗಳು ಬಲಿಯಾಗುತ್ತಿದೆ. ಇದು ಹೀಗೆಯೇ ಮುಂದುವರಿದರೆ ಮುಂದೆ ಇದೇ ನಮ್ಮ 'ಕರಣ'ಗಳು ಜನಪದ ಸಂಸ್ಕೃತಿಯ ವಿಚಾರಗಳ ಆಲಿಸುವಿಕೆಗೆ ಹಾತೊರೆಯುವ ದಿನಗಳು ದೂರವಿಲ್ಲ. ಭಾರತದಲ್ಲಿ 80% ಯುವಶಕ್ತಿ ಇದೆ. ಇದರ ಸದ್ಬಳಕೆ ಆಗಬೇಕಿದೆ. ಈ ಯುವಶಕ್ತಿಗೆ ನಮ್ಮ ಪರಂಪರೆಗಳ ಬಗ್ಗೆ ಒಲವು ಮೂಡುವಂತಹ ಕಾರ್ಯಗಳನ್ನು ಇನ್ನಾದರೂ ನಾವು ಪ್ರಾರಂಭಿಸಿದರೆ ಅಳಿವಿನಂಚಿನಲ್ಲಿರುವ ಈ ಜನಪದ ಸಂಸ್ಕೃತಿ, ಪರಂಪರೆಯನ್ನು ಉಳಿಸಬಹುದಾಗಿದೆ. ಮುಂಡಾಳ ಜನಾಂಗದಲ್ಲಿ ಶ್ರೀ ಭಗವಾನ್ ಬಬ್ಬುಸ್ವಾಮಿ ಕರಗತಿ ಮಾಡಿಕೊಂಡ ಬೈದವು ಅಳಿವಿನಂಚಿನಲ್ಲಿದೆ. ಮುಂಡಾಳ ಜನಾಂಗದ ಯುವಶಕ್ತಿ ಎಚ್ಚರಗೊಳ್ಳುವ ಸಂದರ್ಭವೀಗ ತಲೆ ಎತ್ತಿದೆ. ಮುಂಡಾಳ ಜನಾಂಗದ ಉದ್ಧಾರಕ್ಕಾಗಿಯೇ ಭೂಲೋಕದಲ್ಲಿ ಜನ್ಮವೆತ್ತಿ ಬಂದಂತಹ ದೈವರಾಜ ಬಬ್ಬುವನ್ನು ಎಷ್ಟು ಭಾವಪೂರ್ಣವಾಗಿ ಶ್ರದ್ಧಾಭಕ್ತಿಗಳಿಂದ ಈ ಜನಾಂಗ ಆರಾಧನೆಗೈಯುತ್ತಿದೆಯೋ, ಅಷ್ಟೇ ಶ್ರದ್ಧೆಯನ್ನು ದೈವವು ಬಿಟ್ಟು ಹೋದ ಆಸ್ತಿಯಾದ ಬೈದವನ್ನೂ ಉಳಿಸಿ ಬೆಳೆಸುವ ಕಾಯಕದಲ್ಲಿ ತೋರಿಸಬೇಕಾಗಿದೆ. ಈ ಮಹತ್ತರವಾದ ಕಾಯಕದಲ್ಲಿ ನಾವೆಲ್ಲರೂ ಕಾರ್ಯ ಪ್ರವೃತ್ತರಾಗಬೇಕಾದ ಅನಿವಾರ್ಯತೆ ಇದೆ.

# ಅಧ್ಯಾಯ 8

## ಉಪಸಂಹಾರ

# ಅಧ್ಯಾಯ 8
# ಉಪಸಂಹಾರ

ಭೂತಗಳು ಸತ್ತು ಕಾಡುವ ನಿಶಾಚರಿಗಳಲ್ಲ, ಪ್ರಸ್ತುತ ಸಮಾಜದ ಯುವ ಮನಸ್ಸುಗಳಿಗೆ ಭೂತ ಹಾಗೂ ಪಿಶಾಚಿಗಳಿಗೆ ವ್ಯತ್ಯಾಸ ತಿಳಿದಿಲ್ಲ. ಪಿಶಾಚಿಗಳು ದುರ್ಮರಣ ಹೊಂದಿ ನಿಶಾಚರಿಗಳಾಗಿ ತಿರುಗಾಡುವವುಗಳು. ಭೂತಗಳು 'ಜೋಗ–ಮಾಯೆ' ಗಳೆಂಬ ಅದ್ಭುತ ಲೋಕದ ರೂವಾರಿಗಳು. ದೈವಗಳ ಆಚಾರ ವಿಚಾರ, ವರ್ಣನೆ ವೈಭವಗಳು ಸಾಮಾನ್ಯ ಮನುಷ್ಯ ವರ್ತುಲಕ್ಕಿಂತ ಭಿನ್ನದಾಗಿರುವಂತದ್ದು. ಇವುಗಳ ಹುಟ್ಟು, ಬದುಕು, ಜೋಗ, ಮಾಯೆ, ದೈವತ್ವಕ್ಕೇರಿದ ಕಥಾನಕಗಳೇ ಭೂತಗಳ ಪುರಾಣಗಳಾಗಿವೆ. ಇದು ಜನಪದ ಪುರಾಣಗಳಲ್ಲೊಂದಾಗಿದೆ. ದೈವಗಳಲ್ಲಿ ಅತಿಮಾನುಷ ಪ್ರಾಕೃತಿಕ ದೈವಗಳು ಹಾಗೂ ಮನುಷ ಮೂಲದ ದೈವಗಳೆಂಬ ಬಗೆಗಳಿಗೆ ಇನ್ನು ಕೆಲವು ದೈವಗಳಿಗೆ ಐತಿಹಾಸಿಕ ಸ್ಪರ್ಶದ ಹಿನ್ನೆಲೆಗಳಿವೆ. ಇತರ ದೈವ ಸಂಬಂಧಿ ಪುರಾಣಗಳನ್ನು ಓದಲು ಹಾಗೂ ಕೇಳಲು ರೋಚಕವಾಗಿರುತ್ತದೆ.

ವೀರಪುರುಷರ ಹಾಗೂ ವೀರ ಮಹಿಳೆಯ ಹುಟ್ಟು ಒಂದು ನಿಗೂಢ. ಇವರ ಜನನ ಪವಾಡ ಸದೃಶವಾಗಿ ಅಥವಾ ಅಲೌಕಿಕ ಸ್ಥಿತಿಯಲ್ಲಿ ನಡೆದಿರುತ್ತೆ. ಇದಕ್ಕೆ ಅನೇಕ ಪುರಾವೆಗಳೂ ಸಿಗುತ್ತದೆ. ಹೆಚ್ಚಿನ ಪವಾಡ ಪುರುಷರು ಹಾಗೂ ಪವಾಡ ಮಹಿಳೆಯರ ತಾಯಿಯಂದಿರು ಪುರುಷ ಸಂಪರ್ಕವಿಲ್ಲದೆ ಮಕ್ಕಳನ್ನು ಪಡೆದವರು. ಹೊರಗಾಗಿ ಐದು ದಿನದಲ್ಲಿ ಅಶುದ್ಧತೆ ಕಳೆಯಲು ಕೆರೆಗೆ ಸ್ನಾನಕ್ಕೆಂದು ಹೋಗಿ, ಮೀನುಗಳಿಗೆ ಅಕ್ಕಿ ಹಾಕಿದಾಗ ಅಥವಾ ನಾಗದರ್ಶನದಿಂದ ಗರ್ಭ ಧರಿಸುವುದು, ಹರಕೆ ಹೊತ್ತಾಗ ನಾಲಗೆ ಮುಖದೊಳಗೆ ಹೋಗುವ ಮೊದಲೇ ಗರ್ಭವತಿಯಾಗುವುದು, ಧಾರ್ಮಿಕ ಕ್ರಿಯೆಗಳನ್ನು ಆಚರಿಸಿದ ತಕ್ಷಣ ಗರ್ಭವತಿಯಾಗುವುದು, ಸೂರ್ಯನನ್ನು ಜಪಿಸಿದಾಗ ಸೂರ್ಯ ಕಿರಣ ಗರ್ಭದೊಳಕ್ಕೆ ಹೊಕ್ಕೂ ಗರ್ಭ ಧರಿಸುವುದು, ಗಂಡ ದೇಶಾಂತರ ಹೋದ ಸಂದರ್ಭದಲ್ಲಿ ಗರ್ಭಿಣಿಯಾಗುವುದು, ಮಣ್ಣಿನ ಮೂರ್ತಿ ಮಾಡಿ ಅದಕ್ಕೆ ಜೀವ ತುಂಬಿದಾಗ, ದೇವರ ದೇಹದ ಬೆರವರ ಹನಿ ನೆಲಕ್ಕೆ ಬಿದ್ದು ಅದರಿಂದ ಪವಾಡ ಪುರುಷನೋರ್ವ ಸೃಷ್ಟಿಯಾಗುವುದು. ನೆಲ ಒಡೆದು ತುಂಬೆ ಹೂ, ಗರಿಕೆ ಅಥವಾ ಹುಲ್ಲಿನ ಜೊತೆ ಪವಾಡ ಪುರುಷರ ಅವತಾರವಾಗುವುದು ಇತ್ಯಾದಿ.

ಎಲ್ಲಾ ದೈವ–ದೇವರುಗಳ ಸೃಷ್ಟಿಯ ತಾಣ ಈ ತುಳುನಾಡು. ಕನ್ನಡದ ನಾಣ್ನುಡಿಯಂತೆ ನದಿಮೂಲ, ಋಷಿಮೂಲ, ಮಾತೃ ಮೂಲವನ್ನು ಪ್ರಶ್ನಿಸಬಾರದು. ಈ ಮಾತು ಅಕ್ಷರ ಸಹ ತುಳುನಾಡಿನ ಜನಪದರ ಸಾಹಿತ್ಯದಲ್ಲಿ ಕಾಣುತ್ತದೆ. ಹಾಗೂ ಜನಪದ ನಂಬಿಕೆಗಳಿಗೆ ಸರಿಯಾಗಿ ಹೊಂದಿಕೆಯಾಗುತ್ತದೆ. ಏಕೆಂದರೆ ಪವಾಡ ಪುರುಷರ, ಪವಾಡ ಮಹಿಳೆಯರ ಜನ್ಮ ರಹಸ್ಯದ ಬಗ್ಗೆ ಹೇಳುವುದಾದರೆ ಈ ಮಾತನ್ನು ಒಪ್ಪಲೇಬೇಕು. ಮಾತೃಮೂಲವನ್ನು ಪ್ರಶ್ನಿಸಿದರೆ ಖಂಡಿತವಾಗಿಯೂ ಇಂದು ದಕ್ಷಿಣಭಾರತದಲ್ಲಂತೂ 'ಭೂತಾರಾಧನೆ'ಯ ಕಲ್ಪನೆಯೂ ಸಾಧ್ಯವಾಗುತ್ತಿರಲಿಲ್ಲವೇನೋ?

ಇಂತಹ ಪವಾಡ ಪುರುಷರಲ್ಲಿ ಒಬ್ಬನಾದ ದೈವೀ ಸಂಭೂತ ಬಬ್ಬುಸ್ವಾಮಿ, ಮುಂಡಾಲ ವರ್ಗದ ಉದ್ಧಾರಕ್ಕಾಗಿಯೇ ಹಲವು ಕಾಲಘಟ್ಟದಲ್ಲಿ, ಹಲವು ಹೆಸರಿನಲ್ಲಿ, ಹಲವು ರೂಪದಲ್ಲಿ ಈ ಭೂಮಿಗೆ ಕಚ್ಚೂರ ಮಾಲ್ದಿಯ ಹೊಟ್ಟೆಯಿಂದ ಹೊರಬಂದವನು. 'ಬಬ್ಬು'ವೂ ತನ್ನ ಪವಾಡಗಳನ್ನು ಪ್ರದರ್ಶಿಸಿ, ವೀರಪುರುಷನಾಗಿ ದುಡಿದು ಅಮರತ್ವವನ್ನು ಪಡೆದು ದೈವವಾಗಿ ಮುಂಡಾಲ ಜನಾಂಗದೊಳಗೆ ಗ್ರಾಮದೈವವಾಗಿ, ಕಾರ್ನಿಕದ ದೈವವಾಗಿ, ರಾಜನ್ ದೈವವಾಗಿ ಮೆರೆದಿದ್ದಾನೆ.

ತುಳುನಾಡಿನ ದೈವಗಳು ಸ್ವರ್ಗದಲ್ಲಿ ವಾಸಿಸುವುದಿಲ್ಲ. ಸರ್ವಕಾಲವೂ ಭಕ್ತರ ಬದುಕಿನ ಜೊತೆಗಿದ್ದು, ಅವರ ಸಂಕಷ್ಟದ ದಿನಗಳಲ್ಲಿ ರಕ್ಷಕನಾಗಿ, ತಾಯಿಯಾಗಿ, ಹಿತೈಷಿಯಾಗಿ ಕೈ ಹಿಡಿದು ಕಾಪಾಡುತ್ತವೆ. ಅಂತೆಯೇ ಕರ್ತವ್ಯ ಲೋಪವಾದರೆ ನ್ಯಾಯಕ್ಕಾಗಿ, ಸತ್ಯಕ್ಕಾಗಿ ಹೋರಾಡುವ ಈ ದೈವಗಳು ಕಣ್ಣೆದುರಿಗೆಯೇ ಶಿಕ್ಷೆ ಕೊಡುವ ಸಾಮರ್ಥ್ಯವನ್ನು ಹೊಂದಿದೆ. ಬಬ್ಬುಸ್ವಾಮಿಯ ಮಹಿಮೆಗಳು ಅಪಾರ. 'ಬಬ್ಬು' ಅಂತಿಂತಹ ದೈವವಲ್ಲ, ಮುಂಡಾಲ ಜನಾಂಗದ ಗ್ರಾಮದೈವ, ರಾಜನ್ ದೈವ. ಬಬ್ಬುಸ್ವಾಮಿಗೆ ಭಯ ಭಕ್ತಿಯಿಂದ ಕೈ ಜೋಡಿಸಿ, ಶರಣಾಗತನಾಗಿ ಬಂದರೆ, ಆ ಭಕ್ತನಿಗೆ ತಾಯಿಯಾಗಿ ಮೈದಡವುತ್ತಾನೆ, ತಂದೆಯಾಗಿ ರಕ್ಷಿಸುತ್ತಾನೆ, ಮಾವನಾಗಿ ಸಲಹುತ್ತಾನೆ, ಗೆಳೆಯನಾಗಿ ತಿದ್ದುತ್ತಾನೆ, ಹಿತೈಷಿಯಾಗಿ ತಪ್ಪನ್ನು ಸರಿಪಡಿಸಲು ಅವಕಾಶವನ್ನು ನೀಡುತ್ತಾನೆ. ತಪ್ಪಿ ನಡೆಸದೆ ಮೋಸವನ್ನೆಸಗಿದರೆ ಶಿಕ್ಷಕನಾಗಿ ಶಿಕ್ಷಿಸುತ್ತಾನೆ. ಮನಸಾರೆ 'ಬಬ್ಬು, ನಾನು ಕಷ್ಟದಲ್ಲಿದ್ದೇನೆ, ನನ್ನನ್ನು ಕಾಪಾಡು ಸ್ವಾಮೀ' ಎಂದು ಮನೆ ದೀಪ ಬೆಳಗಿಸುವಾಗ ಅಥವಾ ಯಾವ ಕ್ಷಣವೂ ನಿಷ್ಕಲ್ಮಶ ಮನಸ್ಸಿನಿಂದ ಪ್ರಾರ್ಥಿಸಿದರೆ ಬಬ್ಬು ನಮ್ಮನ್ನು ಕೈ ಹಿಡಿದು ಬೆಳಗಿಸುವುದರಲ್ಲಿ ಯಾವ ಸಂದೇಹವೂ ಇಲ್ಲ.

ಧಾರ್ಮಿಕ ಆಚರಣೆಗಳಲ್ಲಿ ಮುಂಡಾಳ ಜನಾಂಗ ಬಬ್ಬುವಿನ ಆರಾಧನೆಯನ್ನು ಮಾಡುವಲ್ಲಿ ಎಳ್ಳಷ್ಟೂ ಉದಾಸೀನತೆಯನ್ನು ಮಾಡಿಲ್ಲ ಎಂಬುದನ್ನು ಹಲವು ನಿದರ್ಶನಗಳಿಂದ ಸಾಬೀತುಪಡಿಸಬಹುದು. ಎಲ್ಲಾ ಗ್ರಾಮಗಳಲ್ಲಿ ಬಬ್ಬುವಿನ ನೇಮೋತ್ಸವ ನಡೆಯುವ ಸಂದರ್ಭದಲ್ಲಿ ಹಿರಿಯರಿಗಿಂತಲೂ, ಕಿರಿಯರು ತೋರುವ ಹುಮ್ಮಸ್ಸು, ಪಾಲ್ಗೊಳ್ಳುವಿಕೆಯಲ್ಲಿರುವ ಆಸಕ್ತಿ, ಅವರು ಆ ಸಂದರ್ಭದಲ್ಲಿ ತೋರುವ ಶ್ರದ್ಧೆ ಈ ಮಾತಿಗೆ ಸಾಕ್ಷಿಯಾಗಿದೆ. ಬಬ್ಬುವಿನ ಬಗ್ಗೆ ಮುಂಡಾಳರ ಯುವಜನತೆ ತಿಳಿದುಕೊಂಡ ಮಾಹಿತಿಗಳು ಅತ್ಯಾದ್ಭುತ. 'ಹಳೆ ಬೇರು ಹೊಸ ಚಿಗುರು ಕೂಡಿದರೆ ಮರ ಸೊಗಸು' ಎಂಬಂತೆ ಹಿರಿಯರ ಸಲಹೆ, ಕಿರಿಯರ ಆಸಕ್ತಿ ಮುತುವರ್ಜಿಗಳೇ ಇವತ್ತು ಬಬ್ಬುಸ್ವಾಮಿ ದೈವಸ್ಥಾನಗಳ ಅಭಿವೃದ್ಧಿ ಕಾರ್ಯಗಳಲ್ಲಿ ಕಾಣಸಿಗುವ ಜ್ವಲಂತ ಸಾಕ್ಷಿಗಳಾಗಿವೆ.

ಈ ಜಗತ್ತಿನಲ್ಲಿ ಪುರಾಣದ ಕತೆಗಳಿವೆ, ಐತಿಹಾಸಿಕ ಕತೆಗಳಿವೆ, ಅದರಂತೆ 'ದೈವ' ಎಂದು ಕರೆದುಕೊಳ್ಳುವ ಭೂತದ ಕಥೆಗಳೂ ಇದೆ. ಆದರೆ ವಿಷಾದಕರ ಸಂಗತಿ ಎಂದರೆ ಭೂತ ಪುರಾಣಗಳು ಹೆಚ್ಚು ಪ್ರಚಲಿತವಾಗಿಲ್ಲ. ಈ ಕಥೆ ಪುರಾಣಗಳು ಪ್ರಸರಣಗೊಳ್ಳಬೇಕಾಗಿದೆ. ಜನಮನ ತಲುಪಬೇಕಾಗಿದೆ. ಇದನ್ನು ಮರೆಮಾಚುವ ಅಗತ್ಯಗಳೂ ಇಲ್ಲ. ಭೂತಾರಾಧನೆಯನ್ನು ಜಗಜ್ಜಾಹಿರಗೊಳಿಸಬೇಕಾಗಿದೆ. ಮನೆಮನೆಗಳಲ್ಲಿರುವ ಮನಗಳನ್ನು ತಲುಪಬೇಕಾಗಿದೆ. ಮನೆ

ಮನೆಗಳಲ್ಲಿರುವ ಮನಗಳನ್ನು ತಲುಪಬೇಕಾಗಿದೆ. ಭೂತಾರಾಧನೆಯನ್ನು ಜಾತೀಯ ನೆಲೆಯಲ್ಲಿ ಪರಿಗಣಿಸದೆ ದೈವೀ ಸ್ವರೂಪದ ನೆಲೆಯಲ್ಲಿ, ಆರಾಧನೆಯ ನೆಲೆಯಲ್ಲಿ ಪರಿವೀಕ್ಷಿಸಿದರೆ ಸ್ವಾಸ್ಥ್ಯ ಸಮಾಜ ನಿರ್ಮಾಣ ಸಾಧ್ಯ.

ಈ ಕಿರು ಸಂಶೋಧನೆಯ ಮೂಲ ಉದ್ದೇಶವೂ ಇದೇ ಆಗಿದ್ದು, ಮುಂಡಾಳರ ಮುಂಬರುವ ಯುವ ಪೀಳಿಗೆಯಲ್ಲಿ ತುಳುನಾಡಿನ ದೈವಾರಾಧನೆಗಳಲ್ಲಿ ಒಲವು ಮೂಡಿಸುವ ಹಾಗೂ ಬಬ್ಬುಸ್ವಾಮಿಯ ಕಾರ್ನಿಕದ ಬಗ್ಗೆ ಹೆಚ್ಚು ಜನರಿಗೆ ಅದನ್ನು ತಲುಪಿಸಿ, ಬಬ್ಬುವಿನ ಪವಾಡಗಳ ವ್ಯಾಪಕ ಪ್ರಚಾರತೆಯನ್ನು ಮಾಡುವುದಾಗಿದೆ. ಈ ನಿಟ್ಟಿನಲ್ಲಿ ಈ ಕಿರುಸಂಶೋಧನೆಯು ಮುಂಡಾಳ ಯುವ ಜನತೆಯಲ್ಲಿ ಹಾಗೂ ಭಾರತದಲ್ಲಿರುವ 80 ಶೇಕಡ ಯುವಶಕ್ತಿ (ನಂದನ್ ನಿಲೇಕಣಿಯವರ 'ಕಾಲ್ಪನಿಕ ಭಾರತ'ದಲ್ಲಿ ತಿಳಿಸಿರುವಂತೆ)ಯನ್ನು ತಲುಪಿ ಅವರಲ್ಲಿ ಜಾಗೃತಿಯನ್ನು ಮೂಡಿಸಲಿ, ತುಳುನಾಡ ಸಂಸ್ಕೃತಿಯಲ್ಲಿ ಆಚರಣೆಗೊಳಪಡುವ ದೈವಾರಾಧನೆ ಭಕ್ತ ಜನರಲ್ಲಿ ಭಯಭಕ್ತಿ ಮೂಡಿಸಲಿ, ಜನಾಂಗದ ಉದ್ಧಾರದ ಜೊತೆಗೆ ದೇಶದ ಉದ್ಧಾರವೂ ಆಗಲಿ ಎನ್ನುವುದು ಈ ಪ್ರಬಂಧದ ಮೂಲ ಉದ್ದೇಶ.

# ಅಧ್ಯಾಯ 9

1) ಪ್ರಶ್ನಾವಳಿಗಳು
2) ಮಾಹಿತಿ ಋಣ
3) ಪರಾಮರ್ಶನ ಕೃತಿಗಳು

# ಪ್ರಶ್ನಾವಳಿಗಳು

## ಕೋಟೆದ ಬಬ್ಬುಸ್ವಾಮಿ ಒಂದು ಸಾಂಸ್ಕೃತಿಕ ಮತ್ತು ಸಾಮಾಜಿಕ ಆಚರಣೆಗಳು ಕಿರು ಸಂಶೋಧನೆಗೆ ತಯಾರಿಸಲಾದ ಪ್ರಶ್ನಾವಳಿಗಳು

1. ಮುಂಡಾಳ ಸಮುದಾಯದಲ್ಲಿ ಎಷ್ಟು ಶೇಕಡ ವಿದ್ಯಾವಂತರಿರುವರು?
   1) 25 2) 50 3) 75 4) 100
2. ಮುಂಡಾಳ ಸಮುದಾಯದಲ್ಲಿರುವ ಸರಾಸರಿ ಸರಕಾರಿ ನೌಕರರೆಷ್ಟು?
   1) 25 2) 50 3) 75 4) 100
3. ಈ ಸಮುದಾಯದಲ್ಲಿರುವ ಕೂಲಿ ಕಾರ್ಮಿಕರೆಷ್ಟು? (ಶೇಕಡಾವಾರುಗಳಲ್ಲಿ)
   1) 25 2) 50 3) 75 4) 100
4. ಈ ಸಮುದಾಯದಲ್ಲಿ ಖಾಸಗಿ ವಲಯದಲ್ಲಿರುವ ಉದ್ಯೋಗಿಗಳೆಷ್ಟು?(ಶೇಕಡಾವಾರುಗಳಲ್ಲಿ)
   1) 25 2) 50 3) 75 4) 100
5. ಮುಂಡಾಳ ಸಮುದಾಯದ ಮಹಿಳೆಯರ ಸಂಖ್ಯೆ ಎಷ್ಟು?
   1) 25 2) 50 3) 75 4) 100
6. ಮುಂಡಾಳ ಸಮುದಾಯದ ಪುರುಷರ ಸಂಖ್ಯೆ ಎಷ್ಟು?
   1) 25 2) 50 3) 75 4) 100
7. ಮುಂಡಾಳ ಸಮುದಾಯದಲ್ಲಿ ಈ ಹಿಂದೆ ಬಾಲ್ಯ ವಿವಾಹ ಪದ್ದತಿ ಇತ್ತೆ?
   1) ಹೌದು 2) ಇಲ್ಲ
8. ಆ ಪದ್ದತಿ ಈಗ ಇದೆಯೇ?
   1)ಇದೆ 2)ಇಲ್ಲ 3) ಕೆಲವೆಡೆ ಇದೆ 4) ಇರಲೂಬಹುದು
9. ಈ ಸಮುದಾಯದಲ್ಲಿ ಬಹು ಪತ್ನಿತ್ವ ಜಾರಿಯಲ್ಲಿತ್ತೆ?
   1) ಹೌದು 2) ಇಲ್ಲ
10. ಮುಂಡಾಳ ಸಮುದಾಯದಲ್ಲಿ ಯಾವ ಪದ್ದತಿ ಇದೆ?
    1) ಮಾತೃಮೂಲೀಯಕಟ್ಟು 2) ಅಳಿಯ ಕಟ್ಟು
11. ಈ ಪದ್ದತಿಯು ಈಗ ಬದಲಾಗಿದೆಯೆ?
    1) ಹೌದು 2) ಇಲ್ಲ
12. ಮುಂಡಾಳ ಸಮುದಾಯದಲ್ಲಿ ಬದುಕು ಮತ್ತು ಆರಾಧನೆಗೆ ಸಂಬಂಧವಿದೆಯೆ?
    1) ಹೌದು 2) ಇಲ್ಲ
13. ಮುಂಡಾಳ ಸಮುದಾಯದಲ್ಲಿ ಆರಾಧನೆಗೊಳಪಡುವ ಬಬ್ಬು ಯಾವ ದೈವ?
    1) ಗ್ರಾಮದೈವ 2) ಮಾಗಣೆದೈವ 3) ಕುಲ ದೈವ
14. ಈ ಸಮುದಾಯದ ಜನರಲ್ಲಿ ದೈವರಾಜ ಬಬ್ಬುವಿನ ಬಗ್ಗೆ ಯಾವ ಅಭಿಪ್ರಾಯವಿದೆ?
    1) ಕನಿಷ್ಟ 2) ಕೇವಲ 3) ಶ್ರೇಷ್ಠ 4) ಸಾಧಾರಣ

15. ಶೋಷಿತ ವರ್ಗದ ಧ್ವನಿಯಾಗಿ ಬಬ್ಬುವನ್ನು ಪ್ರತಿನಿಧಿಸಬಹುದೇ?
 1) ಹೌದು 2) ಇಲ್ಲ

16. ಮುಂಡಾಳ ಜನಾಂಗದಲ್ಲಿ ದೈವರಾಜ ಬಬ್ಬುವಿಗಿರುವಷ್ಟೇ ಪ್ರಾಧಾನ್ಯತೆ ಇತರ ದೈವಗಳಿಗಿದೆಯೇ
 1) ಹೌದು 2) ಇಲ್ಲ

17. ದೈವರಾಜ ಕೋರ್ದಬ್ಬು ತಂಗಿಯಾಗಿ ಸ್ವೀಕರಿಸಿದ ತನ್ನಿಮಾನಿಗಳನ್ನು, ಮುಂಡಾಳ ಜನಾಂಗವು ಆರಾಧನೆಯೊಳಗೆ ಸ್ವೀಕರಿಸಿದೆಯೇ?
 1) ಹೌದು 2) ಇಲ್ಲ 3) ಪೂರ್ಣ ಪ್ರಮಾಣದಲ್ಲಿ ಇಲ್ಲ 4) ಶೇ 50

18. ನೀವು ವಿದ್ಯಾಭ್ಯಾಸ ಪಡೆದ ಶಾಲೆ
 1) ಸರಕಾರಿ 2) ಖಾಸಗಿ

19. ನಿಮ್ಮ ಮಕ್ಕಳು ವಿದ್ಯಾಭ್ಯಾಸ ಪಡೆದ ಶಾಲೆ
 1) ಸರಕಾರಿ 2) ಖಾಸಗಿ

20. ನೀವು ವಾಸಿಸುತ್ತಿರುವ ಮನೆ ಯಾವ ಗುಂಪಿಗೆ ಸೇರಿದೆ?
 1) ಗುಡಿಸಲು 2) ಹಂಚಿನ ಮನೆ 3) ಆರ್.ಸಿ.ಸಿ. 4) ಇತರೆ

21. ನಿಮ್ಮ ಕುಟುಂಬವು ಈ ಅನುಕೂಲತೆಗಳನ್ನು ಹೊಂದಿದೆಯೇ?
 1) ಓದುವ ಕೊಠಡಿ 2) ವಿದ್ಯುತ್ 3) ಆಧುನಿಕ ಸಲಕರಣೆ

22. ನಿಮ್ಮ ಜನಾಂಗ ಗಂಡು ಮತ್ತು ಹೆಣ್ಣು ಮಕ್ಕಳಲ್ಲಿ ಯಾರನ್ನು ಶಾಲೆಗೆ ಕಳುಹಿಸಲು ಇಷ್ಟ ಪಡುತ್ತೀರಾ?
 1) ಗಂಡು 2) ಹೆಣ್ಣು 3) ಇಬ್ಬರನ್ನು 4) ಇಬ್ಬರನ್ನೂ ಅಲ್ಲ

23. ನಿಮ್ಮ ಕುಟುಂಬದಲ್ಲಿ ಮದ್ಯಪಾನ ವ್ಯಸನಿಗಳು ಇದ್ದಾರೆಯೇ?
 1) ಹೌದು 2) ಇಲ್ಲ

24. ತಂದೆಯ ವಿದ್ಯಾಭ್ಯಾಸ
 1) ಅನಕ್ಷಸ್ಥರು 2) ಪ್ರಾ.ಶಿಕ್ಷಣ 3)ಪದವಿ 4) ಇತರೆ

 ತಾಯಿ ವಿದ್ಯಾಭ್ಯಾಸ
 1) ಅನಕ್ಷಸ್ಥರು 2) ಪ್ರಾ.ಶಿಕ್ಷಣ 3) ಪದವಿ 4) ಇತರೆ

25. ನಿಮ್ಮ ಉದ್ಯೋಗದ ಮೂಲ ಯಾವುದು?
 1) ಕೃಷಿ 2) ವ್ಯಾಪಾರ 3) ಸರ್ಕಾರಿ / ಅರೆ ಸರ್ಕಾರಿ 4) ಖಾಸಗಿ

26. ಉದ್ಯೋಗದ ಸ್ವರೂಪ
 1) ದಿನಗೂಲಿ 2) ಅರೆಕಾಲಿಕ 3) ಖಾಯಂ 4) ಪೂರ್ಣಕಾಲಿಕ

27. ನೀವು ಸಸ್ಯಾಹಾರಿಗಳೇ
 1) ಹೌದು 2) ಇಲ್ಲ

28. ಮಾಂಸಹಾರಿಗಳೇ?

    1) ಹೌದು 2) ಇಲ್ಲ

29. ಮೂಲದಲ್ಲಿದ್ದ ಸಸ್ಯಾಹಾರಿ ಈ ಪದ್ಧತಿ ಇತ್ತೀಚಿನ ಕಾಲಘಟ್ಟದಲ್ಲಿ ಬದಲಾಗಲು ಕಾರಣಗಳೇನು?

    1) ಸಾಮಾಜಿಕ 2) ಆರ್ಥಿಕ 3) ಧಾರ್ಮಿಕ 4) ರಾಜಕೀಯ

30. ಸಸ್ಯಾಹಾರಿಗಳಾಗಿದ್ದಲ್ಲಿ ಇವುಗಳನ್ನು ಉಪಯೋಗಿಸುತ್ತೀರಾ?

    1) ಅಕ್ಕಿ 2) ಜೋಳ 3) ಗೋಧಿ 4) ಇತರೆ

31. ನೀವು ಮಾಂಸಹಾರಿಗಳಾಗಿದ್ದಲ್ಲಿ ಎಷ್ಟು ಬಾರಿ ತೆಗೆದುಕೊಳ್ಳುತ್ತೀರಿ.

    1) ವಾರಕ್ಕೆ 2) ತಿಂಗಳಿಗೆ 3) ವರ್ಷಕ್ಕೆ 4) ದಿನಾಲೂ

32. ಕುಟುಂಬದ ಸದಸ್ಯರಲ್ಲಿ ಅನಾರೋಗ್ಯ (ಕಾಯಿಲೆ) ವಾದಾಗ ಯಾವ ರೀತಿ ಚಿಕಿತ್ಸೆ ಪಡೆಯುತ್ತೀರಿ?

    1) ಆಯುರ್ವೇದ 2) ಸರಕಾರಿ ಆಸ್ಪತ್ರೆ 3) ಯಂತ್ರ ಮಂತ್ರ 4) ಖಾಸಗಿ ಆಸ್ಪತ್ರೆ

33. ನಿಮ್ಮ ಸಮುದಾಯದ ಆರ್ಥಿಕ ಸ್ಥಿತಿ ಬದಲಾಗಿದೆಯೇ?

    1) ಬದಲಾಗಿದೆ 2) ಬದಲಾಗಿಲ್ಲ 3) ಸ್ವಲ್ಪ ಬದಲಾಗಿದೆ 4) ಬದಲಾಗುತ್ತಿದೆ.

34. ನಿಮ್ಮ ಸಮುದಾಯದ ಸಾಮಾಜಿಕ ಸ್ಥಿತಿ ಬದಲಾಗಿದೆಯೇ?

    1) ಬದಲಾಗಿದೆ 2) ಬದಲಾಗಿಲ್ಲ 3) ಸ್ವಲ್ಪ ಬದಲಾಗಿದೆ 4) ಬದಲಾಗುತ್ತಿದೆ.

35. ನಿಮ್ಮ ಸಮುದಾಯದ ಜನರ ಜನಸಂಖ್ಯೆ ಎಲ್ಲಿ ಹೆಚ್ಚು ಕಾಣ ಸಿಗುತ್ತದೆ?

    1) ಉತ್ತರ 2) ದಕ್ಷಿಣ 3) ಪೂರ್ವ 4) ಪಶ್ಚಿಮ

# ಮಾಹಿತಿ ಋಣ

ಶ್ರೀಯುತ ಬಾಬು ಸಾಲಿಯಾನ್, ಅಧ್ಯಕ್ಷರು, ಶ್ರೀಕ್ಷೇತ್ರ ಕಚ್ಚೂರು.

ಶ್ರೀಯುತ ರೋಹಿತ್ ಉಳ್ಳಾಲ್, ವಾರ್ತಾ ನಿರೂಪಕರು, ಪೊಸಕುರಲ್ ಚಾನಲ್, ಉಳ್ಳಾಲ.

ಶ್ರೀಯುತ ಚಂದ್ರಶೇಖರ್, ಗುರಿಕಾರ, ಶ್ರೀ ದೈವರಾಜ ಕೋಟೆದ ಬಬ್ಬುಸ್ವಾಮಿ ದೈವಸ್ಥಾನ ಬೊಲ್ಕಲ್.

ಶ್ರೀಯುತ ಅಶೋಕ್, ಮಧ್ಯಸ್ಥ, ಕಾಟಿಪಳ್ಳ, ಮಂಗಳೂರು.

ಶ್ರೀಯುತ ಸುರೇಶ್ ಬಿ. ಭಗವಾನ್ ಶ್ರೀ ಬಬ್ಬುಸ್ವಾಮಿ ದೈವಸ್ಥಾನ, ಬಳ್ಳಾಲ್‌ಬಾಗ್

ಶ್ರೀಯುತ ಜಗನ್ನಥ್, ಮಲ್ಲಾರ್, ಕಾಪು.

ಶ್ರೀಯುತ ಪ್ರೇಮನಾಥ್, ಅತ್ತಾವರ ಬಾಬುಗುಡ್ಡ.

ಶ್ರೀಯುತ ಹೇಮಂತ್ ಕುಲಾಲ್, ಮಧ್ಯಸ್ಥ, ಪುತ್ತೂರು.

ಶ್ರೀಯುತ ವಿಜಯಕುಮಾರ್, ಮುಲ್ಲಕಾಡು, ಕಾವೂರು.

ಶ್ರೀಮತಿ ಮೀನಾಕ್ಷಿ ಪಿ. ಶಂಕರಪುರ, ಉಡುಪಿ.

ಶ್ರೀಮತಿ ಸುಂದರಿ, ಕೋಣಾಜೆ.

ಶ್ರೀಯುತ ಮಾಧವ ಕೆ., ಶ್ರೀ ಗುರು ವೈದ್ಯನಾಥ ಬಬ್ಬುಸ್ವಾಮಿ ದೈವಸ್ಥಾನ, ಕುಂಜತ್ತ್‌ಬೈಲ್.

ಶ್ರೀಯುತ ಶಶಿಕಾಂತ್, ಕೋಟೆದ ಬಬ್ಬುಸ್ವಾಮಿ ದೈವಸ್ಥಾನ, ಮಲ್ಲಿಕಟ್ಟೆ.

ಶ್ರೀಯುತ ಭಾಸ್ಕರ್ ಪೂಜಾರಿ, ಅಮ್ಟೂರ್ ಸ್ಟುಡಿಯೋ, ಕೊಡಿಯಾಲ್‌ಬೈಲ್.

ಶ್ರೀಯುತ ಅರುಣ್‌ಕುಮರ್, ಭಗವಾನ್ ಶ್ರೀ ಬಬ್ಬುಸ್ವಾಮಿ ಕ್ಷೇತ್ರ, ಬಿಜೈ ಕಾಪಿಕಾಡ್.

ಶ್ರೀಯುತ ಪವನ್‌ಕುಮಾರ್, ಸೂಟರ್‌ಪೇಟೆ.

ಶ್ರೀಯುತ ಬಾಲಚಂದ್ರ, ಶ್ರೀ ಕೋಡ್ದಬ್ಬು ದೈವಸ್ಥಾನ, ಬಂಗ್ರಕೋಡಿ, ಪಡ್ಡೋಡಿ.

**ಹಾಗೂ**

ಸಂಪೂರ್ಣ ಸಹಕಾರದೊಂದಿಗೆ, ಸರ್ವ ಸದಸ್ಯರು, ಭಗವಾನ್ ಶ್ರೀ ಬಬ್ಬುಸ್ವಾಮಿ ಕ್ಷೇತ್ರ ಶೆಟ್ಲೆಗ್ರಾಮ, ಅತ್ತಾವರ, ಬಾಬುಗುಡ್ಡೆ.

# ಪರಾಮರ್ಶನ ಕೃತಿಗಳು


| | ಲೇಖಕರ / ಸಂಪಾದಕರ ಹೆಸರು | ಪುಸ್ತಕದ ಹೆಸರು, ಪ್ರಕಾಶನ |
|---|---|---|
| 1 | ಪ್ರೊ. ಅಮೃತ ಸೋಮೇಶ್ವರ | **ಭಗವತಿ ಆರಾಧನೆ,** ಪ್ರಕೃತಿ ಪ್ರಕಾಶನ, ಕೋಟೆಕಾರು (1998) |
| 2 | ಪ್ರೊ. ಎ.ವಿ. ನಾವಡ | **ತುಳು ಪಾಡ್ದನ** (ಬಂಧ ಮತ್ತು ವಿಕಾಸ), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು (2003) |
| 3 | ಪ್ರೊ. ಎ.ವಿ. ನಾವಡ | **ತುಳು ಪಾಡ್ದನಗಳ ಸಂಯೋಜನ ಪ್ರಕ್ರಿಯೆ : ಜಾನಪದ ಸಮಾಲೋಚನೆ,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು (1993) |
| 4 | ಕೆ.ವಿ. ನಾವಡ | **ಅಕ್ಕೆರಸು ಸಿರಿ,** ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು (2007) |
| 5 | ಕೇಳು ಮಾಸ್ತರ್, ಅಗಲ್ಪಾಡಿ (ಸಂಗ್ರಹ) | **ಕೇರಳದ ತೆಯ್ಯಂ,** ಕೈರಳಿ ಪ್ರಕಾಶನ, ಕಾಸರಗೋಡು (2013) |
| 6 | ಕೆನರಾಡಿ ವಾದಿರಾಜ ಭಟ್ಟ | **ಪಾಡ್ದನಗಳು,** ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ (1974) |
| 7 | ಡಾ॥ ಇಂದಿರಾ ಹೆಗ್ಗಡೆ | **ತುಳುವರ ಮೂಲತಾನ ಆದಿ ಆಲಡೆ,** ಪರಂಪರೆ ಮತ್ತು ಪರಿವರ್ತನೆ ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು (2012) |
| 8 | ಡಾ. ಇಂದಿರಾ ಹೆಗ್ಗಡೆ (ಸಂಪಾದಕರು) | **ಮೂಲತಾನದ ನಾಗಬ್ರಹ್ಮ ಮತ್ತು ಪರಿವಾರ ದೈವಗಳ ಪಾಡ್ದನ** ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಹಾವೇರಿ (2014) |
| 9 | ಡಾ. ಕೆ. ಚಿನ್ನಪ್ಪ ಗೌಡ | **ಭೂತಾರಾಧನೆ–ಜಾನಪದೀಯ ಅಧ್ಯಯನ,** ಮದಿಪು ಪ್ರಕಾಶನ, ಮಂಗಳಗಂಗೋತ್ರಿ (1990) |
| 10 | ಡಾ. ಕೆ. ಚಿನ್ನಪ್ಪಗೌಡ (ಸಂಪಾದಕರು) | **“ಸೇರಿಗೆ”,** ಮದಿಪು ಪ್ರಕಾಶನ, ಮಂಗಳಗಂಗೋತ್ರಿ (2000) |
| 11 | ಡಾ. ಕೆ. ಸಾವಿತ್ರಿ | **ಅವಳಿ ಕ್ರಾಂತಿ ಕಿಡಿಗಳು ಕಲ್ಲುರ್ಟಿ–ಕಲ್ಕುಡ,** ಸಿರಿವರ ಪ್ರಕಾಶನ, ಬೆಂಗಳೂರು (2010) |
| 12 | ಡಾ. ಕೆ. ಸಾವಿತ್ರಿ | **ಚರಿತ್ರೆಯ ಐಸಿರಿ,** ಎಂ. ಬೈರೇಗೌಡ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು (2010) |
| 13 | ಡಾ. ಕೆ. ಸಾವಿತ್ರಿ | **ನಂಬಿದ ಸತ್ಯಗಳು,** ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು (2006) |

| | | |
|---|---|---|
| 14 | ಡಾ. ಕೊಯಿರಾ ಎನ್. ಬಾಳೆಪುಣಿ | **ಮುಗೇರರ ದುಡಿ ಕುಣಿತಗಳು ಸ್ವರೂಪ ಮತ್ತು ಸಂಸ್ಕೃತಿ, ದುಡಿ ಪ್ರಕಾಶನ, ಬಂಟ್ವಾಳ (2010)** |
| 15 | ಡಾ. ಗಣೇಶ್ ಅಮೀನ್ ಸಂಕಮಾರ್ | **ನುಡಿ ಸಿಂಗಾರ,** ಸಿರಿ ಪ್ರಕಾಶನ, ಪಾವಂಜೆ, ಹಳೆಯಂಗಡಿ, ಮಂಗಳೂರು (2006) |
| 16 | ಡಾ. ಗಣೇಶ್ ಅಮೀನ್ ಸಂಕಮಾರ್ | **ಮಾಯ ಮತ್ತು ಜೋಗ,** ಸಿರಿ ಪ್ರಕಾಶನ, ಮಂಗಳೂರು (2009) |
| 17 | ಡಾ. ಧನಂಜಯ ಕುಂಬ್ಳೆ | **ಐತಿಹ್ಯಗಳು ಕಟ್ಟಿ ಕೊಡುವ ತುಳುನಾಡಿನ ಇತಿಹಾಸ,** ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು (2016) |
| 18 | ಡಾ. ನವೀನ್ ಕುಮಾರ್ ಮರಿಕೆ | **ದೈವಾರಾಧನೆ,** ಸಾಂಸ್ಕೃತಿಕ ಅಧ್ಯಯನ ಸಿರಿಮುಡಿ ಪ್ರಕಾಶನ, ದೈವಾರಾಧನ ಅಧ್ಯಯನ ಕೇಂದ್ರ, ಪುತ್ತೂರು (2017) |
| 19 | ಡಾ. ನವೀನ್ ಕುಮಾರ್ ಮರಿಕೆ, ಹರೀಶ್ ಮಂಜೊಟ್ಟು | **ಮರಕ್ಕೂರು ಜನನದ ದೈವಗಳು,** ಭವಿಷ್ಯ ಪ್ರಕಾಶನ, ಬಂಟ್ವಾಳ (2016) |
| 20 | ಡಾ. ಪಾದೂರು ಗುರುರಾಜ ಭಟ್ | **ತುಳುನಾಡು** (ಸಾಮಾಜಿಕ ಚರಿತ್ರೆಯಲ್ಲಿ ಒಂದು ಸಂಶೋಧನಾತ್ಮಕ ವಿವೇಚನೆ) ಡಾ। ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್ (ರಿ), ಉಡುಪಿ (2009) |
| 21 | ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ | **ನಾಗಬೆರ್ಮೆರ್,** ಸುಪ್ರಿಯಾ ಪ್ರಕಾಶನ, ಪುತ್ತೂರು (2009) |
| 22 | ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ | **ಕಲ್ಕುಡ–ಕಲ್ಲುರ್ಟಿ** ಸುಪ್ರಿಯ ಪ್ರಕಾಶನ, ಪುತ್ತೂರು (1998) |
| 23 | ಡಾ. ಪಿ. ಅನಂತ ಕೃಷ್ಣ ಭಟ್, ಪ್ರೊ. ತುಕರಾಂ ಪೂಜಾರಿ ಸಂಪಾದಕರು, | **ಸಿರಿ ಸಂಪದ,** ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ, ಬಂಟ್ವಾಳ (2014) |
| 24 | ಡಾ. ರಾಜಶ್ರೀ | **ತುಳುಜನಪದ ಕಾವ್ಯ– ಇಹಪರ ಲೋಕ ದೃಷ್ಟಿ,** ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ, ಮಂಗಳಗಂಗೋತ್ರಿ (2008) |
| 25 | ಡಾ॥ ಲಕ್ಷ್ಮೀ ಜಿ. ಪ್ರಸಾದ್ | **ತುಳುನಾಡಿನ ನಾಗಬ್ರಹ್ಮ ಮತ್ತು ಕಂಬಳ,** ಒಂದು ವಿಶ್ಲೇಷಣಾತ್ಮಕ ಅಧ್ಯಯನ, ಪ್ರಚೇತ ಬುಕ್ ಹೌಸ್, ಬೆಂಗಳೂರು (2013) |
| 26 | ಡಾ. ಲಕ್ಷ್ಮೀ ಜಿ. ಪ್ರಸಾದ | **ಭೂತಗಳ ಅದ್ಭುತ ಜಗತ್ತು,** ಪ್ರಚೇತ ಬುಕ್ ಹೌಸ್, ಬೆಂಗಳೂರು (2013) |
| 27 | ಡಾ. ಶೈಲಾ ಟಿ. ವರ್ಮ | **ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಜ್ಞಾನೋದಯ ಪ್ರಕಾಶನ, ಬೆಂಗಳೂರು (2002) |
| 28 | ಡಾ. ಸುಂದರ ಕೇನಾಜೆ | **ತುಳು ಜನಪದ ಸಾಹಿತ್ಯ ಶಿಕ್ಷಣ,** ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು (2016) |

| | | |
|---|---|---|
| 29 | ಡಾ. ಸುಶೀಲಾ ಪಿ. ಉಪಾಧ್ಯಾಯ | **ದಕ್ಷಿಣ ಭಾರತ ಜಾನಪದ** (ಕೆಲವು ನೋಟಗಳು) ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ (1998) |
| 30 | ತುಳುನಾಟ್ಟು ವಯಲಾರು, (ತಮಿಳು ಮೂಲ) ಕನ್ನಡ ಅನುವಾದ ಶ್ರೀ ಕೃಷ್ಣ ಭಟ್ ಅರ್ತಿಕಜೆ | **ತುಳುನಾಡ ಇತಿಹಾಸ,** ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು (2015) |
| 31 | ದಿನಕರ ಪಿ. ಬಂಗೇರ ಉಳ್ಳಾಲ | **ಐತಿಹಾಸಿಕ ತುಳುನಾಡು,** ಮನೋರಮ ಪ್ರಿಂಟರ್ಸ್, ಮಂಗಳೂರು (2010) |
| 32 | ನವೀನ್ ಸುವರ್ಣ ಪಡ್ರೆ | **ಕಾರಣಿಕದ ದೈವಗಳು ಶ್ರೀ ಬಬ್ಬುಸ್ವಾಮಿ ಮತ್ತು ತನ್ನಿಮಾನಿಗ** ಶ್ರೀ ಬಬ್ಬುಸ್ವಾಮಿ ಅಧ್ಯಯನ ಕೇಂದ್ರ, ಉಡುಪಿ (2014) |
| 33 | ನವೀನ್ ಸುವರ್ಣ ಪಡ್ರೆ | **ದೈವರಾಜ ಶ್ರೀ ಬಬ್ಬುಸ್ವಾಮಿ,** ಶ್ರೀ ಬಬ್ಬುಸ್ವಾಮಿ ಅಧ್ಯಯನ ಕೇಂದ್ರ ಮಂಗಳೂರು (2018) |
| 34 | ನವೀನ್ ಸುವರ್ಣ ಪಡ್ರೆ | **ಪಂಚವರ್ಣದ ಮಣ್ಣಿನ ಕಾರಣಿಕದ ದೈವಗಳು, ಶ್ರೀ ಬಬ್ಬುಸ್ವಾಮಿ ಅಧ್ಯಯನ ಕೇಂದ್ರ, ಮಂಗಳೂರು (2017)** |
| 35 | ನಲ್ಲೂರು ಪ್ರಸಾದ್ (ಸಂಪಾದಕರು) | **ಜಾನಪದ ಭಾರತಿ,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು (1998) |
| 36 | ಪಾದೆಕಲ್ಲು ವಿಷ್ಣು ಭಟ್ಟ (ಸಂಪಾದಕ) | **ತುಳುವರಿವರು,** ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ (1997) |
| 37 | ಬನ್ನಂಜೆ ಬಾಬು ಅಮೀನ್ | **ದೈವಾರಾಧನೆ–ಜಿಜ್ಞಾಸೆಗಳು,** ಕೆಮ್ಮಲಜೆ ಜಾನಪದ ಪ್ರಕಾಶನ, ಉಡುಪಿ (2016) |
| 38 | ಬನ್ನಂಜೆ ಬಾಬು ಅಮೀನ್ | **ಆಟಿ–ಸೋಣ (ಆಷಾಢ–ಶ್ರಾವಣ),** ಕೆಮ್ಮಲಜೆ ಜಾನಪದ ಪ್ರಕಾಶನ, ಉಡುಪಿ (2011) |
| 39 | ಬನ್ನಂಜೆ ಬಾಬು ಅಮೀನ್ | **ಸಂಸ್ಕೃತಿ ಸಂಪನ್ನ ಸಿರಿ,** ಕೆಮ್ಮಲಜೆ ಜಾನಪದ ಪ್ರಕಾಶನ, ಉಡುಪಿ (2015) |
| 40 | ಬನ್ನಂಜೆ ಬಾಬು ಅಮೀನ್ | **ತುಳುನಾಡ ಜಾನಪದ ಆಚರಣೆಗಳು,** ಕೆಮ್ಮಲಜೆ ಜಾನಪದ ಪ್ರಕಾಶನ, ಉಡುಪಿ (1994) |
| 41 | ಬನ್ನಂಜೆ ಬಾಬು ಅಮೀನ್ | **ತುಳುನಾಡ ದೈವಗಳು,** ಜಾನಪದ ಸಂಕಲನ ಕೆಮ್ಮಲಜೆ ಜಾನಪದ ಪ್ರಕಾಶನ, ಉಡುಪಿ (2014) |
| 42 | ಬನ್ನಂಜೆ ಬಾಬು ಅಮೀನ್ | **ದೈವನೆಲೆ,** ಕೆಮ್ಮಲಜೆ ಜಾನಪದ ಪ್ರಕಾಶನ, ಉಡುಪಿ (2011) |
| 43 | ಬನ್ನಂಜೆ ಬಾಬು ಅಮೀನ್ | **ದೈವಗಳ ಮಡಿಲಲ್ಲಿ** (ಜಾನಪದ ಸಂಕಲನ), ಕೆಮ್ಮಲಜೆ ಜಾನಪದ ಪ್ರಕಾಶನ ಉಡುಪಿ (2016) |

| | | |
|---|---|---|
| 44 | ಬನ್ನಂಜೆ ಬಾಬು ಅಮೀನ್ | **ತುಳುನಾಡ ದೈವಗಳು,** ಸಾಂಸ್ಕೃತಿಕ ವಿಶ್ಲೇಷಣೆ, ಕೆಮ್ಮಲಜೆ ಜಾನಪದ ಪ್ರಕಾಶನ ಉಡುಪಿ (2010) |
| 45 | ಬನ್ನಂಜೆ ಬಾಬು ಅಮೀನ್ | **ಸಮಗ್ರ ಕೋಟಿ ಚೆನ್ನಯ,** ಕೆಮ್ಮಲಜೆ ಜಾನಪದ ಪ್ರಕಾಶನ, ಉಡುಪಿ (2014) |
| 46 | ಬಿ.ಎ. ಲೋಕಯ್ಯ ಶಿಶಿಲ | **ತುಳುನಾಡ ಸಂಸ್ಕೃತಿಯಲ್ಲಿ ನಲ್ಕೆಯಾನೆ ಅಜಿಲ (ಪಾಣಾರ) ಜನಾಂಗದ ಪಾತ್ರ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಮಂಗಳೂರು (2016) |
| 47 | ಬಿ. ಸುರೇಂದ್ರ ರಾವ್ ಅನುವಾದ: ವಿ.ಬಿ. ಅರ್ತಿಕಜೆ | **ಇತಿಹಾಸ ಮತ್ತು ಸಂಸ್ಕೃತಿಗಳಲ್ಲಿ ಬಂಟರು, ರಾಷ್ಟ್ರಕವಿ ಗೋವಿಂದ ಪೈ. ಸಂಶೋಧನ ಕೇಂದ್ರ, ಉಡುಪಿ (2010)** |
| 48 | ಬಿ. ಮೋಹನ್ ಕಣ್ಣೂರು | **ಶ್ರೀ ಬಬ್ಬುಸ್ವಾಮಿ ಚರಿತಾಮೃತ, ಗುರುಪ್ರಸಾದ್ ಪ್ರಿಂಟರ್ಸ್, ಮಂಗಳೂರು (2013)** |
| 49 | ಬಿ. ಜನಾರ್ಧನ ಭಟ್ | **ಬೆರ್ಮರು ಏನಾದರು?** ಶ್ರೀರಾಮ ಪ್ರಕಾಶನ, ಮಂಡ್ಯ (2012) |
| 50 | ಬಿ.ಎಂ. ರೋಹಿಣಿ, ಶಶಿಲೇಖಾ ಬಿ. | **ತುಳು ನಾಡಿನ ಮಾಸ್ತಿಕಲ್ಲುಗಳು–ವೀರಗಲ್ಲುಗಳು** ದೇವಕೀಕೃಷ್ಣ, ಕುಡುಪು, ಮಂಗಳೂರು (2010) |
| 51 | ಬಿ. ವಾಮನ ರಾವ್ ಎಂ.ಎ. | **ತುಳುನಾಡು,** ಅಕ್ಷರ ಪ್ರಕಾಶನ, ಮಂಗಳೂರು (2009) |
| 52 | ಶ್ರೀ ಎಂ. ಮುಕುಂದಪ್ರಭು ಪ್ರಧಾನ ಸಂಪಾದಕರು | **ಪೊಲಿ,** ಕೆನರಾ 200 ಸಂದರ್ಭದ ನೆನಪಿನ ಸಂಪುಟ, ಜಿಲ್ಲಾಧಿಕಾರಿ ದ.ಕ., ಮಂಗಳೂರು ಪ್ರಸಾಧನ ಕಂಪ್ಯೂಟರ್ಸ್, ಮಂಗಳೂರು (2000) |
| 53 | ಶ್ರೀಮತಿ ಜ್ಯೋತಿ ಚೇಳ್ಯಾರು | **ಕೃಷಿ ಸಂಸ್ಕೃತಿಯಲ್ಲಿ ಕರಾವಳಿ ಮಹಿಳೆ,** ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು (2016) |
| 54 | ಸಂಕೇತ್ ಪೂಜಾರಿ | **ಗ್ರಾಮದೈವ ಶ್ರೀ ಅಲೆತ್ತೂರ ಪಂಜುರ್ಲಿ,** ಸತ್ತಿಗೆ ಪ್ರಕಾಶನ, ಪೆರ್ನೆ (2017) |
| 55 | ಹರಿಶ್ಚಂದ್ರ ಪಿ. ಸಾಲ್ಯಾನ್ | **ಸಿರಿತುಪ್ಪೆ,** ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ (2014) |
| 56 | ಹರೀಶ್ ಆಳ್ವ ಎಮ್.ಜಿ. | **ತುಳುವರ ಕೃಷಿ ಆರಾಧನಾ ಸಂಸ್ಕೃತಿ ಪೂಕರೆ ಆಚರಣೆ ಮತ್ತು ಸಮಾಜ ವ್ಯವಸ್ಥೆ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ,ಮಂಗಳೂರು (2016)** |
| 57 | ಎಚ್.ಬಿ.ಎಲ್. ರಾವ್ (ಪ್ರ.ಸಂ) ಕೆ.ಎಲ್. ಕುಂಡಂತಾಯ (ಸಂ.) | **ಅಣಿ ಅರದಲ ಸಿರಿ ಸಿಂಗಾರ,** ಭೂತಾರಾಧನೆಯ ಅಣಿ ವೈವಿಧ್ಯ – ಬಣ್ಣಗಾರಿಕೆ ಸಾಹಿತ್ಯ ಬಳಗ, ಮುಂಬೈ (2016) |

| | | |
|---|---|---|
| 1 | ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ | **ಭೂತಾಳ ಪಾಂಡ್ಯೆ,** ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಂಗಳೂರು (1998) |
| 2 | ಕೆ. ಕೇಶವ ಬಂಗೇರ | **ತುಳುನಾಡ ಕಾರ್ನಿಕ ದೈವೊಲು,** ಲಕ್ಷ್ಮೀಶ ಪ್ರಕಾಶನ, ಬಂಟ್ವಾಳ (2008) |
| 3 | ಡಾ. ಗಣೇಶ್ ಅಮೀನ್ ಸಂಕಮಾರ್ | **ಸಂತೆದುಲಯಿ ಒಂತೆ,** ಸಿರಿ ಪ್ರಕಾಶನ, ಪಾವಂಜೆ, ಮಂಗಳೂರು (2015) |
| 4 | ರಘು ಗುರುಪುರ | **ತುಳುನಾಡ ಮಾಯಕಾರೆರ್,** ಅಕ್ಷರಿ ಪ್ರಕಾಶನ, ಗುರುಪುರ ಕೈಕಂಬ (2015) |
| 5 | ಉಗ್ಗಪ್ಪ ಪೂಜಾರಿ (ಸಂಪಾದಕರು) | **ತುಳುನಾಡ ದೈವೊಲೆ ಉದಿಪು** (ಬೀರ, ಪಾರಿ, ಮದಿಪು) ಸ್ವಯಂ ಪ್ರಕಾಶನ, ಬೆದ್ರ (2014) |
| 6 | ನವೀನ್ ಸುವರ್ಣ ಪಡ್ರೆ | **ಕಾರ್ನಿಕದ ಸತ್ಯೊಲು,** ಶ್ರೀ ಬಬ್ಬುಸ್ವಾಮಿ ಅಧ್ಯಯನ ಕೇಂದ್ರ, ಮಂಗಳೂರು (2015) |
| 7 | ಉಗ್ಗಪ್ಪ ಪೂಜಾರಿ (ಸಂಪಾದಕರು) ಮೂಲ: ಪೊಳಲಿ ಸೀನಪ್ಪ ಹೆಗ್ಗಡೆ | **ತುಲುವಾಲ ಬಲಿಯೇಂದ್ರ,** ಸ್ವಯಂ ಪ್ರಕಾಶನ, ಬೆದ್ರ (2016) |
| 8 | ಹರಿಶ್ಚಂದ್ರ ಪಿ. | **ಮದು, ಮದಿಪು, ನುಡಿಕಟ್ಟುಲು,** ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ (2006) |
| 9 | ಡಾ॥ ಬಿ.ಎ. ವಿವೇಕ ರೈ, ಯದುಪತಿ ಗೌಡ, ರಾಜಶ್ರೀ | **ಪುಟ್ಟು ಬಳಕೆಯ ಪಾಡ್ದನಗಳು,** ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ, ಮಂಗಳಗಂಗೋತ್ರಿ (2004) |
| 10 | ಎಸ್. ದೇವೇಂದ್ರ ಪೆಜತ್ತಾಯ | **ತುಳು ಭಾಷೆಡ್ ಕುಮಾರವ್ಯಾಸ ಭಾರತೊ,** ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು (2014) |
| 11 | ಡಾ. ಎಂ.ಎಸ್. ದುರ್ಗಾಪ್ರವೀಣ್ ಬೆನೆಟ್ ಜಿ. ಅಮ್ಮನ್ನ (ಸಂ) | **ಬಾಸೆಲ್ ಮಿಶನರಿಗಳ ತುಳು ಟಿಪ್ಪಣಿಗಳು,** ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು (2015) |
| 12 | ಡಾ. ಕಿಶೋರ್ ಕುಮಾರ್ ರೈ ಶೇಣಿ | **ತುಳು ಸಂಶೋಧನೆ,** ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು (2008) |
| 13 | ಡಾ. ಬಿ.ಎ. ವಿವೇಕ ರೈ, ರಾಜಶ್ರೀ | **ತುಳು ಕಬಿತೆಲು,** ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ, ಮಂಗಳಗಂಗೋತ್ರಿ (1997) |
| 14 | ಡಾ. ಗಣೇಶ್ ಅಮೀನ್ ಸಂಕಮಾರ್ | **ತುಳು ಪಾಡ್ದನೊಲು,** ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು (2008) |
| 15 | ಕೆ. ಕೇಶವ ಬಂಗೇರ | **ಪಣೋಲಿಬೈಲು ಕ್ಷೇತ್ರ ಪರಿಚಯ,** ಲಕ್ಷೀಶ ಪ್ರಕಾಶನ, ಬಂಟ್ವಾಳ (2008) |
| 16 | ಚಂದ್ರಹಾಸ ಕಣಂತೂರು | **ಮೈಮೆ–ಒಂಜಿಕೋಪೆ ಪಾಡ್ದನದ ಕತೆಕುಲು ಕುರಲ್ ಇಷ್ಟೆರ್ ಕುಡ್ಲ,** ಮಂಗಳೂರು (2015) |

| | | |
|---|---|---|
| 17 | ಡಾ. ಬಿ.ಎ. ವಿವೇಕ ರೈ | **ನಾಲಾಯಿಡ್ದ್ ನಾಲೂರುಗು,** ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು (2009) |
| 18 | ಉಗ್ಗಪ್ಪ ಪೂಜಾರಿ (ಸಂಪಾದನೆ) | **ತುಳುವೆರ್ನ ನಂಬಿಕೆಲು ಬೊಕ್ಕ ಆಚರಣೆಲು,** ಸ್ವಯಂ ಪ್ರಕಾಶನ, ಬೆದ್ರ, (2012) |
| 19 | ನವೀನ್ ಸುವರ್ಣ ಪಡ್ರೆ | **ಪೂ–ಅರಿ,** ಶ್ರೀ ಬಬ್ಬುಸ್ವಾಮಿ ಅಧ್ಯಯನ ಕೇಂದ್ರ, ಮಂಗಳೂರು (2016) |
| 20 | ಡಾ. ಚಿನ್ನಪ್ಪ ಗೌಡ (ಸಂ) | **ಪನಿಯಾರ** (ನೆಂಪು ಸಂಚಿಕೆ) ತುಳುಕೂಟ (ರಿ) ಮಂಗಳೂರು (1989) |
| 21 | ಬನ್ನಂಜೆ ಬಾಬು ಅಮೀನ್ | **ನುಡಿಕಟ್ಟ್,** ಕೆಮ್ಮಲಜೆ ಜಾನಪದ ಪ್ರಕಾಶನ, ಉಡುಪಿ (2007) |
| 22 | ಡಾ. ಸುಶೀಲ ಪಿ. ಉಪಾಧ್ಯಾಯ | **ಕೋಡ್ದಬ್ಬು,** ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಂಗಳೂರು. (1998) |



ನವೀಕೃತ ಶ್ರೀಕ್ಷೇತ್ರ ಕಚ್ಚೂರು



ಕಚ್ಚೂರು ಶ್ರೀ ಮಾಲ್ತಿದೇವಿ



ಭಗವಾನ್ ಶ್ರೀ ಬಬ್ಬುಸ್ವಾಮಿ